ಸಮಕಾಲೀನ ಸೃಜನಾತ್ಮಕ ಮಹಾಕಾವ್ಯ

ಸಜ್ಜಲ ಶರಣವ್ವೆ

ಡಾ॥ ಶ್ರೀ ಜ. ಚ. ನಿ. ಸನ್ನಿಧಿ

033.121.1
M9

CC-0. Jangamwadi Math Collection. Digitized by eGangotri

033,1x1,1 7953
M9
JBN Sannidhi
Sajjala Shamve

CC-0. Jangamwadi Math Collection. Digitized by eGangotri

Q33,1xc1,1
M9

D1-9-4-92
7953

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಸಮಕಾಲೀನ ಸೃಜನಾತ್ಮಕ ಮಹಾಕಾವ್ಯ

ಸಜ್ಜಲ ಶರಣಾಪ್ಪ

ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರ

ಡಾ|| ಶ್ರೀ ಜ. ಚ. ನಿ. ಸನ್ನಿಧಿಯು

ಶ್ರೀಶೈಲ ಜಗದ್ಗುರು ನಿಡುಮಾಮಿಡಿ ನಿವಾಸ,
" ನಿಜಾನುಭಾವ ನಿವಾಸ, ಶಿವಾಚಾರ್ಯತತ್ತ್ವ ತುಂಗೋತ್ರಿ "
೪೯, ಹೆ. ಬ. ಸಮಾಜ ಬೀದಿ,
ಬಸವನ ಗುಡಿ, ಬೆಂಗಳೂರು – ೫೬೦ ೦೦೪.

CC-0. Jangamwadi Math Collection. Digitized by eGangotri

"ಸಜ್ಜಲ ಶರಣವ್ವೆ"

ಸೇವಾಕರ್ತರು, ಶ್ರೀ ವೀರಣ್ಣ ಚಂದ್ರಶೇಖರಯ್ಯನವರು, ಚರಂತಿಮಠ,

ಬಾಗಲಕೋಟ.

033.1sc1.1
M9

ಮೊದಲಚ್ಚು : ಒಂದು ಸಾವಿರ ೧೯೮೯

ಬೆಲೆ : ೨೦ ರೂ.

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 7953

ಅಚ್ಚುಕೂಟ : ಬಸವಲಿಂಗ ಮುದ್ರಣಾಲಯ ಬಾಗಲಕೋಟ

CC-0. Jangamwadi Math Collection. Digitized by eGangotri

ಒಳನುಡಿಗಳ್

೧.	ಶ್ರೀ ಗುರುಸ್ತವನಂ	೧
೨.	ಕವಿ ಕಾವ್ಯ ಚಿತ್ರಣಂ	೪
೩.	ಪ್ರಕೃತಿ ಪುರುಷಸಿರೂಪಣಂ	೧೨
೪.	ಆಗಸಾಂಗ ಸರಣಿಲಕ್ಷಣಂ	೨೧
೫.	ಜನನಂ ಜೀವನಂ	೩೩
೬.	ಗುರುಕರುಣಂ ಭವಹರಣಂ	೩೮
೭.	ಪಂಪಾಕ್ಷೇತ್ರಯಾತ್ರೆಯೊಳ್ ಶ್ರೀ ಗುರುದರ್ಶನಂ	೫೧
೮.	ಕಾಷಾಯ ವಸ್ತ್ರಧಾರಣಂ	೧೨೩
೯.	ತಪೋನುಷ್ಠಾನಂ ತತ್ತ್ವಾನು ಸಂಧಾನಂ	೧೮೮
೧೦.	ತ್ಯಾಗಯೋಗಯುಕ್ತಂ ಕಾಂಚಾಣಂ	೧೧೬
೧೧.	ಏಕಾದಶರುದ್ರ ಮಂಟಪಾರ್ಚನಂ	೧೨೫
೧೨.	ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮಂಗಳ್	೧೩೪
೧೩.	ಮಹಾಶಿವಯೋಗದ ಗುಡದೂರ ಆರಾಧನಂ	೧೬೦
೧೪.	ಶಿವಲಿಂಗಮ್ಮನ ಶರಣವ್ವೆಯ ಚರ್ಯನಂ	೧೬೯
೧೫.	ತಾಯೊರ್ತ್ತಿ ದೊಡ್ಡಾಟ ನೋಡಿದರ್ ಮತ್ತೊರ್ತ್ತಿ ನೋಡದಾದರ್	೧೭೭
೧೬.	ಆನುಕಂಪದಾ ನಲ್ವರಕೆಗಳ್	೧೮೪
೧೭.	ನೂರ್ಪರಿಸವನ್ನೆಗಂ ಬಾಳಿದಳ್ ಶರಣವ್ವೆ	೨೦೫
೧೮.	ಚರಮ ಪರಮ ಜೀವನಂ	೨೧೭
೧೯.	ಶರಣವ್ವೆ ಷಡಂಗ ಲಿಂಗೈಕ್ಯಂ	೨೨೫
೨೦.	ಈ ಯುಗದ ಶರಣಶಕ್ತಿ	೨೪೦
೨೧	ಶರಣವ್ವೆ ಶತಮಾನೋತ್ಸವಂ	೨೪೭
೨೨.	ಮಾತೆಯ ನುಡಿ ಮುತ್ತುಗಳ್	೨೫೩

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಪರಿಚಯ

'ಸಜ್ಜಲ ಶರಣಪ್ಪ' ಎಂಬೀ ಸಮಕಾಲಿನ ಸೃಜನಾತ್ಮಕ ಕಾವ್ಯವನ್ನು ಬೇರೆಯವರ ಬೇಡಿಕೆಯಂತೆ ಬರೆದಿತ್ತು ಬಹುದಿನಗಳು ಉರುಳಿ ಹೋಗಿವೆ. ಬರೆಯಿಸಿಕೊಂಡವರ ಹೊಣೆಗಾರಿಕೆಯ ಅಭಾವದಿಂದ ಅಚ್ಚಾಗದೆ ನಿಂತು ಬಿಟ್ಟಿತ್ತು. ಇದೀಗ ಇದನ್ನು ಅಚ್ಚಿಸಲು ಉದಾರತೆಯಿಂದ ಮುಂದೆ ಬಂದು ಅಚ್ಚಿನ ವೆಚ್ಚವನ್ನು ನಿರ್ವಹಿಸಿದವರು ಈಗ ಬಾಗಲಕೋಟೆಯಲ್ಲಿರುವ ಶ್ರೀ ವೀರಣ್ಣ ಚಂದ್ರಶೇಖಯ್ಯ ಚರಂತಿಮಠ ಆವರು. ಇವರ ವಯಸ್ಸು ಚಿಕ್ಕದಾದರೂ ವರ್ಚಸ್ಸು ಚಿಕ್ಕದಾಗಿಲ್ಲ ನಾನಾ ಕ್ಷೇತ್ರಗಳಲ್ಲಿ ನಿಪುಣತೆಯಿಂದ ನೈಜತ್ಯಾಗದಿಂದ ನಿರ್ವಹಿಸುತ್ತಿರುವ ವ್ಯಕ್ತಿತ್ವ ವೈವಿಧ್ಯಮಯವಾಗಿದೆ. ಸ್ತುತ್ಯರ್ಹವಾಗಿದೆ. ಈ ವಯಸ್ಸಿಗೆ ಇವರು ಗಳಿಸಿದ ಕೀರ್ತಿ ಎಂತವರು ಮೆಚ್ಚತಕ್ಕುದಾಗಿದ. ಸಮರ್ಥ ಜೀವಿ ಶ್ರದ್ಧಾನ್ವಿತಭಾವಿ.

ಈ ಕಾವ್ಯ ಸೇವೆಯನ್ನು ಇವರ ತಂದೆ ಶ್ರೀ ಚಂದ್ರಶೇಖಯ್ಯ ವೀರಭದ್ರಯ್ಯ ಚರಂತಿಮಠ ಇವರ ಸಂಸ್ಮರಣಾರ್ಥವಾಗಿ ಸಲ್ಲಿಸಿದ್ದಾರೆ.

ಶ್ರೀ ಚಂದ್ರಶೇಖರಯ್ಯನವರ ಧರ್ಮಪತ್ನಿ ಬಸಲಿಂಗಮ್ಮನವರು ತಾಯಿ ಗೌರಮ್ಮನವರು. ಇವರಿಗೆ ಅಯ್ದು ಜನ ಮಕ್ಕಳಲ್ಲಿ ಮೂವರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣುಮಕ್ಕಳು. ಗಂಡು ಮಕ್ಕಳಲ್ಲಿ ಹಿರಿಯವರೆ ಶ್ರೀ ವೀರಣ್ಣನವರು

ಇವರ ಅತ್ಯಂತ ಔದಾರ್ಯದ ಪ್ರತೀಕವಾಗಿ ಈ ಮಹಾಕಾವ್ಯ ಅಚ್ಚಾಗಿ ಹೊರಬಂದಿರುವ ಜೊತೆಗೆ ಇನ್ನೊಂದು ಮಹತ್ವದ ಕೃತಿ ಶಿವಕವಿ-ಶಿವಾನುಭಾವಿ ಶಿವಯೋಗಿ ಶಿವಾಚಾರ್ಯರು ಹನ್ನೆರಡು ನೂರು ವರುಷಗಳ ಹಿಂದೆ ರಚಿಸಿದ ಸಿದ್ಧಾಂತ-ಶಿಖಾಮಣಿ (ರೇಣುಕ ಗೀತೆ)ಯ ಮೇಲೆ ನಾವೇ ರಚಿಸಿದ "ರೇಣುಕ ಗೀತೆಯ ಕಾವ ಶಾಸ್ತ್ರ ಮೀಮಾಂಸಿ" ಎಂಬ ಗದ್ಯಗ್ರಂಥವನ್ನು ಅಚ್ಚುಮಾಡಿಸಿ ಬೆಳಕಿಗೆ ತಂದಿದ್ದಾರೆ. ಈ ಎರಡು ಮಹಾಕೃತಿಗಳ ಸೇವೆ ಸಣ್ಣದೇನಲ್ಲ. ಇದರಿಂದಾಗಿ ಇವರಿಗೂ ಇವರ ಕೌಟುಂಬಿಕ ವರ್ಗಕ್ಕೂ ಚಿರಾಯುರಾರೋಗ್ಯ ಭಾಗ್ಯಗಳುಂಟಾಗಲೆಂದು ಹೃದಯಾರಿ ಹರಸೋಣವಾಗಿದೆ. ಇವರದು ಆದರ್ಶಸೇವೆ. ಸಾಹಿತ್ಯಾಪ್ರಪಂಚದಲ್ಲಿ ಶಾಶ್ವತವಾಗಿ ವ್ಯಾಪಕವಾಗಿ ಉಳಿವಸೇವೆ. ಉಳಿದು ಬೆಳಗುವ ಸೇವೆ. ಇದರಿಂವಾಗಿ ಮೇಲಿನಂತೆ ಮನಮೆಚ್ಚಿ ಹೃದಯ ಹೆಚ್ಚಿ ಆಶೀರ್ವದಿಸೋಣವಾಗಿದೆ.

ಕಾವ್ಯದ ಕರಡನ್ನು ತಿದ್ದಿಕೊಟ್ಟು ಸೇವೆ ಸಲ್ಲಿಸಿದ ಶ್ರೀಮತಿ ಶಿಕ್ಷಕಿ ಮಂಜುಳಾ ತಾಯಿ ಮತ್ತು ಈ ಬಗೆಗೆ ಆಗು ಹೋಗುಗಳ ಕೆಲಸವನ್ನು ನಿರ್ವಹಿಸಿದ ಶ್ರೀಮತಿ ಶಾಂತಕ್ಕನವರು ಸಾಬಾದಿ, ಹಾಗೂ ಅಚ್ಚು ಕೂಟದವರು ಇವರುಗಳಿಗೂ ಶುಭವನ್ನು ಹರಸೋಣವಾಗಿದೆ.

ದಿನಾಂಕ ೨೭-೧೧-೧೯೯೯
ಮುಕ್ಕಾಂ ಶಿರೂರ

ಹೊತ್ತಗೆಯವರು

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಗುರುಕವಿ, ಕವಿಗುರು, ಸಂಶೋಧನಸುಧಾಕರ

ಶಿವಾಚಾರ್ಯಶಿರೋರತ್ನ

ಡಾ|| ಶ್ರೀ ಜ. ಚ. ನಿ. ಸನ್ನಿಧಿಯು

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri



ಲಿಂಗೈಕ್ಯ ಚಂದ್ರಶೇಖರಯ್ಯ ವೀರಭದ್ರಯ್ಯ ಚರಂತಿಮಠ
ಹುನಗುಂದ – ಬಾಗಲಕೋಟೆ

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಸಜ್ಜಲ ಶರಣವ್ವೆ

ಮುನ್ನುಡಿ

ಸಜ್ಜಲಗುಡ್ಡ ದ ಶರಣವ್ವೆ ಇಪ್ಪತ್ತನೇಯ ಶತಮಾನದ ಶರಣ ಚಾರಿತ್ರದಲ್ಲಿ ಅಚ್ಚಳಿಯದೆ ಹಚ್ಚಹಸುರಾಗಿ ಉಳಿಯುವ ಹೆಸರು. ಆದರಲ್ಲೂ ಅಲ್ಪಸಂಖ್ಯೆಯಲ್ಲಿರುವ ಆಧುನಿಕ ಶರಣೆಯರಲ್ಲಿ ಆದಿಪ್ರಥಮ ಶ್ರೇಣಿಗೆ ಸೇರಿದ ಹೆಸರು. ಉತ್ತರಾಶ್ರಮಕ್ಕೆ ಸೇರಿದ ಬಳಿಕ ಹೊತ್ತ ಹೆಸರೆ ಶರಣವ್ವೆ ! ನಾಮರೂಪಗಳಿಂದ ಮಾತ್ರವಲ್ಲ; ಗುಣಕ್ರಿಯೆಗಳಿಂದಲೂ ಹೆಚ್ಚು ದಿಟಪುಟಗೊಂಡ ಹೆಸರು. ಆಹುದು ಆ ತಾಯಿ ಸಜ್ಜಲ ಶರಣೆ ! 'ಸಜ್ಜಲಗುಡ್ಡ' ಆ ಪ್ರದೇಶದ ಹೆಸರು ಮಾತ್ರವಾಗಿ ಉಳಿಯಲಿಲ್ಲ. ಆ ತಾಯಿಯೂ ತನ್ನ ಸತ್ಯಶರಣ ಜೀವನದಿಂದ ತನ್ನ ಉಭಯಾಂಗ ವ್ಯಕ್ತಿತ್ವವನ್ನು ಸಜ್ಜಲವನ್ನಾಗಿಸಿಕೊಂಡಿದ್ದರು. ಸತ್‌ಜಲವೆಂದರೆ ಶುಭ್ರರಸ. ಆ ತಾಯಿಯಲ್ಲಿ ಶುಭ್ರರಸ ಭಕ್ತಿರಸವಾಗಿ ಭರಿತವಾಗಿತ್ತು. ಅಂತೆಯೆ ಅವರ ಹೊರ ಬಾಳೂ ಶುಭ್ರವಾಗಿತ್ತು. ರೂಪ ಗುಣ ಕ್ರಿಯೆಗಳೂ ಶುಭ್ರವಾಗಿದ್ದವು. ಅವರ ತನುರಸ ಮನರಸ ಭಾವರಸ ಪರಿಶುಭ್ರವಾಗಿದ್ದವು.

ಅವರು ಗುರುಕರುಣೆಯಿಂದ ಶುಭ್ರರಾಗಿದ್ದರು; ಲಿಂಗಾರಾಧನೆಯಿಂದ ಶುಭ್ರರಾಗಿದ್ದರು; ಜಂಗಮ ಭಕ್ತಿಭಾವನೆಯಿಂದ ಶುಭ್ರರಾಗಿದ್ದರು. ಬಡವ ಬಲ್ಲಿದ ಜನರೆಲ್ಲರ ಮೇಲೆ ತಮ್ಮ ನಿರ್ಮಲಾಂತಃಕರಣವನ್ನು ಬೀರಿ ಶುಭ್ರರಾಗಿದ್ದರು. ಶ್ರಮಲ ರಹಿತರಾಗಿಯೂ ಶುಭ್ರರಾಗಿದ್ದರು.

ಅವರದು ನೂರು ವರುಷದ ತುಂಬು ಬಾಳು; ನಂಬುಗೆಯ ಬದುಕು. ನಿರಂತರ ಅರ್ಚನ ಅರ್ಪಣ ಅಧ್ಯಯನ ಅನುಭಾವ ಜನರ ಅನುವರಿವ ಕ್ರಿಯಾಶೀಲ ಜೀವನ. ಅವರದು ಸೋಲರಿಯದ ಬಾಳು. ನಡೆನುಡಿಗಳಲ್ಲಿ ಕಾಯೆಂದ್ರಿಯ ವಿಷಯಗಳಲ್ಲಿ ಅವರು ಅದೆಂದಿಗೂ ಸೋಲರಿಯದವರು. "....ಅನುವರಿದು. ಘನವ ತೀರಿಸಿ, ಹಿರಿದು ಕಿರಿದೆಂಬ ಭೇದವ ಮುರೆದು, ಕೂಡಲಚನ್ನ ಸಂಗಯ್ಯನಲ್ಲಿ ಹಿರಿಯ ತನ ನಮ್ಮ ಮಹಾದೇವಿಯಕ್ಕಂಗಾಯಿತ್ತು." ಎಂಬೀ ಚನ್ನಬಸವಣ್ಣನವರ ಚನ್ನ ಚಿನ್ಮಯ ವಚನಗೀತವನ್ನು ಆತನೊಡನೆ ದನಿಗೂಡಿಸಿ ಇಂದಿನ ಸಜ್ಜಲ ಶರಣವ್ವೆಗೂ ಹೋಲಿಸಿ ಹಾಡಬಯಸುತ್ತೇವೆ. ಅಂದಿನ ಆ ಮಹಾದೇವಿಯಕ್ಕನಂತೆ ಇಂದಿನ ಮಹಾತಾಯಿ ಶರಣವ್ವೆಯು ತನ್ನ ಅನ್ಯರ ಅನುವರಿತಿದ್ದಳು; ಘನವ ಅಳವಡಿಸಿಕೊಂಡಿದ್ದಳು; ಎಲ್ಲರಲ್ಲಿ ಹಿರಿಕಿರಿಯರೆಂಬ ಮತ್ತು ಎಲ್ಲದರಲ್ಲಿ ಹಿರಿಕಿರಿದೆಂಬ ಬಿರುಕನ್ನು ಬಗೆಯಲಿಲ್ಲ. ಆತ್ಮೋದ್ಧಾರ–ಸರ್ವೋದ್ಧಾರ ಇವೆರಡೂ ಆವರ ಎರಡು ಪ್ರಾಣ

CC-0. Jangamwadi Math Collection. Digitized by eGangotri

ಗಳಾಗಿದ್ದವು ಆತ್ಮಸಾಧನ ಅವರಲ್ಲಿ ಅದೆಷ್ಟು ಘನವಾಗಿದ್ದಿತೋ ಸರ್ವಾತ್ಮಸಾಧನವೂ ಅಷ್ಟೇ ಘನವಾಗಿದ್ದಿತು ಅವರಿಗೆ ಸ್ವಯದ ಅನುಭವವಿದ್ದಂತೆ ಪರರ ಅನುಭವವ ಅಂದರೆ ಭಾವೇಂಗಿತಜ್ಞತೆ ಇದ್ದಿತು; ಅನುವು ಆಪತ್ತುಗಳ ನಿವಾರಿಸುವ ಲೋಕೋತ್ತರ ಶಕ್ತಿಯೂ ಇದ್ದಿತು. ಅವರದು ಉಭಯ ದೃಷ್ಟಿಯಲ್ಲಿ ಘನಕ್ಕೆ ಘನವಾದ ವ್ಯಕ್ತಿತ್ವ; ಶಕ್ತಿತ್ವ. ಇಹ-ಪರ ಸಾಧನೆಯಲ್ಲಿ ಅವರ ಬಹಿರಂಗ-ಅಂತರಂಗಗಳೆರಡೂ ಅವಿರತವಾಗಿ ನಿರತವಾಗಿದ್ದವು.

ಅವರದು ನೀಳಾದ ನಿಲವು; ಆಳಾದ ಒಳ್ ಒಲವು. ತನು ಸುಬ್ಬರ, ಮನ ಸುಬ್ಬರ, ಬಟ್ಟೆ ಸುಬ್ಬರ; ದಿಟ್ಟಿಸುಬ್ಬರ ಕರ ಉರ ಶಿರ ಸುಬ್ಬರ. ಬುದ್ಧಿ ಭಾವ ಸುಬ್ಬರ. ಆತ್ಮ ಅಂತರಾತ್ಮಸುಬ್ಬರ.

ಉದ್ದಾದ ಮೊಗ. ಎದ್ದುಕಾಣುವ ಮೂಗು. ಹರವಾದ ಹಣೆ; ಭಸಿತ ಭೂಷಿತ ಫಾಲ. ತೆರೆದ ಕಣ್ಣು, ತೇಜೋವಂತ ನೇತ್ರ. ಹೃದಯಾಕರ್ಷಣ ನೋಟ; ಪಾವನ ಭಾವವನ್ನು ತುಂಬುವ ಮಾಟ. ತಿದ್ದಿದ ತುಟಿ; ತೀವಿದ ಕೆನ್ನೆ. ನಳಿದೋಳು. ನಿಡುಬೆರಳು. ಕೊರಳಲ್ಲಿ-ಎರಡು ಮುಂಗೈಗಳಲ್ಲಿ ರುದ್ರಾಕ್ಷ ಮಾಲೆಗಳು. ಶಣೆತನಕ್ಕೆ ಸಲ್ಲುವ ಉಡಿಗೆ ತೊಡಿಗೆ ಮತ್ತು ನಡೆ ನುಡಿ ! ಮತ್ತು ವಿನಯಶ್ರೀ !! ಅವರ ಅಚ್ಚ ನಿಲವು ಅವರದು ಇಂದಿನ ಈ ದಿನಮಾನಗಳಲ್ಲಿ ದುರ್ವ್ಯಸನೆಗಳಲ್ಲಿ ದುರಾಚಾರಗಳಲ್ಲಿ ಮನುಷ್ಯನಾಗಿ ಬಾಳುವುಗೆ ಮಹಾಕಷ್ಟವಾಗಿದೆ. ಇಂತಹದರಲ್ಲಿ ತಾನು ಮಹಾನುಭಾವೆಯಾಗಿ ಬಾಳಿದ್ದಲ್ಲದೆ ಬಳಿಗೆ ಬರುವ ಉಳಿದವರನ್ನೂ ಮನುಷ್ಯರಾಗಿ ಬಾಳುವಂತೆ ಬದಕುವಂತೆ ಮಾಡುತ್ತಿದ್ದ ಅವರ ಇಂದಿನ ಮರ್ತ್ಯದ ಮಣಿಹ ಮನನೀಯ, ಗಣನೀಯ.

ಪರಾಶಕ್ತಿ ಜಿಚ್ಛಕ್ತಿಯರು ಬೇರಿಲ್ಲ. ಕ್ರಿಯಾಶಕ್ತಿ ಜ್ಞಾನಶಕ್ತಿ ಬಾಳಿನಲ್ಲಿ ಬೆಳೆದರಾಯಿತು; ಬೆಳೆಸಿಕೊಂಡ ಅಂತಹ ಮಹಿಳೆಯೇ ಪರಾಶಕ್ತಿ ಜೆಚ್ಛಕ್ತಿ ಸ್ವರೂಪಳಾಗುತ್ತಾಳೆ-ಎಂಬುದಕ್ಕೆ ಸಮಕಾಲೀನ ಸಜ್ಜಲಗುಡ್ಡದ ಶರಣವ್ವೆ ಸಾಕ್ಷಿಯಾಗಿದ್ದರು. ಮಹಿಳೆಯ ಜೀವನ ಪ್ರಗತಿ ಅಗತ್ಯ; ಆದರೆ ಪ್ರಗತಿಯ ಪಥ ಯಾವ್ದೆಂಬುದು ಪರಿಶ್ಯುತವಾಗಿದೆ ಸಜ್ಜಲಗುಡ್ಡದ ಶರಣವ್ವೆಯು ಸಜ್ಜೀವನ. ಲೌಕಿಕಾಕಾಕಿಕ ಜೀವನದಲ್ಲಿ ಬವಡರಾಗಿದ್ದ ಆವರು ಇವೆರಡರಲ್ಲಿಯೂ ಪ್ರಗತಿಸಾದಿಸಿದರು.

ಶರಣವ್ವೆಯ ಹುಟ್ಟು ಬಡತನದ ಮನೆಯಲ್ಲಿ ಬಾಲ್ಯ ಕಳೆದಷ್ಟು ಬಡತನದಲ್ಲಿ ಬೆಳೆದದ್ದು ಸಶ್ಯಹವಾಸದ ಸತ್ಸಾಧನೆಯಲ್ಲಿ. ಆದರೆ ಆವರು ಅನುಭವಿಸಿದ ಕಷ್ಟ ಅಷ್ಟಷ್ಟಲ್ಲ; ಅನಾನುಕೂಲ ಅಷ್ಟಿಷ್ಟಲ್ಲ. ಆದಕ್ಕೆಲ್ಲ ಜಗ್ಗದೆ ಕುಗ್ಗದೆ ಸಾಧನೆಯಲ್ಲಿ ಮುಸ್ಸಡೆದ ಸ್ಥೈರ್ಯ ಶರಣವ್ವೆಯದು. ಹೊರ ನಡನ್ನು ಹೊಂಚುತ್ತಿರಲಿಲ್ಲ; ಒಳಗಿನ

CC-0. Jangamwadi Math Collection. Digitized by eGangotri

ದನ್ನು ಹೊಂಚಿಹಿಡುತ್ತಿರಲಿಲ್ಲ. ಮಾತೆಯ ಮಾರ್ಗದರ್ಶನ ಯಮನಮ್ಮನನ್ನು ಎತ್ತಿ ಹಿಡಿಯಿತು. ಮಹಾಗುರುವರಣೆ ಮುನ್ನಡೆಯಿಸಿತು. ಯಮನಮ್ಮ ಪ್ರಾಕೃತಿಕ ಯಾವ ಒತ್ತಾಯಕ್ಕೆ ಒಳಗಾದವಳಲ್ಲ ಐಂದ್ರಿಕ ಸೆಳತಕ್ಕೆ ಸಿಕ್ಕವಳಲ್ಲ. ಹುಲುಮನದ ಸುಳಿಯಲ್ಲಿ ಮುಳುಗಿದವಳಲ್ಲ. ದುಸ್ಸಹ ಜೀವನದಲ್ಲಿ ದುಃಖಿಸಿದವಳಲ್ಲ ತಾಯಿ ತೋರಿದ ಬಟ್ಟೆಯನ್ನು ಬಿಟ್ಟವಳಲ್ಲ ಕಹಿಯನ್ನೆ ಸಿಹಿಯನ್ನಾಗಿಸಿಕೊಂಡು ಬಾಳಿದಳು. ಧರ್ಮದ ದುರ್ಗವನ್ನು ಏರಿದಳು. ಕಲ್ಲು ಮುಳ್ಳುಗಳನ್ನು ತುಳಿದಳು, ಹಸಿವು ನೀರಡಿಕೆಗಳನ್ನು ಹಲವು ಹಂಬಲಗಳನ್ನು ತಡೆದಳು. ಭಾವೀ ಭವಿಷ್ಯವನ್ನು ಭವ್ಯವನ್ನಾಗಿಸಿಕೊಂಡಳು; ಸೇವ್ಯವನ್ನಾಗಿಸಿಕೊಂಡಳು ಒಡಗೊತ್ತಿ ಭವಿಷ್ಯವನ್ನು ಹಾಳುಮಾಡಿಕೊಳ್ಳಲಿಲ್ಲ ಉತ್ಕೃಷ್ಟವಾದ ಅಂತರ್ವೃತ್ತಿಯನ್ನು ಅಳವಡಿಸಿಕೊಂಡಳು. ಮಂಗಳಕರವಾದ ಮನಸ್ಸನ್ನು ಭಾವುಕತನದ ಭಾವವನ್ನು ಬೆಳಸಿಕೊಂಡಳು. ಭಾವನಾಪ್ರಧಾನಗಳಾಗಿದ್ದುದರಿಂದ ಸೋಲಿನಲ್ಲಿ ಗೆಲವನ್ನು ಗಳಿಸಿದಳು. ಕೊರತೆಗಳಿಗೆ ಕೊರಗದೆ ಮುನ್ನಡೆದಳು ಗುರುಚರಣದಲ್ಲಿ ಹರಣವನ್ನಿಟ್ಟಳು. ಗುರುವೆ ಅವಳ ಬಾಳ ಸರ್ವಸ್ವ ! ಗುರುಸಂಸ್ಕಾರವೆ ಅವಳ ಬಾಳು; ಬದುಕು. ಆದರಿಂದ ತನ್ನ ಪ್ರಕೃತಿಕ ಪಾಶವೀ ಜೀವನವನ್ನು ಗೆದ್ದಳು ಆಶೆ ಆಮಿಷಗಳನ್ನು ಜಯಿಸಿದಳು. ಬಾಳಿನ ಹೋಣೆಗಾರಿಕೆಯನ್ನರಿತು ಕೆಚ್ಚಿನಿಂದ ಮುನ್ನುಗ್ಗಿದಳು. ಕಠಿಣ ಪರೀಕ್ಷೆಗಳ ಒರೆಗಲ್ಲಿಗೆ ಉಜ್ಜಿದಷ್ಟು ಅಪರಂಜಿಯಂತೆ ಉಜ್ವಲಗೊಂಡಳು. ಹೆಣ್ಣುತನವನ್ನು ಉಳಿಸಿಕೊಂಡು ನಾಡಿನ ಕಣ್ಣಮಣಿಯಾದಳು. ನುಡಿಯಲ್ಲಿ ಹಿಂದು; ನಡೆಯಲ್ಲಿ ಮುಂದು. ಭೋಗದಲ್ಲಿ ಹಿಂದು; ತ್ಯಾಗ ಯೋಗಗಳಲ್ಲಿ ಮುಂದು ಪ್ರವೃತ್ತಿಯಲ್ಲಿ ಹಿಂದು; ನಿವೃತ್ತಿಯಲ್ಲಿ ಮುಂದು. ತಾಯಿಯ ಹೃದಯ ಬಿಸ್ಸೆ ಕಷ್ಟಕಾರ್ಪಣ್ಯಗಳ ಕೆಚ್ಚನ್ನು ಕಾಯ್ದು ಕಂಪುಡುಪ್ಪವಾಗಿತ್ತು. ಪ್ರವೃತ್ತಿ ಪ್ರವಾಹಕ್ಕೆ ಎದುರಾಗಿ ಈಜಿದಳು; ಕೈ ಸೋಲದೆ ಮನ ಸೋಲದೆ ಕೆಚ್ಚೆದೆಯಿಂದ ಉತ್ತರದ ತೀರ ಸೇರಿದಳು; ಎತ್ತರಕ್ಕೆ ಏರಿದಳು. ಗುರು ಕಾರುಣ್ಯವೆಂಬ ಉತ್ತುಂಗ ಶಿಖರ ಕಂಡಳು. ಆ ಮಹಾಲಿಂಗ ಮಲ್ಲಿಕಾರ್ಜುನ ಮಲ್ಲಯ್ಯನ ಸಾಕ್ಷಾತ್ಕಾರವನ್ನು ಪಡೆದಳು.

ತಾಯಿಯ ಈ ಜಾಜ್ವಲ್ಯ ಜೀವನ ಈ ಕಾವ್ಯೋದಯಕ್ಕೆ ಜೀವಂತ ಪ್ರೇರಕ ಶಕ್ತಿ ! ಈ ಮಹಾಶಕ್ತಿಯಿಂದ ಈ ಕಾವ್ಯದ ಅಭಿವ್ಯಕ್ತಿ ! ಶರಣತನ ನಿರೂಪಣದಲ್ಲಿ ಒಂದು ಹೊಚ್ಚ ಹೊಸ ಸತ್ಯಸೌಂದರ್ಯವನ್ನು ದರ್ಶಿಸಿದ್ದಾಳೆ ಕೃತಿಗಾರನಿಗೆ ತಾಯಿ ! ಭಾವದರ್ಶನವನ್ನು ಭಾಷಾದರ್ಶನವನ್ನಾಗಿ ಮಾಡಿಸಿದ್ದಾಳೆ ಮಾತೆ !

ಈ ಶತಮಾನದ ಕನ್ನಡ ಮಹಾಕಾವ್ಯ ಮಾಲೆಯಲ್ಲಿ ಇದು ವಿರಾಜಿಸದಿರದು— ಚನ್ನಮಲ್ಲನ ಕರುಣೆಯಿಂದ! ಇದು ನಮ್ಮ ನಾಲ್ಕನೆಯ ಮಹಾಕಾವ್ಯ. ಶ್ರೀ ವೀರಣ್ಣ

CC-0. Jangamwadi Math Collection. Digitized by eGangotri

ಚಂದ್ರಶೇಖರಯ್ಯ ಚರಂತಿಮಠ ಹುನಗುಂದ-ಬಾಗಲಕೋಟ ತಾಯಿಯಲ್ಲಿ ಇವರಿಟ್ಟ ಭಕ್ತಿ ಆಸಕ್ತಿ ಅತ್ಯಂತ ! ತಮ್ಮನ್ನೆ ತಾವು ತಾಯಿಗೆ ಮೀಸಲಾಗಿರಿಸಿಕೊಂಡು ಸೇವೆ ಸಲ್ಲಿಸಿದ್ದಾರೆ; ತಾಯಿಯ ಮಕ್ಕಳಲ್ಲಿ ನಿಜಕ್ಕೂ ಇವರು ಚನ್ನಮಲ್ಲರು. ಇವರದು ಭವ್ಯಭಾವ; ವೀರಭಕ್ತಿ. ಇವರು ಈ ಮಾತೃಕಾವ್ಯವನ್ನು ಮನಮುಟ್ಟಿ ಓದಿಸಿ ಆಲಿಸಿ ಓಲಾಡಿದ್ದಾರೆ ಓರಂದವಾಗಿ ! ಇವರು ನಿಡುಗಾಲ ಹದುಳಿಗರಾಗಿ ಬಾಳು ವಂತಾಗಲೆಂದು ಹೃದಯಾರೆ ಹರಸೋಣವಾಗಿದೆ. ಇದನ್ನು ಬರೆದು ಎಂಟು ವರುಷ ಉರುಳಿವೆ. ಇದೀಗ ಇದರ ಮುದ್ರಣಯೋಗ. ಇದಕ್ಕೆ ಶ್ರೀ ವೀರಣ್ಣ ಕಾರಣ ! ಲೇಸಾಗಲಿ.

೩೪-೯-೮೦ ಕೃತಿಕರ್ತರು

CC-0. Jangamwadi Math Collection. Digitized by eGangotri



ಇಪ್ಪತ್ತನೆಯ ಶತಮಾನದ ಆದರ್ಶ ಶಿವಶರಣೆ

ಸಜ್ಜಲಗುಡ್ಡದ ಶರಣಮ್ಮ ತಾಯಿಯವರು

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

೧ ಶ್ರೀಗುರುಸ್ತವನಂ

ಶ್ರೀಗುರುವೆ ನಿನಗೆ ನಮೋ ಶಿವದೀಕ್ಷಗುರುವೆ ನಮೋ
ಸತ್‌ಶಿಕ್ಷಗುರುವೆ ನಮೋ ಚಿನ್ಮೋಕ್ಷಗುರವೆ ನಮೋ !
ಕ್ರೀಕಳಾಜೈತನ್ಯ ಸತ್ಯಶಿವಲಾವಣ್ಯ
ಸಚ್ಛಿಷ್ಯಕಾರುಣ್ಯ ಶಿವಸಂವಿತ್ತಾರುಣ್ಯ
ಕರಿಬಸವಗುರುವರ್ಯ ಸ–ರಸಲೀಲಾಧುರ್ಯ
ಪರಮಾನುಭವಶೌರ್ಯ ನಿನ್ನಡಿಗೆ ಶರಣಾರ್ಥಿ !
ನಿನ್ನಿಂದ ನಾನಾದೆ, ನಿನ್ನಿಂದ ನಾನರಿದೆ,
ನಿನ್ನಿಂದ ಕರಕಂಜಸಂಜಾತ ನಾನಾದೆ !
ನಿನ್ನಿಂದ ದೇಹವಿದುತಾನಂಗಮಾದಪ್ಪುದು,
ನಿನ್ನಿಂದ ಜೀವಾತ್ಮವಿದುಲಿಂಗವಪ್ಪುದು, ೯೦
ನಿನ್ನಿಂದ ಲಿಂಗಾಂಗ ಸಾಮರಸ್ಯಮೊದಗುಗುಂ
ನೀಂ ಶಿವಾದ್ವೈತಸಿದ್ಧಾಂತಕಲ್ಪತರುವಲ್ತೆ !

"ಮಡಕೆಯಂ ಮಾಡುವರೆ ಮಣ್ಣು ತಾನದುಮೊದಲು
ತೊಡಿಗೆಯಂ ಮಾಡುವರೆ ಹೊನ್ನು ತಾನದುಮೊದಲು
ಶಿವಪಥವನರಿವಡಂ ಗುರುಪಥವೆ ತಾಂಮೊದಲು"
ಎಂಬ ಬಸವೇಶವಾಣಿಯಂ ಕೇಳದವರಿಲ್ಲ.
"ನ ಗುರೋರಧಿಕಂ ನ ಗುರೋರಧಿಕಂ ನ ಗುರೋರ
ಧಿಕಮೆಂದು ಶ್ರುತಿಶಾಸನಮುದ್‌ಘೋಷಿಸುತ್ತಿಹುದು"
ವೀರಶೈವಮೆಂಬೀಭೂಮಿಯೊಳ್ ಗುರುಬೀಜ-
ಮಂಕುರಿಸಲಷ್ಟಾವರಣಂಗಳೆಂಬವುರಂ ೧೦೦
ಬೆಳೆದುಹೆಮ್ಮರವಾಗಿ ಎಲೆಹೂವುಹಣ್ಣುಗಳಂ
ತಳೆವುದನೆ ಶ್ರೀಗುರುಜೀತನಮೇನಗ್ಗಳಮೊ ?
ಸೃಷ್ಟಿಲಕ್ಷಣಮುಳ್ಳುದು ಶ್ರೀಗುರುಜೀತನಂ
ಸ್ಥಿತಿಯ ಲಕ್ಷಣಲಕ್ಷಿತಂ ಲಿಂಗಜೀತನಂ
ಲಯಲಕ್ಷಣಲಕ್ಷಿತಂ ಜಂಗಮ ಜೀತನಂ
ಜೀವನಸೃಷ್ಟಿ ಸ್ಥಿತಿಲಯಗಳ್ಗೆ ಕಾರಣಂ
ತಾವಾದ ಗುರುಲಿಂಗಜಂಗಮವ ಬಗೆಯೆ ತಾ-

CC-0. Jangamwadi Math Collection. Digitized by eGangotri

ವೊಂದಾದ ಸತ್ಕಾರ್ಯಚೇತನಕೆ ವಂದನಂ !
ಜಾತಿಕುಲಪಂಥಭೇದಮಿಲ್ಲದೆ ಸರ್ವರಂ
ಮಾನಿಸರ ದಿಟ್ಟಿಯಿಂ ನೆರೆಗಂಡು ಮನಗೊಂಡು
ಶಿವಾದ್ವೈತ ಸಂಸ್ಕಾರಮನಿತ್ತು ಕಾಪಿಟ್ಟ
ಶ್ರೀ ಚಂದ್ರಗುಂಡಶಿವಾಚಾರ್ಯಂಗೆ ವಂದನ !
ಸತ್ಕಾರ್ಯ ಶಕ್ತಿಯಂ ಕರುಣಿಸಿಕಾಪಿಡುವ
ಓ ದಿವ್ಯ ಶ್ರೀ ಪಂಡಿತಾಚಾರ್ಯ ವರ್ಯರೇ
ಶ್ರೀ ವೀರಶೈವ ಭಾಷ್ಯಕಾರಣಕರ್ತರೇ
ಜಗದ್ಗುರು ವಂದ್ಯರೇ ನಿಮ್ಮಡಿಗೆ ನಮಿಸುವೆ !
ಶ್ರೀಶೈಲ ಸೂರ್ಯಸಿಂಹಾಸನದ ಚಿದ್ಗುರುವೆ
ಶ್ರೀ ವಿರೂಪಾಕ್ಷದೇಶಿಕೇಂದ್ರರೆ ವಂದನಂ,
ನಿಮ್ಮೆಲ್ಲರಡಿಗಳಂ ನೆರೆನಂಬಿ ಬಗೆದುಂಬಿ
'ಸಜ್ಜಲ ಶರಣವ್ವೆ'ಯ ಸತ್ಕಾವ್ಯಸೊರೆಯಲ್ಕೆ,
ತೊಡಗಿಹೆನ್ ಗುರುವರ್ಯ ಕರಿಬಸವ ಕರುಣೆಯಿಂ
ತೊಡಕುಗಳ್ ಬಾರದೊಲ್ ಕೊನೆಸಾಗುವೊಲ್ ಸಲಹಿರೈ !
'ಮಣಿಮುಕುರಂ' 'ಸದಾಶಿವರುದ್ರಂ' 'ಚಂದ್ರಪ್ರಭಾ'
ಪೆಸರಿನೀ ಕಾವ್ಯತ್ರಯಂಗಳಂ ರಚಿಸಿಹೆನ್,
'ಸದಾಶಿವರುದ್ರಂ' ಮಹಾಕಾವ್ಯದಂತೆವೊಲ್
ಸೃಜನಾತ್ಮಕ ಸಮಕಾಲೀನವಹ ಸಜಾತೀಯ
'ಸಜ್ಜಲದ ಶರಣವ್ವೆ' ಕಬ್ಬಮುಂಕಟ್ಟಿಹೆನ್
ಸಜ್ಜನಾತ್ಮರ್ಗಿ ಭಾವಸಜ್ಜಿಕೆಯಾಗುವೊಲ್ !

ಶ್ರೀದುಗ್ಗಳೆ ಸುಗ್ಗಳೆ ಶಾಂಭವಿ ಮಾದೇವಿ
ಮುಕ್ತಾಯಿ ನಾಗಾಯಿ ನೀಲಾಂಬೆ ಗಂಗಾಂಬೆ
ಚನ್ನಮ್ಮ ಮಲ್ಲಮ್ಮ ಮುಂತಾದ ಶರಣೆಯರ
ಚನ್ನವಹ ಸತ್ಕಳೆಗಳಂ ಸಲೆ ಸ್ಮರಿಸುವೆಂ;
ನಿಮ್ಮ ಬಾಳಿನ ಬಳಿವಿಡಿದು ಬೆಳ್ಳಂ ಬೆಳಗುತ
ನಮ್ಮ ಕರಿನಾಡೊಳಗೆ ಶರಣಧರ್ಮವನಿಂದು
ಬಾನೆತ್ತರಕೇರಿಸಿ ಬಿತ್ತರಿಸಿ ಬಾಳಿರ್ದ
ಶ್ರೀ ಸಜ್ಜಲ ಗುಲ್ಡದ ಶರಣವ್ವೆಯೋಜ್ವಲ
ಜೀವನ ಕಾವ್ಯಮಂ ಶ್ರಾವ್ಯ ಸೇವ್ಯಮವಾಗಿ
ರೂಹುಗೊಳ್ಳುವೊಲ್ ಬೇಳ್ಪೆಂ ನಿಮ್ಮೆಲ್ಲರಂಗಡಾ !

CC-0. Jangamwadi Math Collection. Digitized by eGangotri

ಜ.ಚ ನಿ. ಕವಿಕಾವ್ಯಕ್ಕೆ ಸ್ಫೂರ್ತಿಯಂ ಶಕ್ತಿಯಂ
ರಸಾವೇಶಮಂ ಮೇಣ್ ಪ್ರತಿಭೆಯಂ ರೀತಿಯಂ
ಪ್ರಸಾದಿಕ ಗುಣಮಂ ಪ್ರವೀಣತೆಯಂ ಲಯಂ
ಹಸಾದಿಸೆ ಹೃದಯದಿಂ ಕೇಳುವೆನ್ ಕೆಯ್ಮುಗಿದು !

ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರನೆ
ಶಾಂತಿರಸ-ಕರುಣರಸ-ಶರಣಗುಣಧರ್ಮರಸ-
ಕಾವ್ಯಮಂ ನಿನ್ನಯ ಕಳಾಮಯ ಚಿಚ್ಛರಣಕೆ
ಭಾವದಿಂದರ್ಪಿಸುವೊಲನುಗ್ರಹಿಸೆನ್ನನಂ !
ಶಬ್ದ ಪ್ರಸಾದಮಂ ಭಾವಪ್ರಸಾದಮಂ
ಮೇಣ್ ರಸ ಪ್ರಸಾದಮಂ ಕರುಣಿಸಯ್ ನಾಂ ಬೇಡ್ವೆ !
ಓ ಸಚ್ಚಿದಾನಂದ ನಿತ್ಯಪೂರ್ಣ ಸ್ವರೂಪರೆ,
ಅಚ್ಚಳಿಯದೊಲ್ ನಿಚ್ಚ ನಿಚ್ಚದೊಳ್ ನಲಿವಂತೆ
ಎನ್ನಚ್ಚ ಮಾನಸದೆ ನಿಮ್ಮ ಕರುಣಾಮೃತವ
ಪೆರ್ಚಿ ಸುರಿಸಿರಯ್ ಧಾರಾಕಾರದಿಂ ಬಿಡದೆ;
ನಾಸವನನಾರೋಗಿಸಿ ನೇಣನನುಭವಿಸಿ ಮಿಗಿ-
ಲಾದುದಂ ಮೊಗೆ ಮೊಗೆದು ತುಂಬುವೆನ್ ಕಬ್ಬದೊಳ್
ಸಹೃದಯರ್ ಕುಡಿಕುಡಿದು ಸೊಗಂಬಡುವಂತೆವೊಲ್
ಮತ್ತಮಾ ಸೋಗೆಯಂತೆ ಕುಣಿಕುಣಿದಾಡುವೊಲ್;
ಪೊಸಕಬ್ಬ ಮುಂಗಾರು ಮೋಡದನಿಯಂಗೇಳ
ಮೇಣ್ ನಲ್ಮೆಗಂಬನಿಯ ಸುರಿಸುತ್ತ ಸೊಗಸುತ್ತ !
ರಸಚೇತನನೆ ನೋಡೆ ನೀನಲ್ತೆ ರಸಋಷಿಯು
ರಸರುಚಿಯನಾಸ್ವಾದಿಸುವ ಲಿಂಗ ನೀನಲ್ತೆ
ನಾಲಿಗೆಯ ಚೇತನವೆ ನುಡಿಗಾರ ರಸಗುರುವೆ
ಓ ಪಂಡಿತಾಚಾರ್ಯ ನೀಂ ಕರುಣಿಗೆಯ್ಯೆನಗೆ
ನಲ್ಗನ್ನಡದೀ ನುಡಿಗಡಣಮಂ ಬೆಡಗಿನೊಳ್
ಬಳಸುವೊಲ್ ಬಗೆದುಂಬುವೊಲ ಮೇಣ್ ಪ್ರತಿಮಿಸುವೊಲ್;
ನವಕಾವ್ಯ ವೀಣೆಯೊಳ್ ನವಶಬ್ದ ಮೊಳಗುವೊಲ್
ನವ ತಂತ್ರದಿಂ ಮಿಡಿವ ಪೊಸಕೆಯ್ಪಿರಳುಗಳಂ;
ಬಾಜಿಸುತಿ ಸಾಗುವೆನ್ ಕಾವ್ಯಪಥದೊಳಾನಂ-
ದದಿಂ ಗುರಿಮುಟ್ಟುವೊಲ್ ನಿನ್ನ ಕಾರುಣ್ಯದಿಂ !
ಕಾವ್ಯದೊಳ್ ಭಾವಗಂಗೆಯಂ ತುಂಬಿ ಹರಿಯಿಸು.

CC-0. Jangamwadi Math Collection. Digitized by eGangotri

ಮೀಯುವಂತದರಲ್ಲಿ ಹೃದಯಮಂ ನೀ ಹರಸು ! ೯೦
ಶರಣಜೀವನಗಾನಮಂ ಗೆಯ್ಯಲೆಳಸಿಹೆನ್
ಕರುಣವೀಣೆಯಿಲ್ಲದಿರಲ್ ಸಾಗದಿಂಪಾಗಿ !
ಗೆಲುವಕ್ಕೆ ಸಿರಿಕಬ್ಬಕಜ್ಜಕ್ಕೆ ಕನ್ನಡಕೆ
ನಲಿವಕ್ಕೆ ಹಿರಿಗನ್ನಡನಾಡ ಜನತಾಂಗಕ್ಕೆ !

ಕವಿ-ಕಾವ್ಯ ಚಿತ್ರಣಂ

ಲೌಕಿಕದ ಕಾವ್ಯಮಂ ಬಗೆದುಬರೆದವರೆನಿಬರೊ,
ಅಲೌಕಿಕ ಕಾವ್ಯಮಂ ನೆಗರ್ದರುಂಟೆ ನಾಡೊಳು ?
ಲೋಕೋತ್ತರ ಜೀವನ ನಿರೂಪಣಗೆಯ್ದುದೆ
ಅಲೌಕಿಕ ಕೃತಿಯಕ್ಕು, ಸ್ವರ್ಗಕಾವ್ಯಮಿದಲ್ತು !
ಮಣ್ಣಿನೊಳು ಮೈವೆತ್ತು ಮಣ್ಣಿನಿಂ ನೆರೆಬಾಳ್ದು
ಮಣ್ಣಿನೀ ಮಕ್ಕಳೊಡವೆರಸಿರ್ಪುದೆ ದಿಟಬಾಳು !
ಲೋಕಕಾದರ್ಶವಹ ಲೋಕೋತ್ತರ ಜೀವನ
ವಿನ್ಯಾಸ ವಿಚಕ್ಷಣತೆಯೆ ಕಾವ್ಯಮೆನಿಸುಗುಂ !
ಪ್ರೌಢಪದ ಪ್ರೌಢಾರ್ಥ ಪ್ರಾಢಾನುಭೂತಿಗಳಿಂ
ಪ್ರೌಢರಸ ಚಿಮ್ಮುತಿರೆ ತಾನಹುದು ನಿಡುನಿಲುವೆ, ೧೦೦
ಪ್ರೌಢಿಮೆ ಜನಜೀವನ ಸೌಂದರ್ಯರಸ ಚಿಲುಮೆ,
ಮತ್ತಮಾ ನವೋನ್ಮೇಷಶಾಲಿ ಪ್ರತಿಭೆಯ ಕುಲುಮೆ !
ಶಬ್ದ ಸಂವಿಧಾನಂ ಸುಭಗಶೈಲಿಕಾರಣಂ.
ಶ್ರಾವಣಾಪ್ಯಾಯನಂ ಸಂವಹನ ಸಾಧನಂ !
ಲಾಕ್ಷಣಿಕ ಕವಿಕಾವ್ಯಮದು ಶ್ರಾವ್ಯಾಮಧುಭಾವ್ಯ-
ಮದು ಸಮಸ್ತ ಸಹೃದಯ ಸಂಸೇವ್ಯಮಪ್ಪುದೈ!
ರಸಪೂರ್ಣ ಸತ್ವಸಂಪನ್ನ ಭಾವಂಗಳಿಂ
ಭರಿತಮಾಗಿರ್ಪುದೇ ಸತ್ಕಾವ್ಯಮೆನಿಪುದೈ,
ಸಹೃದಯ ಸುಖಜೀವನ ಕಾರಣಮಪ್ಪುದೈ,
ಮೇಣಪ್ಪುದದರಿಂ ರಸಭಾವೋದ್ದೀಪನಂ ! ೧೮೦
ಮಾತು ಜ್ಯೋತಿರ್ಲಿಂಗಮದಾಗಿ, ರಸೋನ್ಮೇಷ:
ತಾನಾಗಿ, ಕವಿಕಾವ್ಯಸಾರ್ಥಕಂ ತಾವಹವು.
ಕಾವ್ಯದಿಂದೆ ಸ್ಥಾಯೀಭಾವಮದು ಸಂಚಾರಿ-
ಭಾವಮಾಗಿ ಪರಿವರ್ತಿಸುಗುಮುದ್ಬೋಧದಿಂ !

CC-0. Jangamwadi Math Collection. Digitized by eGangotri

ಆಳಾಗಿ ನೀಳಾಗಿ ಹರವಾಗಿ ಹುಲುಸಾಗಿ
ಪರಿಣಾಮಕಾರಿಯಾದಪುದು ಕಾವ್ಯಾರ್ಥಮದು.
ಎಲ್ಲರಸಗಳ ಮೂಲಮಾತ್ಮತಾನಾಗಿಹುದು,
ಸ್ವಾತ್ಮಾನುಸಂಧಾನಸಂಪನ್ನರೆ ಶರಣರು.
ಕಾಯ ನುಸ ಕರಗಿ, ತಾನಂಗವ-ನವೆಂದೆನಿಸಿ
ಮಾಯರಹಿತಾಂಗಮನ ಲಿಂಗಮನ ತಾನಾಗಿ
ಪ್ರಾಣಲಿಂಗ ಪ್ರೇಮರಸಗಟ್ಟಿಗೊಂಡದು
ಘನಲಿಂಗದಲ್ಲಿ ಘನಮನವಾಗಿ ತಾನಿಹ-ದು,
ದಿವ್ಯಾನುಭೂತಿಯಂ ದಿವ್ಯಾನುದೀಪ್ತಿಯಂ
ದಿವ್ಯಾನ-ನೋಪಮಂ ಪಡೆದು ಪರಿಣಮಿಪುದು.
ತಾನದುವೆ ಪರಮಾರ್ಥ. ತಾನದುವೆ ಪುರುಷಾರ್ಥ
ತಾನದುವೆ ಜೀವನಿತ್ಯ, ಭವಹರಣ ಸಾಹಿತ್ಯ !
ಅದನಾಳವಾಗಿ ತಾನನುಭವಿಸಿ ಬಗೆಗೊಳಿಸಿ
ಬೆಡಗಿನಲಿ ಕಬ್ಬದಲಿ ಪೇಳಿದಾತನೆ ಕವಿಯು.
ಭಾವರಸನುಜನು ಭಾವರಸಮಾಗಿ ಪರಿಣ-
ಮಿಸಿ ಪರಮ ಪರಿಣಾಮ ರಸಕ್ರಿಯೆಯೊಳಾನಂ-
ದ ಸಮರಸವೆ ನಿಶ್ಚೈರಗಾಗಿ ನಿಜಸ್ಫೂರ್ತಿಯಲಿ
ಪ್ರತಿಭೆಯಲಿ ಸೂಚ್ಯ ಚಮತ್ಕಾರ ರೂಪಕದಲಿ
ರೂಪಿಸಿದ ರಸಕಾವ್ಯನೇಕಾವ್ಯಮದು ದಿಟಂ
ಆದರಿಂದೆ ತಾನಹುದು ನಿಜವಸ್ತು ವಿಶ್ಲುಟಂ !
ಕವಿಶಕ್ತಿಯಿಂದೆ ಕಾವ್ಯಮದಂ ಕಮನೀಯಂ,
ರವಿದೀಪ್ತಿಯಿಂದೆ ದೃಶ್ಯಮಿದಂ ರಮಣೀಯಂ !
ರಸಶೈಲಿ ರಸಧ್ವನಿ ರಸಭಾವ ರಸಾತ್ಮ
ರಸಪೂರ್ಣ ಕಾವ್ಯಮದಮೃತಗಂಗೆ ಹರಿದಂತೆ !
"ಕವಿರ್ಮನೀಷೀ ಪರಿಭೂ: ಸ್ವಯಂಭುರ್ಯಥಾ-
ತಥ್ಯತೋ೨ರ್ಥಾನ್ ವ್ಯದಧಾಕ್ ಶಾಶ್ವತೀಭ್ಯ: ಸಮಾಭ್ಯ:"
ಎಂದು ಸ್ತುತಿಸಿಹುದು ಈಶಾವಾಸ್ಯ ಶ್ರುತಿಯದು;
ಸಂದೇಹಮಿಲ್ಲಮೆನಿತು ಮಾತ್ಮದ್ರಷ್ಟನಹ
ಪರಮಾನುಭಾವಿಕವಿ ಸೃಜಿಸುವನ್ ಯಥಾರ್ಥ-
ಶಾಶ್ವತಾರ್ಥ ಕಾವ್ಯಂಗಳಂ ಪ್ರತಿಭೆಯಿಂದಂ !
ಸತ್ಯಶಿವ ಸೌಂದರ್ಯಮಂ ಕಾಣುವನ್ ಕವಿಯು
ನಿತ್ಯದೊಳು ಮರ್ತ್ಯದಣುವಣುವಿನೊಳ್ ತಾನ್ ಗಡಾ !

CC-0. Jangamwadi Math Collection. Digitized by eGangotri

ನೋಡಿದುದ ನೋಡುವನ್ ಮಾಡಿದುದ ಮಾಡುವನ್
ಹಾಡಿದುದ ಹಾಡುವನ್ ವಾಚ್ಯಮಂ ಸೂಚ್ಯದೊಳ್;
ಸ್ವತಂತ್ರ ಸ್ಫೂರ್ತಿಯಿಂ ಪ್ರತಿಭೆಯಿರದ ಪ್ರತಿಭೆಯಿಂ
ಮನಂಬುಗುವಂತೆವೊಲ್ ಸರ್ವ ಸಹೃದಯರ್ಗೆ ! ೬೦
ನಿರಂಕುಶ ಮತಿಯುತರ್ ಸಿಯುಕ್ತರ್ ನಿರುಪಮರ್
ಪರಿಮಿತಿವಿರಹಿತರ್ ಪರಿಭಾವಿತರ್ ಕವಿವರ್ !
ಅಧಿಕಾಯರಧಿಕರಣರಧಿ ಹರಣರಧಿವರ್ನರ್
ಅಧಿಭಾವರಧಿರಸರ್ ಕಂಡರಿಯೆಕವಿವರರ್ !!
ಅಧಿಮನಸದ ಕವಿವರರ್ ಅನುಭಾವ ಸಂಯುತರ್
ಕಾವ್ಯಪ್ರದೀಪಮಂ ಬೆಳ್ಕಂ ಬೆಳಗಿಸುತ್ತ
ಕಳೆಯುವರ್ ಜನಮನದ ಗಾಢಾಂಧಕಾರಮುಂ,
ಬೆಳಗುವರ್ ನಿಜವಸ್ತು ಪ್ರಜ್ಞಾಪ್ರಕಾಶಮುಂ;
ಅದರಿಂದೆ ಜಾಗತಿಕ ಜೀವನ ದರ್ಶನಂ;
ಮುತ್ತಮಾ ಅನುಭಾವಿ ಮಹಾಕವಿ ಸ್ಪರ್ಶನಂ ೭೦
ಲಭಿಸುಗುಂ ಸಹೃದಯರಿಗೆ ಸಮಾಜ ಸ್ವರೂಪಂ !
ಕವಿಭಾನು ಮೂಡಿಬರೆ ಕಾಣುವುದು ಕಾವ್ಯಮದು;
ಕವಿತಾನು ಕಾವ್ಯಮಾಗಿ ಪರಿಣಮಿಸುವನ್‌ಗಡಾ !
ಸಾಂಸ್ಕೃತಿಕ ಸಾರತರ ಸುಧೆಯಂ ಕರುಣಿಸುವನ್
ಸುಖರಸಾನುಭಾವವನಿರದೆ ಆಳವಡಿಸುವನ್
ಬುದ್ಧಿಯನರಳಿಸುವನ್ ಭಾವರಸ ಸೂಸುವನ್
ಸಂವಹನ ಶೀಲದಿಂ ಹೃದಯ ಸಂವೇದಿಸುವನ್
ಪ್ರತಿಭೆಯಿಂದ ಪ್ರತಿಮಾ ತಂತ್ರಮಂ ಬಳಸುವನ್
ಬೆಳಸುವನ್ ಸತ್ಯಶಿವ ಸೌಂದರ್ಯಮನಿರದೆ !
ಮಾಡುವನ್ ಪಾತ್ರಗಳ ಹೃದಯ ಪ್ರವೇಶಮಂ ೮೦
ಮೇಣ್ ವ್ಯಕ್ತ ಪಡಿಸುವನ್ ಮನದಂತರಂಗಮಂ !
ವಿನೇಚನ ವಿಚಾರಣ ವಿಮರ್ಶಗೆ ವಿಶ್ಲೇಷ-
ಣಂಗಳಂ ಮಾಡುವನ್ ಭಾವ ಪ್ರಕಾಶಮಂ !
ಸಾಧಿಪನ್ ಭಾವದಿಂ ಹೃದಯ ಸಾರ್ಥಕ್ಯಮಂ
ಶೋಧಿಪನ್ ಸಾಂಪ್ರದಾಯಕ ಜನದ ಬುದ್ಧಿಯಂ !
ಬೆಳೆಸುವನ್ ಬೌದ್ಧಿಕ ಜನ ಜೀವನ ಮೌಲ್ಯಮಂ
ಆಳಿಸುವನ್ ಭಾವಿಕ ಜನಮನದ ಮೌಢ್ಯಮಂ

CC-0. Jangamwadi Math Collection. Digitized by eGangotri

ಬರಿಸುವನ್ ಪ್ರಗತಿಪಥದೊಳ್ ಬಿಡದೆ ಸರ್ವರಂ
ನಲಿಸುವನ್ ನಿರಂತರಂ ವಾಚಕ ವೃಂದಮಂ
ಉಲಿಸುವನ್ ತನ್ನ ವಾಕ್ ಶಕ್ತಿಯಿಂ ಮೂಕರಂ !
ವಹಿಸುವನ್ ಜೀವನದೆ ಮಹತ್ವದ ಪಾತ್ರಮಂ,
ಮತ್ತಮಿಹದೆ ಜೀವನ ನಾಟಕದ ಸೂತ್ರಮಂ !
ಸೃಜಿಸುವನ್ ಸೃಷ್ಟಿಯಂ, ತೆರೆಸುವನ್ ದೃಷ್ಟಿಯಂ,
ಕುಡುವನ್ ಪ್ರತಿಭೆಯಿಂದೆ ತುಷ್ಟಿಯಂ ಪುಷ್ಟಿಯಂ !
ತೋರುವನ್ ಕಾವ್ಯಮಾವ್ಯಮದಲ್ಲಿ ಚನ್ನವಹ
ಜೀವನದ ಕಲೆಯಂ ನೆಲೆಯಂ ಮೇಣು ಜೆಲೆಯಂ !
ಸಂವ್ರದೇನ್ ಸಕ್ಕರೆಯ ಸವಿಯುಂ ಸಗಣಿಯಪ್ಪಳು;
ಸವಿವರೇನ್ ಮಾನಿಸರ್ ಸತ್ಕಾವ್ಯ ಸುಖರಸಮಂ ?
ಕವಿಕಾವ್ಯಗಳೆರಳುಂ ಕಾರಣಂ ಮೇಣ್ ಕಾರ್ಯ
ಸಂಬಂಧದೊಳಗಿರ್ಪ ವಿಭಾಜ್ಯಾಂಗಗಳ್ಕೆಸೆ,
ಕರ್ತೃಕೃತಿಗಳ್ಕೆಸೆ; ಶಿಲ್ಪಿಶಿಲ್ಪಗಳ್ಕೆಸೆ;
ಮತ್ತಮಾ ಅಂಗ್ಯಂಗ ಭಾವದೊಳಿಹಳ್ಕೆಸೆ !

ಶರಣಂಗೆ ಶರಣಾಗತಿ ಜೀವಾಳಮಾದಂತೆ
ಶಬ್ದಾರ್ಥಗಳುಪಸನಂ ಜೀವಾಳಮಹುದು;
ಪರಾವಾಣಿಯ ಸಾಕ್ಷಾತ್ಕಾರಮಾಗದಲೆ
ಸತ್ಯಶಿವ ಶರಣನೆಂದೆನಿಸನೆಂದಿಗುಂ !
ಶಬ್ದರೂಪನಾಗಿಹನಾ ಶಿವಂ ಮತ್ತಮಾ
ಅರ್ಥಸ್ವರೂಪನಾಗಿಹನಾ ಶಿವಂ ದಿಟಂ;
ಶಬ್ದ ಬ್ರಹ್ಮನೆಂದುಮನಂತಜ್ಯೋತಿಸ್ವರೂ
ಪನೆಂದುಂ ಪೇಳುವರ್ ಪರಬ್ರಹ್ಮವೇತ್ತರು.
ಬ್ರಹ್ಮವೇತ್ತನಮಾತ್ಮದ್ರಷ್ಟಸಹ ಕವಿಯೆಂದು
ನಿರೂಪಿಸುವರ್ ನಿಜಾನುಭವಿಗಳ್ ಭಾವಿಗಳ್ !
ಷಡ್ರಸಂಗಳುತ್ಪತ್ತಿ ಚತುರ್ಮುಖಬ್ರಹ್ಮನದು
ನವರಸಂಗಳುತ್ಪತ್ತಿ ಮಹಾಕವಿಬ್ರಹ್ಮನದು.
ಶಬ್ದದಿಂದಾಕಾಶಮೋ ಮತ್ತಮಾಕಾಶ-
ದಿಂದೆ ಶಬ್ದಮೊ ? ಬೀಜಾಂಕುರನ್ಯಾಯದಿಂದಿರ್ಕ್ಕು !
ಶರಣನಿನನಾಕಾಶಶಬ್ದಬ್ರಹ್ಮವೇದಿ
ಮೇಣು ಶಬ್ದಾಕಾಶ ಬ್ರಹ್ಮವೇದಿ ಮತ್ತಂ
ಶಬ್ದದೊಳಗಣ ನಿಶ್ಯಬ್ದಬ್ರಹ್ಮಸಂವೇದಿ

CC-0. Jangamwadi Math Collection. Digitized by eGangotri

ತಾನಾಗಿ ಪರಮಾನುಭಾವಿಕವಿಯೆನಿಸುವನ್ ! ೧೨೪
ಶಬ್ದಮಿಲ್ಲದ ಮಂತ್ರಮಿಲ್ಲ ಮೇಣ್ ಮಂತ್ರವಿ
ಲ್ಲಿದಮಾತ್ಮಮಿಲ್ಲ ಮೇಣಾತ್ಮಮಿಲ್ಲದ ಜೀವ-
ನವೆತ್ತಣದೊ ಜಗದೊಳ್; ಶಬ್ದಮಿಲ್ಲದಕಾವ್ಯ;
ಮೆತ್ತಣದೊ ? ಶಬ್ದಮಿದುದಿವ್ಯ ಕಾವ್ಯಗಳೆರ
ಡಕ್ಕೆ ಮೂಲಾಧಾರಮಾಗಿಹುದು ಭಾವಿಸಲ್ !
ಪ್ರಾತಿಭಾನುಭೂತಿಯ ರಸಸಾಗರಂ ಕವಿಯುಂ;
ಜ್ಯೋತಿರ್ಮಯ ಭಾವಾರ್ಥ ಭಂಡಾರಂ ಕವಿಯುಂ.
ಸಾಹಿತ್ಯಸಾಮ್ರಾಜ್ಯ ಪ್ರತಿನಿಧಿಯುಂ ಸತ್ಕವಿಯುಂ;
ಸಾಂಸ್ಕೃತಿಕ ಸದ್ಭಾವ ತವನಿಧಿಯುಂ ಚಿತ್ಕವಿಯುಂ.
ಸಂಸ್ಕೃತಿಯ ರೂಹಿಸುವ ಸತ್ಕವಿಯುಂ ಸತ್ಯದೊಳ್ ೧೩೦
ಸಾಮಾಜಿಕ ಜೀವನದ ಪ್ರತಿಭಾನ್ವಿತ ಪ್ರಭಾಕರಂ !
ಸತ್ಕಾವ್ಯಮದಂ ರಸಪೂರ್ಣರಸಾಲಫಲಂ;
ಸತ್ಕವಿಯುಂ ಜೀವಂತಸುಮಧುರಂ ರಸಫಲಂ !
ಕವಿಸೇವೆ ಶಾಶ್ವತಂ ಕಾವ್ಯಮದು ಶಾಶ್ವತಂ !
ಸಾಹಿತ್ಯಮೇಣುಸಂಸ್ಕೃತಿಗಳಂ ರೂಪಿಸಿ
ಬೆಳಸಿ ಮೇಣುಳಿಸಿ ಬೆಳಗಿಸುವ ಕೀರ್ತಿಕವಿಯದು.
ಕವಿಯುಂ ಸಾಹಿತ್ಯಾಭಿರುಚಿಯಂ ಪುಟ್ಟಿಸುವನ್
ಸಹೃದಯರೊಳ್ ಸೊಗಸಾಗಿ ತನ್ನ ರಸವಾಣಿಯಿಂ !
ಮರೆಯಾದ ಶಿವಶರಣ ಜೀವನವ ಕಾಣಿಸುವನ್
ಕಾಣದಿಹ ಜನಗಳ್ಗೆ ಜೀವನ ಶಿಲ್ಪಿಯಾಗಿ; ೧೩೦
ಜನಮನೋಭೂಮಿಯೊಳ್ ಬೀರುವನ್ ಸತ್ಕವಿಯು
ಪಕ್ವ ಪರಿಣಾಮಮಂ ಪ್ರತಿಭೆಯಂ ಸ್ಫೂರ್ತಿಯಂ
ಸತ್ ಸಂಸ್ಕೃತಿಯಂ ಮೇಣು ಕಾವ್ಯಾನಂದಮಂ
ಕಾವ್ಯಮಯಕೃಷಿಯಿಂದೆ ಭಾವ್ಯಮಯಭಾವದಿಂದೆ !
ಮಾಡುವನ್ ಚಿತ್ತಶುದ್ಧಿಯಂ, ಬುದ್ಧಿವೃದ್ಧಿಯಂ,
ಮೇಣ್ ಭಾವಸಿದ್ಧಿಯಂ, ಕವಿಕಾವ್ಯಯೋಗದಿಂ !

ಮೊದಲಾಗಿದೆ ಇಂದು ಕಾವ್ಯಕ್ಷೇತ್ರದೆ ನವಯುಗಂ
ನವಶೈಲಿ ನವರೀತಿ ನವಗೀತ ನಿರ್ಮಿತಿ
ನವಛಂದ, ನವಬಂಧವೆಂಬುದೇಂ ಏನೆಲ್ಲ-
ಸ್ವಚ್ಛಂದ; ಗೇಯಕಾವ್ಯದ್ವಾರಕೆ ಪ್ರತಿಷ್ಠೆಯಂ ೧೪೦

CC-0. Jangamwadi Math Collection. Digitized by eGangotri

ಹೊಚ್ಚ ಹೊಸಲಾವಣ್ಯ ಹೊಚ್ಚ ಹೊಸಚೈತನ್ಯ
ತಾನಿಂದು ಮೂಡಿ ಬಂದಿಹುದೆಂದು ಜೇಳುವರ್
ಪೊಸಗನ್ನಡ ಕಾವ್ಯಪರಂಪರೆಗೆ ನೂತನರ್ !
ಬಂದಿಹುದು ಪಾಶ್ಚಾತ್ಯ ಸಾಹಿತ್ಯದಿಂ ಸ್ಫೂರ್ತಿ
ಮೇಣ್ ಮಾರ್ಗದರ್ಶನಂ ಮತ್ತಮಾಪ್ರೇರಣಂ !
ಪ್ರಭಾವಿತರಾಗಿಹರ್ ಕನ್ನಡಕವಿವರರ್
ಪಾಶ್ಚಾತ್ಯ ಪೊಸತನದ ಕಾವ್ಯಧಾರೆಯಿಂವಲಂ !
ಷೆಲ್ಲಿ ವರ್ಡ್ಸ್‌ವರ್ತ್ ಲಾರೆನ್ಸ್ ಷೆಕ್ಸ್‌ಪಿಯರ್
ಮುಂತಾದ ಕವಿಗಳಾಗಿಹರ್ ಮಾರ್ಗದರ್ಶಕರ್;
ಪಾಶ್ಚಾತ್ಯಗೀತಗಳು ಕಾಣುವವು ಕನ್ನಡದೆ ! ೧೭೦
ಆಂಗ್ಲೋಕ್ತಿ ವೈವಿಧ್ಯ ಭಾವಾಭಿವ್ಯಕ್ತಿ ಮೇಣ್
ನವ್ಯಾರ್ಥ ಸಂಪತ್ತು ನಚ್ಚಿಹವು ನವ್ಯರ್ಗೆ !

ನಾವೊರೆವ ಕಾವ್ಯಮಿದು ಹಳತಲ್ಲ ಪೊಸತಲ್ಲ
ಪೌರ್ವಾತ್ಯ ಮಾಧ್ಯಮವ ಮಾರ್ಗಮಂ ಬಿಟ್ಟಲ್ಲ.
ಹಿಂದಿಂದಿನವರೊಪ್ಪುವ ನಟ್ಟನಡು ಹೊಲಬಿನೊಳ್
ಹೆಜ್ಜೆ ಹಾಕಿಹುದು 'ಸಜ್ಜನ ಶರಣಪ್ಪೆ' ಕಬ್ಬಮಿದು,
ಗೆಜ್ಜೆ ದನಿಯಿಂಪಿನಿಂ ಹೆಜ್ಜೆ ನಿಸುಂಪಿನಿಂ
ಲೌಕಿಕಾಲೌಕಿಕ ವಿಭಾವರಸಪೆಂಪಿನಿಂ !
ಇದು ಬುದ್ಧಿ ಚಮತ್ಕಾರದಿಂದಾವ ಕಬ್ಬಮಲ್ಲ
ಇದುಭಾವರಸಮುಂಬಿ ಬಂದಸವಕಾವ್ಯವೈ ! ೧೮೦

ಹಳತು ಪೊಸತು ಕಬ್ಬ ಪೊಸಲುಗಳ್ಗೆ ಸೇತುವೆಯು-
ತಾನಾವ ಹರಿಹರಕವಿಚಕ್ರಿ ಪಥಕಾವ್ಯವು.
ಹರಿಹರನ ಶೈಲಿಯಿಲ್ಲಿಲ್ಲ ಶುಭಗತಿಯಿಲ್ಲ
ಆತನಾ ಪ್ರಗಲ್ಭ ಪ್ರತಿಭೆಯ ಮಾತೇಕೆ ?
ಮೇಣ್ ಸತ್ಪ್ರ ತತ್ತ್ವಗಳ್ಗೆ ಸಹೃದಯರೆ ಶರಣರು.
ಹೊಗಳಿಕೆ ತೆಗಳಿಕೆಗಳ ಮಾತೇಕೆ ಈಕೃತಿಗೆ
ತಾಯ್ ಜಿಸ್ಕ್ರಿಯ ಸಜ್ಜನ ಶರಣಾಯಿಯೊಲಿಮೆಯಿರೆ,
ಸಾಲದೇನ್ ಬೆಳಗದೇನ್ ನಿಡುಗಾಲ ನಾಡಾಗಸದೆ
ಬಾಳದೇನ್ ಭಾವಜೀವಿಗಳ ಮನೋಭೂಮಿಯೊಳ್ ?
ಇಂತಾಗೆ ಕವಿಕಾವ್ಯಸಫಲತೆಗೆ ಜೇರೇನು ? ೧೯೦

CC-0. Jangamwadi Math Collection. Digitized by eGangotri

ಸಿರಿಗನ್ನಡದೊಳ್ ನೆಲಸಿರ್ಪ ಹುನಗುಂದ ಪರಿ-
ಸರದ ಸಜ್ಜಲಪರ್ವತ ಶ್ರೇಣಿಗಳೆಲ್ಲ
ಕಾವ್ಯನಾದದಿಂದಣುರಣಿಸಿದರೆ ಸಾಲದೇನ್ ?
ಶ್ರಾವಕರ ಹೃದಯಸ್ಪಂದನಮೊದಗೆ ಸಾಲದೇನ್
ಕಾವ್ಯರಸಧಾರೆ ಪರಿದು ಭಕ್ತರ ಬಗೆಗಳಂ
ತಣ್ಣನೇ ತಣಿಸಿದಡೆ ಕೃತಿಗದುವೆಕೃತಕೃತ್ಯತೆ !
ಶೃಂಗಾರರಸಮಿಲ್ಲದಿರ್ದಡೇನ್ ಶಾಂತರಸಂ-
ಲಿಂಗರತಿ ಕರುಣರಸಂಗಳ್ಗಿ ಕೊರತೆಯೇನ್ ?
ಆ ತಾಯ ಚಿತ್ಪ್ರತಿಭೆ ಮತ್ಕಾವ್ಯ ಬಲ್ಪಿನೊಳ್
ಬೆಳ್ಳನೆ ಬೆಳಗಿದಡೆ ಭಾಗ್ಯಮದುವೆ ಕವಿಗೆ ! ೨೦೦

ಆ ತಾಯಿ ಪರಾಶಕ್ತಿಯೆನ್ನೊಳ್ ಪರಾವಾಣಿ
ತಾನಾಗಿ ಪಶ್ಯಂತಿ ಮಧ್ಯಮೆಯು ಮೂರ್ಗಡಲಿ
ನಡೆತಂದು ವೈಖರೀ ತಾನಾಗಿ ಹೊಮ್ಮಿರಲ್
ಬಡತನಮೆ ಭಾವರಸ ರಮ್ಯರೀತಿಗಳ್ಗಿ ?
ಮಾತೃಪ್ರಭಾವಮಿರೆ ಪಡಿಪದಾರ್ಥಂಗಳವು
ಪ್ರಕಾಶಿಸವೇ. ಪ್ರಸಾದ ಪರಿಣಾಮದಿಂ ಮೇಣ್
ಪ್ರಾಸಾದಿಕತೆಯಿಂದೆ ಪಜ್ಜಳಿಸವೇನ್ ಗಡಾ !
ಸೃಜನಾತ್ಮಕ ಸಮಕಾಲೀನ ನವಕಾವ್ಯಮಿದು
ಸ್ಫೂಜದಿಂ ಕನ್ನಡದೆ ವಿಶಿಷ್ಟಕಲಾಮಯಂ !
ಪುರಾಣಮಿದಲ್ಲ ಮೇಣ್ ಪವಾಡಂಗಳಿಲ್ಲ ೨೧೦

ಸತ್ಯಶರಣೆಯ ಪ್ರತ್ಯಕ್ಷ ಸಚ್ಚಾರಿತ್ರಮಿದು.
ಕಾವ್ಯಕಾಯದೊಳ್ ಮಾತೃಶಕ್ತ್ಯಭಿವ್ಯಕ್ತಿಗೊಳಿ
ಭಾವ್ಯಶಕ್ತಿ ಪ್ರವಹಿಸಿ ಪೈದುಂಬಿಮೂಡದೇನ್ ?
ಕಾವ್ಯಾಗಸದೆ ತಾಯಿ ತಾನುಷೆಯಾಗಿ ಉದಿಸಿರೆ
ಶ್ರಾವ್ಯಜನ ಹೃದಯ ಹೂವರಳವೇನ್ ಗಡಾ !
ಮಾತೃಹೃದಯ ಕೋಮಲತೆ ಕಾವ್ಯಕೆ ಬಾರದೇನ್ ?
ಮಾತೃ ಶಿವಸೌಂದರ್ಯ ಮಾಧುರ್ಯ ತೋರವೆನ್ ?
ತಾಯ್ತಂಪು ತನಿತಂಪು ಬಗೆಸೊಂಪು ಬಾರವೇನ್ ?
ಮಾತೃಕಾರುಣ್ಯರಸಮಿದರೊಳ್ ಪ್ರವಹಿಸದೇನ್
ತಾಯ್ ತನ್ನ ಕಂದನಂ ಕಾಪಿಡಳಿಕಟ್ಟಳ್ಕರಿಂ ? ೨೨೦

CC-0. Jangamwadi Math Collection. Digitized by eGangotri

ತಾಯಿದೆ ನೊರೆವಾಲಿರೆ ಎಳೆಗಂದ ಜವ್ವನಿಗ
ತಾಸಪ್ಪುದೇ ದಿಟಂ ಜೀವನದೊಳಿದು ಸ್ಫುಟಂ !

ತಾನಾಗಲಿ ಮೇಣಾಗದಿರಲೀ ಮಾತೇಕೆ ?
ಚಿನ್ಮಾತೃಸೇವೆ ಸಲ್ಲಲೆಂದುಂ ರಚಿಸಿಹೆನ್
ಸತ್ಯ ಸಹಜ ಭಾವೋದಿತ ಸಂಪತ್ತಿಯಿಂ
ಮತ್ತಮಾ ಪರಮಪ್ರೇಮ ರಸಪ್ರಪತ್ತಿಯಿಂ
ನಿತ್ಯನಿರತಿಶಯಮಾದಾ ಚಿತ್ಪ್ರತಿಭೆಯಿಂ
ಮಾತೃವಾತ್ಸಲ್ಯಮಂ ನೆನೆನೆನೆದು ಸ್ಫೂರ್ತಿಯಿಂ !
ಶರಣಾಪ್ತೆಯಾದರ್ಯ ಜೀವನದ ಚಿತ್ರಣಂ
ವರ್ಣರೂಪಮೆಂತಿರ್ದರೇನಾಂತರಿಕದಾ
ಪೂರ್ಣಸ್ವರೂಪರಮ್ಯತೆಗದಾವಕೊರತೆಯೋ ?
ಸತ್ಯಶಿವ ಶಾಶ್ವತಕ್ಕೆ ಸೌಂದರ್ಯಮದಲ್ತೆ ?
ಆದಕೇಕೆ ಅನ್ಯೋಕ್ತಿ ಮತ್ತಮನ್ಯವ ಶಕ್ತಿ ?
ದಿವ್ಯಾತ್ಮಮದು ಮಾತು ಮನಗಳ್ಗೆ ಸಿಲುಕದು
ಮರಣಮಂ ಜಯಿಸಿರ್ಪ ಮಾಮಾತೃಜೀವನಂ
ಮರ್ತ್ಯದೀ ಮಾನವರ ಸಾರಾಯ ಸಂಪದಂ !
ಕವಿಯಾಗಲೆಳಸಿಯೊರೆಯಲಿಲ್ಲೀ ಕಾವ್ಯಮಂ;
ಚಿಚ್ಛಕ್ತಿ ಶರಣಾಪ್ತೆಯ ನಿಲವಿಗೊಲಿದೊರೆದಿಹೆನ್ !
ಶೈಲಿ ತಂತ್ರ ಮುತ್ತಂ ವರ್ಣನಾಲಂಕಾರ
ಮೊದಲಾದ ಕವಿಸಮಯಕಂ ಕಟ್ಟು ಬಿದ್ದಿಲ್ಲ
ಸತ್ಯಶಿವ ಶರಣಾಪ್ತೆಯ ಸತ್ಸಾಧನಾಂಗಗಳಂ
ಸಹಜ ಸ್ವಭಾವದಿಂದೊಲಿದು ನಲಿದುಲಿದಿಹೆನ್ ?
ಆಚಾರ ವಿಚಾರ ನಡೆ ನುಡಿ ಮೇಣ್ ನೋವ್ನಲಿವು-
ಗಳನೊರೆದು ಜೀವನದ ಕಾವ್ಯಮೆನಿಸೆ ತೊಡಗಿಹೆನ್ !
ಹೊಸತುಕಬ್ಬಕೆ ಹಳತು ಶೈಲಿಯದಮೇತಕೆನಲ್
ಹಳೆಯಕ್ಕೆಯೋಗರೊಲ್ ಲೇಸಮೆಂದೆನಿಸಿಹೆನ್ !

'ಸಜ್ಜಲ' ಮೆನೆ ಶ್ರೀಗುರುದೇವ ಪಾದೋದಕಂ,
ತಾನದಕೆ ಶರಣಾಗಿ ಬಾಳಿಹಳ್ ಶರಣವ್ವೆ ;
ಈ ಕತದೊಳೀಕಾವ್ಯಕೆ 'ಸಜ್ಜಲ ಶರಣವ್ವೆ'
ಯೆಂತೆಂಬ ಸಾರ್ಥಕದ ಸಲ್ಪೆಸರ್ ಬಂದಿಹುದು

CC-0. Jangamwadi Math Collection. Digitized by eGangotri

ಬರೆದಿಹೆನ್ ಹರಿಹರಂ ಮಾಪೇವಿ ಕಾವ್ಯಮಂ
ಬರೆದಿಪೆನ್ ಶರಣಪ್ಪೆ ಕಾವ್ಯಮಂ ತಾಸಂತೆ !
ಮೆರೆಯದೇಂ ಕನ್ನಡದೆ ಸಜ್ಜಲಂ ತಾನಾಗಿ-
ಮೀರಿರ್ಪ ಮಾತೆಯಾ ರಸಪೂರ್ಣ ಶಕ್ತಿಯಿಂ ?

ಪ್ರಕೃತಿ ಪುರುಷನಿರೂಪಣಂ

ಈ ಲೋಕಮಿದು ದೃಶ್ಯ ಪ್ರಕೃತಿ ಪುರುಷಲೀಲೆ
ಆಲೋಕಿಸಲ್ ಜನ್ಮ ಜನ್ಮಾಂತರದ ಮಾಲೆ
ಬೆಕ್ಕಿಂಪು ಕಪ್ಪುಗುಣಗಳಿಂದೊಡಗೂಡಿಹುದು,
ಕಾಯಮನ ಮೆಣ್ಬುದ್ಧಿ ಭಾವಕರಣಂಗಳೊಳು !
ಕಾಡುವವು ಕಫವಾತ ಪಿತ್ತದೋಷಂಗಳು
ಕೂಡಿಹವು ಕಾರ್ಮಿಕ ಮಾಯೆಯ ಮೇಣಾಣ
ವೀಯ ಮಲತ್ರಯಂಗಳು ತೊಳಲಿಸಲ್ ಪುರುಷನೊಳು !
ಹುಟ್ಟು ಸಾವ್ ಹಸಿವುನೀರಡಿಕೆ ನೋವ್ ಮೋಹಗಳು
ಕಾಮ ಕೋಪ ಲೋಭ ಮೋಹಮದ ಮತ್ಸರ
ನೆಂಬಾರು ಹಗೆಗಳಿರ್ಪವು ಪ್ರಕೃತಿ ಪುರುಷರೊಳು !
ಶೃಂಗಾರ ರೌದ್ರ ಮೆಣ್ ಭಯಾನಕ ಬೀಭತ್ಸ ೧೦
ಮೇಣದ್ಭುತಾದಿ ನವರಸಕಾರಣವಾಗಿಹವು
ತನುತ್ರಯ ವಿಕಾರ ಮತ್ತಮಾ ಸಂಹಾರ
ನಾಟಕನಾಡುತಿಹವನುದಿನವೆಲ್ಲರೊಳು
ಆತ್ಮರತಿಯಿಲ್ಲ ಮೇಣಾತ್ಮಶಾಂತಿತಾ ಮುನ್ನಿಲ್ಲ
ಆತ್ಮತೇಜ ಮೇಣೋಜಗಳ ಮಾತೆತ್ತಣದೊ ?
ಅನ್ನಮಯ ಪ್ರಾಣಮಯ ಮನೋಮಯ ಕೋಶಂಗಳು
ಚನ್ನವಹ ತನ್ನತನವ ಕೆಡಿಸಲ್ ಬೆಳೆದಿಹವು ;
ವಿಜ್ಞಾನಮಯಾ ನಂದಮಯಂಗಳೆತ್ತಣವೊ ?
ಅನ್ನಮಯ ವಿಕಾರಂ ಕಾಡುವುದು ಹಸಿವಾಗಿ,
ಪ್ರಾಣಮಯ ವಿಕಾರಂ ಕಾಡುವುದು ತಿಸೆಯಾಗಿ ; ೨೦
ಮನೋಮಯವಿಕಾರಂ ಕಾಡುವುದು ಬಿಡದಲೆ
ತಾನಾಗಿ ವಿವಿಧ ವಿಷಯಂಗಳಲಿ ಬೆಸನಾಗಿ !
ಗುಣಂಗಳ ಗೀಚಾಟ, ಮಲಂಗಳ ಮುಚ್ಚಾಟ,
ತನುತ್ರಯದೊಳು ದೋಷತ್ರಯಂಗಳ ತೂರಾಟ

CC-0. Jangamwadi Math Collection. Digitized by eGangotri

ಇದೋ ತೆರೆಗಳಾರರ ತೆರಪಿರವ ಕಚ್ಚಾಟ,
ಅದೋ ಹಗೆಗಳಾರರ ಹನರಣದ ಹುಚ್ಚಾಟ
ಪ್ರಜೆಯಿಲ್ಲದಿರೆ ಪ್ರಕೃತಿ ಪುರುಷರ ಚಲ್ಲಾಟ;
ಭ್ರಮೆಗೀಡು ಮಾಡುವುದು ಬಗೆಯಲಿದು ಬಂಡಾಟ !
ಜೀವನಕೆ ನೆರವಾಗಲೆಂದೆಣಿಸಿ ಸೃಜಿಸಿರ್ದ
ವಿಷಯೇಂದ್ರಿಯಂಗಳ್ ವಿಕೃತಿಹೇತುಗಳಾಗಿಹವು ;
ನೊಗಗೂದಲ ಜೋಳಿಸೆ ಮಾಡಿದ್ದ ಜ್ಞೀಡಿದು
ಕಳ್ಳರ್ಗೆ ಕಿಸೆಕತ್ತರಿಸಲನುವಾಗಿರುವಂತೆ !
ರಾಜ್ಯವಾಳಲು ಬಂದು ರಾಜ್ಯವನೆ ತಾ ಮರೆತು,
ವ್ಯಾಜದಿಂ ಹಣಗಳಿಸಲಿರದೆ ಹೆಣಗುವವನಂತೆ !
ಜೀವನಾಧಾರವಹ ಧರ್ಮವಂ ಮೂರಿಸಿ
ಕರ್ಮಕೂಟಲೆಯ ಕಳೆವ ಮೋಕ್ಷವಂ ನಿಕ್ಕರಿಸಿ
ಬರಿಯರ್ಥ ಕಾಮಾಧಿಕಾರಂಗಳ ಪೆಂಬಳಿಸಿ
ಸ್ವಾರ್ಥ ಸಂಕುಚಿತ ಭಾವದಿಂ ನಡೆವರ್ ಜನರ್
ಮಿತಿ ಮೀರಿ ಗತಿ ತೂರಿ ಕುಡಿತಕ್ಕೆ ಗುರಿಯಾಗಿ
ಇಹದಭ್ಯುದಯ ಪದ ಶ್ರೇಯಸ್ಸಿಗೆರವಾಗಿ !
ಉಪ್ಪ ತಿಂದಡೆ ನೀರಡಿಕೆ ತಾನದಾಗದೇಂ
ತಿಪ್ಪೆಯೊಳ್ ಮಾನಿಸರನ್ನವಂ ಚಲ್ವರೇಂ ?
ಪ್ರಕೃತಿಯಿದು ಕೇಡು ಲೇಸುಗಳ ಮಾಧ್ಯಮವಸ್ತು ;
ಬಳಸುವಲ್ಲಿದೆ ಜಾಣ್ಮೆ, ಬೆಳಸುವಲ್ಲಿದೆ ಜಾಣ್ಮೆ ;
ರನ್ನವಂ ತಿಪ್ಪೆಯೊಳ್ ತಾನೆಸೆಯೆ ಜಾಣ್ಮೆಯೇಂ ?
ಪ್ರಕೃಷ್ಟ ಕೃತಿಯಿದೆಂದರಿಯದಿರೆ ತಪ್ಪಾರಜೋ ?
ಸಂಸ್ಕಾರಕೆರವಾಗಿ ಬಾಳದರೆ ಬಪ್ಪುದೇಂ ?
ಸಂಸ್ಕಾರವಿದು ಪ್ರಗತಿ ಜೀವನಕೆ ಸಾಧನಂ !
ಸಶ್ಚಿಯಾ ಸಿದ್ಧಿಯಂ ಕಾಸಿಂಗೆ ಮಾರುಗುಡು
ವರೇಂ ಪೇಳಯ್ಯ ನೀಂ ಸಹಜಾನುಭಾವಿಗಳ್
ಪರಶಿವನ ಪಾವನದ ಪರಿಸೇವೆಗಲ್ಲದಲೆ ?
ಪಂಚಜ್ಞಾನೇಂದ್ರಿಯಂಗಳ್ ಪಂಚಪರುಷಂಗಳ್
ಪಂಚಕರ್ಮೇಂದ್ರಿಯಂಗಳ್ ಪಂಚರತ್ನಂಗಳ್
ಪಂಚಕರಣಂಗಳ್ ತಿಳಿಯೆ ಪಂಚ ಕಿರಣಂಗಳ್
ಪಂಚತನ್ಮಾತ್ರಂಗಳು ಪಂಚ ಪ್ರಸಾದಂಗಳು,
ಸತ್ಯ ಶಿವಶರಣಂಗೆ ಸುಪ್ರಸಾದಹರಣಂಗೆ !

CC-0. Jangamwadi Math Collection. Digitized by eGangotri

ಹುಸಿನುಡಿವ ಪಿಸುಣಿಗಳ್ ಗಸಣಿಗೊಳಗಾಗಗಲೇಂ ?
ಹುಸಿಯದಿಹ ಶರಣನಾ ಹಸಾದತೆ ಬಪ್ಪುದೇಂ ?
ಕಾಮಿಸದೇ ಕೋಪಿಸದೆ ಲೋಭಿಸದೆ ಮೋಹಿಸದೆ
ಮದಿಸದೆ ಮತ್ಸರಿಸದೆ ಜೀವಿಸುವಂ ಶರಣಂ ;
ಭಕ್ತ ಮಾಹೇಶ ಪ್ರಸಾದಿ ಪ್ರಾಣಲಿಂಗಿ
ತಾನಾಗಿ ತನ್ನೊಳಗಿರುವಾತನೆ ನಿಜಶರಣಂ ! ೧೧೮

ಸಮ್ಯಕ್‌ಕ್ರಿಯೆ ಸಮ್ಯಕ್‌ಜ್ಞಾನ ದರ್ಶನಂಗಳಿಂ
ಸಮ್ಯಕ್ ಚರಿತ್ರನೆನಿಸಿಹನ್ ಸತ್ಯ ಶರಣನ್ !
ಪಡೆಯುವನ್ ಪ್ರಕೃತಿವಿಜಯಂ ವ್ಯೋಮಕ್ಕೇರಿ
ಶಾಂತಿ ಕಾಂತಿಗಳ ಸಂಪಾದಿಸುತ ಸೋವೇರಿ ?
ಪಿಂಡಾಂಡದಲ್ಲಿರ್ಪ ಪರಾಶಕ್ತಿಯದಚಿಂತ್ಯ
ಬ್ರಹ್ಮಾಂಡ ಪ್ರಕೃತಿಗಿಂತತ್ಯಂತಾದ್ಭುತ
ಮದುವೆ ಈ ಬ್ರಹ್ಮಾಂಡಮಾಗಿ ತೋರ್ಪುದೆಮಗೆ ;
ಇದನರಿಯುವನ್ ಸತ್ಯಶರಣನಾತ್ಮ ಶಕ್ತಿಯಿಂ.
ಬಿತ್ತು ಮೊಳಕೆಯ ನ್ಯಾಯ್ಯದಿಂ ಸ್ವಾಸುಭಾವದಿಂ
ದಂಧಾರಮಾದಂತರಾಳದರಿವಿನಿಂ ವಲಂ !
ಶಕ್ತಿಯೇ ತಿರೆಯಾಗಿ ತನುವಾಗಿ ಮನವಾಗಿ
ಮೇಣ್ ವಿಷಯವಾಗಿ ಬೆಸುಗೆಯಂ ಮಾಡಿರ್ಪುದಯ್ ! ೧೧೯
ತನಗು ತಿರೆಗು ಅಂತರವಿಹುದು ಸ್ಥೂಲವಾಗಿ,
ತಿಳಿಯಲಂತರಮಿಲ್ಲದಿಹುದು ಸೂಕ್ಷ್ಮವಾಗಿ !
ದೇಹಂ ದಿನಗಳಿದಂತೆ ಕಳೆಗುಂದಿ ಕಂದಿ
ಹೊಹುದಯ್ ಮುಪ್ಪು ನೋವು ಸಾವುಗಳಿಗೀಡಾಗಿ,
ಮನೋಬಲಮಳಿವುದಯ್ ದುರ್ಧವದಿಂದಾಗಿ,
ದುರುದ್ದೇಶದಿಂದಾಗಿ, ದುರಾಶೆಗಳಿಂದಾಗಿ !
ಅಂತರ್ಮುಖಿಯಾದ ಶರಣನಿಂತಾಗದೆ
ಅಂತರಾತ್ಮನ ಸತ್ಯ ಸಾಕ್ಷಾತ್ಕಾರದಿಂ ೧೨೦
ಮನೋಬಲವ ಗಳಿಸಿ, ತಾನಂಗಭಾವಮಂ
ಲಿಂಗದೊಳ್ ಸಲೆ ಸವೆಸಿ ತಾನಕಾಯನೆನಿಸಿ
ಗಳಿಸುವನ್ ಪರಾತ್ಪರ ಪ್ರಾಸಾದಿಕ ಶಕ್ತಿಯಂ !
ಕಾಷ್ಠಮಥನದಿಂದಗ್ನಿ ಪುಟ್ಟುವ ತೆರದಂತೆ
ಕ್ರಿಯಾಜ್ಞಾನಾಚಾರ ಮಥನದಿಂ, ಮನನಿಸಲ್

CC-0. Jangamwadi Math Collection. Digitized by eGangotri

ವಿಶ್ವಶಕ್ತಿಯುದಿಸುಗುಂ ಪರಮ ಪರಿಣಾಮದಿಂ !
ಆಧಾರ ಶಕ್ತಿತಾಂ ಕುಂಡಲಿನಿಯೆಸಿಸುಗುಂ
ಅನಾಹತ ವಿಶುದ್ಧಿಯೊಳುನ್ಮನಿಯೆನಿಸುಗಂ
ಆರಿಯಲಮನೆ ಮಹಾಜೈತನ್ಯಮೆನಿಪುದು
ಶರಣನಾ ಶಿವಯೋಗ ಶಕ್ತಿಯಿಂ ಭಕ್ತಿಯಿಂ
ಪರಾತ್ಪರ ಜೈತನ್ಯ ಶಕ್ತಿಯದು ಲಭಿಸುಗಂ !
ಆಜ್ಞೆಯಿಂ ಮೇಲೇರಿ ಸಹಸ್ರಾರ ಚಕ್ರದೊಳ್
ಶಿವನೊಡಂ ಬೆರೆವುದಮೃ ಸುಧಾಮಯ ತಾನಾಗಿ !
ಗುರುವರನ ಕಾರುಣ್ಯದಿಂ ಮಂತ್ರದೀಕ್ಷೆಯು,
ಮಂತ್ರಸಿದ್ಧಿಯೆ ಲಿಂಗಸಿದ್ಧಿಯು ತಿಳಿಯಲ್ಕೆ ;
ಮಂತ್ರದೊಳ್ ಮನಂ, ಮನದೊಳ್ ಮಿಗಿಲ್ ಮಂತ್ರಮದು
ತಂತ್ರಿಸಲ್ ಶಾಂತಿ ಆಕಾಂತಿ ತಾವ್ ಲಭಿಸುಗುಂ.
ಗುರುದೇವನಿಲ್ಲದೆ ಕಾರುಣ್ಯಮದಿಲ್ಲ
ಕಾರುಣ್ಯಮದಿಲ್ಲದೆ ಪರಮಜೈತನ್ಯಮಿಲ್ಲ.
ದೀಕ್ಷೆಯೊಳ್ ಗುರುದೇವನಾ ಹಿರಿಮೆ ಮುಮ್ಮಿಗಿಲು ;
ತಂತ್ರದೊಳ್ ಗುರುಸಂತ್ರದಾ ಮೈಮೆ ಮುಮ್ಮಿಗಿಲು.
"ಹರ ಮುನಿಯೆ ಗುರುಕಾಯ್ವ ಗುರು ಮುನಿಯೆ ಹರಕಾಯ"
ಎಂಬುವಾ ನಾಣ್ಣುಡಿಯಿಹುದಲ್ತೆ ಜನರೊಳು ?
ಗುರುದೀಕ್ಷೆ ತಾನದಂ ಶಿಷ್ಯಂಗೆ ಫನಯೋಗ ;
ಗುರುಶಿಕ್ಷೆ ತಾನದಂ ಶಿಷ್ಯಂಗೆ ಶಿವಯೋಗ
ಗುರುಭಕ್ತಿ ಗುರುಶಕ್ತಿ ಗುರುದೀಪ್ತಿ ಗುರುದೃಷ್ಟಿ
ಗುರುಮಂತ್ರ ಗುರುತಂತ್ರ ಗುರುಶ್ರದ್ಧೆ ಗುರುನಿಷ್ಠೆ
ಶಿಷ್ಯಂಗೆ ಸಮನಿಸಲ್ ಸರ್ವೋತ್ತಮದ ಸಿದ್ಧಿ !
ಸರ್ವಾಂಗ ಸಂಶುದ್ಧಿ ! ಸಕಲಕಲಾ ಸಂವೃದ್ಧಿ !
ಗುರುವರಂ ಬ್ರಹ್ಮ, ಗುರುವರಂ ವಿಷ್ಣು, ಗುರುವರಂ
ಮಹೇಶಂ, ಗುರುವರಂ ಪರಾತ್ಪರ ಪರಶಿವಂ-
ಇಂತೆಂದು ಶ್ರುತಿಪರ್ ಸಕಲನಿಗಮಾಗಮಿಕರ್ ;
ಗುರುವಿಂಗೆ ಫನಮಿಲ್ಲೆಂದಿತು ಶಿವಶಾಸನಂ !

ವಿಶ್ವಕಲ್ಯಾಣ ವಿಶ್ವದರ್ಶನ ವಿಶ್ವೈಕ್ಯ
ಭಾವಮಂ ಬರಿಸುವನ್ ಶಿವಾವೈತ ಗುರುವರನ್ !
ವಿಶ್ವಗುರು ತಾನಾಗಿ ವಿಶ್ವಮಾನ್ಯನಹನಯ್

CC-0. Jangamwadi Math Collection. Digitized by eGangotri

ವಿಶ್ವಕಳೆಯೂಗಿ ತನ್ ವಿಶ್ವಮಂ ಬೆಳಗುವನ್ ;
ಗುರುಕರುಣೆಯೆಂಬುವಾ ನೇತ್ರಮಂ ಪಡೆಯದಾ–
ತಂ ತಿಳಿಯೆ ಜನ್ಮಾಂಧನೆನಿಸುವಂ ನಿಶ್ಚಯಂ ! ೧೬೦

ದರ್ಶಿಸದೆ ಸ್ವರೂಪವ ಮಾನವೀಯಗುಣದಿಂ
ದರ್ಶಿಪಂ ವಿರೂಪವ ಮಾನವೀಯ ಗುಣದಿಂ !
ಭೌತಿಕದ ಜೀವನವ ವೃದ್ಧಿಸುವನಲ್ಲದಲೆ
ಆಧ್ಯಾತ್ಮಜೀವನದ ಸೌಖ್ಯವನರಿಯದಿಹಂ !
ಭೌತಿಕವ ಭಾಗ್ಯದಿಂದೌನ್ನತ್ಯಮದು ಬಾರದು ;
ಅತ್ಮಿಕದ ಶ್ರೀಮಂತಿಕೆಯಿಂದದು ಬಪ್ಪುದು
ಕರ್ಮದಿಂ ತೊಲಗದಿದು ಜನ್ಮಜನ್ಮಾಂತರಂ,
ಧರ್ಮದಿಂ ತೊಳಗುಗುಂ ದೀಕ್ಷಿತರಜೀವನಂ !
ಕಾಣಿಸದದು ನಿಜಧರ್ಮಾಶಕ್ತಿ ಲೋಕದೊಳ್
ಕಾಣುವುದು ಧರ್ಮನೆಪದಲಿ ಸ್ವಾರ್ಥಸಾಧನಂ ! ೧೭೦

ಪಲಂಬಡೊಳನೀತಿಯ ಜೀವನಂ ಸಂತತಂ
ನಡೆಯುತಿಹುದು ಪ್ರಸಾದ ವಿನಿಯೋಗ ನಿಮಿತ್ತದೊಳ್ !
ಎಲ್ಲಿ ನೋಡಿದಡಲ್ಲಿ ಅನ್ಯಾಯ ಅಸಭ್ಯತೆ
ಅತ್ಯಾಚಾರ ಅಶಾಂತಿ ಅತೃಪ್ತಿ ಅನೀತಿ
ಅತಿಯಾಗಿ ಕ್ರೂರ ಜಿಪ್ಪೆಯ ಚಾಚಿ ನಿಂತಿಹವು
ಮಾನವತೆಯಂ ಮಾಣದೆ ಪಾಳ್ಗೈಯುತಿಹವು.
ಇಂತಿರಲ್ ಮಾನವೀಯ ಪ್ರಗತಿ ಎತ್ತಣದೊ,
ಲೋಕಕಲ್ಯಾಣ ಸತ್‌ಸಂಸ್ಕೃತಿಗಳೆತ್ತಣವೊ ?
ಮರ್ತ್ಯದೀ ಜೀವ ಜಂತುಗಳಲ್ಲಿ ನೋಳ್ಪೊಡೆ
ಮಾನವೀಯ ಜನ್ಮಮಿದಂ ಪಿರಿದಕ್ಕೆಪಿರಿದಂ ; ೧೮೦

ಧರ್ಮದಯೆ ದಾನಮೇಣ್ ಧ್ಯಾನ ಧಾರಣಂಗಳ್ಗೆ
ಕಾರಣಂ ತಾನೆಂಬುದಂ ಮೆರೆತಿಹನ್ ಮನುಜನ್.
ಅರಿತೊ ಮೇಣ್ಮರೆತೊ ಮಾಡಬಾರದುದಂ ಮಾಡಲ್ಕೆ
ತಿರೆಯ ಬಾಳೆನೊಳಗಾಗಬಾರದದಾಗದೇಂ ?
ಕೇವಲಂ ಭೋಗ ಜೀವನಕಾಂಕ್ಷೆಯಂ ತೊರೆದು
ತ್ಯಾಗ ಜೀವನಂತಳೆದು ಬಾಳಿದಡೆ ಯೋಗಮದು.
ಮಾಡಬೇಕಾದುದಂ ಮಾಳ್ಪುದಂ ಧರ್ಮವು ;
ಮಾಡಬಾರದುದಂ ಮಾಳ್ಪುದಿದಧರ್ಮವು
ನೊಂದವರ ನೋವಂ ಕಳವುವೆ ತಾನದು ಧರ್ಮ-
ಮೆಂದುಮು ಮುಂದುವರಿದದರಂ ಮಾಡುತಂ ೧೯೦

CC-0. Jangamwadi Math Collection. Digitized by eGangotri

ಸಮಸ್ತೋದ್ಧಾರಮಾರ್ಗದೊಳ್ ನಡೆವುದುಚಿತಂ !
ಬಾಳ್ವುದಂ ಪರಿಶುದ್ಧ ಕಾಯಕನಿರತನಾಗಿ,
ಬಳಿವುದಂ ಬಾಳಿನೊಳ್ ಸ್ವಾವಲಂಬಿಯಾಗಿ,
ತಳೆವುದಂ ಲೋಕದೊಳ್ ಕೀರ್ತಿಯಂ ಲೇಸಾಗಿ ;
ಉಳಿವುದಂ ಲೋಕವಿರುವನ್ನೆಗಂ ತಾನಾಗಿ;
ಸುವಿಶಾಲಮತಿಯಾಗಿ, ಸುವಿಚಾರಯುತನಾಗಿ,
ಸ್ವಾಚಾರ ಸ್ಥಿತಿಗತಿಗಳಂ ಕೂಡಿದವನಾಗಿ !
ನಡೆಯೊಳಗೆನಿತಿಲ್ಲದೆ ಮಲೆಮಲೆತು ಮನಬಂದಂ-
ತೋಲಗದೆ ಜನಮೆಚ್ಚಿ ನುಡಿದಡದು ಧರ್ಮಮೇಂ ?
ಹಣಗಳಿಸಬಹುದಲ್ಲದೆ ಗುಣಗಳಿಸಬಹುದೇಂ ? ೨೧೦
ಗುಣಧನನೇ ಧನವಲ್ಲವೆ ತಿಳಿಯಲ್ತಿರೆಯೊಳಗೆ !
ದುಷ್ಕರ್ಮಕಾರಣಂ ದ್ರವ್ಯಮಿದು ದ್ರವ್ಯಮೆ ?
ಸತ್ಕರ್ಮಕಾರಣಂ ದ್ರವ್ಯಮದು ದ್ರವ್ಯಮೈಸೆ !
ದೀನದಲಿತೋದ್ಧಾರಸಾಧಕಂ ತಾನಾದ
ದ್ರವ್ಯಾರ್ಜನಂ ಸಾರ್ಥಕಂ ಸರ್ವರೀತಿಯೊಳ್ ;
ಮತ್ತಮಾ ಸತ್ಕಾರ್ಯಸಾಧಕಂ ಸಾರ್ಥಕಂ !
ಸಾಂಸ್ಕೃತಿಕ ಸಾಹಿತ್ಯಸಾಧಕಂ ಸಾರ್ಥಕಂ !!
ಗುಣಧನಂ ಮಾನವೀಯ ಔನ್ನತ್ಯಕಾರಣಂ,
ಮತ್ತಮಾ ಮಹಾವಿಭೂತಿಪ್ರ ಸಾಧನಂ !
ದ್ರವ್ಯಮವದಂತೆವೊಲ್ ದಾರಿದ್ರ್ಯಚಿಂತೆಯದು ೨೨೦
ಧರ್ಮಮುಂ ನೀತಿಯುಂ ರೀತಿಯುಂ ಕಿಡಿಸುಗುಂ !
ಓಗರವ ಚಿಂತೆ ಉಡುಗೆಗಳ ಚಿಂತೆ ಮತ್ತಂ
ಲೋಗರಿಗೆ ಮನೆ ಮಾರುಗಳ ಚಿಂತೆ ತೊಂತಿಹವು ;
ಚಿಂತೆಗಳ ಚಿತೆಯಲ್ಲಿ ಬೆಂದು ಬೆಂಡಾಗಿಹರು–
ದರಿದ್ರರು ಕಿಚ್ಚಿನಲ್ಲಿಟ್ಟ ಕೋಲಿನಂತೆವೊಲ್ !
ಈ ದೀನರುದ್ಧಾರವೆ ಮಾನವ ಧರ್ಮಮದು.
ಸ್ವಾರ್ಥದಿಂ ಪರರಿಗಲ್ಲದೆ ತನಗು ಕೇಡೊದಗಿ
ಸ್ವಾರ್ಥವದೆಲ್ಲ ಸಿನೆ ವ್ಯರ್ಥವಾಗುವುದಲ್ತೆ !
ಸಂಕುಚಿತ ಸ್ವಾರ್ಥಮದು ತರವಲ್ಲ ಸಾಧನೆಗೆ,
ಸುವಿಶಾಲ ಸ್ವಾರ್ಥಮದು ಸಾರ್ಥಕಂ ಸರ್ವದಾ ! ೨೩೦
ಸ್ವಯಂ ಸಲೆ ಸರ್ವರ್ಗೆ ವಿಹಿತಾರ್ಥಮಾಗುವುದೆ
ಸುವಿಶಾಲ ಸ್ವಾರ್ಥಮದು ವಿಶ್ಲೇಷಿಸಿ ತಿಳಿಯಲ್

CC-0. Jangamwadi Math Collection. Digitized by eGangotri

"ಸ್ವಯಮೇವ" ಎಂದು, ಮೇಣ 'ಸು'–ಎಂದು ಸ್ವಪದಮಂ
ವಿಶ್ಲೇಷಿಸೆ ವಿಶಾಲ ವಿಶುದ್ಧಾರ್ಥಗಳಪ್ಪವು.
ಸರ್ವಮಿದು ಸ್ವಸ್ವಾರ್ಥಮೆಂದು ಬಗೆಯಲ್ ನೋಡೆ,
ತಾನಿದುವೆ ಸಂಕುಚಿತ ಸ್ವಾರ್ಥಮೆನಿಪುದು ನಾಡೆ !
ಸಂಕುಚಿತ ಸ್ವಾರ್ಥಮಿದು ಕುತ್ಸಿತಂ ಭರ್ತ್ಸನಂ
ಸಂಕುಚಿತ ಸ್ವಾರ್ಥಸ್ವಭಾವಿಗಳ್ ಸ್ವೀಕರಿಪರು ;
ಸಕಲಜೀವರ್ಕ್ಗೆ ಹಿತವ ಬಯಸುವ ವಿಶಾಲ
ಸಂಕಲ್ಪ ಸಂಪನ್ನ ಶಿವಶರಣರು ಬಯಸರು. ೪೪೦
ಶರಣಜೀವನದಿಂದ ಬಾಳು ಸಫಲಮಪ್ಪದು,
ಧರೆಯ ಜನರ ಬಾಳಿಗೆ ತಿಳಿಬೆಳಕು ಬಪ್ಪದು ;
ಸರ್ವಸುಖಶಾಂತಿದಾಂತಿ ಸದ್ಗತಿ ತಪ್ಪವು ;
ಮೊದಲಪ್ಪದಾತ್ಮ ಸುಖಂ ಬಳಿಕಪ್ಪದನ್ಯಸುಖಂ !
ಸ್ವಪರ ಭೇದರಹಿತಂ ಸತ್ಯ ಶಿವಶರಣಂ ವಲಂ ;
ಸ್ವಯ ಸುಖವೆ ಪರಸುಖಂ, ಪರಸುಖವೆ ಸ್ವಯಸುಖಂ !
ಶರಣಂ ಶಿವಾದ್ವೈತಂ ಸರ್ವಾತ್ಮಭಾವಿತಂ
ಸರ್ವಭೂತಹಿತರತಂ ಸರ್ವ ಸಂಸೇವಿತಂ !
ಪರುಷಮುಟ್ಟ ಕಬ್ಬುನಮುಮ ಕನಕವಾಗದೇಂ
ಶರಣಸೋಂಕಿವ ವಸ್ತು ಪರಿಶುದ್ಧಮಾಗದೇಂ ? ೪೫೦

ಪೆಚ್ಚಿಪುದನುಕೂಲಂ ಸಹಕಾರ ಬಾಳಿನಿಂ
ಪೆರ್ಚಿಪುದು ಸಾಮಾಜಿಕ ಸಂಸ್ಕೃತಿ ಸಂಪದಂ !
ಪ್ರಕೃತಿಯಿಲ್ಲದೆ ಪುರುಷನಿಲ್ಲ ಪುರುಷನಿಲ್ಲದೆ
ಪ್ರಕೃತಿ ತಾನಿಲ್ಲ ವೆಂಬಂತೆವೊಲ್ ವಿಚಾರಿಸಿ
ವ್ಯಕ್ತಿಯಿಲ್ಲದೆ ಸಮಾಜಮದಿಲ್ಲ ಮತ್ತಮಾ
ಸಮಾಜಮಿರದೆ ವ್ಯಕ್ತಿತಾನಿಲ್ಲ ತಿಳಿವೊಡ–
ಮಿವೆರಡುಮವಿಭಾಜ್ಯಾಂಗಮೆಂಡಿಹದ ಬಾಳನ್ನೋ !
ಕಲ್ಯಾಣಕಾರ್ಯಮದು ಕಾಲ ಪ್ರದೇಶಮ–
ತ್ತಂ ವಸ್ತು ಸಾಪೇಕ್ಷ ಸಂಬಂಧ ಮುಳ್ಳುದಯ್ !
ನೂತನದ ಕಲ್ಯಾಣದುದ್ಯಮಂ ಕಂಡರಿಯೆ ೪೬೦
ಪುರಾತನ ಕಲ್ಯಾಣಕಾರ್ಯಕ್ಕೆ ಭಿನ್ನಮಿದು.
ಪರಿವರ್ತನಶೀಲಂ ಮೇಣ್ ವಿಕಾಸಶೀಲಂ
ತಾನಾಗಲೂರ್ಜಿತಂ ಮೇಣ್ ಸಫಲಮೆನಿಸುಗಂ !

CC-0. Jangamwadi Math Collection. Digitized by eGangotri

ಶಾಸ್ತ್ರವಿಡಿವ ಬೌದ್ಧಿಕ ಜೀವಿಗಳ್ ಶೋಷಿಪರ್
ಶ್ರಮಿಕ ದೀನ ದಲಿತರ ವರ್ಗಮಂ ವಂಚಿಸುತ !
'ಸರ್ವೇಜನಾಃಸುಖಿನೋಭವಂತು'–ನುಡಿಯಲ್ಲಿ ;
ಸರ್ವದಾ ಸುಲಿಗೆಯಲ್ಲಿರುತಿಹರು ನಡೆಯಲ್ಲಿ.
ವರ್ಣಂಗಳ ವಿಭಜನೆ, ವರ್ಗಂಗಳ ವಿಭಜನೆ,
ವೃತ್ತಿಗಳ ವಿಭಜನೆ, ವ್ಯಕ್ತಿಗತ ವಿಭಜನೆ,
ಧರ್ಮಂಗಳ ವಿಭಜನೆ, ಕೃತಕ ಮೇಣು ಕುಹಕ
ವಿಭಜನೆಗಳ್ಗೆಣೆಯಿಲ್ಲ ಸಂಪ್ರದಾಯದೊಳ್ !
ಮೂರ್ನಾವಿರಕೆ ಮೀರಿ ಜಾತಿ ಉಪಜಾತಿಗಳ್
ಭಾರತೀಯ ಜನರೊಳಗಿವೆಯೆಂದು ಲೆಕ್ಕಿಪರ್ !
ಸಾವಿರಾರ್ ದೇವತೆಗಳ ಕಲ್ಪನೆ ಬೆಳೆದಿಹುದು
ಸಾವಿರಾರ್ ಪೂಜಾವಿಧಾನಂಗಳ್ ಪುಟ್ಟಿಹವು
ಸಾವಿರಾರ್ ಮೂಢನಂಬಿಕೆಗಳ್ ದುರಭಿಮಾನಂ–
ಗಳ್ಬೇರು ಬಿಟ್ಟಿಹವು ಜನಮನೋಭೂಮಿಯೊಳ್–
ಆಳವಾಗಿ ಕಿತ್ತೆಸೆಯಲ್ ಬಾರದಂತೆವೊಲ್ !
ಇದರಿಂದೆ ಹೆಚ್ಚಿಹುದು ಹಿಂದುಗಳೊಳನೈಕ್ಯತೆ ;
ಮಣ್ಣು ಮುಕ್ಕಿದೆ ಮಾನವತಾವಾದಂ ಜನರೊಳ್ !
ಮೇಲು ಕೀಳೆಂಬ ಕವಲು ಬಗೆಯದು ಬೆಳೆದಿಹುದು.
ಸರ್ವಸಮಭಾವದಿಂ ಸಕಲರ್ಗೆ ಸೌಖ್ಯಮಂ
ಕೋರುವುದೆ ಕೈಗೂಡಿಸುವುದೆ ಸಮದರ್ಶನಂ !
ಬಿರುಕು ಬಗೆಗಿಂತ ಮಿಗೆ ಸರಕಮದು ಬೇರಿಲ್ಲ ;
ಒಡಕು ತೊಡೆವುದಕಿಂತ ಸ್ವರ್ಗಮದು ಮೇಲಿಲ್ಲ.
ಕ್ರಯಾಶೀಲ ಶರಣರ್ ಸ್ವಾರ್ಥ ಸಂಗ್ರಹಕೆಳಸದೆ
ಶ್ರಮಿಕರಂ ಶೋಷಿಸರ್ ಪಾಪಕೃತ್ಯ ಮೆಸಗರ್
ಬಿರುಕು ಬಗೆಯಂ ತಳೆಯದಂತಿರ್ಪರಸುದಿನಂ
ಸಂಸವು ಸುಭಾವದಿಂ ಕಾಣುವರ್ ಸಕಲರಂ !
ಸ್ತ್ರೀ ಪುರುಷಭೇದಮಿದು ಶಾರೀರಮಲ್ಲದೆ
ಆತ್ಮಿಕಮೆನ ಬಹುದೇನ್ ಮನವರಿಯೆ ಮತ್ತಮಾ
ರೂಪಭೇದಮಲ್ಲದೆ ಸ್ವರೂಪಭೇದಮೆತ್ತಣದೊ ?
ಹೆಣ್ಣಿನೊಳು ಗಂಡು ಗಂಡಿನೊಳು ಹೆಣ್ಣಿಲ್ಲವೇನ್ ?
ನಡೆಯಂತೆ ನುಡಿ, ನುಡಿಯಂತೆ ನಡೆಯಿರುತಿರೆ

CC-0. Jangamwadi Math Collection. Digitized by eGangotri

ನಿಡುವಾಗಿ ನಿಲ್ಲುವನ್ ನಿಲುವಿನಿಂ ನಾಡೊಳಗೆ !
ಪ್ರಕೃತಿ ಜೀವನದೊಳ್ ವಿಕೃತಿಭಾವಮುದಿಸಿದು
ಸಾಂಸ್ಕೃತಿಕ ಜೀವನಂ ರೂಪಿತಂ ತಾನಪ್ಪುದು–
ಸತ್ಯಶಿವ ಶರಣ ಜೀವನದ ಸಂಪತ್ತಿಯಿಂ
ನಿತ್ಯಮೆಂದೆ ನಿಸುವುದು ಮರ್ತ್ಯಲೋಕದೊಳ್ವಲಂ !
ಸೃಷ್ಟಿಯೊಳ್ ಶಿವಶರಣ ಜೀವನಂ ಶೇಷ್ಠತರಂ ೩೦೦

ದೃಷ್ಟಿಸಲ್ ಪ್ರಕೃತಿ ಪುರುಷರೊಂದಾಪ ಜೀವನಂ
ಪಾಶಕ್ತಿ ಪ್ರಸಾದಲಿಂಗಸಂಗ ಜೀವನಂ
ಮೇಣಾಗಸೆತ್ತರಂ ಬಿತ್ತರಂ ಮಹತ್ತರಂ
ಜ್ಯೋತಿರ್ಮಯಂ ಮೇಣು ರಸಮಯಂ ಧ್ವನಿಮಯಂ
ಶ್ರೋತ್ರಮುಖ–ಜ್ಞಾನಕರ–ಶಬ್ದ ಪ್ರಸಾದಮಯಂ !
ಪ್ರಕೃತಿ ಪುರುಷರ್ ಜಡರ್ ತತ್ವಮಯ ಲೋಕದೊಳ್,
ಶರಣಾಂಗ ಪ್ರಸಾದಲಿಂಗರಜಡರ್ ಪರ್ಮಸ್ಥಲದೊಳ್ !
ಪ್ರಕೃತಿ ಪುರುಷರ್ ಭವಯೋಗನಿರತರ್ ನೋಡೆ
ಶರಣ ಪ್ರಸಾದಲಿಂಗರ್ ಶಿವಯೋಗ ಸಂಯುತರ್ !
ಪ್ರಕೃತಿಯೊಳ್ ಮೋಹಕ್ಕೆ ದಾಹಕ್ಕೆ ಕೊನೆಯುಂಟೆ ? ೩೧೦

ವಿಕೃತಿಗೆಳಸುವುದು ಪ್ರಕೃತಿ ಸಂಸ್ಕಾರಮಿಲ್ಲದಿರೆ
ವಿಜ್ಞಾನ ಸುಜ್ಞಾನ ಮಹಾಜ್ಞಾನಂಗಳಿಹವು
ಶರಣನಿವನಳವಡಿಸಿಕೊಳ್ಳುವನ್ ನಿವೃತ್ತಿಯಿಂ !
ಶರಣಂ ಜಡಭೂತಾಂಗಮುಂ ಜೀತನಿಸುವನ್
ಗುರುವರನ ಕಾರುಣ್ಯಶಕ್ತಿಯಿಂ ಭಕ್ತಿಯಿಂ !
ಪ್ರಾಕೃತಿಕ ರಹಸ್ಯವ ಮನಗಂಡು ಸಂಪೂರ್ಣ–
ಭೇದಿಸುವ ಉತ್ಕೃಷ್ಟಜೀವನಂ ಶರಣನದು.
ಪ್ರಕೃತಿಯ ಮೂಲ ಶಕ್ತಿಯೆ ಮಹಾಚ್ಛಿತಸ್ಯ,
ಸುಕೃತಿಯಿಂದದಂ ಪಡೆವುದೆ ಮಾನವತೆಯ ಸೌಖ್ಯ !
ವಿಕೃತಿವಿರ ಹಿತನಪ್ಪದೆ ಪ್ರಕೃತಿ ಶಕ್ತಿಯದು. ೩೨೦

CC-0. Jangamwadi Math Collection. Digitized by eGangotri

೪. ಆಗಸಾಂಗ ಸರಣಲಕ್ಷಣಂ

ಮನೋಭೂಮಿಯೊಳ್ ಪ್ರೇಮಲತೆಯಂ ಬೆಳೆದು
ಭಾವಕುಸುಮಂಗಳಂ ಮತ್ತಮನುಭಾವರಸ–
ಫಲಂಗಳಂ ತಳೆದಿಹ ಜೀವಂತ ಕಲ್ಪತರು
ಸಜ್ಜಲದ ಶರಣಪ್ಪೆ ಶರಣಾಗತರಪ್ಪೆ !
ಗಳಿಸಿಹಳ್ ಮಾನವೀಯ ಪಥವಲಿ ಶರಣತ್ವಮಂ,
ಬೆಳಸಿಹಳ್ ಭಾವದೊಳ್ ಜೀವನ ವಿಕಾಸಮಂ ;
ಶರಣಪ್ಪೆಯೊಳ್ ಸತ್ಯ, ಸತ್ಪ್ರೇಮ, ಸನ್ನೀತಿ,
ಮೇಣ್ ನಿಷ್ಠೆ ಮೇಣ್ ಸಮತೆ–ಸಹಜತೆ ಮೊದಲಾದ
ಉದಾತ್ತಗುಣಗಳುದ್ದೀಪನಂಗೊಂಡಿರ್ದವು ;
ಉತ್ತಮ ಬದುಕಿನ ಶಾಶ್ವತ ಸೌಲ್ಯಂಗಳವು ೧೦
ಹೃದಯ ಹಾಲಿಗೆ ಹೆಬ್ಬಯಕೆಯೆಂಬ ಹೆಪ್ಪಿಟ್ಟು
ಕ್ರಿಯೆಯೆಂಬ ಕಡೆಗೋಲಿನಿಂ ಕಡೆದು ತೆಗೆದಿಹಳ್
ಬಗೆಯರಿಪೆ ಬೆಣ್ಣೆಯಂ ಮೇಣನುಭವ ತುಪ್ಪಮಂ
ನೀಡಿಹಳ್ ನಿಚ್ಚ ಗುರುಲಿಂಗ ಜರ ತಿಂತಿಣಿಗೆ !
ಆಗಸದೆ ಚಂದಿರನುದಯಿಸಿದ ತೆರದಂತೆ
ಸಜ್ಜಲದ ಗುಡ್ಡದೊಳ್ ಶರಣಪ್ಪೆಯುದಿಸಿದಳ್
ಭಕ್ತಜನ ವೃಂದಕ್ಕೆ ತಂಬೆಳಗ ತಂದಿಹಳ್
ಭವಜನ್ಯ ತಾಪತ್ರಯ ಜೇಗೆಯಂ ನೀಗಿಹಳ್
ಸದ್ಗುಣದ ಸಾಕಾರ ಮೂರ್ತಿಯೇ ಶರಣಪ್ಪೆ,
ಸಹಜ ಸೌಜನ್ಯದಿಂ ಜೀವಿಪಳು ಶರಣಪ್ಪೆ, ೨೦
ಸದಾಗುರುಭಕ್ತಿಯಿಂ ಬಾಳಿಹಳು ಶರಣಪ್ಪೆ,
ಮೇಣ್ ಸಜ್ಜಲ ಗುಡ್ಡದ ಮಂದಾರ ಶರಣಪ್ಪೆ
ಜಪಿಸುತಿಹ ಓಂಕಾರ ಜೇಕಾರ ಶರಣಪ್ಪೆ
ಲಿಂಗಸಾಗರ ಮುಳುಂಗಿ ಶದ್ಧಿ ನಿಷ್ಠೆಯವಧಾನ
ಮಂಗಳಾನುಭವಂಗಳೆಂಬ ರತ್ನಂಗಳಂ
ಸಂಗಳಿಸಿದ್ದಳಾ ಮಾತೆ ಶರಣಜೀವನಖ್ಯಾತೆ !
ಅಂಗದೇಗುಲದಲ್ಲಿ ಲಿಂಗದೇವನನಿರಿಸಿ
ಭಕ್ತಿರಸದಿಂ ಮಜ್ಜನಂ ಗೊಳಿಸಿ, ವಿಚಾರ ವಿ-
ಭೂತಿಯಂ ಧರಿಸಿ ಗುಣ ಪತ್ರೆ ಪುಷ್ಪಂಗಳಂ
ಮೇಲಲಂಕರಿಸಿ ಸದ್ಭಾವನಾ ಮಂತ್ರ ಜಪ- ೩೦

CC-0. Jangamwadi Math Collection. Digitized by eGangotri

ನನೆಸಗಿ ಮಹಾಮಂಗಳಂ ಸಾಡಿ ನಿಬ್ಬೆರಗಿ
ನೋಳ್ ನಲಿಯುತಿರ್ದ್ಪಾ ಸತ್ಯ ಶಿವ ಶರಣಾಪ್ಪೆ !
ನಡಿಯೊಳ್ನುಡಿ ನುಡಿಯೊಳ್ನಡೆ ಹಾಸುಹೊಕ್ಕಾಗಿ
ಕಡೆತನಕ ನಡೆದಳಾ ಸತ್ಯಶಿವ ಶರಣಾಪ್ಪೆ !
ನುಡಿಮಂತ್ರವಾಗಿತ್ತು, ನಡೆ ಕ್ಷೇತ್ರವಾಗಿತ್ತು ;
ನುಡಿ ನಡೆಗಳೆರಳ್ ಪಾವನ ತೀರ್ಥವಾಗಿತ್ತು.
ನುಡಿದೀಪ್ತಿ ಶರಣಾಪ್ಪೆ, ನಡೆದೀಪ್ತಿ ಶರಣಾಪ್ಪೆ ;
ತನುದೀಪ್ತಿ ಶರಣಾಪ್ಪೆ, ಮನದೀಪ್ತಿ ಶರಣಾಪ್ಪೆ.
ಜನತೆಯ ಬಂಧುವಾಗಿ, ಜನತೆಯ ಬಳಗವಾಗಿ
ಭವರೋಗ ವೈದ್ಯಳಾಗಿ ಬಾಳಿದಳು ಶರಣಾಪ್ಪೆ ! ೪೦
ಬಾಳಿಸೋಳ್ ನೊಂದು ಬೆಂದು ಬಂದ ಜನಗಡಣದ
ಬವಣೆಯಂ ಬಯಲಾಗಿಸುತಿರ್ದ್ಪಳ್ ಶರಣಾಪ್ಪೆ !
ಒಳಹೊರಗೆ ಒಂದಾಗಿ ಬಾಳಿದಳ್ ಬೆಳಗಿದಳ್
ಒಳಗೊಂದು ಹೊರಗೊಂದು ತಾನಿರದೆ ಬಾಳಿದಳ್ ;-
ಸಹಜಸ್ವಭಾವದಿಂ ಸೋಹಂ ಸ್ವಭಾವದಿಂ !
ಕಾಣುವಳ್ ಶಿವಲಿಂಗ ಸತ್ಯಸೌಂದರ್ಯಮಂ
ಸೊಂಕುವಳ್ ಚರಲಿಂಗದನಾಹತಸ್ಪರ್ಶಮಂ
ಕೇಳುವಳ್ ಪ್ರಸಾದಾತ್ಮ ಲಿಂಗದ ನಾದಮಂ
ತೃಪ್ತಿಸುವಳಾ ಮಹಾಲಿಂಗ ಪ್ರಸಾದದೊಳ್ !

ತಾಯಿ ಸುಳಿದಡೆ ಸೊಗಸು ತಾಯಿಯುಲಿದಡೆ ಸೊಗಸು. ೧೮೦
ತಾಯಿ ಕಂಡಡೆ ಸೊಗಸು, ತಾಯಿ ಕೇಳ್ದಡೆ ಸೊಗಸು.
ತಾಯಿ ಕುಳಿತಡೆ ಸೊಗಸು, ತಾಯಿ ನಿಂತಡೆ ಸೊಗಸು.
ತಾಯಿ ಸುಳಿದಡೆ ನಾಡೆ ತಂಗಾಳಿ ಸುಳಿದಂತೆ,
ತಾಯಿ ಉಲಿದಡೆ ಕೇಳೆ ಬೃಂಗಾಳಿ ಉಲಿದಂತೆ
ತಾಯಿಯಂ ಕಂಡಡಂ ಚಂವಿರನ ಬೆಳುಮಪ್ಪು,
ಮತ್ತಮಾ ಮುಚ್ಚಂಜೆಯ ನೇಸರ ತಿಳಿಗೆಂಪು;
ಮೇಣದಂ ತನುಮನ ಹೃದಯಂಗಳ್ಗಿ ಸಲಿಸೊಂಪು.
ಮಾತಾಯಿ ನಡೆದಡಂ ಲಿಂಗಮದು ನಡೆದಂತೆ
ಮಾಮಾತೆ ನುಡಿದಡಂ ಲಿಂಗಮದು ನುಡಿದಂತೆ
ಮಾತೆಯಂ ಕಂಡಡಂ ಲಿಂಗಮಂಕಂಡಂತೆ
ಮಾತೆಯಂ ನೆನೆದಡಂ ಲಿಂಗಮಂ ನೆನೆದಂತೆ ! ೧೯೦

CC-0. Jangamwadi Math Collection. Digitized by eGangotri

ಮಾತೆಯಾ ರಸಪೂರ್ಣ ಕಳಾತ್ಮಕ ಕರುಣೆಯಿಂ-
ದೊದಗುಗುಮಿಗೆ ಸೊಗಂ ಮನಮುದಂ ತಣಿವಂತೆ !
ಸ್ಫಟಿಕದಾ ಘಟದಂತೆ ಶರಣಾಯಿ ಶರೀರಂ,
ಸ್ಫಟಿಕ ಘಟದೊಳಗಣಾ ಸೊಡರಂತೆ ಘನಮನಂ;
ಒಳಬೆಳಗು ಹೊರಬೆಳಗು, ಒಳಹೊರಗು ತೊಳತೊಳಗು ;
ಶಬುದ ಸಂಪತ್ತಿಗಂ ಸಿಲುಕದಿಹ ಬಗೆ ಬೆಡಗು.
ಕಣ್ಣಿಂಗೆ ಸತ್ಯಶಿವ ಸೌಂದರ್ಯದ ಹಿರಿಹೆಬ್ಬ ;
ಮನಸಿಂಗೆ ಪ್ರಸಾದಾರೋಗಣೆಯ ಪರಿತೃಪ್ತಿ ;
ಭಾವಕ್ಕೆ ನಿರ್ಭಾವ ಸಿಲವಿನಾ ನಿಜದೈಕ್ಯ
ಮಾತೆಯಂ ದರ್ಶಿಸಲೊದಗುತಿರ್ದವಪಿಲರ್ಗೆ !

ತಾಯಿಯಾಧ್ಯಾತ್ಮಜೀವನಮುದಂ ಹೂದೋಟಂ
ನೂರ್ಬರಿಸದ ಬೇಸಾಯದಿಂ ಬೆಳಸಿಹಳ್ ನೆರೆ
ಸೊಗಸಾಗಿ ಪಸಿರ್ಮೆರವಂತೆ ಪೂವಿಡುವಂತೆ
ಮೀಣು ಪಣ್ಬೆಡುವಂತೆ ಸೊಬಗು ನೆಲಸುವಂತೆ !
ಕೆಟ್ಟನಡೆ ಕೆಟ್ಟನುಡಿಯೆಂಬ ಕಸವಿರಲಿಲ್ಲ.
ಸಂದೇಹ ಸಂಸಾರಭ್ರಾಂತಿ ವಿಕೃತಿಗಳೆಂಬ
ಕ್ರಿಮಿಕೀಟಗಳ ಕಾಟವಿರಲಿಲ್ಲ ಬಗೆವಡೆ ;
ಕಾಯ ಕರಣೇಂದ್ರಿಯಂಗಳ ಭಾವವಿರಲಿಲ್ಲ
ಕ್ರಿಯೆ ಜ್ಞಾನ ಮತ್ತನುಸಭವವೆಂಬ ಸಜ್ಜಲಂ
ತಾಯಿಯಾ ತಸುತೋಂಟದೊಳ್ ಪರಿದಿಹುದು ವಲಂ !
ತಾಯಿಗುಂ ದೇಹವೇ ದೇಗುಲಂ ಮತ್ತಮಾ
ಪ್ರಾಣವೇ ಜಿಲ್ಲಿಂಗ ಮಾಗಿರ್ದವರ್ ದಿಟಂ !
ಪರಮಾಮೃತಮೆಂತೆಂಬ ಸಜ್ಜಲ ತುಂಬಿರ್ದ
ಕರಿನಾಡ ಹೆಗ್ಗಿರೆಯು ತಾನಾಗಿರ್ದಳಾ ತಾಯಿ !
ನಿಷ್ಠೆಯದು ಕೆರೆಕಟ್ಟೆ, ದಯಾದೃಷ್ಟಿಯೆ ಕೋಡಿ ;
ಅಷ್ಟಾವರಣಾಚಾರ ಪಂಚಕ ಷಟ್‌ಸ್ಥಲಂ-
ಗಳೇ ಸೋಪಾನಂಗಳಾಗಿರ್ದವಾ ಕೆರೆಗೆ !

ಕ್ರಿಯಾಜ್ಞಾನೇಚ್ಛಾದಿ ಪರಾಚಿಚ್ಛಕ್ತಿಗಳ್
ಸಮರಸದೊಳೊಗ್ಗೂಡಿ ಶರಣವ್ವೆಯಾಗಿಹಳ್ !
ಲಿಂಗದೊಳ್ ಸತ್‌ಶ್ರದ್ಧೆ, ಗುರುವಿನೊಳ್ ನಿಜನಿಷ್ಠೆ,

CC-0. Jangamwadi Math Collection. Digitized by eGangotri

ಪ್ರಸಾದಮೊಳವಧಾನಂ, ಚರದೊಳನುಭಾವಂ ಮೇಣ್
ನಿತ್ಯಪೂರ್ಣಖಂಡ ಜೈತನ್ಯಲಾವಣ್ಯ –
ದೊಳಾನಂದ-ಕರಿಗೊಂಡಿರ್ದವಾ ತಾಯಿಯೊಳ್ !
ಕೇಡಿರದ ರೂಹಿರದ ಕುಂದಿರದ ಕೊರೆಯಿರದ
ಎಡೆಯಿರದ ಕಡೆಯಿರವ ಚಲುವಂಗೊಲಿದಿರ್ದ್ಯ್ ;
ಕೆಡುವ ಕಡೆಯಿರುವ ಚಲುವಿಂಗೆ ಕಣ್ಣಿಟ್ಟವಳಲ್ಲ,
ಮನಗೊಟ್ಟವಳಲ್ಲ ಘನಮನದ ಶರಣಪ್ಪೆ !
ಜನರಂತೆ ಜಡಳಲ್ಲ ಮೂಢಮತಿಯವಳಲ್ಲ
ಕಂಡಕ್ಕಿ ಕೇಡು ಬಯಸುವಳಲ್ಲ ಶರಣಪ್ಪೆ ! ೧೫೦

ಸಂಕಲ್ಪ ವಿಕಲ್ಪ ತರಂಗಮಿಲ್ಲದಿರ್ಪ
ಸುಧಾಸಾಗರಮಾಗಿ ತಣಿಸಿದ್ಧ ಳಾರ್ತರಂ !
ಬಿಂದವರ ಬರುವವರ ನಿಂದವರ ನೊಂದವರ
ಕುಂದನಲೆ ಕಂದದಲೆ ಹರಸುವಳ್ ಶರಣಪ್ಪೆ !
ಬಿರುಕು ಬಗೆಯಂ ತಳೆಯದಂತಿರ್ಪರನುದಿನಂ
ಸರಿಸಮ ವಿಭಾವದಿಂ ಕಾಣುವರ್ ಸಕಲರಂ ;
ಸುಳಿಸುಳಿದು ಸುತ್ತುತಿರ್ಪೀ ವಿಷಯ ಸರ್ಪಮಂ
ಹಲ್ಲುಗಳೆದಾಡಿಸುವ ಗಾರುಡಿಗಳಂಬವ್ವೆ !
ನಾನು ನನ್ನದು ನನ್ನವರೆಂಬುವ ಮುಳ್ಳುವಂ
ತೆಗೆದೊಗೆದು ತ್ಯಾಗದಿಂ ಬಾಳಿದಳ್ ತಾಯಾಗಿ ! ೧೬೦

ಎಲ್ಲರೊಳ್ ನಾಟಕದ ಜೋಹವಂ ತೊಟ್ಟವರಲ್ಲ
ಭಾಷೆಯಂ ಬಳಸುವವರಲ್ಲ ಶ್ರೀಶರಣಾಯ ;
ಸಹಜದಿಂ ತಾದಾತ್ಮ್ಯ ಭಾವದಿಂ ಸಾಧಿಸಿದರ್
ನಿಜಶರಣಧರ್ಮಮಂ ಶಿವಾಚಾರಪಥದಿಂ !
ಸತ್ಯವರ್ತನದಿಂದೆ ಕೆಡದಂತರಂಗಮದು ;
ಮೇಣು ಜೀವನ್ಮುಕ್ತಿಯಾನಂದ ಮೊದಗುಗುಂ !
ಹಿಡಿದು ಬಿಡುವವನಲ್ಲ, ಬಿಟ್ಟು ಹಿಡಿಯುವನಲ್ಲ
ದೃಢಮನದ ಶಿವಶರಣನನ್ಯಾಚಾರವಾನ್ ;
ಸಾಮಾನ್ಯವೃತ್ತಿಗಿಳಿವವನಲ್ಲ ಮುನ್ನಡೆಮ !
ನಿವೃತ್ತಿ ಪಥದಲ್ಲಿ ನಿಪ್ಪತ್ತಿಗೊಳ್ಳುವನ್ ; ೧೭೦
ಪತಿಯ ಕೈವಿಡಿದ ಸತಿ ತವರಿನವಳಾಹಳೇನ್ ?
ಗುರುದೇವ ಕಾರುಣ್ಯದಿಂ ದೇಹಧರ್ಮಮಂ

CC-0. Jangamwadi Math Collection. Digitized by eGangotri

ತೊರೆದಂಗವಮಾಗಿ ಮುರಳಿ ದೇಹವುಸ್ಪುದೇನ್ ?
ನೀರಳಿದು ಮುತ್ತಾಗಿ ಮರಳಿ ನೀರಪ್ಪುದೇನ್ ?
ಗುರುಕರುಣಿಗೆ ತಾನುಂ ಮೇಣ್ ಜನಂ ಜಗಂ ಜಗ-
ದೀಶನಸುಲಿಂಗಸ್ವರೂಪದಿಂ ತೋರುಗುಂ !
ಭೇದದಿಂ ತೋರುಗುಂ ಗುರುಕರುಣ ಹೀನಂಗೆ !!
ಲಿಂಗ ಸ್ವರೂಪಂಗೆ ಸರ್ವಮಿದು ಲಿಂಗಮಯಂ ;
ಮಾಯಾಮಲದಿಂದಂ ಜಗರೂಪಮಾಗಿಹುದು ;
ಮಾಯಾಮಲಮಿರದಿದೆ ಲಿಂಗರೂಪಮಪ್ಪುದು. ೧೮೦
ಆಣವೀಯ ಮಲದಿಂ ಸರ್ವಮಣುವಾಗಿಹುದು ;
ಆಣವೀಯಮಿರದಿರೆ ತಾಂ ಮಹತ್ತಾಗಿಹುದು.
ಗುರುರುಣಿಯಿಂದಜಂ ಮತ್ತಮುಮರಂ ದಿಟಂ ;
ಮತ್ತಮೆಚ್ಚರ ಕನಸು ನಿದ್ದೆಗಳ್ ತಾವಿಲ್ಲ.
ಸರ್ವಮಿದು ಸತ್ಯಮಿರೆ ಮಿಥ್ಯದೀ ಮಾತೇಕೆ ?
ನೋಳ್ಪೊಡವುಪಾಧಿಯಿಂ ವಿವಿಧಮಯ ರೂಪಗಳ್
ಉಪಾಧಿಯರಿಲ್ಲದಿರೆ ಸರ್ವಮಿದಂ ಸ್ವರೂಪಂ !
ಸತ್ಯಮಿದು ನಿತ್ಯಮಿದು ಪೂರ್ಣಮಿದು ವಿಚಾರಿಸೆ ;
ಇದನರಿದು ಬಾಳ್ದಳ್ ಸತ್ಯಶಿವ ಶರಣನ್ವೆ !

ಸಂಸಾರದೊಳಿದ್ದು ಸೊಗಂ ಬಡುವೆನೆಂಬಭಿಲಾಷೆ ೧೯೦
ಸರ್ವರ್ಗೆ ಸಾಮಾನ್ಯಮಾಗಿ ತಾನಿರುತಿರ್ಕ್ಕುಂ
ಸಜ್ಜಲ ಶರಣನ್ವೆಯೊಳೆಳ್ಳಿನಿತುಮಿರಲಿಲ್ಲ ;
ಹುಟ್ಟು ಸಾವುಗಳೊಲ್ ಸ್ಥಿತಿಜೀವನಂ ದುಃಖಕರಂ !
ದುಃಖಕರಮಿಂದಂ ದೇಹಂ ಸುಖಕರಮುಂಗಂ
ಮೇಣಂಗ ಕಾರಣಂ ಶಿವಾತ್ಮಗುರುಕರುಣಂ
ಗುರುಕರುಣಮಿಲ್ಲದಲೆ ತನುಧರ್ಮವಳೆಯದಂ,
ತನ್ನತನಕೆ ಕಾರಣಮುಂಗಭಾವಮಳವಡದು.
ಹುಟ್ಟುಸಾವ್ ಹುಟ್ಟುಗೆಡವು ಪಡೆಯದೆ ಕರುಣಮುಂ.
ಆಚಾರ ವಿಚಾರಂಗಳಾಚಾರ್ಯ ಕರುಣದಿಂ
ಮೇಣ್ ಲಿಂಗಯೋಗಮದು ಸಂಸ್ಕಾರದಿಂದಹುದು ; ೨೦೦
ಪ್ರಕೃತಿ ಜನ್ಮಂನೀಗಿ ಪರಮಜೀವನಮಹುದು ;
ಕರ್ಮಜನ್ಮಂ ನೀಗಿ ಧರ್ಮಜನ್ಮಂ ಬಪ್ಪುದು.
ದುಃಖಜನ್ಮಂ ನೀಗಿ ಸೌಖ್ಯ ಜನ್ಮಂ ದೊರೆಗುಂ !

CC-0. Jangamwadi Math Collection. Digitized by eGangotri

ದೀಕ್ಷೆಯು ಪಡೆಯದಲೆ ಮೋಕ್ಷವದು ತಾನಿಲ್ಲ ;
ಗುರುಯೋಗಮಿಲ್ಲದಲೆ ಪರಯೋಗಮಳವಡದು ;
ಭವರೋಗ ನೀಗದು, ಶಿವಯೋಗವೊದಗದು.
ಭಕ್ತನೆನಿಸಲ್ ಬೇಕು ಮುಕ್ತಗುರೂಪದೇಶ ;
ಅಂಗನೆನಿಸಿತ್ ಬೇಕು ಲಿಂಗವಹ ಗುರುಯೋಗ !

ನರಜನ್ಮ ನೀಗುವುದು ಹರಜನ್ಮತಾನಹುದು.
ಪಶುಜೀವನಂ ತೊಲಗಿ ಪತಿಜೀವನಂ ಬಹುದು.
ಜೀವಭಾವಂ ಹರಿದು ದೇವಭಾವಂ ಬಹುದು.
ಆತ್ಮಕಲುಷಂ ಕಳೆದು ಸ್ವಾತ್ಮಕಳೆ ಬಪ್ಪುದು.
ಕರ್ಮಪ್ರವೃತ್ತಿ ಕಳೆದು ಧರ್ಮಪ್ರವೃತ್ತಿ ಬೆಳೆವುದು.
ಕಾಮಮಿದು ತೊಲಗುವುದು ಪ್ರೇಮಮದು ಕೂಡುವುದು.
ಕಾಲಬಾಧೆಯು ನೀಗಿ ಮೂಲಭೋಧವೊದಗುವ್ವದು.
ಹ್ಯೇಯ ವೃತ್ತಿಯಳಿದು ಧ್ಯೇಯ ವೃತ್ತಿಯುಳಿವುದು.
ಮಿಥ್ಯ ಭಾವವಡಂಗಿ ಸತ್ಯ ಭಾವವುದಿಪುದು.
ಶಿಷ್ಯಂಗೆ ಗುರುಕರುಣೆ ಹಾಲಹೊಳೆ ಹರಿದಂತೆ
ಜೇನು ಮಳೆ ಸುರಿದಂತೆ ಮೇಲೋಗರ ಸವಿದಂತೆ
ಪರಿಭವನಂ ಪರಿಹರಿದು ಪರಮಾನಂದ ದೊರೆವುದು.
ಕಾಯಕರಣೇಂದ್ರಿಯಂಗಳಾ ನಿಜನಿಷ್ಪತ್ತಿ
ಮಾಯ ನಿವೃತ್ತಿ ಪರಮ ಪರಿಣಾಮ ಪ್ರಸಾದ ಬುತ್ತಿ !
ಮುಡಿಕೆಯೊಡೆದರೇನ್ ಮುಡಿಕೆಯೊಳಗಣ ಮುಗಿಲೊಡೆ–
ವುದೇನ್ ? ಮೈಯಡಗಿದರೇನಾತ್ಮವಡಗುವುದೇನ್ ?
ಸತ್ಯಮದು ನಿತ್ಯಮದು ಪೂರ್ಣಮದು ತಾನಲ್ಲವೇನ್ ?
ಚೈತನ್ಯಮೀದೇಶಕಾಲ ಪರಿಚ್ಛಿನ್ನಮೆನ್ ?
ಮರ್ತ್ಯಲೋಕಕೆ ಬಂದಮೃತತ್ವಂ ಪೊಂದಿದರ್
ಸತ್ಯಶಿವ ಶರಣವ್ವೆ ನಿತ್ಯನಿಯಮಾಚಾರದಿಂ
ಮೇಣಂತರಾತ್ಮಾನುಷ್ಠಾನ ಧ್ಯಾನಂಗಳಿಂ !
ಮಾನವಳಾಗಿ ಬಂದು ಮಹಾನುಭಾವಳಾದಳ್
ಜ್ಞಾನಿಗುರುದೇವನುಪದೇಶದಿಂ ಪ್ರಕಾಶದಿಂ !
ಈ ಭವದೊಳಿದ್ದು ಭವಮುಂ ಜವದೊಳ್ ಜಯಿಸಿದಳ್
ಭವಸಾಗರದೆ ತೇಲಿಸುವ ದೇಹ ದೋಣಿಯಿಂ ;
ದೋಣಿ ದಿಕ್ಕುದೆಸೆ ತಪ್ಪಲಿಲ್ಲ, ನಿಲ್ಲಲಿಲ್ಲ–

CC-0. Jangamwadi Math Collection. Digitized by eGangotri

ನಡನಡುವೆ ಮತ್ತಂ ಮುಳುಗಲಿಲ್ಲ ನೀರೊಳಗೆ !
ಅಂಬಿಗನತಿ ಜಾಣಂ ನಡೆಸಿದಂ ಗುರಿದಪ್ಪದೆ
ಸೇರ್ಸಿಹನ್ ಸಮರಸದೊಳಾ ಮಹಾಲಿಂಗದೊಳ್
ಅಕ್ಕ ಪಕ್ಕಕ್ಕೆ ಮೊಗದಿರುಗದೊಲ್ ಮಾಡಿಹನ್
ಲಕ್ಕಿಗಂ ಗುರುವರಂ ತೆಕ್ಕನೈಕ್ಯಗೊಳಿಸಿಹನ್ !
ನೆಲಗಂಪು ರಸಸೊಂಪು ಚಲುಸೆಂಪು ನುಡಿಯಿಂಪು
ತನಿ ಸೋಂಕಿನೀ ತಂಪು ತಾಯ ಕಾಯಕರಣೇಂ–
ದ್ರಿಯ ಚಯಕೆ ತಾವೆಂದಿಂಗುಂ ಸೋಂಕದಂತಿದ್ದವು ;
ಕಗ್ಗಣ್ಣಧಾರ ಗುರುವರನ ಚೇತನ ಬಲದಿಂದೆ,
ಮೇಣ್ತ್ಯಾಯ ತುಳುಕದಿಹ ತುಂಬು ನಂಬುಗೆಯಿಂದೆ ;
ಮತ್ತಮಾ ಸ್ವಾಧ್ಯಾಯ ಸಂಯಮನ ಶಕ್ತಿಯಿಂ !

ಎಲ್ಲ ಭೂತಂಗಳಲಿ ಹೆ.ದುಗಿದ್ದ ದೇವನಂ
ಬಲ್ಲತಾಯ್ ಬರಿಸಿಕೊಂಡಿದ್ದಳಾತ್ಮಬಲದಿಂ
ತನ್ನ ಸರ್ವಾಂಗದೊಳ್ ಚನ್ನ ನಡೆ ನುಡಿಗಳಿಂ
ಸನ್ನುತದ ಲಿಂಗಾರ್ಚನಾರ್ಪಣಾಸುಭವಂಗಳಿಂ !
ಏಂ ಕಾಂತಿ ಏಂ ದಾಂತಿ ಮಾತೃಸರ್ವಾಂಗದೊಳ್
ಏಂ ಶಾಂತಿ ಸಂವಿತ್ತಿ ಮಾತೃ ಮುಖ ಕಮಲದೊಳ್ !
ಪರಿಶುದ್ಧ ಬುದ್ಧಿ ತಾನಂತರ್ಮುಖಿಯಾದಡ–
ಮಭಿವ್ಯಕ್ತಿಯಹುದು ಪರಬೊಮ್ಮಮದು ಬಿಮ್ಮನೆ !
ಮಾಯಾ ಪರದೆ ಸರಿದು ಹೆಸರು ರೂಹುಗಳ ಹಂಗು
ಹರಿದು ನಿಲೆ ಮಹಾದೇವ ದರ್ಶನವಹುದು.
ಅದು ಪರಾರ್ಥಮದು ಜಡಮಲ್ಲಮದು ಹೊರವೊಳಗು
ತುಂಬಿ ತೊಳಗುತ್ತಿಹುದು, ದರ್ಶಿಸಲ್ ದೃಷ್ಟಿಮನ
ಭಾವಗಳ್ ಬೇಕಿಲ್ಲ ತಾದಾತ್ಮ್ಯದಿಂದಿಹವು
ಅದಿದೆಂಬ ಭೇದಮೆನಿತಿಲ್ಲಮೆರಡೊಂದಾಗಿ !
ಸ್ವಯಂ ಸಿದ್ಧಮದು ಬಗೆಯೆ ಸರ್ವಾತ್ಮರೂಪಮದು.
ಸಾಕಾರದೊಳ್ ದೃಶ್ಯದರ್ಶನಮಲ್ಲದಿಲ್ಲವು.
ಸ್ವಯದರ್ಶನಮಲ್ಲದೆ ಪರದರ್ಶನಮಿಲ್ಲದು ;
ಚರಮದೊಳ್ ಪರಮಾವಿರಳಭಾವ ಮುಂಟಾಗಿ !

CC-0. Jangamwadi Math Collection. Digitized by eGangotri

ದೃಶ್ಯಮಿದೆಲ್ಲ ಮಾವುದರಿಂದೆ ಬಪ್ಪುದೊ
ಮತ್ತಮಾವುದರೊಳ್ಕಪ್ಪುದೊ ಮತ್ತಮಾವುದ
ರೊಳವಿರಳ ಮಪ್ಪುದೊ ತಿಳಿಯೆ ತಾನದಮೆಲ್ಲಂ ;
ತಾತ್ವಿಕದೊಳಿಂತೆಂದು ಪೇಳಲೆಮಗಿಲ್ಲ ಸೊಲ್ಲು.
ಸಚ್ಚಿದಾನಂದ ಸಾಕ್ಷಾತ್ಕಾರಮಾಗಿರಲ್
ಕೊರತೆಯಿಲ್ಲದ ಬಾಳು, ಕೊರಗು ಬಾರದ ಬಾಳು
ಎಲ್ಲ ಕಾಲದೊಳಿರದೆ ತುಂಬಿತುಳುಕುವಬಾಳು
ನಿತ್ಯ ತೃಪ್ತಿಯ ಬಾಳಂತಿರ್ದ ಳಾ ಶರಣನ್ವೆ !
ಕೆಲಂಬರ್ ಪ್ರಕೃತಿ ಮೇಣು ಪುರುಷರ್ ಬೇರೆಂಬರ್
ತಿಳಿಯೆ ಪೂರ್ಣ ಪ್ರಜ್ಞೆಯಿಲ್ಲದಿಹ ಸೊಲ್ಲಿದು.
ವಿಚಾರಿಸೆ ಕೊರತೆ ಕೊರಗುಗಳ್ಗಂ ನಿಮಿತ್ತವಹ
ಪ್ರಕೃತಿಭಾವಮದಿಲ್ಲದಂತೆವೊಲಿರವೇಳ್ಕುಂ !
ವಾಸ್ತವದಿನಿದು ಶಿವಶರಣ ಧರ್ಮವೆಂದರಿಪುದು.
ವ್ಯಸ್ತಕಾರಣಮಾಗಿಹ ಪ್ರಕೃತಿ ವಿಜಯಮಿದು.
ದೇಹಾಭಿಮಾನಮಂ ಮೇಣು ಗುಣಕರ್ಮಮಂ
ಹ್ಯೇಯಗೊಳಿಸಿ ಬಾಳುವುದೆ ಪ್ರಕೃತಿ ವಿಜಯಂ !
ಕಾಮಿಗಂ ಕಣ್ಣರಿಕೆ ಬಂದೊಡಮಿದಂ ತಿಳಿಯೆ
ಕುರುಡಂಗೆ ಬೆಳಗಾದ ತೆರದಂತೆ ನಿಷ್ಫಲಂ,
ಮತ್ತಮಾ ಕಾಗೆಗಂ ಚಂದ್ರೋದಯಮಾದಂತೆ ;
ಮೇಣ್ ಪೆಣನ ಕೈಯಲ್ಲಿ ರನ್ನಮಂ ಕೊಟ್ಟಂತೆ !

ಶರಣಂಗೆ ಶರೀರೇಂದ್ರಿಯ ಮೋಹವುದಿರ್ಪೊಡಂ
ಪಾವಿನ ಪೆಡೆಯಂ ಪಿಡಿದು ತುರಿಸಿಕೊಂಡಂತೆ,
ವುಲಿಯೊಡಂ ಸರಸಮಂ ಮಾಳ್ಪಂತೆ, ನೀರಡಿಸಿ
ಪಾಲಾಪಲಮಂ ಕುಡಿದು ಬದುಕುವೆನೆಂಬಂತೆ !
ಪಾವನ ಪ್ರೇಮದಿಂ ಬಾಳಲಹುದಲ್ಲವೆ
ಕಾಮದಿಂ ಲೋಭದಿಂ ಮೋಹದಿಂ ಬಾಳಲಹುದೆ ?
ಮತ್ತಮೀ ಮಾನವೀಯ ಜೀವನ ಧ್ಯೇಯಮೇಂ ?
ಅರಿವುಳ್ಳ ಮಾನವತೆಗೈತಂದು ಫಲಿತಮೇಂ ?
ಮೀನಮಿದು ಮೀಂಗುಲಿಗನ ಗಾಳಕೆ ಸಿಕ್ಕಂತೆ
ಸಿರಿಮಂತ ದಾರಿಯಲಿ ಕಳ್ಳಂಗೆ ಸಿಕ್ಕಂತೆ ;
ಅರಿವುಳ್ಳ ಶರಣಂ ಮುರಿವಿಗೆ ಮಾರುವೋದಪೆ

CC-0. Jangamwadi Math Collection. Digitized by eGangotri

ಮೇಣ್ ಮಾಯೆಗೆ ಮೋಹಕೆ ಮತ್ಸರಕೆ ಸಿಲುಕಿದಡೆ !
ಕಣ್ಣಿದ್ದು ಕುರುಡನಪ್ಪುದು ಲೇಸೆ ಕಾಮದಿಂ ?
ಮೇಣ್ ದೀಪಮಿದ್ದು ದಾರಿಯಂ ತಪ್ಪವುದೇ ಪೇಳ್ ?
ಸಾತ್ವಿಕರ್ ರಜಸ್ತಮೋ ಗುಣಿಗಳ್ ತಾವಾಗಿ
ಪೃಥ್ವಿಯೊಳ್ ಬಾಳಿದಡೆ ಬದುಕುವುದೆ ಪ್ರಪಂಚಂ ?
ವೈಷಯಿಕ ಹಸಿವಿಂಗೆ ಮರ್ತ್ಯಮಿದು ತುತ್ತೊಂದು–
ತಾನಾಗಿ ನಿಲ್ಲುಗುಂ ಹಸಿವಿಂಗೆ ಕೊನೆಯುಂಟೆ ?
ಹಸಿವಿನೊಳ್ ಮಾನಸಿಕ ಹಸಿವು ತಾಂ ಪಿರಿದಲ್ತೆ ;
ಮನಸಿಜನ ಗಾಳಕ್ಕೆರಗಿದ ಮೀನಮೀ ಜೀವಂ
ರಜೋಗುಣಿಗಳಿಹದೊಳ್ ರಕ್ಕಸರ್ ಮತ್ತಮೀ
ತಮೋಗುಣಿಗಳ್ ಜಡರ್ ತಪೆ ಜಂಕಿಸಲರ್ಹರ್ !
ಕಾಮಮಿರೆ ಮುಳುಗಿಸಲ್ ಮುನ್ನೀರು, ಸುಟ್ಟುರುಹಲ್
ಕಾಳ್ಗಿಚ್ಚು, ಸಾಯಿಸಲ್ ಕೂರಂಬು ಬೇಕೆಲ್ಲ–
ಪತಿವ್ರತೆಯಂತಿರ್ದ ಪ್ರೀತ್ಯಂಗನೆಯ ತೊರೆದು,
ಪತಿತೆಯಂತಿರ್ದ ಮೋಹಾಂಗನೆಗೆಳಸುವುದೇ ?
ಶಿಷ್ಟತೆಯು ಸವೆದು ಭ್ರಷ್ಟತೆಯು ಮೆಯ್ಗೂಡುವುದು.
ಆಚಾರಮದಳಿದತ್ಯಾಚಾರಮಿದು ಬೆಳೆದು
ವಿಚಾರಮದು ನೀಗಿ, ಅವಿಚಾರಮಿದು ಬೀಗಿ
ಮಾನವ್ಯ ಧರ್ಮಮಂ ಕೆಡಿಸಿ ಕಡೆಗಾಣಿಪುದು.
ಸತ್ಯಸಿಯಂ ಕಿತ್ತು ಮಿಥ್ಯ ಕಸಮಂ ಬೆಳಸೆ
ಸತ್ಯಕೃಷಿಯಪ್ಪುದೇನ್ ಶಿವಶರಣ ಧರ್ಮಿಗೆ ?
ಮೂರ್ನೋವ ಕಿಚ್ಚಿನೊಳ್ ಬೀಳ್ದಮೆಂ ಬಗೆಗೆಟ್ಟು ?
ಮೂರ್ನೋಷ ದೂಸರಿನೊಳಿರ್ದುಮೇಂ ನಗೆಗೆಟ್ಟು ?
ಬೆಂಕೆಯಂ ಪೊಗೆಯು, ಬೆಳುಗನ್ನಡಿಯಂ ಕೊಳೆಯು, ಮೇಣ್
ಬಸುರಿಯೊಡಲಂ ಭವಿತನಂ ಬಳಸಿಯಿಪ್ಪಂತೆ
ಮನುಜ ಜೀವನಮಂ ಮರೆವು ಬಳಸಿ ತಾನಿರ್ಪುದು.
ಕಾಮ ಕೋಪ ಲೋಭಂಗಳ್ಗೆ ಮನ ಸೋತಿರಲ್
ಪ್ರೇಮ ಶಾಂತ್ಯನುಕಂಪಗಳ್ ನೆಲಸಿರ್ಪವೇನ್ ?
ಸಮಸ್ತರೊಳೇಕತ್ವಮಂ ತಳೆವುದೆ ಪ್ರೇಮವು ;
ನಿರ್ಮಲಂ ನಿಶ್ಚಲಂ ಮನದೊಳಿರಲದು ಶಾಂತಿ ;
ಸರ್ವರ್ಗೆ ಲೇಸಮಂ ಕೋರುವುದನುಕಂಪಂ !
ಗುರುಲಿಂಗ ಜಂಗಮದೊಳಿಡು ಸಹಜಪ್ರೇಮವಂ,

CC-0. Jangamwadi Math Collection. Digitized by eGangotri

ಕಾಯಕರಣೇಂದ್ರಿಯಂಗಳೊಳಿರಲಿ ಶಮೆಯದು ;
ದೀನದಲಿತರೊಳ್ ದಯೆಯಿರಲ್ಕದನುಕಂಪಂ !

ನಿತ್ಯಲಿಂಗಾರ್ಚನಂ ತಾನದು ಸಹಜಕ್ರಿಯೆ,
ನಿತ್ಯಲಿಂಗಾರ್ಪಣಂ ತಿಳಿಯೆ ಸಹಜ ಜ್ಞಾನಂ, ೩೩೦
ನಿತ್ಯಲಿಂಗಸುಖಿಯಾಗಿಹುದೆ ಸಹಜಾನುಭೂತಿ !
ಸತ್ಯ ಸಹಜಮಿಲ್ಲದಿಹ ಶರಣಂ ಶರಣನಲ್ತು,
ತಿಳಿಯಲ್ ತ್ರಿಪುಟಿರಹಿತತೆ ಬಸ್ಪುದಾನಂದದೊಳ್
ಐಕ್ಯಂಗೆ ಸಮರಸಮೊಳವಿರಳತೆಯದಕ್ಕುಂ !
ಪೂರ್ಣರೂಪಂ ಶರಣನಖಂಡರೂಪನೈಕ್ಯಂ !
ಸಹಜಕ್ರಿಯೆಯೊಳ್ ಕರ್ಮತ್ರಯಂಗಳಿವೆ ;
ಸಹಜಜ್ಞಾನದೊಳ್ ಭಿನ್ನಜ್ಞಾನಮಿದಿರಮ.
ಕರ್ತೃವು ಭಿನ್ನಜ್ಞಾನ ಕ್ಷೀಣಕಸುಖಂಗಳಂ
ವಿರಹಿತಂ ವಿಶುದ್ಧ ಶಿವಶರಣಂ ವಾಸ್ತವಂ !
ಶರಣಂಗೆ ನಿತ್ಯದೊಳ್ ಶಾಂತಸ್ಪಭಾವದೊಳ್ ೩೪೦

ಶಿವಶ್ರವಣಂ ಸ್ಮರಣಂ ಮೇಣು ಶಿವಕೀರ್ತನಂ
ಶಿವಪಾದ ಸೇವನಂ ಮತ್ತಂ ಶಿವಾರ್ಚನಂ
ವಂದನಂ ಮೇಣುದಾಸ್ಯಂ ಸಖ್ಯಮಾತ್ಮನಿ—
ವೇದನಂ ತಪ್ಪದಿರುತಿರವೇಳ್ಕುಮೊಂಬತ್ತು
ವಿಧಭಕ್ತಿಭಾವಗಳ್ ಸಹಜಸ್ವರೂಪದೊಳ್ !
ಮೊದಲೊಳಿರ್ಪಂಟು ಭಕ್ತಿಭಾವಂಗಳ್ ಸಗುಣಂ ;
ತುದಿಯೊಳಿರ್ಪತ್ಮನಿವೇದನಂ ನಿರ್ಗುಣಂ !
ನೂರೋದಿದರೇನ್ ನೂರು ಕೇಳಿದರೇನ್ ಬರಿಪೆ
ತನ್ನಿರವನರಿಯದಿರ್ದ ಬಳಿಕಂ ನಿಷ್ಫಲಂ ;
ತನ್ನನಂ ಪರಶಿವಂಗರ್ಪಿಪುದೆ ಸಫಲಂ ! ೩೫೦

ಲೋಕದೊಳ್ ನರನಾಗಿ ಪುಟ್ಟುವುದು ದುರ್ಲಭಂ ;
ನರರೊಳ್ ಶರಣನಪ್ಪುದತ್ಯಂತ ದುರ್ಲಭಂ.
ಲೋಕದೊಳ್ ಶಿವಶರಣಜೀವನಂ ಸಾರ್ಥಕಂ,
ಸತ್ಯದೊಳ್ ತಾನಿಹುದೆ ಶಿವಶರಣ ಜೀವನಂ !
ಶರಣಜೀವನದಿಂದೆ ದೊರೆಗುಂ ಪರಮಾರ್ಥಂ !
ಅಪರಾರ್ಥದಿಂ ಕ್ಷೀಣಕಸಹ ಸುಖಂ ಲಭಿಸುಗುಂ ;

CC-0. Jangamwadi Math Collection. Digitized by eGangotri

ಪರಮಾರ್ಥದಿಂ ಶಾಶ್ವತದ ಸುಖಂ ಲಭಿಸುಗುಂ,
ಭೌತಿಕದ ಸಂಸಾರಮಿದು ದುಃಖಮಯಂ ಮೇ–
ಣಾಧ್ಯಾತ್ಮ ಸಂಸಾರಮಿದಂ ಸಲೆ ಸುಖಮಯಂ
ಮತ್ತಂ ನಿರಾಮಯಂ ನಿರಾಳ ನಿರ್ಮಳಂ ! ೩೬೦

ಮಾಡುವನ್ ಸ್ವಯ ನಿಜಾಚಾರಾಚಾರ ಕ್ರಾಂತಿಯಂ
ಬಿಚ್ಚುವನ್ ಸಾಧಕರ ಹೃದಯ ಗ್ರಂಥಿಯಂ
ಗೆಪ್ಪುವನ್ ಸರ್ವರಂ ಸುವಿಶಾಲ ಹೃದಯರಂ
ಪರಮಾರ್ಥ ಪಥದೊಳ್ ಪರಿವರ್ತನ ಶೀಲರಂ
ಸಾಧನೆಯ ಮಾರ್ಗದೊಳ್ ಮಾಡುವನ್ ಸಿದ್ಧರಂ
ಅಮೃತ ಹಸ್ತದಿಂದುದ್ಧರಿಸುವನ್ ಬದ್ಧರಂ
ಸಲೆ ಸರ್ವ ಸಮರ್ಥಂ ಸುಜ್ಞಾನಿ ಶಿವಶರಣಂ !
ಭವದ ಬವಣೆಯಿಂ ಮೊರೆ ಹೊಕ್ಕುವರ ಭವಹರಣಂ !
ಹರಿಸುವನ್ ಶಿವಜ್ಞಾನಗಂಗೆಯಂ ಭಕ್ತರೊಳ್
ಬರಿಸುವನ್ ಪರಮಾನುಭವಾಮೃತದ ಬೆಳೆಯಂ ೩೭೦

ಶಿವಶರಣ್ ತನ್ನ ವ್ಯಕ್ತಿತ್ವ ವೈಶಾಲ್ಯದಿಂ
ಸರ್ವಜನ ಜೀವನದ ಹಸನಾಗಿಸುವನ್ ಹರ–
ವಾಗಿಸುವನ್ ದಯಾಮಯ ಹೃದಯದಿಂಕೂಡಿತಾನ್
ಮೇಣು ಕವಿಕಾವ್ಯಕ್ಕೆ ಸ್ಫೂರ್ತಿಯಂ ಸಮನಿಸುವನ್ !
ಸತ್ಯಶಿವಶರಣನಾ ನುಡಿಯು ಮುತ್ತಿನ ಹಾರ,
ನುಡಿಯರ್ಥ ಮಾಣಿಕ್ಯದೀಪ್ತಿಯೊಲ್ ಬೆಳಗುಗುಂ
ನುಡಿ ಭಾವ ಸ್ಫಟಿಕದ ಸಲಾಕೆಯಂತಿಹುದೆಂದು
ಪೇಳಿಹನ್ ಬಸವಣ್ಣ ಸೂಳ್ನುಡಿಯ ಕಸುವಿಂಗೆ !
ನಡೆಜನ್ನ ನುಡಿಜನ್ನ ಸತ್ಯಶಿವಶರಣಂಗೆ,
ಎಡೆಯಿಲ್ಲ ಕಡೆಯಿಲ್ಲ ಪ್ಯೋಮಾಂಗ ಶರಣಂಗೆ ; ೩೮೦

ಮಾತೆಂಬ ಜ್ಯೋತಿರ್ಲಿಂಗ ಪ್ರಸಾದಿ ಸಚ್ಚೋದಿ
ಶರಣನುಡಿ ನಡೆಯಲ್ಲ ಪರಾವಾಕ್ ಪ್ರಸಾದಂ
ತಾನದರಿಂದಪ್ಪುದಂ ಪರಮಪರಣಾಮಂಗಡಾ !
ಸತ್ಯಶಿವ ಶರಣ ವಚನಮದು ನಿರ್ವಚನಂ !
ಸಜ್ಞೇಲ ಸಂಪನ್ನ ಶರಣನಾ ನಡೆಯದಂ,
ಸರ್ವಸಾಮಾನ್ಯಮೇನ್ ಲೋಕೋತ್ತರಂ ವಲಂ ;
ಶರಣಂ ನುಡಿದು; ನಿರ್ವಚನಿ, ನಡೆದು ನಿರ್ಗಮನಿ ;
ಧರಣಿಯ ಜನರ್ಗೆ ಸುಮ್ಮಾನವೀವ ಸುಯ್ದಾನಿ.

CC-0. Jangamwadi Math Collection. Digitized by eGangotri

ಅಂಪೆಯೇ ಸಜ್ಜಲದ ಶರಣಪ್ಪೆ ತಾನಿರದೆ
ಅಂತಃಕರಣದಿಂದೆ ನಾಡವರ ಮೇಲೆಸಲೆ ೩೯೦
ಕರುಣರಸ ವೃಷ್ಟಿಯಂ ಸುರಿಸುತಿರ್ದ್ದಳ್ ನಿ–
ರಂತರಂ ನಿರ್ಹೇತು ಭಾವದಿಂ ಸಮತೆಯಿಂ !
ಚುಕ್ಕೆಗಳಲಿ ಚಂದಿರನಿರುವಂತೆ ಬಾನೊಳು,
ಹೆಣ್ಣು ಮಕ್ಕಳಲಿ ಸಜ್ಜಲಗುಡ್ಡದ ಶರಣಾಯಿ
ಚನ್ನಿಗಳ್ ತಂಬೆಳಗ ಬೀರಿದಳ್ ನಾಡೊಳು
ಮುನ್ನಿನಾ ಮಾದೇವಿಯಂತೆಪೊಲ್ ಬೆಳಗಿಹಳು !
ಲೋಕದೀ ವೃತ್ತಿಗಳ್ಗೆ ರವಿಕಾರಣವಿರುಪೊಲ್
ಲೌಕಿಕರ ತಾಪತ್ರಯಂಗಳ್ಗೆ ಮದ್ದನಿತ್ತು
ಕಳೆಯಲ್ಕೆ ಮತ್ತೆ ಹದುಳತೆಯನಳವಡಿಸಲ್ಕೆ
ಕಾರಣಾತ್ಮಳಾಗಿದ್ದಳ್ ತಾಯಿ ಶರಣಾಯಿ ! ೪೨೦
ವಾಯುವಿಗೆ ಬೀಸುವಿಕೆ ತೇಜಂಗೆ ಬೆಳಗುವಿಕೆ
ನೀರಿಂಗೆ ಹರಿಯುವಿಕೆ ಪ್ರಕೃತಿಗುಣವಾದಂತೆ
ಶರಣಾಯಿ ತಾಯಿಗೇ ಲೋಕಕಲ್ಯಾಣಗುಣಂ
ಸ್ವಾಭಾವಿಕಾತ್ಮಗುಣವಾಗಿತ್ತು ನೈಜದೊಳ್ !
ಸ್ವಾರ್ಥ ಭಾವಮಿಲ್ಲದೆ ಭಾನು ಬೆಳಗುವಂತೆ
ಕಳಾಮಯಿ ಬೆಳಗಿದಳ್ ಜಗತ್ಕಲ್ಯಾಣದಿಂದೆ !
ಆದರ್ಶ ಜೀವನಂ ಶರಣಮ್ಮ ನಾಮದೊಳ್
ಆದರ್ಶ ಜೀವನಂ ಶಾಂಭವಿಯ ರೂಪದೊಳ್
ಆದರ್ಶ ಜೀವನಂ ಸಾತ್ವಿಕತೆಯ ಗುಣದೊಳ್
ಆದರ್ಶ ಜೀವನಂ ಶಿವಾಚಾರ ಧರ್ಮದೊಳ್ ! ೪೩೦
ಆದರ್ಶ ಜೀವನಂ ಸಾಧನೆಯ ಮಾರ್ಗದೊಳ್
ಆದರ್ಶ ಜೀವನಂ ಶರಣತ್ವ ಸಿದ್ಧಿಯೊಳ್ !!
ಶಿವಶರಣ ಸಂಸ್ಕೃತಿಗೆ ಶರಣಪ್ಪೆ ನವಯುಗದ
ನೆನೆಯಲ್ಕೆ ನಿಲುವಾವ ಕನ್ನಡದ ಸಿರಿಕೊಡುಗೆ !
ಸ್ಮರಣೀಯಮೀ ಶರಣ ಸಂಸ್ಕೃತಿಯು ಸತ್ವದಿಂ
ಭಾರತೀಯ ಸಂಸ್ಕೃತಿಗೆ ಬಿತ್ತರವೆ ಕೊಟ್ಟ ಕೊಡುಗೆ !!
ಶರಣಪ್ಪೆ ನಡೆ ಚನ್ನ, ಶರಣಪ್ಪೆ ನುಡಿ ಚನ್ನ ;
ಶರಣಪ್ಪೆ ಜೀವನದೊಳಿರುವೆಲ್ಲ ನೆರೆ ಚನ್ನ
ಶರಣಪ್ಪೆಯೊಳಭಾವ ವೈರಾಗ್ಯಂ ಮೊದಲಾಗಿ
ಬರಬರುತ್ತ ಸ್ವಭಾವ ವೈರಾಗ್ಯಮಾದತ್ತು. ೪೪೦

CC-0. Jangamwadi Math Collection. Digitized by eGangotri

೫. ಜನನಂ ಜೀವನಂ

ಭಾರತಾವನಿಯ ಕರುಮಾಡ ಕರುನಾಡಮಿದು
ಹಿರಿಸಯ್ಪಿನಿಂದೆಸೆವ ಜೆಲ್ವೀಡು ನೆರೆನೋಡು
ಕವಿಕಲಾವಿದರ ಮೇಣ್ ಶರಣಶರಣೆಯರಬೀಡು
ಮಾವು ಮತ್ತಂ ಬೇವು ಚಂದುಳ್ಳಿ ಚಂದನ
ಚಂಪಕಾದಿ ಮರಂಗಳಂ ಪೆರೆವ ಹೆಗ್ಗಾಡು
ಸುಳಿದೊಕ್ಕಿ ಸಿರಿಗನ್ನಡ ಚಲುವ ನೋಡೋದುಗಾ !
ಬಡಗಲದ ಕರಿನಾಡು ಬೆಳಿಜೋಳ್ಬೆಳೆವ ಬೀಡು
ನೆಲಗಡಲೆ ಪೆಸರುದ್ದವರೆ ತೊಗರಿ ಹತ್ತಿ ಮೇ
ಣೆಳ್ಳು ಹುಚ್ಚೆಳ್ಳು ಮೇಣ್ಗೋದಿಗಳ ಬೆಳೆವರ್ !
ಸುಗ್ಗಿಯ ಕಣದೆ ಹಂತಿ ಹಾಡುಗಳ ಹಾಡುವರ್ !! ೧೦
ಮೇಣು ಹಿಗ್ಗಿನೊಳೊಕ್ಕಲು ಮಕ್ಕಳುಗಳಕ್ಕರಿಂ !
ಮೇಣು ಬೆಳವಲದವರ ಭೋಜನರ ಸೊಗಸೇನು ?

ರಾಯಚೂರ್ ವಿಭಾಗದ ಕುಷ್ಟಗಿಯ ತರದೊಳಿಹ
ಕಿರಿಯೂರು ಮುದೆನೂರು ಪಿರಿಯೂರು ನಲ್ವಿನರಿಂ
ಬೆದೆಯೂರು ಬಸುರಿನಿಂ ಲಿಂಗಮ್ಮ ಯಮನಮ್ಮ
ಶಿವಶರಣಿಯರ ಹಡೆದ ಕತಬಿಂದೆ ಕತೆಯಿಂದೆ !
ಹುಟ್ಟುವಳ್ ಲಿಂಗಮ್ಮ ಕುರುಂಬರ ವಂಶದೊಳ್
ಬೆಳೆದಳ್ ಶಿವಸಂಸ್ಕಾರಿಗ ಸತ್ಸಂಗದೊಳ್ ;
ಜಾತಿಯೀನಾದರೇನ್ ಜ್ಯೋತಿರ್ಮಯ ಜೀವನಂ
ರೂಪಿಸುವ ನೀತಿರೀತಿಗಳ್ ಮೌಲ್ಯಗಳ್ಕೈಸೆ ೨೦
ಮತ್ತಮಾಚಾರ ವಿಚಾರಂಗಳ್ ಮುಖ್ಯಮೈಸೆ !
ಹದಿಬದೆಯ ಧರ್ಮದಿಂದಧ್ಯಾತ್ಮ ಚಿಂತನ–
ದಿಂದುಮೆಯವೊಲಿರ್ದಳ್ ಲಿಂಗಮ್ಮ ಬಾಳಿನೊಳ್
ಬಡತನದಿರುಳಿನೊಳುಷೆ ಯುದಿಸಿದಂತೆಸೆದಿಹಳ್
ತಾನಂತರ್ಮುಖಿಯಾಗಿ ವೇದಾಂತ ಸುಖಿಯಾಗಿ !
ಕಡುಬಡವೆ ಲಿಂಗಮ್ಮ ಭೌತಿಕದ ಭಾಗ್ಯದಿಂ
ನಿಡು ಸಿರಿವಂತೆ ನೋಡಲಾಧ್ಯಾತ್ಮ ಭಾಗ್ಯದಿಂ !
ಬಡತನದ ನೆಲೆವನೆ, ಬಡತನದ ಬೆಳೆನೆಲೆ,
ಕೆಯ್ಬಿಟ್ಟು ಹೋಯ್ತಿದ್ದ ತುಸುಹೊಲ ಪರರಿಂಗೆ ;
ಗೆಯ್ಮೆಗಿತ್ತೊಕ್ಕಲಿಗನ ಪಾಲಾಯ್ತಕಟಾ ! ೩೦

CC-0. Jangamwadi Math Collection. Digitized by eGangotri

ಬಂದಿತ್ತು ರಾಗಿಬರ, ತಿಂದಿತ್ತು ತಾಯ್ಮಕ್ಕ-
ಳೊಡಲಂ ಹಸಿವದು ಪೆಬ್ಬಾವಿನೊಲ್ ಹೊದಕುಳಿಸಿ ;
ಬೆಂದಿತ್ತು ಬಾಳು ಬದುಕಿನ ಬಯಕೆ ಬಯಲಾಗಿ ;
ಬಲ್ಲಿದರೆ ಬಳಲುತಿರಲಿಲ್ಲದವರ ಮಾತೇಸು ?
ಹಸಿವಿಂಗೆ ಕಂಪಿಸುತ ಬಂದಿಹಳ್ ಕಂಪ್ಲಿಗೆ
ಕೈವಲ್ಯ ಪಥನದಿಂದರಿತಿಹಳ್ ಕೇವಲಾ
ತ್ಮದಿರವಂ ಪಡೆದಿಹಳ್ ಪರಮಾನಂದಮಂ
ಮೇಣು ಗಂಗಾಧರ ಗುರುವಿನಿಂದು ಪದೇಶಮಂ ;
ಗಂಗಾಧರ ಗುರುವರಂ ಮಹಾನುಭಾವಿ
ಸಾಗಿಸುತ್ತಿದ್ದನ್ ಶಿವಾನುಭಾವಮಂ ಸದಾ
ಲಿಂಗಮ್ಮ ನಿಚ್ಚ ನಿಚ್ಚದೊಳ್ ಶ್ರವಣಕ್ಕೆಂದು
ಸತ್ಸಂಗಕ್ಕೆಂದು ಬರುತಿರ್ದಳ್ ಸಪ್ಪಕ್ತಿಯಿಂ ;
ಗಂಗಾಧರ ಗುರುವಿನ ಸಂಸ್ಕಾರ ಬಲದಿಂದೆ
ಲಿಂಗಮ್ಮ ಸದಾಚಾರ ಪ್ರೇಮಿಯಾಗಿರ್ದಳು.

ತಿಳಿಯದಯ್ ಗಂಡನ ಪೆಸರೇನೆಂಬುದವರಂತೆ
ಗಂಡುಮಗನ ಪೆಸರೇನೊ ತಿಳಿಯದು ವಿಚಾರಿಸೆ–
ಜೊತೆಗೂಡಿ ಬರಲೊಪ್ಪದಿಹ ಮಗನಲ್ಲಿಯುಳಿದು
ಬಂದಪಳ್ ಲಿಂಗಮ್ಮ ಲಿಂಗ್ಸೂರ್ಗೆ ಮಗಳೊಡನೆ
ಲಿಂಗಸೂರೊಳ್ ತೋಂಟದ ಸಿದ್ಧ ಲಿಂಗೇಶ್ವರರ
ಮಂಗಳಮಯ ಮಠವೊಂದಿತ್ತೂರ ಹೊರಗೆ !
ಆದರೊಳಿದ್ದ ರಮೀನಗಡದ ಪ್ರಭುಸ್ವಾಮಿಗಳ್
ಆವರಿಂದನುಗ್ರಹವ ಪಡೆದು ತಾಯಿ ಮಗಳಿರ್ವ-
ರವರಿತ್ತು ರುದ್ರಾಕ್ಷಿಗಳ ಪೂಜಿಸತೊಡಗಿಹರ್
ಯಮನಮ್ಮ ಮಸ್ತಕದ ಮೇಲೊಂದು ಬಿಲ್ವವಳ-
ವನ್ನಿಟ್ಟು ‘ಸಿದ್ಧಮ’ ನೆಂದು ನಲ್ವೆಸರಿಡುವರ್ !
ಲಿಂಗಮ್ಮಗೆ ಮಗಳದೆ ಚಿಂತೆ, ಮಗಳದೆ ಕಳವಳ,
ಮಗಳ ಮುನ್ನಡೆಯ ಮನನಿಸಿ ತಲ್ಲಣಿಸುವಳು ;
ಮಗಳೆಲ್ಲರಂತವಳಲ್ಲ ಏನು ಬಯಸುವಳಲ್ಲ,
ಊಟುಡಿಗೆ ಬೇಕಿಲ್ಲ, ನೋಟಾಟ ಬೇಕಿಲ್ಲ ;
ಓರಗೆಯವರೊಡನಾಡಳು, ಒಂಟಿಯಾಗಿರುವಳು ;
ಅವಳಿಗೆ ಬೇರೆ ಊಟ, ಬೇರೆ ಹಾಸುಗೆ ಮೇಣು-

CC-0. Jangamwadi Math Collection. Digitized by eGangotri

ಬೇರೆ ಹೊದಕೆ, ಬೇರೆ ನೆನಕೆ, ಬೇರೆ ಹೆಬ್ಬಯಕೆ !
ಲೌಕಿಕದ ಕೆಳದಿಯರೊಡಗೂಡಳು, ನೋಡಳು,
ಲೋಕೋತ್ತರ ಸದ್ಭಾಸನೆಯೊಳಗಿರುವಳು ;
ಮತ್ತಮುಂತರ್ಮುಖಿಯಾಗಿಹಳು ಜಾನಿಸಳು.
ನೋಡಿದಡೆ ರುದ್ರಾಕ್ಷಿ. ಹಾಡಿದಡೆ ರುದ್ರಾಕ್ಷಿ,
ಅರ್ಚಿಸಲು ರುದ್ರಾಕ್ಷಿ. ಅರ್ಪಿಸಲು ರುದ್ರಾಕ್ಷಿ ;
ಆಗರ್ದ್ರವಾಕೆಯಾ ಕರಣಂಗಳ್ ರುದ್ರಾಕ್ಷಿ ;
ಭಾವಿಸುವ ಭಾವನಂಗಳಾಗಿಹವು ರುದ್ರಾಕ್ಷಿ.
ಸಿದ್ಧಮ್ಮ ತಾನಾಗಿರ್ದಳ್ ಸಾಧನೆಗೆ ಸಾಕ್ಷಿ, ೭೦
ರುದ್ರಾಕ್ಷಿ ಸ್ವರೂಪಸಂದರ್ಶನ ವಿಶಾಲಾಕ್ಷಿ
ಮುನ್ನ ಕಾಂಬ ಕರದಿಷ್ಟಲಿಂಗದ ಚಿದಕ್ಷಿ
ಭಾವಿಸಲ್ ಶ್ರೀರುದ್ರಕರ್ನಿಕೆಯವಳಾಗಿರ್ದಳ್
ಶ್ರೀರುದ್ರದೇವಂಗೆ ಸಾಕ್ಷಾದ್ದಕ್ಷಿಯಾಗಿರ್ದಳ್ !
ತಾನಾಯ್ತು ತನ್ನತನವ ತೋರ್ಪ ರುದ್ರಾಕ್ಷಿ !!

ಕಂಪ್ಲಿಯಿಂದಣ್ಣ ನೈತರುವನ್ ಕರೆಯಲ್ಕೆ
ತಂಗಿ ಸಿದ್ಧಮನ ಮದುವೆಯ ಮಾಡತಿಳಿಸಿಹನ್
ಆದಕೊಪ್ಪದಿಹ ತಂಗಿ 'ಕೋಣನೇರಿ ಬಂದಿಹ
ಯಮಧರ್ಮಸಂತೆವೊಲ್' ಕಂಡಳ್ಳೆ ಸಿದ್ಧಮ್ಮ ! ೮೦
ಸಂಸಾರಮಿದಂ ಯಮಯಾತನೆಯೆಂತೆಂಬ
ಸಂಕೇತದಿಂ ನಿರಾಕರಿಸಿದಳ್ ಮುದುವೆಗೆ !
ಹಿಂದಿರಿಗಿಹನ್ ನಿರಾಶೆಯಿಂದಣ್ಣ ಕಂಪ್ಲಿಗೆ
ತುತ್ತಾಗಿಹನ್ ಮೃತ್ಯಬಾಯ್ಗೆ ಬೇನೆಯಿಂದಕಟಾ !
ಸಿದ್ಧಮ್ಮ ಸಂಕಲ್ಪ ಸಿದ್ಧಳೆಂದೂಹಿಸಲ್
ತಕ್ಕುದಲ್ಲವೇನ್ ಮಿಗೆ ಲೆಕ್ಕಿಸಲ್ ಲಕ್ಷಿಸಲ್ !

ಇದ್ದೊರ್ವ ತನೂಜಂ ತೀರಿಹೋದನೆಂಬಾ
ಸುದ್ದಿಯಂಗೇಳಿ ವ್ಯಗೆ ದುಕ್ಕಿಪಳ್ ಗೋಳಿಟ್ಟು
ದಿಕ್ಕುಗಾಣದೆ ಪ್ರಾಣಪಕ್ಷಿ ಹಾರಿದಂತೆವೊಲ್
ಬಾಳೆಯಾಗಿಡುವಿಂಗೆ ಬರಸಿಡಿಲ್ ಬಡಿದವೊಲ್ !
ತಾಯಿಯಂ ಕಂಡು ಮನ ಮರುಗಿದಳ್ ಸಿದ್ಧಮ್ಮ, ೯೦
ಅಣ್ಣನಗಲಿದ ನೋವ್ ಇಂತಾದಡಂ ಬಾರದೇಂ ?
ಇತ್ತೊಡಲ ಹೊರೆವ ಪೆತೆ, ಅತ್ತಗಲಿದ ಮಗನವೆತೆ ;

CC-0. Jangamwadi Math Collection. Digitized by eGangotri

ಎತ್ತಲುಂ ಮನೆಮಾರುಗಳಿಲ್ಲಪೆ ಬಾಳ್ಗತೆ !
ಇಂತಿರಲ್ ಬಿಡಲಿಲ್ಲ ಭವಹರನ ಚಿಂತೆಯಂ ;
ಚಿಂತೆಯೊಳ್ ಲಿಂಗಸೂರ್ ಋಣತೀರಿತೆಂಬಂತೆ
ಮುಂತೆ ಮಾವಿನ ಬಾವಿಗೆ ಬಗೆದು ಬರುವರವರು.
ಮಾವು ಬಾಳಿಗೆ ನೆರಳು, ಮಾವು ಹಸಿವಿಗೆ ತಿರುಳು ;
ಮಾವು ಹೃದಯಕೆ ಸೆಂಪು, ಮಾವು ಬಸಂತ ಸೊಂಪು.
ಮಾವಿನಾ ಊರಲ್ಲಿ ತುಂಬಿದಾ ಬಾವಿಯಿರೆ
ಮಾನಿಸರ ಬಾಳಿಗದೇಂ ಸೊಗಸೊ ಪೇಳೋದುಗಾ ?

ಊರ್ ಚಿಕ್ಕದಾದರೇಂ ನೆಲಋಣಂ ಚಿಕ್ಕದೇಂ ?
ನೀರ್ ಋಣಂ ಚಿಕ್ಕದೇಂ ? ಋಣಾನುಬಂಧಮಂ
ತಪ್ಪಿಸಲ್ಕಾರಳವೊ ಬೇವು ಮಾವಾಗುವೊಲಿರೆ ?
ಬತ್ತಿರ್ದ ಬಾವಿಗೆ ನೀರ್ತುಂಬಿ ಬರುವಂತಿರೆ ?

ಆ ಊರಿನೊಳಿರ್ದರ್ ಪೂರ್ವಪರಿಚಿತರ್ ವಂದೆ
ನೂರವರ್ ಕೆಲಂಬರ್ ಹರಿಯಿತೊಡಲಿನ ಚಿಂತೆ,
ನೆರೆಯಿತನುಕೂಲ ವಾತಾವರಣಮೋಗರಕೆ
ಪರಿಚಿತರ ಸಹಕಾರ ಸೌಲಭ್ಯಪ್ರಾಪ್ತಿಯಿಂ ;
ಸಹಧರ್ಮಿಗಳಿರಲ್ಕೆ ಸಹಕಾರ ಜೀವನಂ–
ಲಭಿಸುಗಂ ಸಹಾಧ್ಯಾಯ ಸಹಾನುಭೂತಿಗಳ್ !

ನಿಜಗುಣರ ಶಾಸ್ತ್ರಕ್ಕೆ ಗುಲಾಮನಾಗಿರ್ದ
ಶ್ರೀಗುಲಾಂ ಸಾಬನೆಂಬೊಬ್ಬನಿದ್ದನಲ್ಲಿ ;
ಲಿಂಗಮ್ಮನಾತನಿಂದನುಭಾವ ಸಾರಮಂ
ಮೆಣ್ 'ಜ್ಞಾನಸಿಂಧು'ವಂ ತಾನೋದತೊಡಗಿರ್ದ್ !
ಬ್ರಹ್ಮಜ್ಞಾನಾನುಭವ ಬೃಹದಬ್ಧಿಯೊಳ್ಮುಳುಂಗಿ
ಮರೆತಿರ್ದಳ್ ನಿಜಪುತ್ರ ಶೋಕಮಂ ಸ್ಮರಣಮಂ !

ಸಿದ್ಧಮ್ಮ ಕಲಿತಿರ್ದಳ್ ಸಾಬಿಯಿಂದಕ್ಕರಂ
ಗಳಂ ತಾನಕ್ಕರಿಂ ಲಕ್ಕೆಯಿಂ ಬೇಗದಿಂ !
ಆ ಸಾಬಿ ವೇಳಿರ್ದನ್ ; 'ಓ ತಂಗಿ ಬಹಳಷ್ಟು–
ನೀ ಕಲ್ತು ಶ್ಯಾಣ್ಯಾಕೆಯಾಗಮ್ಮಮೇಣ್ ನೀನು–
ಮಾಸ್ತರ್ತಿಯಾಗಮ್ಮ ಸರಿಯಾಗಿ ಕಲಿಯಮ್ಮ'
ಎಂತೆಂದು ಪೇಳುತಿರೆ, ಮಾರ್ನುಡಿದಳಂತೊಡನೆ :

CC-0. Jangamwadi Math Collection. Digitized by eGangotri

ಹೊಟ್ಟದುಂಬುವ ಬಿಜ್ಜೆಗಳಿರುವತ್ತುನಾಲ್ಕು
ಬಿಜ್ಜೆಗಳ್ ಬೇಕಿಲ್ಲ ; ಬೊಮ್ಮಬಿಜ್ಜೆಗೊಲಿದೆನಗೆ,
ಮೇಣ್ಪರಾತ್ಪರ ಶಿವಾನುಭಾವಕೊಲಿದೆನಗೆ ;
ಶಿವಾನುಭವವೆನ್ನೊಲವು ಮೇಣ್ಕೆಲುವು ಮೇಣ್ಗೆಲುವು.
ಕೊಡಬಲ್ಲಸಗಸಂ ಬಟ್ಟೆಗಳನವರವರ್ಗೆ,
ಗುರುತಿಸಬಲ್ಲ ಕುರುಬಂ ತನ್ನೆಲ್ಲ ಕುರಿಗಳಂ
ಬೇರೆ ಕುರುಂಬರ ಮಂದೆಯಲ್ಲಿರಲು ಜಾಣ್ಮೆಯಿಂ-
ದಾದಡಂ ಗುರುತಿಸರ್ ತಾವ್ ತಮ್ಮ ತನಮಂ ಗಡಾ ! ೧೩೦
"ಏನಾದರೆಯು ಸಾಧಿಸಬಹುದು, ಮತ್ತೇನಾ
ದರೆಯು ಸಾಧಿಸಬಹುದು ತಾನಾರೆಂಬುದು ಸಾ-
ಧಿಸಲಾಗದು ಕೂಡಲ ಸಂಗಮ ದೇವನಾ
ಕರುಣವುಳ್ಳವಂಗಲ್ಲದೆ" ಎಂದಿಹನ್ ಬಸವಣ್ಣ !
ತನ್ನರಿಯದೆ ತಿಳಿದೇಂ ಲೌಕಿಕದ ವಿದ್ಯೆಯಂ ?
ತನ್ನರಿವಿಗಿರಬೇಕಕ್ಷರ ವಿದ್ಯೆತಾನಿದಂ !
ಸಾಲದೇಂ ತನಗೆ ತಾನಧ್ಯಾಪಕಿಯಾದಡಂ ?
ತನ್ನರಿಯದನ್ಯರ್ಗೆ ಕಲಿಸಿದಡೇನಪ್ಪುದೋ ?–
ಎಂದೆನಲ್ ಸಿದ್ಧಮ್ಮ ಬಾಲಕಿಯ ಮೂಲ ಭೂ–
ತ ಸ್ವಾತ್ಮ ಪ್ರಜ್ಞೆಯಂ ತಿಳಿದಚ್ಚರಿಗೊಳ್ಳುವನ್ ! ೧೪೦
ಕ್ಷ-ಷ-ಶ-ಸ-ಹ ಪಂಚಾಕ್ಷರಂಗಳಂ ಕಲಿತಳ್ ;
ಮಂತ್ರವಿದ್ಯೆಯೊಳ್ ಮೂಲಬೀಜಾಕ್ಷರಂಗಳವು.
ಆ ಮೇಲೆ ತಾಯಿಯಿಂ ಪಡೆಯಲೆತ್ನಿಸಿದಳಾ
ಸ್ವಾನುಭವ ಸಾರಮಂ ಸಂಸ್ಕಾರ ಬಲದಿಂದೆ !

ಮಾವಿನಾ ಬಾವಿಯಿಂ ಸಜ್ಜಲದ ಗುಡ್ಡಕ್ಕೆ
ಬಂದಪರ್ ಮುದೆನೂರ ಸಿದ್ಧಯ್ಯನೊಡಗೂಡಿ !
ಸಜ್ಜಲದ ಗುಡ್ಡವೇ ಸಿದ್ಧಮ್ಮ ಜೀವನದ
ಪ್ರಗತಿಪರ ಸಿದ್ಧಿಗಂ ಮೂಲನೆಲೆ ತಾನಾಯ್ತು,
ದೆಸೆದಿಕ್ಕು ಬದಲಾಯ್ತು ; ಹೊಸತಿರುವು ಬಂದಾಯ್ತು.
ಲಿಂಗಮ್ಮ ಪುತ್ರಿಯಂ ಮುನ್ನಡೆಸಬೇಕೆಂದು ೧೫೦
ಸರ್ವಾಂಗಮಾಗಿ ಯತ್ನಿಸತೊಡಗಿಹಳ್ ಸದಾ !
ತಾನರಿತುದಂ ಪ್ರತಿದಿನಂ ಕಲಿಸುತಿರ್ದಳ್
ಸಾಂಸ್ಕೃತಿಕ ಮಾರ್ಗಮಂ ಬಿಡದೆ ತೋರುತಿರ್ದಳ್ !

CC-0. Jangamwadi Math Collection. Digitized by eGangotri

ಮನೆಯಲ್ಲಿ ಮಡಕೆಗಳನಡಕಲೇರಿಸಿದಂತೆ
ತಲೆಯಲ್ಲಿ ಸದುಪಾಯಗಳನ್ನೇರಿಸಿರ್ದ್ಳ್–
ಅವನೆಲ್ಲ ತಿಳಿಸಲು ತನಗಾಗದೆ ತೊಳಲುತ್ತ
ತಿಳಿಯುಳ್ಳ ಗುರವರನೋರ್ವನಂ ಕಾಯುತಿರ್ದ್ಳ್ !
ಪತಿಸುತರ್ ಕೈಲಾಸಕೆ ತಾವ್ ಪೋದಬಳಿಕಂ
ಲಂಗಮ್ಮ ಹೃದಯ ಬಲಮಂ ಬಲಿಸಿಕೊಂಡಿರ್ಪ್
ತನ್ನೆಲ್ಲ ಶಕ್ತಿಯಂ ಪುತ್ರಿಯ ಪುರೋಭಿವೃ– ೧೩೦
ದ್ಧಿಗಾಗಿ ಮನಸ್ಸಿನಿಂ ಮೀಸಲಾಗಿರಿಸಿರ್ಪ್ !
ಅಣುವಿಂಗೆ ಅಣುವಾಗಿ ನಮ್ಮಲ್ಲಿ ನೆಲಸಿರ್ದ
ಅಣೆಯರದ ಚೈತನ್ಯಮಂ ಬೆಳಸಿ ಬೆಳಗಿಸಲ್
ಶಿವಜೀವ ಸಮರಸವ ಬೋಧಿಸುವ ಗುರುವಿಂಗೆ
ಭಾವಿಸಲ್ ಸಾಧ್ಯಮಹುದೆಂದರಿದು ಮನದಲ್ಲಿ
ಚಿಂತಿಪಳ್ ಸಮರ್ಥ ಗುರುವಿಗಾಗಿ ಕಾಯ್ದಿಹಳ್
ಲಿಂಗಮ್ಮ ತನ್ನ ಬಡತನದ ಬಾಳಿನೊಳ್ ಪರ-
ಮಾರ್ಥ ಜೀವನದ ಶ್ರೀಮಂತಿಕೆಯ ಸವಿಗಾಗಿ !
ಅನ್ನತಿಂದು ನೀರ್ಗುಡಿವಡೆ ಮಹತ್ತಾಗದಿದು
ತನ್ನ ತಾನರಿತು ತನಗಸ್ಯವೆಲ್ಲವಂ ತಾ–
ನೆಂದು ಭಾವಿಸಿ ನಡೆವಡೆ ಮಹತ್ತಾಗುವಲ್ಲಿ ೧೪೦
ತಾನೆನಿತು ಸಂದೇಹಮಿಲ್ಲೆಂದು ಬಗೆಯುವಳ್ !
ನೂರೊಂದು ಸ್ಥಲಂಗಳನಾಚರಿಸಿಯಸುಭವಿಸಿ
ನೂರೊಂದು ನಾಡಿಗಳ ತ್ರಿಕೂಟದೆ ನಿಲ್ಲಿಸದೆ
ಮಹಾಚೈತನ್ಯ ಸಾಕ್ಷಾತ್ಕಾರವಾಗದೆಂ-
ದುಸುರಿಹನ್ ವೀರಶೈವಾತ್ಮ ಗುರುದೇವನು ;
ಆ ಕಳೆಯ ಗುರುದೇವ ನಮಗೆಯೊರೆವು ದೆಂದಿಗೊ ?

೩. ಗುರು ಕರುಣ ಭವಹರಣಂ

ಸಜ್ಜಲದ ಗುಡ್ಡಕ್ಕೆ ಸನಿಹಮದು ಕಂಬಳಿಹಾಳ್
ಸನಿಹಮದು ಗುಡದೂರು ಮೇಣ್ ; ಕಂಬಳಿಹಾಳಿಗೆ-
ಪರಿಚಿತರ್ ಗುಡದೂರ ದೊಡ್ಡ ಬಸವಾರ್ಯರಾ
ಕಂಬಳಿಯ ಹಾಳಿನಾ ಹಾವರಗಿ ಕರಿಬಸವ
ಭಕ್ತಂಗೆ ; ಮೇಣಾತನಾ ಭಕ್ತಿ ಭಾವಕ್ಕೆ

CC-0. Jangamwadi Math Collection. Digitized by eGangotri

ಮೆಚ್ಚಿ ದಯಮಾಡಿಸಿರ್ದರು ದೊಡ್ಡ ಬಸವಗುರು.
ಆ ಊರಿಗೆ ಆರಾಧ್ಯದೇವರಾಗಿದ್ದರು ;
ಹಿರಿಯಮಠದ ಸಂಗನಬಸವಯ್ಯಾತ್ಮೀಯರು.

ಒಕ್ಕೆ ನಡೆದತ್ತಲಿ ದೊಡ್ಡ ಬಸವಾರ್ಯರಿಂ
ಶಿವಾನುಭವದ ಗೋಷ್ಠಿ - ಸಂಗನಬಸವಯ್ಯನ
ಮನೆಯ ಕಟ್ಟೆಯ ಮೇಲೆ ಹಳ್ಳಿಜನರೊಡಗೂಡಿ !
ಬಂದಿಹರ್ ಸಜ್ಜಲದಗುಡ್ಡದಾ ಸಿದ್ಧಯ್ಯ
ಮೇಣ್ ಭೀಮನಗೌಡರ್ ಸತ್‌ಶ್ರವಣ ಮಾಡಲ್ಕೆ ;
ಲಿಂಗಮ್ಮ ಸಿದ್ಧಮ್ಮನೊಡಗೂಡಿ ಬಂದಿಹರ್
ಶಿವಾನುಭವಾಮೃತವನಾಸ್ವಾದಿಸಿಹರ್ ಮುಗ
ಳೊಂದಿಗಂ ಸದ್ಭಕ್ತಿ ಸದ್ಭಾವದಿಂ ನಲಿದು !
ಶುಭಕಾಯ ಶುಭದೃಷ್ಟಿ ಶುಭಚಿತ್ತ ಸಿದ್ಧಮ್ಮ ;
ಸ್ಥಿರಚಿತ್ತ ಸ್ಥಿರಬುದ್ಧಿ ಸ್ಥಿರಭಾವ ಸಿದ್ಧಮ್ಮ ;
ಹ್ಯೇಯರಂಜನಗಳ್ಗೆ ಮನಮಾರು ಹೋದವಳಲ್ಲ,
ದಯ ನಯ ಭಯ ಸಂಯಮ ಸಂಪನ್ನ ಸಿದ್ಧಮ್ಮ ;
ಕಳವು ಸುಳ್ಳುಗಳಿಲ್ಲ, ಪಾಳು ಬಯಕೆಯವಳಲ್ಲ ;
ಪೊಳ್ಳುಮನದವಳಲ್ಲ ಒಳಿತು ಮನದ ಸಿದ್ಧಮ್ಮ.
ನವಯುವತಿಯರ್ಗಿಪ್ಪ ಕುಟಿಲ ಕುಮತಿಗಳಿಲ್ಲ,
ನವಯುಗದ ಗಾಳಿಗೇ ಮನಸಿಲುಕಿದವಳಲ್ಲ ;
ಸರಳ ಜೀವನ ಸರಳ ಭಾವನದವಳಿದ್ದಳು ;
ವೀರಶೈವ ಶಿವಾನುಭವಕ್ಕೊಲಿದಿದ್ದಳು.

ಸಿದ್ಧಮ್ಮ ಗಟ್ಟಿಗಾಳೆಂದು ಬಸವಾರ್ಯರು,
ಶರಣಮ್ಮನಹಳೆಂದು, ದೈವ ಜೆನ್ನಿಡೆಯೆಂದು,
ಮಿಗೆ ದೊಡ್ಡರನ್ನವೆಂದವಳಂ ಮಿಗೆ ಜೋಕೆಯಿಂ
ಜೋಪಾನ ಮಾಡಬೇಕೆಂದು ಹಿರಿಮಠದ ಸಂ–
ಗನಬಸವಯ್ಯನವರು ಬಗೆದು ಪೇಳುತಿರ್ದರು.

ಇಂತೆನಲ್ ಲಿಂಗಮ್ಮ ಹೆಮ್ಮೆಯಿಂ ಹೆಚ್ಚಿದಳ್
ಮುಂತಿನೊಲ್ ಮನದಂದು ಚಿಂತನಂಗೈಯುವಳ್ ;
ಪುತ್ರನ ವಿಯೋಗದಿಂದುಂಟಾದ ದುಃಖಮಂ
ಚಿತ್ತಕ್ಕೆ ತಂದೆದೆಗುದಿಗೊಳ್ಳುವಳರಿ ಚಣದೆ !
ಬಡತನದ ಬೇಗೆಯಿಂ ಬೆಂದಿದ್ದ ಮನವದು.

CC-0. Jangamwadi Math Collection. Digitized by eGangotri

ಬದುಕಿನಲಿ ಬಾಳಿನಲಿ ಜುಗುಪ್ಸೆಯಂಪಡೆದಿತ್ತು,
ಕಷ್ಟಕಾರ್ಪಣ್ಯಗಳಂ ಕಂಡುಂಡು ಹೇಸಿತ್ತು
ಮಾನ ಮರ್ಯಾದೆಗಳ ಕಳಕೊಂಡು ಬಳಲಿತ್ತು
ಜಗತ್ತಿನ ಜಂಜಡಂ ಸಾಕಾಗಿ ಹೋಗಿತ್ತು
ಭೋಗ ಭಾಗ್ಯಂಗಳಭಿಲಾಷೆಯಿದು ಹಿಂಗಿತ್ತು ;
ನಿಜಗುಣರ ಶಾಸ್ತ್ರಗಳ ಶ್ರವಣಕೆ ಮನಸೋತಿತ್ತು
ನಿಜದರಿವನಾರ್ಜಿಸಲು ಮನ ಹಂಬಲಿಸುತ್ತಿತ್ತು
ಗುರ ಪುತ್ರಿಯಾಗುವಾ ಸಂಕಲ್ಪ ನೊಳದಿತ್ತು
ವರ ಮುಕ್ತಿ ಯಾನಂದಮಂ ಮನಂ ಬಯಸಿತ್ತು ;
ಬಯಸಿದ್ದು ಬಾಗಿಲಿಗೆ ಬಂದಂತೆ ತಾನಾಗಿ
ಹೃದಯದೊಳು ಹಿಗ್ಗಿದಳು ನಂಬುಗೆಯ ತೊಟ್ಟಿಹಳು ;
ಸದ್ಗುರುವೆ, ಸಿದ್ಧಮ್ಮ ನಿಮ್ಮಡಿಯ ಮೊಮ್ಮಗಳು
ಸದ್ಭೋಧೆಯನೆಸಗಿ ಗುರುಪುತ್ರಿಯೆನಿಸಿರಿ
ಎಂದು ಬಗೆದುಂಬಿ ನಂಬಿ ಬಿನ್ನವಿಸಿಕೊಳ್ಳುವಳು.

ಓ ಲಿಂಗಮ್ಮಾ, ನಿನ್ನ ಮಗಳಂ ಗುಡೂದೂರಿಗೆ
ಕರೆತಂದರಲ್ಲಿ ಬೋಧಿಸುವೆವಖಂಡೇಶ್ವರ
ವಚನಂಗಳಂ ಮೊದಲು ಪನ್ನೆರ್ಡ್ ಬರಿಸದ ನಿ–
ನ್ನಣುಗಿ ಸಿದ್ಧಮ್ಮಂಗೆ ಶುದ್ಧ ಹೃಚ್ಛಿಲೆಗೆ !
ಎಂದೆನಲ್ ಪೋಗಿಹರ್ ಸಜ್ಜಲದ ಗುಡ್ಡಕ್ಕೆ,
ತಂಗಿಹರ್ ಗುಡದೂರ ಪಯಣಮಂ ನೆನೆಯುತಂ !
ಬುಧವಾರ ಕಳೆದಿಹುದು, ಗುರುವಾರ ಸಂದಿಹುದು ;
ಲಿಂಗಮ್ಮ ಬೇಗೆದ್ದು ಮಗಳನೆಳ್ಚರಿಸುವರ್ ;

ಬೆಳಗಾಯ್ತು ಬೇಗೇಳು ಓ ಎನ್ನ ಕಂದಮ್ಮ
ಮೂಡಣದ ಬಾಂದಳದೆ ಮೂಡಿತಿದೊ ನಸುಗೆಂಪು
ಪ್ರಕೃತಿ ಮಾತೆಗೆ ಕೆಂದಿಲಕವಿಟ್ಟ ತೆರದಂಸೆ
ಉಷೆಯವಳ್ ಬಂದಿಹಳ್ ನೋಡಮ್ಮೋ ಬೆಳಗಾಯ್ತು ;
ಕಳ್ತಲೆಯು ಕಳೆಯುತಿದೆ, ಹೊಂಬೆಳಗು ಹೊಮ್ಮುತಿದೆ
ಪ್ರಪಂಚಕೆ ನವಚೇತನಂ ಮೂಡಿ ಬರುತಿದೆ.
ಓಕಂದ ಸಿದ್ಧಮ್ಮ, ನೋಡಮ್ಮೋ ಬೆಳಗಾಯ್ತು
ಒಳಬೆಳಗ ಕರುಣಿಸುವ ಕರುಣಾಳು ಗುರುವರನ

CC-0. Jangamwadi Math Collection. Digitized by eGangotri

ಅಪ್ಪಣೆಯ ಮೇರೆಗಂ ಪ್ರೋಗೋಣ ಗುಡದೂರಿಗೆ
ಚಿತ್ಕಳೆಯ ಸೊಂದೋಣ ಬೇಗೇಳು ಎನ್ನಮ್ಮ !
ಬಾಸ್‌ಬೆಳಗಿಜೋ ಬರಲಿದೆ ನಮ್ಮ ಮನೆ ಬಾಗಿಲಿಗೆ
ಗುರುಭಾನು ಬರಲಮ್ಮ ನಮ್ಮ ಮನ ಬಾಗಿಲಿಗೆ ! ೭೦
ಇಲ್ಲೇನು, ಇನ್ನೇನು ? ನಿಲ್ಲಲ್ಕೆ ನೆಲೆಯಿಲ್ಲ
ತಿನ್ನಲೋಗರವಿಲ್ಲ ಪೇಳದ್ದೇನಿಲ್ಲಿ ಮಗು ?
ಇದೊ ಮುಂಜು ಹರಿಯುತಿದೆ, ಕದಿರ್ಪುಂಜ ಹರಡುತಿದೆ ;
ಇದೊ ಹುಂಜ ಕೂಗುತಿದೆ, ಎದ್ದೇಳು ಓ ಕಂದಾ !
ಅದೇ ಅಲ್ಲಿ ಬಸದಲ್ಲಿ ಮೊಗ್ಗುಗಳರಳುವಂತೆ
ಇದೊ ಇಲ್ಲಿ ಮನದಲ್ಲಿ ಹೃನ್ಕೊಗ್ಗು ಅರಳುವ
ಹೊತ್ತು ಬಂದಿದೆಯಮ್ಮ ಪ್ರೋಗೋಣ ಏಳಮ್ಮ
ಗುರುದೇವ ಕಾರುಣ್ಯಮಕರಂದ ಕುಡಿಯೋಣ ;
ಇರುವನ್ನೆಗಮಾತ್ಮಾನಂದದೊಳ್ ನಲಿಯೋಣ ! ೮೦
ದುಂಬಿಯಾ ಜೇಂಕಾರದೊಳೋಂಕಾರ ಹೊಮ್ಮಿದೆ,
ಮುಂದುಂಬಿ ಬರ್ವಾ ಬಾಳ್ಗುರುಹು ಹೊಮ್ಮಿದೆ.
ಅದೊ ಕೇಳು ಹಕ್ಕಿಗಳ ಚಲಿಪಿಲಿಯನಾದದಿಂ
ಸೃಷ್ಟಿಯಿಮ ಚೇತನಿಸುತಿಹುಮ ತಿಳಿಬೆಳಗಿನೊಳು
ಗುರುಕರಿಗೆ ನಮ್ಮಗಳ ಹೃದಯ ಚೇತನಿಸುತಿರು
ವಂತೆ, ಕಾರುಣ್ಯಾಮೃತಕೆ ಹಂಬಲಿಸುವಂತೆ !
ಹುಲ್ಲು ಹಸುರಿನ ಮೇಲೆ ಇಬ್ಬನಿಯ ಹನಿಗಳು ೯೦
ಮುತ್ತು ಪವಣಿಸಿದಂತೆ ಚಲುವೆತ್ತು ನಿಂತಿದೆ ;
ಶಾಂತಿ ಸದ್ಗುಣ ವೃಂದಗಳ ಮೇಲೆ ಸದ್ಗುರು
ಕಾರುಣ್ಯರಸಾಮೃತದ ಸಿಂಚನ ನಡೆಯಲಿ ;
ಮುಂಬಾಳು ಹಿಂಬಾಳ ಮುರೆಯಿಸುವಂತಾಗಲಿ.
ಗುರುದೊಡ್ಡ ಬಸವಾರ್ಯರ ಮನಸ್ಸು ದೊಡ್ಡದು,
ತೇಜಸ್ಸು ದೊಡ್ಡದು, ಮೇಣ್ ಯಶಸ್ಸು ದೊಡ್ಡದು ;
ಜೈತನ್ಯ ದೊಡ್ಡದು, ಕಾರುಣ್ಯ ದೊಡ್ಡದು ;
ಮತ್ತಮಾ ಸತ್ಯಶಿವ ಲಾವಣ್ಯ ದೊಡ್ಡದು.

ಎಂದೆಬ್ಬಿಸಿ ಮಗಳಂ ಮೊಗದೊಳಿಸಿ ವಿಭೂತಿಯಂ
ಪಣೆಗೆ ಧರಿಸಿ ರುದ್ರಾಕ್ಷಿಯಂ ಪೂಜಿಸಿ ನಮಿಸಿ
ಇದ್ದುದಂ ಭುಂಜಿಸಿ ಗುಡದೂರಿಗೆ ಬಂದಪರ್
ದೊಡ್ಡ ಬಸವಾರ್ಯರಂ ಕಂಡು ಕೆಯ್ಮುಗಿಯುವರ್ !

CC-0. Jangamwadi Math Collection. Digitized by eGangotri

ಓ ಗುರುವೆ ಇವಕಾರು ದಿಕ್ಕಿಲ್ಲದಕೆ ನೀವೇ
ದಿಕ್ಕು ನಿಮ್ಮ ಮಗಳು ಕಾಪಾಡಬೇಕೆವಳಂ
ಇಂತೆಂದು ದೀರ್ಘದಂಡ ಪ್ರಣಾಮಂಗೈವಳು
ಚಿತ್ತದಾ ಮರುಕಿನಿಂ ಕಣ್ಣೀರ್ ಮಿಗೆಕರೆವಳು.

ಏಳು ಓ ಲಿಂಗಮ್ಮ, ಯಾರಿಲ್ಲದವರಂದಲ್
ಯಾರಿಲ್ಲದವರೆ ಕಾಪಾಡುವರ್ ವೆತೆಯೇಕೆ ?
ಎಂದೆನಲ್ ಲಿಂಗಮ್ಮ ಹರ್ಷದಿಂ ಮೇಲೇಳೆ
ಸಿದ್ಧಮ್ಮ ಗುರುವರನ ಚರಣಕ್ಕೆ ತಲೆಬಾಗಿ
ಕಣ್ಣೀರ್ ಮಿಡಿಯುತ ಕುಳಿತುಕೊಳ್ಳುವಳೊಂದೆಡೆಗೆ !

ಸಿದ್ಧಮ್ಮ, ನಿನಗೋದಲು ಬನೆಯಲು ಬರುವುದೇಂ
ಎಂದು ಗುರುವರಂ ಕೇಳಲ್ಕೊಡನೆ ಸಿದ್ಧಮ್ಮ,
'ಸ್ವಲ್ಪ ಸ್ವಲ್ಪ ಬರತೈತಿ ಮುತ್ಯಾ' ಎಂದು ಬಿನ್ನವಿಪಳ್
ಭಯಭಕ್ತಿಯಿಂ ಕೂಡಿ ತಾಯ್ಮೋಗನ ನೋಡುತ್ತ !

ಅಂತಾದೊಡ ಮಖಂಡೇಶ್ವರನ ವಚನಮಂ
ತೋರುವೆನ್ ಪೂಜೆ ಪೂರೈಸಿಕೊಳ್ಳುವನಿತರೊಳ್
ಗಟ್ಟ ಮಾಡಿಯೊಪ್ಪಿಸಬೇಕೆಂದು ಪೇಳುವರ್ ;
ಅವಕಾಗಲೆಂದೊಪ್ಪಿಕೊಂಡಿಹಳ್ ಸಿದ್ಧಮ್ಮ.
'ಶ್ರೀಗುರುವೆ ಪರತತ್ವಮದು ತಾನೆ ನೋಡಯ್ಯ
ಶ್ರೀಗುರುವೆ ಪರವಸ್ತುವದು ತಾನೆ ನೋಡಯ್ಯ
ಶ್ರೀಗುರುವೆ ಪರಬ್ರಹ್ಮನದು ತಾನೆ ನೋಡಯ್ಯ
ಗುರುವಿನಿಂ ಪರಮಿಲ್ಲವೆಂದ ಸಕಲ ಶ್ರುತಿಗಳ್
ಪೊಗಳುತ್ತಲಿರ್ಪವವು ನೋಡಯ್ಯ, ಇಂತಪ್ಪ
ಗುರುವಿಂಗೆ ನವೋನವೊಯೆಂಬಿನಖಂಡೇಶ್ವರ ! '

ಎಂಬುವೀ ವಚನಮಂ ತೆಗೆದಿತ್ತು ಪೂಜೆಗಂ
ಶ್ರೀಗುರುವು ಪೋಗುತಿರೆ ಸಿದ್ಧಮ್ಮ ಪಠಿಸುವಳ್ !
ಮುಮ್ಮೊದಲ್ ಗುರುವರನ ಹಿರಿಮೆಯಂ ಬಿತ್ತರಿಪ
ವಚನಮದು ಬಂದುದಕೆ ಹೊಳೆಯಪ್ಪ ಅಡಿವೆಪ್ಪ
ಮೊದಲಾದ ಶಿಷ್ಯಸಮುದಾಯವುಮು ಸಂತಸಂ–
ಗೊಳ್ಳುತಂ 'ಸಿದ್ಧಮ್ಮ ದಿಟಮಾಗಿ ದೊಡ್ಡಮೂರ್ತಿ–

CC-0. Jangamwadi Math Collection. Digitized by eGangotri

ಯೆನಿಪ ಲಕ್ಷಣಮಿದಂ ಮತ್ತಮಾ ರತ್ನಮಿದ–
ಮಿಂತೆಂದು ಮನಮೆಚ್ಚಿ ಹರಸುತಂ ನುಡಿದಪರ್ !

ಆತ್ತಲುಂ ಡೊಡ್ಡ ಬಸವಾರ್ಯ ಗುರುಗಳವರಿ– ೧೩೦
ಷ್ಟಲಿಂಗಾರ್ಚನಾರ್ಪಣಂಗಳ ಮುಗಿಸಿ ಬರುತಿರಲ್
ಸಿದ್ಧಮ್ಮ ತಾಂ ಕಲಿತ ವಚನವನೊಪ್ಪಿಸುವಳು ;
ಗುರುವರಂ ತಲೆದೂಗಿ ಮನಬೀಗಿ ಪೇಳುವರು ;

ಓ ಶರಣೆ ಲಿಂಗಮ್ಮ, ಈ ವಸ್ತು ನಮ್ಮ್ಯದಾ
ಸೇರಿಹುದು ನಮಗಿವಳ ಯೋಗ ಕ್ಷೇಮವೆಲ್ಲವು
ಮಾಡದಿರ್ ನೀನಿವಳ ಚಿಂತೆಯಂ ನಸು ಮುಂದೆ ;
ಸೇರಬೇಕಾವಲ್ಲಿ ಸೇರಿರುವಳಾಗಬೇ
ಕಾದುದೇ ಆಗುವುದು, ತಿಳಯಿನಾವ್ ನೀವೆಲ್ಲ
ಬರಿ ನಿಮಿತ್ತ ಮಾತ್ರರ್; ನಿನ್ನ ಮಗಳದಕಾಗಿ
ಜನಿಸಿಹಳ್, ನಿನ್ನ ಗುರಿ ಫಲಿಸುಗುಂ ಮಗಳಲ್ಲಿ ; ೧೪೦
ಬದುಕುವಳ್ ಭವಬಂಧನವ ನೀಗಿ ನಿನ್ನಣುಗಿ ;
ಎಂದೆನಲ್ ಗುರುವರಂ, ಲಿಂಗಮ್ಮ ಮುದಗೊಂಡು
ಸುರಿಸಿದಳ್ ಸಂತೋಷಬಾಷ್ಪಮಂ ಬಗೆಗಂಡು !
ಮುಗಿಯಿತೆನ್ನ ಕೆಲಸಂ, ಸರಿಯಪ್ಪ ಸನ್ನಿಧಿಗೆ
ಸೇರಿಸಿಹೆನಣುಗಿಯಂ ನನಗಿಲ್ಲ ಚಿಂತೆಯಿನ್ನು,
ನನ್ನಾಸೆಯೀಡೇರಿತೆನಗೆ ತೃಪ್ತಿಯಾಯಿತು;
ಗುರುವರನೆ, ನಾನಿನ್ನು ಬರುವೆನೆಂದು ಬಿನ್ನವಿಸಿ
ಗುರುಚರಣಕೆ ವಂದಿಸಿ ಪ್ರೋಗಿಹಳ್ ಲಿಂಗಮ್ಮ
ಮರಳಿ ಬಾರದೆ, ಮಗಳ ಬಗೆಗೆನಿತು ಚಿಂತಿಸದೆ !

ಅಂದಿನಿಂ ಸಿದ್ಧಮ್ಮ ಗುರುಡೊಡ್ಡ ಬಸವಾರ್ಯರ ೧೫೦
ಕಾರುಣ್ಯ ಶಿಶುವಾಗಿ 'ಶರಣಪ್ಪೆ' ಯೆನಿಸಿಹಳ್ !
ಶರಣಪ್ಪೆ ಕೇಳಪ್ಪೆ ಪೇಳಿರ್ದ ಪಾಠಮಂ
ಅಂಗೈಯೊಳಗಣ ಗೆರೆ ಕಾಣುವನ್ನೆಗಂ ನೀ–
ನೋಡಬೇಕೆಂದಪ್ಪಣೆಯನವಳಿಗಿರದಿತ್ತರು-
ಮುಂದೆ ನಾವ್ ಪೇಳುವೆವ್ ಶರಣಪ್ಪೆ ನಾಮಮಂ
ಸಂದ ಸಂತೋಷದಿಂದಿನ್ನು ಕಬ್ಬದುದ್ದಕೆ !

CC-0. Jangamwadi Math Collection. Digitized by eGangotri

ಸಾಗಿತಯ್ ಶಾಸ್ತ್ರಾಧ್ಯಯನ ಸಾಧನಂ ಶರಣ
ವ್ವೆಗೆ, ಗುರುಗಳವಕ್ಕನುಕೂಲಮಂ ಮಾಡಿಹರ್ ;
ಬೋಧಿಸಿಹರಖಂಡೇಶ್ವರರ ವಚನಂಗಳಂ
ತಮ್ಮಲ್ಲಿರಿಸಿಕೊಂಡು ಮನನಲಿಸಿ ಮತಿಗಲಿಸಿ ! ೧೬೦

ಜಾಣವ್ವೆ ಶರಣವ್ವೆ ಶ್ರದ್ಧೆಯಿಂ ನಿಷ್ಠೆಯಿಂ
ಗುರುಕೊಟ್ಟ ವಚನಂಗಳಂ ಕಲಿಯುತಿರ್ದಳ್
ವಚನಾಧ್ಯಯನವವಳಿಂಗೆ ಸವಿಯೂಟವಾಗಿತ್ತು ;
ಓದುತ್ತ ಹಾಡುತ್ತ ಮನವಿರದೆ ನಲಿಯುತಿತ್ತು.
ವಚನಂಗಳನರ್ಥವಿಸುವಳ್ ಮೇಣ್ ಭಾವಿಸುವಳ್
ಆ ಭಾವದೊಳ್ ನಿಬ್ಬೆರಗಾಗುವಳ್ ತಾನಾಗಿ !
ಇದಗಂಡು ಗುರುವರರ್ ಮುದಗೊಂಡು ಪ್ರೋಜಿಸಲ್
ಕರುಣಿಪರ್ ವಿಭೂತಿಯ ಲಿಂಗಮಂ ಶರಣವ್ವೆಗೆ
ಭಕ್ತಿಯಿಂದರ್ಚಿಪಳ್ ಶರಣವ್ವೆ ಗುರುಕೊಟ್ಟ
ವಿಭೂತಿಯ ಲಿಂಗಮಂ ಸಲೆ ವರುಷಮನ್ನೆಗಂ ! ೧೭೦
ವಚನಾಧ್ಯಯನ, ವಿಭೂತಿಲಿಂಗಾರ್ಚನಂಗಳಂ
ಮತ್ತೆ ಮುಂದುವರಿಸಿದರ್ ಮೂರ್ಬರಿಸಮನ್ನೆವರಂ
ನೂರ್ಮಡಿಯೊಳುಲ್ಲಾಸ ಮೆಣುತ್ಸಾಹಂಗಳಿಂ
ಹೃದಯಮಂ ತಣಿಸುವಳ್ ಭಕ್ತಿರಸ ಚಿಲುಮೆಯಾಗಿ !
ಗುರುವಿನಪ್ಪಣೆಯಂತೆ ಮತ್ತೊಂದು ಗ್ರಂಥಮಂ
ನೋಡದಂತೋದದಂತನನ್ಯವಹ ನಿಷ್ಠೆಯಿಂ-
ದಖಂಡೇಶ್ವರ ವಚನವೊಂದನ ಧ್ಯಯನಿಸಿ
ಪಡೆದಿರ್ದರಾತ್ಮಾವಾದನುಭವಮಂ ವಚನದೊಳ್ !

ಸಂಚಾರ ಜೀವಿಗಳ್ ದೊಡ್ಡ ಬಸವಾರ್ಯರ್ ಸಂ-
ಚರಿಸಿಹರ್ ಹಂಚಿನಾಳ್ ಸಾಸ್ವಿಹಳ ಮೇಣು ಕಂ- ೧೭೦
ಬಳಿಹಾಳಗಳ್ಗೆ ಮಠದ ಶಿಷ್ಯಾರ್ಜನೆಗಾಗಿ ;
ಮೇಣ್ ಧರ್ಮ ಸಂಸ್ಕೃತಿ ಕಲೆಗಳ ಪ್ರಚಾರಕಾಗಿ !
ಸಂಚಾರದಿಂ ದೊಡ್ಡ ಬಸವಾರ್ಯರಾಗಮಿಸಿ
ಅರೆದಿರೆದು ನೋಡಿದರ್ ಶಿಷ್ಯೆಶರಣವ್ವೆಯಂ
ದಿನದಿನಕೆ ತುಂಬಿಬರುತಿಹ ಲಿಂಗ ತೇಜಮಂ
ಮನಗಂಡು ಮುದಗೊಂಡು ನಿಂದಿಹರ್ ಗುರುವರರ್ !

CC-0. Jangamwadi Math Collection. Digitized by eGangotri

ಶರಣಪ್ಪಿಗಂ ತಂಪೆ ಮೇಣಾತ್ಮಾಯಿ ಬಸವಾರ್ಯರ್
ಮೇಣು ಬಂಧು ಬಳಗಮಖಂಡೇಶ್ವರ ವಚನಂ
ತಾಪಾಗಿಹವು ಸತ್ಯಪಥನಿರತ ಶರಣಪ್ಪಿಗೆ ;
ಬಾಳ ಬೆಳಗಾಗಿತ್ತು ಗುರುವಿನನುಭವಾಮೃತಂ ! ೧೯೦
ಮೊದಲಿದ್ದ ಶರಣಪ್ಪಿಯಿಂದಿಲ್ಲ, ಹೊಸತಿರುವು–
ಹೊಸ ಹರವು, ಮತ್ತಮಾ ಹೊಸ ಹೊಳಹು ಹೊಸ ಸಳುಹು
ತೋರತೊಡಗಿದವು ಸತ್ಯ ಸಾಧನ ಬಾಳಿನೊಳ್ !
ತನುವು ಗುರಲಿಂಗತನು, ಮನಂ ಗುರುಲಿಂಗಮನಂ ;
ಧನಂ ಗುರುಲಿಂಗಧನಮಾಗಿಹವು ಶರಣೆಯೊಳ್ !
ಮತ್ತೆ ಶರಣಪ್ಪಿಯಾ ಪ್ರಾಣಮದು ಗುರುಪ್ರಾಣಂ,
ಅಂಗಕಳೆ ಗುರುಲಿಂಗಕಳೆಯಾಗಿ ತೊಳಗಿಹವು.

ನಂತರಂ ಗುರುದೇವನಾಜ್ಞೆಯಿಂ ಸರ್ವಭೂ-
ಷಣರ ಕೈವಲ್ಯ ಕಲ್ಪವಲ್ಲರಿ, ನಿಜಗುಣರ
ವಿವೇಕ ಚಿಂತಾಮಣಿ ಗ್ರಂಥಂಗಳ ಪರಿಸುವರ್ ೨೦೦
ಪಡಿದಿನಂ ; ಪರಮಸುಜ್ಞಾನಮಂ ಗಳಿಸುವರ್ !

ಕಂಬಳಿಯ ಹಾಳಿನೊಳ್ ಶರಣಪ್ಪಿ ಗುರುದೇವ
ನಾಜ್ಞೆಯಿಂದಯ್ದುಮನೆ ಬಿಕ್ಷಮಂ ತಂದೊಂದು
ಹೊತ್ತಿದೊಳ್ ಸ್ವೀಕರಿಸಿ ತೃಪ್ತಿಯಂ ಪಡುತಿರ್ದರು.
ಓ ಅಮ್ಮ ಓ ಅಮ್ಮ ಓ ಅಮ್ಮ ಎಂದು ತಾಯ್
ಮನೆ ಮನೆಗೆ ಮೂರುಸೂಳ್ ಕೂಗುತಿರ್ದರಲ್ಲದೆ
ಮರಳಿ ಕೂಗುತ್ತಿರಲಿಲ್ಲ ; ಮನೆ ಮುಂದಿರುತ್ತಿರಲಿಲ್ಲ
ಕೂಗದನ್ನ ಪೂರ್ಣೆಯ ಸಂಕೇತವಾಗಿತ್ತು ;
ನೀಡುವಾ ಮನೆಯೊಡತಿ ಅನ್ನಪೂರ್ಣೆಯೆಂಬುವ ೨೧೦
ಸದ್ಭಾವವಾಗಿತ್ತು, ನೀಡಿರ್ದ ಪದಾರ್ಥಮು–
ದು ಪ್ರಸಾರವೆಂದೆನಿಸುತಿತ್ತು ಶರಣಪ್ಪಿಗೆ !
ಗುರುದೇವ ವಿಧಿಸಿರ್ದ ನಡೆಯಲ್ಲಿ ನುಡಿಯಲ್ಲಿ
ಶರಣಪ್ಪಿ ನಿಚ್ಚ ನಿಚ್ಚದೊಳ್ ನಸು ತಪ್ಪಲಿಲ್ಲ,
ಗುರುವಾಣಿ ಶಿವವಾಣಿಯಾಗಿ ಪರಿಣಮಿಸಿತ್ತು ;
ಗುರುಕಾಯ ಶಿವಕಾಯವಾಗಿ ಪರಿಣಮಿಸಿತ್ತು ;
ಗುರುಮನಂ ಪರಮಮುನಿಮನವಾಗಿ ಪರಿಣಮಿಸಿತ್ತು ;

CC-0. Jangamwadi Math Collection. Digitized by eGangotri

ಗುರುವ್ರತದೊಳ್ ನಿರತಳಾಗಿಪ್ಪ ಶರಣಾರ್ಪ್ಪೆಗೆ !
ಗುಡದೂರ ಗುರುದೇವ ನಡೆದಂತೆ ನಡೆಯುವಳ್
ಗುಡದೂರ ಗುರುದೇವ ನುಡಿದಂತೆ ನುಡಿಯುವಳ್
ಗುಡೂದೂರ ಗುರುದೇವ ಬಗೆದುದಂ ಬಗೆಯುವಳ್
ಗುಡದೂರ ಗುರುದೇವ ನೆನೆದುದಂ ನೆನೆಯುವಳ್
ಗುಡದೂರ ಗುರುದೇವನ ಪಡಿನಳಲಾಗಿಹಳ್ !
ಶರಣಾರ್ಪ್ಪೆ ಶಿವೆಯಾಗಿ ಕಂಡಳೂರ ಜನರ್ಗೆ
ಶರಣಾರ್ಪ್ಪೆಯನೆಂದಿಗು ಮರೆಯದಂತಾಗಿಹರು.

ಓ ತಾಯಿ, ತಾವಿನ್ನು ಮನೆಮನೆಗೆ ಭಿಕ್ಷೆಗೆ
ಬಾರದಿರಿ, ನೀವಿದ್ದೆಡೆಗೆ ನಾವೆ ಎಡೆ ತರುವೆ–
ವೆಂದರಿಕೆ ಮಾಡುತಿರೆ ಮಾತೆ ತಾನೊಪ್ಪುವಳ್
ಭಕ್ತಿಯಿಂದೆಡೆ ತಪ್ಪದೆ ತರುತಿರ್ಪರಿಂದಿಗುಂ !
ಸ್ವಾನುಕೂಲಂಗಳಿರುತಿರಲು ಬಿಡಲಿಲ್ಲ
ತಂದುದಂ ಮನೆಮಕ್ಕಳೆಂಜಲೆಂದೆಣಿಸುತಿರ
ಲಿಲ್ಲ ಗುಡದೂರ ಗುರುವಿನಾಜ್ಞೆಯಿಂದಾಗಿ
ಭಾವಿಸಿರ್ದರ್ ಭಿಕ್ಷಾನ್ನಮಂ ಪರಮಾನ್ನಮೆಂದು ತಾವ್ !
ಭಸ್ಮಲಿಂಗಾರ್ಚನ ಪ್ರಭಾವದಿಂ ಪರಿಣತರ್
ತಾವಾಗಿ ಕಾಯಕರಣೇಂದ್ರಿಯಂಗಳ ಗುಣ–
ಧರ್ಮಂಗಳನುರುಹಿ ಭಸ್ಮಮಂ ಮಾಡಿಪರ್
ಅಂಗದೊಳ್ ಲಿಂಗಕಳೆ ತಾಂಕುಂಬಿ ಬಂದಿತ್ತು
ಇದಕಂಡು ದೊಡ್ಡ ಬಸವಾರ್ಯ ಗುರುದೇವನು.
ಸತ್ಯಶಿವ ಶರಣಾರ್ಪ್ಪೆಗೆ ಕ್ರೈವಿಧ ದಿಕ್ಷೆಯಂ
ತ್ರಿವಿಧಾಂಗಗಳ್ಗಿ ಕರುಣಿಸುವರಾರಿಗಂಜದೆ ;
ಸಾಮಾಜಿಕ ಬಹಿಷ್ಕಾರದ ಬೆದರಿಕೆಗಳುಕದೆ !
ಪೂರ್ವ ಜನ್ಮವಳಿದು ಪುನರ್ಜಾತಳಾಗಿಹಳ್
ಭವಹರಿದು ಭಕ್ತಿಯೆಂದೆನಿಸಿಹಳ್ ಶರಣಾರ್ಪ್ಪೆ
ತನುತ್ರಯದ ಮಲತ್ರಯ ಮಾಣ್ದಾವು ದೀಕ್ಷೆಯಿಂ ;
ಕ್ರಿಯಾದೀಕ್ಷೆಯಿಂ ಕಾಯಭಾವಮುದಳಿಯಿತು
ಮಂತ್ರಮಯ ದೀಕ್ಷೆಯಿಂ ಮಾಂಸಪಿಂಡವಳಿದು
ಮಂತ್ರಮಯ ಪಿಂಡಮದು ತಾನಾಯ್ತು ಮತ್ತಮಾ
ವೇಧಾತ್ಮ ದೀಕ್ಷೆಯಿಂ ಕಾರಣತನು ಕರಗಿತ್ತು,

CC-0. Jangamwadi Math Collection. Digitized by eGangotri

ಪರಿವಿಡಿದು ತ್ಯಾಗಾಂಗ ಭೋಗಾಂಗ ಯೋಗಾಂಗ-
ಮೆನಿಸಿಹವು ಪರಿಭಾವಿಸೆ ಶಿವ ಶರಣಪ್ಪೆಯೊಳ್ !
ಕರುಣಿಸಿವ ಕರದಿಷ್ಟಮಂ ತಾಯಿ ಕರದೊಳಗೆ
ಧರಿಸಪಲೆ ಶಿರಸ್ಥಲವಲ್ಲಿರದೆ ಧರಿಸಿಹಳ್
ಶಿರವ್ರತಧಾರಿಣಿಯು ತಾನಾಗಿಹಳ್ ಬಿಡದೆ !
ಗುರು ಮುಟ್ಟಿ ಗುರುದೇವಿಯಾದಳಯ್ ಶರಣಪ್ಪೆ
ಬೀಜದಂತಂಕುರಮೆಂಬ ಮಾತು ಸುಳ್ಳಲ್ಲ.
ಜ್ಞಾನಕ್ಕೆ ಶೀಲಕ್ಕೆ ಮೇಲ್ಕೀಳು ಮಾತುಂಟೆ ?
ರವಿಯಗ್ನಿಗಳ್ಕಿ ಲೇಸುಕೇಡಿನ ಸೋಂಕುಂಟೆ ?
ನಂಬಿದ್ದ ಶಿಷ್ಯಂಗೆ ಗುರುಕರುಣೆ ಫಲಿಸುಗುಂ
ತುಂಬಿ ತುಳುಕುಗುಂ ಚಿತ್ಕಳಾಮೃತರಸಮದು ;
ಹೆಗಲಿರುಳು ಗಳಿಸುವನ್ ಜ್ಞಾನ ಸಂಪತ್ತಿಯಂ
ಊಟೆ ನಿದ್ದೆಗಳಾಸೆಗೊಳಗಾಗದಂತೆಸೊಲ್ !
ಬೆಳಗುವುದು ಗುರುವೆಂಬ ಚಿಜ್ಜ್ಯೋತಿ ಶಿಷ್ಯನೋಳ್
ಕರಿಗೊಳ್ಳುವುದು ಕ್ರಿಯಾಲಿಂಗಮದು ಹಸ್ತದೊಳ್
ಕರಿಗೊಳ್ಳುವುದು ಪ್ರಾಣಲಿಂಗಮದು ಚಿತ್ತದೊಳ್
ಕರಿಗೊಳ್ಳುವುದು ಭಾವಲಿಂಗಮದು ಭಾವದೊಳ್ !

ಮಾದಾರ ಚನ್ನಯ್ಯ ಅಂಬಿಗರ ಚೌಡಯ್ಯ
ಉರಿಲಿಂಗ ಪೆದ್ದಿಗಳ ತೆರದಂತೆ ಶರಣಪ್ಪೆ
ಲಿಂಗವಂತಿಕೆಯನಂಗವಿಸಿಕೊಂಡಳಂಗದೊಳ್ ;
ಸತ್ಯಶಿವ ಶರಣಪ್ಪೆ ತಾನಾಗಿ ಶೋಭಿಪಳ್ !
ಇಷ್ಟಲಿಂಗವ ಧರಿಸಿ ಕಷ್ಟ ಜನ್ಮವ ಕಳೆವಳ್
ಶಿಷ್ಟಶಿವ ಶರಣಪ್ಪೆ ತಾನಿರದಲಾಗಿಹಳ್ ;
ಅಷ್ಟಾವರಣದೊಳಿರದೆ ತಳೆದಳ್ ನಿಷ್ಠೆಯಂ
ಷಟ್‌ಸ್ಥಲದ ಸಜ್ಜಲದೊಳೀಜಿದಳ್ ಸಂತತಂ !
ನಾವೊರದ "ಜೀವನ ಸಿದ್ಧಾಂತ" ಮಂ ಪಠಿಸುತಿರ್ದರ್
ಮೇಣು "ಶೀಲಸಂಪಾದನೆಯನೋದುತಿರ್ದರ್ !
ತಾಯ್ಗೆ ಗುರು ತೆತ್ತಿಗಂ, ಲಿಂಗ ಮದುವಣಿಗಂ,
ತಾನೆ ಮದುವಳಿಗೆಯಾದಳಯ್ ಭಕ್ತರೆ ಬಂಧು
ಬಳಗವಾಯ್ತು ; ಬಗೆಯಲೊಳ ಮದುವೆ ತಾನಾಯ್ತು ;
ಕಾರಣಿಕ ಶರಣಿಗೆ ಹೊರ ಮದುವೆಯ ಮಾತೇಕೆ ?

CC-0. Jangamwadi Math Collection. Digitized by eGangotri

ಶರಣಪ್ಪೆ ವಿಮಲೆ ಮೇಣು ಸುಶೀಲೆ ಚಿಕ್ಕಳೆ ;
ಪರಮಾರ್ಥದನುಭಾವ ಸರಸ ಚಿಂತನಲೋಲೆ ! ೨೮೦
ಶರಣಾಯಿ ನಿರಾಡಂಬರ ಜೀವಿ ನಿಜಭಾವಿ
ನಿರಾಮಯ ಹೃದಯಿ ಶರಣಾಗತರ ಸಂಜೀವಿ !
ಪರಿಪೂರ್ಣ ಚೈತನ್ಯ ಜೀವನಂ ತಾಯಿಯದು,
ಸತ್ಯಶಿವ ಲಾವಣ್ಯ ಜೀವನಂ ಚಿನ್ಮಯಿದು,
ದೀಪಕ್ಕೆ ದೀಪಮಂಟಿಸಿದಂತೆ ತಾನಾಯ್ತು
ರೂಪದೊಳ್ ಸ್ವರೂಪಂ ಬೆಳಗಿತ್ತೈ ಬೆಳ್ಳನೆ !

ಸಂಸ್ಕಾರದಾವಿಷ್ಕಾರವೆಂದೊಡೆ ಗುರುವರನ
ಕರುಣರಸ–ಶಿಷ್ಯಪ್ರೇಮರಸಗಳ ಸಮರಸ !
ಅಧ್ಯಾತ್ಮಜೀವನದೆ ಸಂಪ್ರಾಪ್ತಮೇಕಸ್ವಾ–
ಮ್ಯಮಿರ್ವದೊಳ್ನ್ಯೋನ್ಯದಿಂ ಸ್ಥಾಪಿತಮಕ್ಕು ! ೨೯೦
ತನ್ಮಾತ್ಮ ವಿಕಾಸಕೆ ಕಾರುಣ್ಯಮಾಧಾರ ;
ತ್ಯಾಗಯೋಗಂಗಳ್ಗೆ ಭಕ್ತಿರಸಮಾಧಾರ !
ಚಿತ್ತ ಶುದ್ಧಿಗೆ ಮೇಣು ಮಾನಸಿಕ ಸ್ವಾಸ್ಥ್ಯಕ್ಕೆ
ಗುರು ಶಿಷ್ಯ ಸಂಬಂಧ ಮಾಧಾರಮಪ್ಪುದೈ !
ಸದ್ಭಾವ ಸ್ಪಂದನಂ ಸದ್ಬುದ್ಧಿವರ್ಧನಂ
ಸದ್ಗುರು ಕಾರುಣ್ಯ ಸಂಸ್ಕಾರದಿಂದಹವು.
ಪೃಥ್ವಿಯಿಂ ಸಲಿಲಕ್ಕೆ ಸಲಿಲದಿಂ ತೇಜಕ್ಕೆ,
ತೇಜದಿಂದನಿಲಕ್ಕೆ, ಅನಿಲದಿಂ ವ್ಯೋಮಕ್ಕೆ,
ವ್ಯೋಮದಿಂದಾತ್ಮಕ್ಕೆ ಸಂಬಂಧಮಪ್ಪುದು ;
ಸ್ವಾತ್ಮಮದು ಪರಮಾತ್ಮನೊಳ್ ಪರವಶಮಪ್ಪುದು ; ೩೦೦
ಅಂದೊಂಡಂ ಜೀವಾತ್ಮ ದೇವಾತ್ಮನಾಗುವನ್ !
ಗುರುವರ್ಯನೋಂಕಾರ ಧ್ವನಿಯದು ಭಾವೋ–
ನ್ನತಿಯಿಂಕೂಡಿ ಮೊಳಗುಗುಂ ಶಿಷ್ಯ ಹೃದಯದೊಳ್ !
ಕೇಟ ಕುಂಡಲಿ ನ್ಯಾಯದಂತೆವ್ಯೊಲ್ ಸ್ಪಂದಿಸಿ
ಜನ್ಮ ಪರಿವರ್ತನಂಗೈಯುತ್ತ ಸೂಕ್ಷ್ಮಂದಿ !
ಕೃತಕವಹ ಬಾಳ್ನಿಂ ಸಹಜವಹ ಬಾಳ್ಗೆ
ಬಪ್ಪನಯ್ ಸಚ್ಛಿಷ್ಯ ಕಾರುಣ್ಯಶಕ್ತಿಯಿಂ !
ಪಶುಜೀವನಂ ತೊಲಗಿ ಮನುಜ ಜೀವನಮಹುದು ;

CC-0. Jangamwadi Math Collection. Digitized by eGangotri

ಕರಾಳತೆಯು ಕಳೆದು, ನಿರಾಳತೆಯು ನೆಲಸುವುದು.
ಅಂಗಕ್ಕೆ ಲಿಂಗದೊಡನೆ ವಿವಾಹಂ ನೋಡಲ್ಕೆ
ಗುರು ತಂದೆ ಗುರು ಮಾವ ವಧೂವರರಿಗಿರ್ವರ್ಗೆ !
ಸಂಸ್ಕಾರ ಕ್ರಿಯೆಯಲ್ಲಿ ನೊಸಲಿಂಗೆ ವಿಭೂತಿ,
ಕೊರಳಿಂಗೆ ರುದ್ರಾಕ್ಷಿ, ಎದೆಗೆ ಲಿಂಗಮದು ಮೇಣ್
ಮನಸಿಂಗೆ ಮಂತ್ರಂ ಪೆದಳಿಂಗೆ ಹಸ್ತಸ್ಪರ್ಶ
ಮುಂಗೈಗೆ ಕಂಕಣಂ ಶೃಂಗಾರಮಾಗಿಹವು.
ಅಜ್ಞಾನ ಬಂಧನಕೆ ಬೆದರಿ ಗುರುಬಳಿಗೆ ಬರಿ
ತಂದೀವನ್ ಶಿರದರಮನೆಯ ಕಳೆಯಂ ಕರಕೆ !
ಲೌಕಿಕ ವಿವಾಹದಿಂ ಬಹುದು ಮನೆ ಸಂಸಾರ ;
ಅಲೌಕಿಕ ಮದುವೆಯಿಂ ಬಹುದು ಮನಸದ ಸಂಸಾರ !
ಸಂಸಾರದೊಳ್ ಮುತ್ತಿಬರ್ಪವು ತಾಪತ್ರಯ ;
ಸಂಸ್ಕಾರದೊಳ್ ಮುತ್ತಿ ಬರ್ಪುದೈ ಗುರುದಯ.

ಗುಡಮೂರ ಗುರುದೇವ ಕರುಣಿಸಿಹುದು ಸರಿಯೆಂದು,
ಅಪವಾದ ಬರೆ ನಾನೆಮುರಿಸಬಲ್ಲೆನೆಂದು
ಕಂದಗಲ್ಲ ಪರ್ವತ ಶಾಸ್ತ್ರಿಗಳ್ ಜೆಂಬಲಿಸೆ
ತಾಯೆದೆಯ ಮೇಲ್ಧರಿಸ ತೊಡಗಿಹರ್ ಲಿಂಗಮಂ !
ಗುಡದೂರ ಗುರುವರಂ ರೂಹಿಸಿಹರಾದರ್ಶ–
ವ್ಯಕ್ತಿಯಂ ಶಕ್ತಿಯಂ ಭಕ್ತಿಭಾವ ಭರಿತೆಯಂ ;
ಬೆಳಗಿಸಿಹರಿಪ್ಪತ್ತನೇಯ ಶತಮಾನದೀ.
ವೀರಶೈವ ಶಿವಶರಣ ಸಂವಿಜ್ಜ್ಯೋತಿಯಂ !
ಅಂಗಮಿದು ಲಿಂಗವೋ, ಲಿಂಗಮದು ಅಂಗವೋ
ಅಂಗ ಲಿಂಗಗಳೆರಡು ಮೇಣ್ ಸಂಗಸಮರಸವೋ ?
ಅಪ್ಪವಿನೊಳುಪ್ಪು, ಕಸ್ತೂರಿಯೊಳಗೆ ಕಪ್ಪು,
ಜ್ಯೋತಿಯೊಳು ಕಪ್ಪುರವು, ಮೇಣ್ಬಾಳಿಯೊಳ್ಕುಂಪು,
ಬಾನೊಳುಲಿಯೊಂದಾದವೊಲಂಗಲಿಂಗಗಳಿರ್ದವು ;
ಪ್ರಾಕೃತಿಕ ಭಾವದೊಳ್ ನಾನಿರಲಿಲ್ಲ ಶರಣಪ್ಪೆ
ಸುಟ್ಟ ಕಟ್ಟಿಗೆಯಂತೆ ಪೂರ್ವಾಶ್ರಯವಳಿದಿತ್ತು ;
ತೊಟ್ಟ ಬಟ್ಟ ಹಣ್ಣೆನೊಲ್ ಹುಟ್ಟುಗೆಟ್ಟಿದ್ದಳವ್ವೆ,
ನೆಟ್ಟನೇ ಇಷ್ಟಲಿಂಗ ಸ್ವಾಯತವಾಗಿಹಳ್
ಶ್ರೇಷ್ಠಗುರು ಕಾರುಣ್ಯ ಪರುಷಮಣಿಸೋಂಕಿನಿಂ !
ಚಿಲ್ಲಿಂಗ ಜ್ಯೋತಿಯದು ಮುಟ್ಟಿರ್ದ ಬಳಿಕಮೀ

CC-0. Jangamwadi Math Collection. Digitized by eGangotri

ಸಲ್ಲದಿಹ ಜಾತಿಸೂತಕಕಳ್ತಲೆಯುಳಿವುದೇನ್ ?
ಲಿಂಗದಿಂದಂಗಕ್ಕೆ ಮೇಣಂಗದಿಂ ಲಿಂಗಕ್ಕೆ
ತುಂಗ ಮುಂಗಳ ಕಳೆಯೇರಿ ಕಂಗೊಳಿಸಿರ್ದವು.
ವಿಶ್ವದೊಳಗಾರು ಸಾಧಿಸಬಾರದಂತಿರ್ಪ,
ವಸ್ತುವಂ ಸಾಧಿಸಿ ತಂದು ಕೊಡುವನ್ ಶ್ರೀಗುರು ;
ವಿಶ್ವದೊಳಗಾರು ಭೇದಿಸಬಾರವಂತಿರ್ಪ,
ವಸ್ತುವಂ ಭೇದಿಸಿ ತಂದೀವಂ ಶ್ರೀಗುರು.
ವಿಶ್ವದೊಳಗಾರ್ ನೋಡಬಾರದಂತೆವೊಲಿರ್ಪ
ವಸ್ತುವಂ ನೋಡೆಂದು ತಂದು ಕೊಟ್ಟಂ ಶ್ರೀಗುರು ;
ವಿಶ್ವದೊಳಗಾರ್ ಹಾಡಬಾರದಂತೆವೊಲಿರ್ಪ ೩೫೦
ವಸ್ತುವಂ ಹಾಡೆಂದು ತಂದುಕೊಟ್ಟಂ ಶ್ರೀಗುರು.
ವಿಶ್ವದೊಳಗಾರ್ ಕೂಡಬಾರದಂತೆಸ್ಪೊಲಿರ್ಪ
ವಸ್ತುವಂ ಕೂಡೆಂಮ ತಂದುಕೊಟ್ಟಂ ಶ್ರೀಗುರು.
ಗುರುವರನ ಮಹಿಮೆಯಂ ಧರಣಿಯೊಳ್ ಪೇಳಲಳವೆ ?
ಗುರುವರನ ಹಿರಿಮೆಯಂ ಸರಸುರರೊಳ್ ಪೊಗಳಲಳವೆ ?
ಕರಸ್ಥಲದೊಳ್ಕೂರ್ತ್ತಿಗೊಂಡು ಬೆಳಗುತಿರ್ಪ
ಪರಬ್ರಹ್ಮವಂ ಕಂಗಳ ತುಂಬಿ ನೆರೆ ನೋಡಿ,
ಕೈಮುಟ್ಟಿ ಪೂಜಿಸಿ, ಜಿಹ್ವೆ ತುಂಬಿಕೊಂಡಾಡಿ,
ಮನತುಂಬಿ ಅಪ್ಪಿ ಅಗಲದೆ ಇಪ್ಪಳ್ಳಿ ತಾಯಿ ;
ಬಗೆದುಂಬಿ ಬೆರಸಿ ಬೇರಿಲ್ಲದಂತಿಹಳ್ ತಾಯಿ !
ಗುರುಕೊಟ್ಟ ಲಿಂಗದಲ್ಲಿ ಸಮರಸವಾಪಡೇನ್ ೩೬೦
ಗುರುವೇವನಲ್ಲಿ ಸಮರಸಂ ತಾನಾಪಂತೆ ;
ಗುರುವರಂ ಬೇರಲ್ಲ. ಲಿಂಗಮದು ಬೇರಲ್ಲ ;
ಬೀಜ ಭೂಜಕ್ಕೆ ದೀಪದೀಪ್ತಿಗೆ ಬೇರುಂಟೆ ?
ಕಟ್ಟಿಗೆಯ ಸುಟ್ಟು ತನ್ನಂತೆಸಗುವುದೆ ಅಗ್ಗಿ
ಭವಿತನಂ ಮೆಟ್ಟಿ ಭಕ್ತನಾಗಿಸುವುದೇ ದೀಕ್ಷೆ !
ಅರಿವಿತ್ತು ಮರವೆಯಂ ಕಳೆವುದೇ ಗುರುದೀಕ್ಷೆ !!
ತಾಯಿಗೆ ಗುರುವಚನಂ ನಿಗಮಾಗಮ ವಚನಂ,
ತಾಯ್ಗೆ ಗುರು ದರ್ಶನಂ ಪರಮಾತ್ಮ ದರ್ಶನಂ ;
ಗುರುವಿಂಗೆ ಕಾಯಮುಂ, ಲಿಂಗಕ್ಕೆ ಚಿತ್ತಮುಂ ;
ಜಂಗಮಕೆ ಭಾವಮುಂ ಸಮರ್ಪಿಸಿರ್ದಳ್ ತಾಯಿ ! ೩೭೦

CC-0. Jangamwadi Math Collection. Digitized by eGangotri

೭. ಪಂಪಾಕ್ಷೇತ್ರ ಯಾತ್ರೆಯೊಳ್ ಶ್ರೀಗುರುದರ್ಶನಂ!

ಕ್ಷೇತ್ರಯಾತ್ರೆಯ ಬಯಸಿದವಳಲ್ಲ ಕನಸಿನೊಳ್
ತೀರ್ಥಯಾತ್ರೆಯ ಕೋರಿದವಳಲ್ಲ ಮನಸಿನೊಳ್
ಗುರುವರನೆ ಮಹಂತ ಕ್ಷೇತ್ರಮೆಂದು ಮತ್ತಂ
ಗುರುವರನ ಚಿಚ್ಚರಣ ತೀರ್ಥವೇ ಜ್ವಲಂತ
ಮಹತ್ತೀರ್ಥವೆಂದು ತಿಳಿದಿರ್ದಳಾ ಶರಣಪ್ಪೆ ;
ತಿಳಿದಂತೆ ಫಲವಿಡಿದು ನಡೆಯುತ್ತಿರ್ದಳಪ್ಪೆ !

ಇಂತಿರುತ್ತಿರಲೊರ್ಮೆ ಕಂಬಳೀಹಾಳದಾ
ಹಿರಿಮಠದ ಬಸವಮ್ಮನೆಂಬವರ್ ಹಂಪೆಗೆ
ಹೋಗೋಣವೆಂದೊತ್ತಾಯಂದಿಡೆ ಕರೆಯುವರ್ ;
ಶರಣಪ್ಪೆ ತಾನಿದಕ್ಕೆಳ್ಳನಿತು ಪೊಪ್ಪದಿರೆ
ಗುರುದೊಡ್ಡ ಬಸವಾರ್ಯರಿಂತೆಂದು ಪೇಳುವರ್ ;
ನಿನ್ನಂತೆ ಪಂಪಾಂಬೆ ಹುಟ್ಟಿ ಸಾವಿಲ್ಲದಿಹ
ವಿರೂಪಾಕ್ಷೇಶನಂ ವಿವಾಹವಾಗಿಹಳ್
ನೀನವಳ ದರ್ಶನಂ ಪಡೆಪೊದಲ್ ಶರಣೆಯವಳ್
ಪಂಪಾಂಬೆ ಪೆಸರಿನಿಂ ಕ್ಷೇತ್ರಮೆನಿಸಿರ್ಪುದು,
ಪಂಪಾಪತಿ ಕ್ಷೇತ್ರಾಧಿಪತಿ ತಾನಾಗಿಹನ್ ;
ಆವಳ ತಪದಿಂ ಪಂಪಾಸರಸ್ಸೆನಿಸಿಹುದಲ್ಲಿ
ಇಂತಿವೆಲ್ಲವಂ ಸಂತಸದೆ ಕಂಡು ಬಾ ಕಂದಾ !
ಇಂತೆನಲ್ ಗುರುವರಂ, ಶರಣಪ್ಪೆ ಬೆರಗಾಗಿ
ಭಯಭಕ್ತಿ ಭಾವದಿಂ ಬಿನ್ನವಿಸಿಕೊಂಡಳಂತು ;

ಎನ್ನಪ್ಪ ತಾವೆನ್ನ ಪಾಲಿಂಗೆ ಹಂಪೆಯ ವಿ-
ರೂಪಾಕ್ಷ. ಗುಡಮೂರೆ ಕಾಶಿ ಮೇಣ್ ಕಂಬಳೀ
ಹಾಳದಂ ರಾಮೇಶ್ವರಂ, ಸಜ್ಜಲ ಗುಡ್ಡವೇ
ಹರಿದ್ವಾರಂ, ನಿಮ್ಮಣುಗಿಗೆ ಹೋಹ ಹಂಬಲಮಿಲ್ಲ ;
ಹಂಪೆ ಹರಿದ್ವಾರಗಳೆಗಾಗಲಿ ಮತ್ತಾವ
ಹೊರತೀರ್ಥ ಕ್ಷೇತ್ರಂಗಳಿಗಾಗಲಿ ಹೋಗಲಾರೆ
ತಮ್ಮ ಶ್ರೀ ಪಾದಾರವಿಂದದಲ್ಲಿಯೆ ನೋಡ-
ಲ್ಕೆಯಷ್ಟಾಷ್ಟಿ ತೀರ್ಥಂಗಳುಂಟೆನ್ನೆನು ?

SRI JAGADGURU VISHWARADH
JNANA SIMHASAN JNANAMANDI
LIBRARY
Jangamawadi Math, Varanasi
Acc. No. 7953

CC-0. Jangamwadi Math Collection. Digitized by eGangotri

ಕ್ಷಮಿಸೆನ್ನ ಶ್ರೀಗುರುವೆ, ಕ್ಷಮಿಸೆನ್ನ ಓ ಪರವೆ ;
ಎಂದೆನಲ್ ಕಾರುಣ್ಯ ಗುರುವರ್ಯದಿಂತೊಂದರ್ ;

ಓ ಕಂದಾ, ಸಚ್ಚಿದಾನಂದ ಸ್ವರೂಪಳೀ
'ಇಲ್ಲಿಯೂ ನಾನಿಹೆನ್, ಅಲ್ಲಿಯೂ ನಾನಿಹೆನ್ ;
ಅಲ್ಲಿಲ್ಲಿ ಎಂಬುದೇ ನೀಂ ಸ್ಪೋಗಿ ಬಾರಮ್ಮ,'
ಎಂಬನುಗ್ರಹವಪ್ಪಣೆಯನ್ನಿಯುತ್ತೊಡನೊ–
ಳ ಬಳ್ಳಾರಿಯ ಶಾಸ್ತ್ರಿ ಮಲ್ಲಣ್ಣ ಮತ್ತಮಾ
ಬಸವಮ್ಮ ಜತೆಗೂಡಿ ಕಳುಹಿದರ್ ಹಂಪೆಗೆ
ಸತ್ಯಶಿವ ಶರಣವ್ವೆಯಂ ದೃಷ್ಟಿ ದಿವ್ಯೆಯಂ !
ಶರಣವ್ವೆ ಪೋಗಿಹಳ್ ಗುರುದೇವನಾಜ್ಞೆಯಿಂ
ಹಂಪೆ ಯಾತ್ರೆಗೆ ಕೊಂಪೆಯೂರಿಗೆ ಮತ್ತಮಾ
ಕನ್ನಡ ಸಾಮ್ರಾಜ್ಯಮೆನಿಸಿರ್ದ ವಿಜಯನಗರಿಗೆ

ಸಿಂತೊರ್ಮೆ ವೈಭವದಿ ಮೆರೆದಿರ್ದ ಮೇಣ್ಮೈತಿ–
ಹಾಸಿಕ ಚರಿತ್ರದಿಂ ಕೂಡಿರ್ದ ಹಂಪೆಗೆ ;
ಚಲುವಾಂತ ತೊರೆಬೆಟ್ಟ ಮರಬಳ್ಳಿಗಳ ಕಾಣುತ್ತ
ನಲವಿಂದ ಪುಣ್ಯಕ್ಷೇತ್ರ ತೀರ್ಥರಂಗಳಂ ದಾಟುತ್ತ
ಪುರಾತನ ಪುಣ್ಯಕ್ಷೇತ್ರಮೆನಿಸಿರ್ದ ಹಂಪೆಗೆ
ತೆಂಕಣದ ಕಾಶಿಯೆಂದು ಪೆಸರಾಂತ ಕ್ಷೇತ್ರಕೆ !

ಮೊದಲ್ಕಂಡರ್ ಭದ್ರಶಿಲಾಮಯ ತೀರ್ಥಮಂ
ಮೂಡಣದ ದಿಕ್ಕಿನೊಳಗಿರ್ದ ಪಾವನತಮಂ ;
ಮೇಣ್ ಶಿವಾರ್ಚನಾಸಕ್ತಸಹ ನಂದೀಶನಂ
ಕಂಡು ನಮಿಸಿ ನುತಿಸಿ ನಚ್ಚಿನಿಂದರ್ಚಿಸಿ
ಮುಂದು ಮುಂದಕೆ ಸಾಗಿ ವಿರೂಪಾಕ್ಷನಂ ಕಂಡು
ಕ್ಷೇತ್ರಾಧಿಪತಿಯೊಳ್ ವಿಶಿಷ್ಟತೆಯ ಮನಗಂಡು ;
ಪಂಪಾಂಬೆಯಂ ಮೇಣು ವೀರೇಶನಂ ಕಂಡು
ನಂತರಂ ಮಾತಂಗ ಪರ್ವತವನೇರಿ ನೋಡಿ
ಗುರುದೊಡ್ಡ ಬಸವಾರ್ಯರ್ಯಂ ಕಾಂಬಳಾತಾಯಿ
ಹಂಪೆಯಾ ಯಾತ್ರೆಯಿಂದೂರಿಗೈತರುತಿರೆ
ಗುರುದೊಡ್ಡ ಬಸವಾರ್ಯರ್ ಕೇಳಿಹರ್ ತಾಯಿಯಂ
ಓ ಕಂದಾ, ಹಂಪೆಯೊಳ್ ಕಂಡುದೇಂ ಪೇಳೆಂದು ;

CC-0. Jangamwadi Math Collection. Digitized by eGangotri

ಪಂಚಕ್ರೋಶಾಧಿಪತಿ ವಿರೂಪಾಕ್ಷನಂ ಕಂಡೆ
ಹೇಮಕೂಟ ಮತಂಗ ಕೂಟಂಗಳಂ ಕಂಡೆ
ಭದ್ರೆಯಂ ತುಂಗಭದ್ರೆಯಂ ರುದ್ರೆಯಂ ಕಂಡೆ
ಕೃತುತೀರ್ಥ ಕಲ್ಯಾಣ ತೀರ್ಥಂಗಳಂ ಕಂಡೆ
ಸಾಂಬತೀರ್ಥ ಗೌರೀಮುಖತೀರ್ಥ ಕುಮಾರ
ತೀರ್ಥ ಹರಿಣ ತೀರಾಗ್ನಿ ತೀರ್ಥಂಗಳಂ ಕಂಡೆ
ಕಪಿಧ್ವಜರಾ ರಾಜಧಾನಿಯಂ ಕಿಷ್ಕಿಂಧ
ಮುಂ ಕಿಷ್ಕಿಂಧಾದ್ರಿಯಂ ಕಂಡೆನಾಂ ಶ್ರೀಗುರುವೆ !
ಮುಂತೆ ಶ್ರೀ ಚಂದ್ರಗುಂಡ ಶಿವಾಚಾರ್ಯರಿಂದೆ
ಸಂಸ್ಥಾಪಿತಮಾಗಿ ಮಿಗಿಲಾಗಿ ಪೆರೆಯುತಿಹ
ಉದ್ದಾನ ವೀರಭದ್ರನ ಮೂರ್ತಿಯಂ ಕಂಡೆ–
ಮೇಣು ಜಗದುದ್ಧಾರ ಕೀರ್ತಿಯಂ ಮುಂಗಂಡೆ ;
ಆರ್ಯ ದ್ರಾವಿಡಸಮನ್ವಯಾಚಾರ್ಯನಂ ಕಂಡೆ
ಕಣ್ಣಡಿಕ ಪೆಸರಿನಿಂ ಕನ್ನಡಿಗರ ಮೂಲ–
ಪುರುಷನೆಂಬ ಪೆಸರುಳ್ಳವಂ ಕಂಡೆ ಶ್ರೀಗುರುವೆ !
ಕಂಡೆಲ್ಲರೊಳ್ ನಿಮ್ಮ ಪಾದವಂ ನೆರೆಕಂಡೆ !
ಎಂದು ಮನದಂದು ಶರಣವ್ವೆ ಪೇಳ್ವುದಂ ಕೇಳಿ
ಬಗೆಸಂದು ನಗೆಸಂದು ನಿಂದಿಹರ್ ಗುರುವರರ್ ;
ಮತ್ತಮಾ ಹರ್ಷನಿರ್ಭರದಿಂದೆ ತಾವುರ್ಕಿ
ತಮ್ಮವರ ಹಸ್ತಮಂ ಮಸ್ತಕದ ಮೇಲಿರಿಸಿ
ಹವ್ವನೇ ಹರಿಸಿಹರ್ ಕರಕಂಜ ಜಾತೆಯಂ
ವಿಶ್ವಜನ ಮಾತೆಯಂ ವಿತತ ವಿಖ್ಯಾತೆಯಂ !

ಹೊರಗಣೇ ಹಂಪೆಯಂ ಕಂಡು ಬಂದವಳಲ್ಲ
ತನ್ನೊಳಗಣ ಪಂಪಾಶಕ್ತಿಯಂ ಕಂಡಿಹಳ್
ತಾನಮೃತತ್ವಮದಮಾರೊಳಗಿಲ್ಲ ಪೇಳ್ ?
ತಿಳಿಯಲ್ಕೆ ಪಂಪಾಂಬೆ ಸಾಮಾನ್ಯ ಸ್ತ್ರೀಯಲ್ಲ ;
ತಿರೆಯೊಳಗಣ ದೀನದಲಿತರಪುದ್ಧರಿಸಬಂದ
ಸುಧಾಮಯಿ ಸುವರ್ಣಮಯಿ ಸರ್ವಾತ್ಮದಯಾಮಯಿ !
ಸೃಜಿಸಿಹಳ್ ನಾಡಿನೊಳ್ ತಾಂ ಸುವರ್ಣಯುಗಮಂ
ಸುಧಾಮಯ ವೃಷ್ಟಿಯಂ ಸೌಶೀಲ್ಯ ದೃಷ್ಟಿಯಂ
ಸರ್ವಜನ ತುಷ್ಟಿಯಂ ಮತ್ತಮಾ ಪುಷ್ಟಿಯಂ

CC-0. Jangamwadi Math Collection. Digitized by eGangotri

ತಾಂ ಸಾಧಿಸಿಹ ತಪಃಶಕ್ತಿಯಿಂ ಪಂಪಾಂಬೆ ! ೯೦
ಪಂಪಾಂಬೆಯಂ ತಿಳಿಯೆ ಚತುರ್ಮುಖ ಬ್ರಹ್ಮನಾ
ಪೆಂವುಳ್ಳ ಮಾನಸ ಕುಮಾರಿಯೆಂತೆಂಬರಯ್ ;
ಪಂಪಾಬೆ ಸರ್ವಾಂಗ ಸುಂದರೀ ಮತ್ತಮಾ
ಪಶುಪತಿ ಮನೋಹಾರಿ, ಸಮಸ್ತ ಜನೋದ್ಧಾರಿ !
ಸ್ವರ್ಗ ಸುಖಿಗಳಂ ಮನದೊಳ್ ಬಯಸಿದವಳಲ್ಲ,
ಮರ್ತ್ಯ ಜನಗಳಂ ಕಾಪಿಡಲು ಮೆರೆತವಳಲ್ಲ ;
ಲೋಕಹಿತ ಶಕ್ತಿಯಂ ಪಡೆಯಲ್ಕೆ ಮತ್ತಮಾ
ಷಡ್ವಿಕಾರ ವಿರಹಿತ ಶಿವನ ಕೆಯ್ವಿಡಿಯಲ್ಕೆ
ತಪವನಾಚರಿಸುವಳ್ ಹೇಮಕೂಟ ಗುಹೆಯೊಳ್
ಮೊದಮೊದಲು ಮಾಡಿಹಳ್ ರಸಫಲಾಹಾರಮಂ, ೧೦೦
ಕಾಲಕಳೆದಂತೆಸಗಿದಳ್ ಪರ್ಣಾಹಾರಮಂ ;
ಮಾಡಿಹಳ್ ರೇಚಕಂ ಪೂರಕಂ ಕುಂಭಕಂ–
ಪೆಸರಾಂತಿಹ ಪ್ರಾಣಾಯಾಮತ್ರಯಂಗಳಂ,
ನಿಲ್ಲಿಸಿಹಳಂತರಂಗದೊಳ್ ಸಹಸ್ರಾರದೊಳ್
ಪ್ರಾಣಮಂ ಚಿತ್ತಮಂ ನೂರ್ಬರಿಸಮನ್ನೆವರಂ !
ಮೆಯ್ಯೊಳೆ ಬೆಳೆದತ್ತು ಪುತ್ತಮದು, ಬೆಳಗಿತ್ತು
ಪ್ರತಿಯಿಲ್ಲದಿಹ ತಪೋಜ್ವಾಲೆಯದು ಪರಿಸರದೊಳ್ !

ಸುರಗುರುವನೊಡಗೂಡಿ ಸುರರೆಲ್ಲ ಬಂದಿಹರ್
ಶಂಕರನ ಸನ್ನಿಧಿಗೆ ಬಿನ್ನವಿಸಿಕೊಂಡಿಹರ್
ಹೇಮಕೂಟದೊಳಿರ್ದ್ದ ತಪಸ್ಸಿದ್ಧಿಯಂ ಚಿತ್ತ| ೧೧೦
ಪಂಪಾಂಬೆಯ ಪರಿಣಯಕೆ ಶಿವಂಗೆ ಗಿರೀಶಂಗೆ !
ತಾನೊಪ್ಪಿ ಬಂದಿಹನ್ ಹೇಮಕೂಟ ಶಿಖರಕೆ ;
ವರಿಸಿಹಳ್ ಪಂಪಾಂಬೆ ತಾಂ ವಿರೂಪಾಕ್ಷನಂ–
ವಿಶ್ವಸಂರಕ್ಷನಂ ಶಾಂತನಂ ಕಾಂತನಂ !
ನೆಲಸಿಹಳ್ ಹೇಮಕೂಟನಾಮದ ಕ್ಷೇತ್ರದೊಳ್
ಬಂದಿಹುದು ಪಂಪಾಕ್ಷೇತ್ರಮೆಂಬ ನಲ್ವೆಸರು.
ವಹಿಸಿದಳ್ ನಾಡಜನ ಕಲ್ಯಾಣ ಕಾರ್ಯಮಂ
ಸುರಿಸಿಹಳ್ ಸುವರ್ಣವ ವೃಷ್ಟಿಯಂ ಶಕ್ತಿಯಿಂ
ನೆರಪಿಹಳ್ ನಾಮದೊಳ್ ವಿಜಯನಗರಮೊಂದಂ
ತನ್ನಯ ತಪೋವಿಜಯ ಚಿರಸ್ಮಾರಕಕ್ಕಾಗಿ ! ೧೨೦

CC-0. Jangamwadi Math Collection. Digitized by eGangotri

ಇದೆಂತಿರಲಿದರಿಂದೆ ತಾನೇನಹುದೆಮಗೆ ?
ಸತ್ಯಶಿವ ಶರಣಪ್ಪೆ ಪರಾಶಕ್ತಿ ಪಂಪಾಂಬೆ–
ಯಂ ಕಂಡು ಕಳೆಗೊಂಡಕೆಂಬುದಿದು ದಿಟಮೈಸೆ !
ಪಂಪಾಂಬೆ ದರ್ಶನಂ ಪ್ರಾತಿಭಕೆ ಕಾರಣಂ
ಹೃದಯ ಪರಿಪಕ್ವಮಾಗಿರ್ಪ ಪರಿಪೂಶರ್ಗೆ !

ಓ ಗುರುವೆ ಕಾರುಣ್ಯ ರಸಫಲ ಕಲ್ಪತರುವೆ
ಪರಿಕಿಸಲ್ ಪಯಣಕ್ಕೆ ನಾನೇಕೆ ಪೋದೆನೋ
ಪಯಣದೊಳ್ ನಾಡಿನೊಳ್ ನಡೆವುದಂ ನೆರೆಕಂಡು
ಹೃದಯದೊಳ್ ಕುದಿದಿಹೆನ್ ಪೇಳದೇ ಪೇಳುತಿಹೆನ್ ;

ಕಲಿಯುಗ ಪ್ರಭಾವದಿಂ ಪಾಳಾಗಿಹುದು ಜಗಂ ೧೩೦
ಮಲಿನ ಹೃದಯರ್ ಮಾತೃಪಿತೃ ಹಿಂಸಕರ್ ಮೇಣ್
ಸುಗುಣವಿರಹಿತರ್ ಸತ್ಕಥಾ ಶ್ರವಣರಹಿತರ್
ದುರಾಚಾರಿಗಳ್ ದುರ್ವಿಚಾರಿಗಳ್ ದುಂಪಿಗಳ್
ಪರಹಿಂಸಕರ್ ಪರಾನ್ನ ಪರಸಂಪದಾಸಕ್ತರ್
ಮದ್ಯಪಾನಿಗಳ್ ಮಾಂಸಭಕ್ಷಕರ್ ಹೆಚ್ಚಿಹರ್
ಡಾಂಭಿಕರ್ ಗರ್ವಿಗಳ್ ವೇಷಭಾಷಾಹೀನರ್
ನೀತಿರೀತಿರಹಿತರ್ ನಾಡಿನೊಳ್ ತುಂಬಿಹರ್
ಭ್ರಷ್ಟ ಜೀವಿಗಳ್ ಮೇಣ್ಮೆಗೆ ಬುದ್ಧಿ ಭ್ರಾಮಕರ್
ಮೆಣಲ್ವಾಯುಗಳಲ್ಪ ಶಕ್ತಿವಂತರಿರ್ಪರ್
ಬನದಪೂಪಾಂಗಿನಿಂ ಬಳುಕುವರ್ ಪೆಣ್ಣುಗಳ್ ೧೪೦
ಬಣ್ಣ ಬಣ್ಣದ ಸೀರೆಗಳನುಟ್ಟು ಬೆಡಗಿನಿಂ !
ಇಂತಿರಲ್ ಜಗತ್ತಿದು ಮುಂತೆಂತು ಬಾಳ್ವುದೋ ?
ಶಾಂತಿ ಮೇಣ್ ಸಮಾಧಾನಂಗಳವು ಮೆತ್ತಣವೊ ?
ದಾಂತಿ ಮೇಣ್ ಕಾಂತಿಗಳ ಮಾತೇಕೆ ಪೇಳ್ವುರುವೆ ?
ಇಂತಿರ್ಪ ನಾಡಿನೊಳ್ ನಾನೆಂತು ಪುಣ್ಯಳೋ
ಕರುಣಾಳುವಹ ತಮ್ಮ ಕೃಪಾನುಗ್ರಹದಿಂದೆ !
ತಮ್ಮಿಂದ ನಾನುಳಿದೆ, ತಮ್ಮಿಂದ ನಾಂ ಬಾಳ್ದೆ,
ತಮ್ಮಿಂದ ನನಗಾಯ್ತು ಲಿಂಗಪೂಜಾಯೋಗಂ,
ವಿಷಯೇಂದ್ರಿಯ ಜಯಭೋಗ ಪ್ರಪಂಚ ಪರಿತ್ಯಾಗಂ !
ನಾಡಿಗರ ನೋವಮೇ ನಸ್ಸಯಾ ನೋವನೈ ೧೫೦

CC-0. Jangamwadi Math Collection. Digitized by eGangotri

ನಾಡಿಗರ ಜೀವನನೆಮ ನನ್ನಯಾ ಜೀವನಂ
ನಾಡಿಗರ ನಲುಮೆಯೊಳ್ ನನ್ನಯಾ ನಲುಮೆಯು
ನಾಡಿಗರ ಸೇವೆಯನೆಸಗುವಂತೆ ಕರುಣಿಸೈ !
ಮಾನವೀಯ ಮೌಲ್ಯಂಗಳಂ ಗುರುತಿಸುವಂತೆ
ಕ್ರಿಯೆಯೊಳಗೆ ತರುವಂತೆ ಹರಸು ಗುರುವರ್ಯನೇ !
ಪಂಪಾಂಬೆಯಂತೆವೊಲ್ ನಿಡುಗಾಲ ನಾಡನುಡಿ
ಸೇವೆಸಲ್ಗುವೊಲ್ ಮೇಣ್ ನಿಲ್ಗುವೊಲ್ ಕರುಣಿಗೆಯ್ !
ಭಗವಂತ ಭಕ್ತಿಗಂ ಗಂಡು ಹೆಣ್ಣೆಂಬ ಕವಲು
ತಾನುಂಟೆ ? ಭಕ್ತಿರಸ ತಾನೊಂದೆಯಾಗಿಹುದು.

ಹಂಪೆಯೊಳಗಿನ ವಿಷಮನೇತ್ರಂ ವಿರೂಪಾಕ್ಷಂ ೧೬೦
ಜಡಮೂರ್ತಿ ಮನಸಿಲ್ಲ ಮಾತಿಲ್ಲ ಕೇಳ್ವುದೇಂ ?
ನೋಡಲ್ಕೆ ನನ್ನೆದುರಿಹ ನೀವ್ ಚಿನ್ಮೇತ್ರರು
ಚಿನ್ಮಯಾತ್ಮರು ಮೇಣು ಸರ್ವಗತರು ಸ್ವತಂತ್ರರು ;
ನೀವರಿಯದಿರ್ದುದೊಂದಿಲ್ಲಿ ಮತಂಗನೆನಲೇನು ?
ಇವರಂತೆ ಕೆಲಕತೆಗಳಂ ಕೇಳಬಯಸಿಹೆನು ;
ಪರಮಾರ್ಥ ಪಕಾಶಕರ್ ಪರಮ ವಿಚಾರಕರ್
ತಾವಲ್ಲದಿನ್ನಾರು ನನಗೆಲ್ಲ ಪೇಳುವರ್ ?
ಎಂದೆನಲ್ ಡೊಡ್ಡ ಬಸವಾರ್ಯ ಪೇಳ್ತೊಡಗಿಹನ್ ;
ಎನ್ನವ್ವೆ ಶರಣವ್ವೆ ನೀಂಕೇಳ್ದುದೆ ಲೇಸಾಯ್ತು
ನಾಡಿನೊಳ್ ಸರ್ವಜನಂಗಳ್ ತಿಳಿಯಲನುವಾಯ್ತು. ೧೭೦
ವಿದ್ಯಾನಗರಮೆಂದು ಹೆಸರಾಂತ ಹಂಪೆಯೊಳ್
ಹತ್ತು ಭಾಸ್ಕರ ಕ್ಷೇತ್ರಂಗಳ್ : ಕಾಶಿ, ಪುಷ್ಪಗಿರಿ,
ಕಂಜಿ, ಮೇಣ್ ನಿವೃತ್ತಂ, ಶ್ರೀಶೈಲಮಲಂಪುರಿ,
ಮೇಣ್ ಹಂಪೆ, ರಾಮೇಶ್ವರ, ಕೇದಾರ, ಗೋಕರ್ಣ—
ಮಿಂತಿ ಪೆಸರಿನಿಂ ಸುಪ್ರಸಿದ್ಧಮೆನಿಸಿರ್ಪವು.
'ಪಾಪಂ' ಅದು ಪರಿಹಾರಮಪ್ಪ ಕತದಿಂ 'ಪಂಪಾ'—
ಎಂದು ತಿರುವು ಮರುವಾಗಿಪ್ಪುದೆಂಬರಣುಗಿ !
ಅಂತಿಪ್ಪ ಪಂಪೆಯೊಳ್ ಮತಂಗಗಿರಿಯೆಂಬುದು
ತಾನೊಂದು ; ಮತಂಗರ್ಷಿನಾಮವದಕ್ಕೈದುದು.
ಹಂಪೆಯೊಳ್ ಪೆಸರಾಂತ ಪಂಚಾದ್ರಿಗಳೊಳಗೆ
ಸೊಂಪೆಸೆವ ಮತಂಗರ್ಷಿವೆಸರಿನ ಗಿರಿಯೊಂದು ! ೧೮೦

CC-0. Jangamwadi Math Collection. Digitized by eGangotri

ಇದಿರ್ಪುದು ವಿರೂಪಾಕ್ಷಮಂದಿರ ಮುಂಬದಿಯೊಳು.
ಮತಂಗಗಿರಿಯ ಮೇಲೆ ಮಾತಂಗೇಶ್ವರನಿಹನ್
ಮನೋಹರ ಮಂದಿರದೆ ರಮಣೀಯ ದೃಶ್ಯದೊಳ್
ಮತಂಗರ್ಷಿ ತಪವನಾಚರಿಸಿದ ಕತದಿಂದೆ
ಮಾತಂಗಗಿರಿಯೆಂಬ ಸಲ್ಪೆಸರ್ ಬಂದಿಹುದು ;
ಬಹುತೀರ್ಥ ಬಹುಗಹ್ವರಂಗಳಿರ್ಪವಲ್ಲಿ !
ಭೃಗು ಶರ್ಮಿಯರ ಗರ್ಭದೊಳ್ ಸಂಜನಿಸಿಹನ್
ಮತಂಗಂ ಪಂಪಾಂಬೆಯ ವರದಿಂ ಹಂಪೆಯೊಳ್ ;
ಮತಂಗಿಗೆ ಮಗಳಾಗಿ ಜನಿಸಿಹಳ್ ಸರ್ವಮಂಗಳೆ,
ಮಾತಂಗಿ ನಾಮದಿಂ ಮಂಗಳಾಂಗಿಯಾಗಿ
ಮೇಣ್ ಕಿನ್ನರೇಶ್ವರಂಗೆ ತಾನರ್ಧಾಂಗಿಯಾಗಿ !

ಪಂಪೆಯಾ ಪತ್ತನದ ಮೂಡಣದ ಬಾಗಿಲೊಳ್
ಗಾನಲೋಲನಾಗಿಹ ಕಿನ್ನರೇಶನಿರ್ಪನ್
ಪಡುವಣದ ಬಾಗಿಲೊಳ್ ಸೋಮೇಶ, ಸನ್ನುತ–
ಭೈರವ, ವರದ ವಿಘ್ನೇಶ, ಸುಭಗೆ ದುರ್ಗೆಯರಿಹರು.
ಸಮಭಾವಿ ವೀರೇಶ, ದುರಿತಹಾರಿಣಿ ಭದ್ರೆ
ತೆಂಕಣದ ಬಾಗಿಲೊಳ್ ತೊಳಗಿಹರ್ ಬಂದವರ
ಬರುವವರ ಪಾಪಗಳ ಪರಿಹರಿಸಿ ಕಾಪಿಡುತಂ !
ಬಡಗಣದ ಬಾಗಿಲೊಳ್ ಮಾಣಿ ಭದ್ರೇಶ್ವರಂ,
ಗಜಾಸನ, ಭೈರವಂ, ಹೈಮವತಿಗಳಿರುವರು.
ವಿರುಪಾಕ್ಷೇಶ್ವರನ ಮುಂದಿರ್ಪ ಮಂಟಪಕೆ
ನಾಲ್ಕು ವೇದಂಗಳೇ ನಾಲ್ಕು ಕಾಲ್ಗಳಾಗಿಹವು ;
ಮಂಟಪದ ಸುತ್ತಲುಂ ದಶದಿಕ್ಪತಿಗಳಿಹರ್
ದೇವೇಂದ್ರಾದಿಗಳದಂ ಪೂಜಿಪರ್ ಪ್ರೇಮದಿಂ,
ಸರ್ವಧರ್ಮ ಸಮನ್ವಯ ಸಂಕೇತವಾಗಿಹುದು;
ದಿಟ್ಟಿಸಲ್ ಜಾಜ್ವಲ್ಯವಹ ವಿರೂಪಾಕ್ಷೇಶ
ಲಿಂಗವಲ್ಲಿ ಕಾಂಬುದು ಸದ್ಭಕ್ತಶೀಲರ್ಗೆ ;
ಲಿಂಗದರ್ಶನದಿಂ ಪರಮಸಂತಸಮಪ್ಪುದಾ.

ಓಕಂದ, ನೀನಿಂದು ಕಿವಿಗೊಟ್ಟು ಕೇಳುತಿರೆ
ನಮಗುತ್ಸಾಹವುಕ್ಕುತಿದೆ ಪೇಳಲ್ಕೆ ಮುಂದೆ ;

CC-0. Jangamwadi Math Collection. Digitized by eGangotri

ಹೈಮವತಿ ದೇವಿಯ ತಪದಿಂದೆ ಪಾವನಂ
ತಾನಾದ ಹೇಮಕೂಟವರ್ಯನಂ ತಾನಹುದು ;
ಸಪ್ತರ್ಷಿವಾಸಮದು, ಸಪ್ತವ್ಯಸನಂಗಳ್
ನಾಶವಪ್ಪುದದರಿಂ ನೀನದಂ ನೋಡಿದೆಯೋ ?
ಅಹುದಹುದೆನ್ನ ತಂದೆ ನಿನ್ನಯಾ ದಯದಿಂದೆ
ಕಂಡೆನಾನದನಂ ಕಡು ಸಂತಸಂದಳೆದೆಂ !

ಜಾಂಬುವಂತ ವೃತ್ತಾಂತಂ :

ಕೇಳ್ಕಗಳ್ಕೆ, ಮುಂತೆ ಮತ್ತೊಂದು ಕತೆಯಂಬೇಳ್ವೆ
ಬಿಡುವಾಗಿ ನಾನಿರುವೆ, ಬಗೆದುಂಬಿ ನೀಂ ಗೇಳ್ವೆ !

ಹಂಪೆಯಾ ಪೆಂಕಣದ ದಿಕ್ಕಿನೊಳ್ ಹೆಂಪಿನಿಂ
ತಾನಿಹುದು ಜಂಬೂವನಂ ಫಲಭರಿತಮಾಗಿ ;
ಜಂಬೂಫಲಂಗಳಂ ತಿನ್ನುತ್ತ ಪಡಿದಿಸಂ
ಪಂಚಕ್ರೋಶಾತ್ಮಕಂ ತಾನಾದ ಹಂಪೆಯಂ
ಸುತ್ತುತ್ತ ಹತ್ತುಸಾಸಿರ ಬರಿಸಂಗಳನ್ನೆಗಂ
ತಪಂಗೆಯ್ದ ಕತದಿಂ ಜಾಂಬುವಂತನೆನಿಸಿಹನ್ !
ಹೊಸಪೇಟೆ ಸನಿಹದೊಳ್ ತಾನಿರ್ಪ ಬೆಟ್ಟದೊಳ್
ಜಾಂಬುವಂತೇಶ್ವರ ನಾಮದಿಂ ಶೋಭಿಪನ್
ಜಾಂಬುವಂತ ಜತ್ತುಕನಿಂ ಪೂಜೆಗೊಂಡುದರಿಂ
ಈ ಪೆಸರ್ ಬಂದಪುದೆಂಬುದಾಗಿ ನಂಬುವರ್ !
ಚಿಂತೆಯಿಂ ಪಿಂತೊಮ್ಮೆ ವಿರಿಂಚಿಯಾಕಳಿಸಲ್
ಮೂಗಿನಿಂ ಕರಡಿಯಾಕಾರದಿಂ ಪುಟ್ಟಿದಾ
ತಂಗೆ ಜಾಂಬುವಂತನೆಂಬ ಪೆಸರಾಯತೆಂದು
ಪೇಳುವರ್ ಪೌರಾಣಿಕರವರ್ ಸ್ಕಾಂದದೊಳ್ ;
ತಪಕೊಲಿದ ದೇವಾನುಗ್ರಹದಿಂದೆ ನಾಡಿನೊಳ್
ಪೆಸರಾಂತು ಬಾಳಿಹನ್ ಜಾಂಬುವಂತಂ ಗಡಾ !

ತಾನೊರ್ಮೆ ಜಾಂಬುವಾನ್ ಬನವಲ್ಲಿ ಚರಿಸುತಿರೆ
ಕೇಳುವುದು ಹೆಂಗಸಿನ ರೋವನ ಧ್ವನಿಯದು
ತಾನಲ್ಲಿಗೈ ತಂದು ನೋಡುತಿರೆ ರಕ್ಕಸಂ
ಕನ್ನೆಯಂ ಕಾಮೋಪ ಭೋಗಕೆ ಬಲಾತ್ಕರಿಸು-

CC-0. Jangamwadi Math Collection. Digitized by eGangotri

ತಿರ್ದುವಂ ಕಾಣುವನ್ ಕನಲುವನ್ ಕಡಿಯುವನ್,
ಸಾಯುವನ್ ರಕ್ಕಸನ್ ! ಸತ್ತ ರಕ್ಕಸನಿಂದೆ-
ಪುಟ್ಟುವನ್ ಶಿವಸೇವಕನೊರ್ವಂ ನಮಿಸುವನ್
ತಾನೆದ್ದು ಜಾಂಬುವಂತಂಗೆ ಭಯ ಭಕ್ತಿಯಿಂ
ಪೇಳುವನ್ ಮೇಣ್ ತನ್ನ ಪೂರ್ವ ವೃತ್ತಾಂತಮಂ ;

ಪಿಂಪಿಂತೆ ನಾನೊರ್ಮೆ ಶಿವಾಲಯದೆ ಕೋಶಾಧ್ಯಕ್ಷನಾ
ಗಿರ್ದ ; ಕೌಟುಂಬಿಕದ ಭರಣಕ್ಕೆ ಶಿವಸೊಮ್ಮನು
ಕದಿಯುತಿರೆ ಧರ್ಮಕರ್ತಂ ಕಂಡು ಕಡು ಮುನಿದು
ಶಪಿಸಿಹೆನ್ ರಕ್ಕಸಂ ನೀನಾಗೆನುತೆನ್ನನಂ !
ದೈನ್ಯದಿಂದ ನನ್ಯಭಾವದಿಂ ಬೇಡಿಹೆನ್
ನಿಶ್ಯಾಪಮೀಯೆಂದು ಧರ್ಮಕರ್ತಂಗೆರಗಿ ;
ಕನ್ನೆಯಂ ಕಾಮಿಸುತ ಪೀಡಿಸುವ ವೇಳೆಯೊಳ್
ಜಾಂಬುವಂತನಿಂದುದ್ಧಾರವಾಗುವೆಯೆಂದು
ಪೇಳಿಹನ್ ; ಕೃತಾರ್ಥನಾಗಿಹೆನ್ ನಿಮ್ಮಿಂದ-
ನೆಂದುಸುರಿ ಮರಳಿ ಚರಣಕ್ಕೆರಗಿ ಪೋಗಿಹನ್ !

ತಾನಿತ್ತ ಕನ್ನಿಕೆಯು ತನ್ನ ಪಿಂಜರಗಿರ್ದ
ಕತೆಯನುಸುರುವಳ್ ಕೃತಜ್ಞತಾಭಾವದಿಂ ಜಂ-
ಬುವಂತಂಗೆ ರಕ್ಕಸನಿಂ ಪಾರುಮಾಡಿದುದಕೆ ;
ಎನ್ನ ಪೆಸರದು ಭದ್ರೆ ; ಶಂಕರಿಯ ಸೇವಕಿಯು
ಪಿಂತೊರ್ಮೆ ಬಟ್ಟೆಯಂ ತರಹೇಳಿ ಕಳುಹಿದಳ್ ;
ದಾರಿಯೊಳ್ ಸುಶ್ರಾವ್ಯ ಸಂಗೀತ ಧ್ವನಿಗೇಳಿ
ತಲ್ಲೀನ ಮನಸಿನಿಂ ಪೆಯ್ಮರೆದು ನಿಂತಿಹೆನ್
ಕೆಯ್ಕೊಂಡ ಕಜ್ಜಮಂ ನೆರವೇರಿಸದಂತಾ-
ನದಕ್ಕಾಗಿ ಶಪಿಸಿಹಳೆನ್ನೊಡತಿ ಪಾರ್ವತಿ ;
ಕಾಮಿರಕ್ಕಸನ ಕೆಯ್ಗೆ ಸಿಕ್ಕಿ ಗೋಳಿಡೆಂದು !
ನಾನೆನಿತು ಬೇಡಿಕೊಂಡಡಂ ಕ್ಷಮಿಸದಾಪಳ್ ;
ರೇಗಿದೆನ್ ಪ್ರತಿಸ್ಪರ್ಧಿಸಿ ಪ್ರತಿಹೇಳಿಹೆನ್
ದೇವನನೊಲಿಸಿಕೊಂಡು ಧರ್ಮಪತ್ನಿಯಾಗುವೆ-
ನೆಂದೊಡತಿ ಪಾರ್ವತಿಗೆ ; ಹಟತೊಟ್ಟು ಬಂದಿಹೆನ್
ಸೌರಾಷ್ಟ್ರ ದೇಶದಾ ಮುದ್ಗಲನ ಮಗಳಾಗಿ ;

CC-0. Jangamwadi Math Collection. Digitized by eGangotri

ಬಮುಕಿಹೆನ್ ನಾನಿಂದು ನಿಮ್ಮಿಂದ ಪಾರಾಗಿ ! ೨೭೦
ಮುಂತೆಯೇಂ ಮಾಡಲ್ಕೆ ತಿಳಿಯದಿದೆ ಪೇಳೆನಲ್ ;
ನೀನೆದೆಗೆಡದಿರ್ ಕಾಂಚನ ತೀರ್ಥದೊಳ್ನಿಂತು
ನೀಂ ತಪಂಗೆಯ್ಯೆಂದು ಸವಿಪೇಳೆ ಕಳುಹಿದನ್ !

ಭದ್ರೆ ಕಾಂಚನತೀರ್ಥಕೈತಂದು ನಿರಾಹಾ–
ರದೊಳಿರ್ದು ಮೌನದಿಂ ತಪವನಾಚರಿಸುವಳ್
ತಪ್ತೋಜ್ವಾಲೆಯಿಂ ತಿರೆಯೆಲ್ಲಂ ತಳಮಳಿಸಿತ್ತು,
ರವಿತಾಪಮಡಗಿತ್ತು, ಮುಗಿಲ್ಕಳಿ ಕರೆಯದಿತ್ತು ;
ಬೆಂಕಿ ಸುಡದಂತಿತ್ತು ; ಸುರವರಂ ಚಿಂತೆಯಿಂ
ಭದ್ರೆಯ ತಪ್ತೋಭೆಂಗಕೆಂದಪ್ಸರೆಯರ ಕಳುಹೆ
ಭದ್ರೆಯಂ ಜಯಿಸದೆ ಪೋದಪರ್ ಸ್ವರ್ಗಕ್ಕೆ ! ೨೮೦
ಸುರೇಂದ್ರಂ ಬೃಹಸ್ಪತಿಯೊಡಗೂಡಿ ಶಂಕರನ
ಬಳಿಬಂದು ಭದ್ರೆಯಾ ತಪಸಿನಿಂದೊದಗಿದ
ಹಾನಿಗಳನೆಲ್ಲವಂ ಬಿನ್ನವಿಸಿ ಬೇಡಿದರ್ ;
ಓ ಸುರರೇ, ನೀವೆದೆಗೆಡದಿರಿ ನಾ ಜಾಂಬವ-
ತೀಶ್ವರಾವತಾರದಿಂ ಭದ್ರೆಯಂ ಕೆಯ್ವಿಡಿದು
ಪರಿಹರಿಸುವೆನ್ ಲೋಕಕಂಟಕಂಗಳಂ ದಿಟಂ
ಎಂದಭಯ ವಚನಮನಿತ್ತವರಂ ಕಳುಹಿದನ್ !

ಪತಿವಚನಮಂ ಕೇಳಿ ಗಿರಿಜೆ ಕೋಪಿಸಿಕೊಂಡು
ಮನುಜಳಂ ಭದ್ರೆಯಂ ನೀನೆಂತು ವರಿಸುವೆ ?
ನಾನಿರಲ್ ಮಹಾದೇವಂಗಿದಂ ಸಲ್ವುದೇಂ ?
ಆರಾದಡೇಂ ಭಕ್ತಿಕಾರಣಂ ತಾನಲ್ತೆ ? ೨೯೦
ಅವರಿವರೆಂಬುವ ಭೇದಭಾವಮಿನಗಿಲ್ಲ
ತ್ಯಜಿಸುವೆನ್ ಭಕ್ತರ್ಗೆ ಪ್ರಾಣಮಂ ನೇಣುಕ್ಕೈ-
ಲಾಸಮಂ, ನನಗೆ ಸಲೆ ಪ್ರಿಯಳಾದ ನಿನ್ನಸುಂ ;
ಭಕ್ತರೆನಗಂ ಬಹಿಃಪ್ರಾಣಗಳ್ ಸಟಿಯಲ್ಲ ;
ಬವ್ಯೆಯಂ ವರಿಸುವೆನ್ ಖಂಡಿತಂ ಪಾರ್ವತಿ ;

CC-0. Jangamwadi Math Collection. Digitized by eGangotri

ಶಂಕರನ ಮಾರ್ನುಡಿ ಹಿಡಿಸಲಿಲ್ಲ ಶಂಕರಿಗೆ
ಸಿಡಿದೆದ್ದು ಪೋದಪಳ್ ಶಿವದೂತನಂ ಕರೆದು,
ಮಾಯೆಯಿಂ ಭದ್ರೆಯಂ ನಾನಾವರಿಸುತಿರೆ
ನೀನವಳನೆತ್ತಿಕೊಂಡೊಯ್ದು ವಿಂಧ್ಯಾದ್ರಿಯೊಳ್
ಬಿಟ್ಟು ಬಾ ಎಂದಪ್ಪಣೆಯನಿತ್ತು ತೆರಳಿಹರ್ ;
ಬಂದಿಹರ್ ತಾವ್ ಭದ್ರೆ ತಪಸ್ಯೆಯಂಗೆಯ್ವಡೆಗೆ ;
ಶಿವದೂತನಪರ್ಣೆಯ ಮಾತಿನೊಲ್ ಬಳಿಗೆಬರೆ
ಭದ್ರೆಯ ತಪೋಜ್ವಾಲೆಯಿಂ ಬೆಂದು ಬಸವಳಿಯೆ,
ಮರಳಿ ನಸು ಪೊಳ್ತಿನೊಳ್ ಶಕ್ತಿಯಿಂ ಜೇತನಿಸಿ
ದೈನ್ಯದಿಂ ಗಿರಿಜೆಯಂ ನೋಡುತಿರೆ ವೆತೆಗೊಂಡು
ಭದ್ರೆಯಂ ಮಾಯೆಯಾವರಿಸುವಂತೆಸಗುವಳ್
ಶಿವದೂತನಾಗಂ ನಿರಾಯಾಸದಿಂದೆತ್ತಿ
ಕೊಂಡೊಯ್ದು ವಿಂಧ್ಯಾಚಲದೊಳಿಟ್ಟು ನೋಡುತ್ತ
ನಿಂತಿಹನ್; ಮೂರ್ಛೆಯಿಂ ಭದ್ರೆತಾಂ ಮೇಲೆದ್ದು
ನಾನೆಲ್ಲಿಹೆನ್ ? ಇಲ್ಲಿ ಗೆಂತೈತಂದಿಹೆನ್ ಎಂದು
ಯೋಚಿಸುತ್ತಿರೆ, ಗಿರಿಜೆಯ ಮಾಯೆಯಿದೆಂದರಿವಳ್
ಮುಂದಿರ್ದ ದೂತನಂ ಕಂಡು ಕಿಡಿಕಿಡಿಯಾಗಿ,
ಕಲ್ಲಾಗಿ ಬೀಳೆಂದು ಶಪಿಸಿದಳ್ ; ಸೇವಕಂ–
ದೈನ್ಯದಿಂ ಪ್ರಾರ್ಥಿಸಲ್ ಸಪ್ತಕಲ್ಪ ಕಳೆದಂದು
ಶಿವಪಾದಸ್ಪರ್ಶದಿಂ ದಿಟರೂಹ ತಳೆಯೆಂದು
ಕರುಣಿಸುತ ವಿಂಧ್ಯಾದ್ರಿಯೊಳ್ ತಪಸ್ಸಿಗನುವಾ
ಗಿಹಳ್ ದೃಢಮನಸ್ಸಿನಿಂ ಮತ್ತೆ ಶಂಭುವಿಗಾಗಿ !
ಭದ್ರೆಯಾ ತಪಸ್ಸಿಗೆ ಮನಮೆಚ್ಚಿ ಮಹೇಶಂ
ಪ್ರತ್ಯಕ್ಷನಾಗಿಹನ್, ನಿನ್ನಿಚ್ಛೆಯೇನೆಂದು–
ಕೇಳಿಹನ್ ; ಕೆಯ್ವಿಡಿಯೆ ಕೋರುವಳ್ ; ನಾನೊಪ್ಪಿ–
ಹೆನ್ ಭದ್ರೆ ; ವರಿಸಿದಡೆ ಪಾರ್ವತಿಯು ಮುನಿಸುವಳ್ ;
ನೀನವಳನೊಲಿಸಲ್ಕೆ ತಪಂಗೆಯ್ಯೆಂದುಸುರಿಹನ್ !
ಶಿವನಪ್ಪಣೆಯುಂತೊಡನೆ ತಪಸಿ ಶಿವೆಯನೊಲಸಿ
ಓ ದೇವಿ ನಿನ್ನೆದುರಿನೊಳಗಂದು ಬಿನ್ನವಿಸಿ
ಕೊಂಡಂತೆ ಕರುಣಿಸೌ ಶಿವನೆನ್ನ ವರಿಸುವೊಲ್
ತಪ್ಪೆನ್ನದಾ ತಾಳ್ಕೆ ನಿನ್ನದಾ ನಿನ್ನಂತೆ

CC-0. Jangamwadi Math Collection. Digitized by eGangotri

ಬಾಳ್ಚಂತೆ ಕರುಣಿಸೌ ತಂಗಿಯಂ ಮುಂಗಳೆಯೆ !
ಎಂದಿಂತು ಪ್ರಾರ್ಥಿಸಲ್ ಮನಪೊಲಿದು ಮೃಡಾಣಿ-
ಭದ್ರೀಯಂ ವರಿಸುವೊಲ್ ಭವಹರನ ಬೇಡುವಳ್ ೩೩೦
ಒಲಿದರ್ಗೆ ಒಲಿವುದಂ ಹಿರಿತನಕೆ ಕುರುಹತ್ತಿ ?
ಪಿಂತಿರ್ದ ಮಚ್ಚರವನುಳಿದುಮೆಯು ಹರಸಿಹಳ್
ಭದ್ರೆಯಂ ಸದ್ಭೀಯ ರುದ್ರೆಯಂ ಹೃದಯದಿಂ !
ಮತ್ತಮಂತಾದಡಂ ಮಹೇಶಂ ಗಿರಿಜೆಯಂ
ಪರಿಕಿಸಲ್ ಮನುಜಳಂ ವರಿಸುವುದೆಂತೆನಲ್
ಭದ್ರೆಯು ತಪಸ್ಸಿನಿಂ ಪರಿಶುದ್ಧಳಾಗಿಹಳ್
ಪರಿಗ್ರಹ ಯೋಗ್ಯಳಾಗಿಹಳೆಂದು ಪೇಳ್ದಳ್
ಪಾರ್ವತಿಯ ; ಅಂತಾದೊಡಾಕೆಯಂ ಕಾಂಚನದ
ತೀರ್ಥದೊಳ್ ಮೀಯಿಸೆಂದು ಸುರಿಹನ್ ಮಹೇಶಂ ;
ಭವಾನಿಯು ಭದ್ರೆಯಂ ಕರೆತಂದು ಹಂಪೆಯೊಳ್ ೩೪೦
ಮೆಯ್ದೊಳೆಯಿಸಿ ಪರಿಶುದ್ಧಳನ್ನಾಗಿಸಿಹಳುಮೆ !
ಬಳಿಕಂ ಭವಾನಿ ಭವಹರನಲ್ಲಿಗೈತಂದು
ಕರೆತಂದು ಭದ್ರೆಯಾ ಶಾಪದಿಂ ಶಿಲೆಯಾಪ
ಶಿವದೂತನಂ ಮುಕ್ತನನ್ನಾಗಿಸಲಿಚ್ಚತ್ತ
ಸೇವಕಂ ಮೂರಡಿಯ ಭೃಂಗಿಯನ್ನಾಗಿಸಿ
ಸನ್ನಿಧಿಯೊಳಿರಿಸಿಕೊಳ್ಳುವಂತೆ ವಿಜ್ಞಾಪಿಸಲ್
ತಾನೊಡನೆ ಶಿವನೊಪ್ಪಿ ಹೃದಯದಿಂ ಹರಿಸುವನ್
ಸೇವಕಂ ಭೃಂಗಿಯಾಗಿ ಮೃದಂಗ ಧರಿಸುವನ್
ಶಿವಸನ್ನಿಧಿಯೊಳಿದ್ದು ಸೇವೆಯಂ ಗೆಯ್ಯುವನ್ !

ಇತ್ತ ಶಿವನವತರಿಸುನ್ ಜಾಂಬುವಂತೇಶ್ವರಂ ೩೫೦
ತಾನಾಗಿ ಕ್ಷೇತ್ರದೊಳ್, ಬಂದಪರ್ ವಿವಾಹೋ
ತ್ಸವಕೆ ಗಂಧರ್ವಸಿದ್ಧ ಮಹರ್ಷಿಗಳ್ ಮೇಣು
ಬ್ರಹ್ಮಾದಿ ದೇವತೆಗಳಾದರದೆ ಚತುರಂಗ
ಬಲಸಮೇತರರಾಗಿ ಕಲ್ಯಾಣಮಂಟಪಕೆ
ಭೇರಿ ಮೇಣ್ ಮೃದಂಗ, ಪಣವ, ಢಕ್ಕೆ, ಸಮ್ಮಾಳ,
ಡೊಳ್ಳು, ಮೇಣು ತುಕೂರಿ, ಝುರುಳ್ಳಿರಾದಿ
ವಾದ್ಯಗಳ್ ದಿಕ್ತಟಂಗಳೊಳ್ಮಿಗೆ ಮೊಳಗಿಹವು.
ಬಂದತಿಥಿಗಳನೆಲ್ಲ ಸತ್ಕರಿಸಿಹರಾದರಿಸಿ

CC-0. Jangamwadi Math Collection. Digitized by eGangotri

ಭೈರವರ್ ಮೇಣ್ ಕ್ಷೇತ್ರ ಪಾಲಕರ್ ಪ್ರೇಮದಿಂ !
ಪುಟಕಿಟ್ಟ ಚಿನ್ನದೊಲ್ ಪರಿಶೋಭಿಸುತಿರ್ದಾ
ಭವ್ಯಿಯಂ ಭವಾನಿಯು ಜಾಂಬವತೇಶ್ವರನ
ಮುಂದೆ ಕೆಯ್ಪಿಡಿದು ಕರೆತಂದು ನಿಲ್ಲಿಸಿ ತಪ
ಸ್ಸಿನಿಂ ಮೇಣು ಕಾಂಚನ ತೀರ್ಥದಾ ಸ್ನಾನದಿಂ
ಪರಿಪೂತಳೆನಿಸಿರ್ದ ಭವ್ಯೆಯಂ ವಿಧಿಪೂರ್ವ–
ಕಂ ಪರಿಗ್ರಹಿಸಬೇಕೆಂದು ಬಿನ್ನವಿಸುವಳ್ !
ನಂತರಂ ದೇವಾಂಗನೆಯರ್ ಶಿವೆಯೊಡಗೂಡಿ
ನೂತನ ವಧೂವರರ್ಗೆ ಸುಗಂಧಾಭ್ಯಮಭ್ಯಂಗ–
ವ ಮಾಡಿಸಿ, ದಿವ್ಯವಸ್ತ್ರಾಭರಣಂಗಳಿಂದ–
ಲಂಕರಿಸಿ ಕುಳಿಸಿಹರ್ ರತ್ನಮಯ ಪೀಠದೊಳ್
ಗೀತಾದಿ ವಾದ್ಯಂಗಳ ಮಂಗಳ ಧ್ವನಿಯೊಡನೆ
ಮಂಗಳಾಷ್ಟಕಂಗಳ ಪಠಿಸುತ್ತ ಲಾಜಾಕ್ಷ–
ತಂಗಳಂ ಪಳಪಳನೆ ಸುರಿಸುತಿರೆ ಜಾಂಬವ-
ತೇಶ್ವರಂ ಭವ್ಯೆಯಾ ಪಾಣಿಗ್ರಹಣವನೆಸಗಿ
ಮಂಗಳದ ಸೂತ್ರಮಂ ಕಟ್ಟಿಹನ್ ಕಂಠದೊಳ್
ಸಮಯದೊಳ್ ಮೊಳಗಿಹವ್ ದೇವ ದುಂದುಭಿಗಳಾ-
ಕಾಶದಿಂ ತಾನಾಯ್ತು ಬಹುಪುಷ್ಪವೃಷ್ಟಿಯದು.
ತಾನಾಯ್ತು ಸಂಭ್ರಮದೆ ವಿವಾಹಂ ಮತ್ತಮಾ
ಸರ್ವರ್ಗೆ ಮೃಷ್ಟಾನ್ನಭೋಜನಂ, ತೆರಳಿಹರ್
ತಂತಮ್ಮ ಮನೆಮನೆಗೆ, ನೆಲಸಿಹನ್ ಜಾಂಬವ
ತೇಶ್ವರಂ ನವಪತ್ನಿ ಭವ್ಯೆಯೊಡಂ ಕ್ಷೇತ್ರದೊಳ್ !

ಶುಭಸ್ಪದಮಿದಂ ಕಲ್ಯಾಣೋತ್ಸವಂ ವಲಂ
ಇದನೋದಿದವರ್ ಮೇಣು ಕೇಳುವರ್ ಧನ್ಯರೈ,
ಧರ್ಮಿಷ್ಠರಪ್ಪರೈ ; ತಾನವರ ಜನ್ಮ ಸಾ-
ರ್ಥಕಮಪ್ಪುದಿಹಪರದೆ ಶಿವಸುಖಿಗಳಪ್ಪರ್ಕೈ !
ಕಲ್ಯಾಣವಾಗುವರ್ ಮಂಗಳವ ಪೊಂದುವರ್ !!
ಕತೆಯಾವುದಾದೊಡೇಂ ಗ್ರಾಹ್ಯಮದು ವಿಚಾರಂ
ಭವ್ಯೆಯಾ ಜೀವನಂ ಸುಭದ್ರತಮಮದಲ್ತೆ ?
ಸವ್ಯದೀ ಕನ್ನಿಯರ್ ಭದ್ರೆದೊಲ್ ಬಾಳಿದಡೆ
ಭಾರತೀಯ ಧರ್ಮಂ ಬಾಳಿ ಬೆಳಗುವುದಲ್ತೆ ?
ಸೌಶೀಲ್ಯಜೀವನಂ ಸ್ತ್ರೀಯರ್ಗೆ ಸಮುಚಿತಂ

CC-0. Jangamwadi Math Collection. Digitized by eGangotri

ಗುಣಧನಂ ಸ್ತ್ರೀಯರ್ಗೆ ಭೂಷಣಂ ಬಾಳಿನೊಳ್ ;
ಭೂಷಣಮೆ ಬಾಹ್ಯದೀ ನವಾಲಂಕಾರಗಳ್ ?
ನವಯುಗ ನವನಾಗರಿಕ ನವಯುವತಿಯರ್ಗೆಂದು
ಕೇಳಿಹಳ್ ಶರಣವ್ವೆ ಶ್ರದ್ಧೆಯಿಂ ಸದ್ಗುರುವಿಂ
ಭದ್ರೆಯೂ ಶುಭ್ರಜೀವನದ ವೃತ್ತಾಂತಮಂ !
ದೇವ-ಮಾನವ ಜಾತಿ-ವಿಜಾತಿ ಬಿರುಕು ತರ-
ವಲ್ಲ ; ಗುಣ ಸಾಧನಂ ಪ್ರಧಾನಂ, ಶಿವಾಚಾ–
ರಮಿರೆ ಸಾಲದೇಂ ತುಪ್ಪದ ಮಡಕೆ ಮುಕ್ಕಾದಡೇಂ ?
ತುಪ್ಪ ಲಿಂಗಕ್ಕೆ ಬೋನವಾಗದೇಂ ನೋಳ್ಪೊಡೆ !
ಹೊರದೊಳೆದ ಹೆಂಡದಾ ಮಡಕೆಯಪ್ಪುದರಿಂ- ೪೦೦
ದೊಳತಿಳಿಯಹ ತೆಂಗಾಯಿಯಾದಡೆ ಸಾಲದೇಂ ?

ಶಿವಶಕ್ತಿಪ್ರಭಾವಂ! ಹಂಸೆಯೊಳ್ ಮತ್ತೊಂದೆಡೆಯೊಳ್ ಶ್ರೀಮಾಣಿಭ
ದ್ರೇಶ್ವರಂ ಪಾಪನಾಶನ ತೀರ್ಥಂಗಳಿರ್ಪವು
ಪೇಳ್ವೆನವುಗಳಾ ಮಹಿಮೆಯಂ ಕೇಳ್ ಶರಣವ್ವೆ,
ನಿನ್ನಾದಿ ಶಕ್ತಿಯಾ ಹಿರಿಮೆಯದರೊಳಡಗಿದೆ.

ಕೃತಯುಗದೆ ದೇವದಾನವರ್ ಪರಸ್ಪರಮಾಗಿ
ಹಿತವರಿಯದೆ ಕಾಳೆಗವಾಡುವರ್ ನೈರದಿಂ,
ಮತ್ತಮಜ್ಞಾನದಿಂದಹಂಕಾರ ಮತ್ತಿನಿಂ !
ಗೆಲುವಾಯ್ತು ಯುದ್ಧದೊಳ್ ದಿಟಂ ದೇವತೆಗಳ್ಗೆ,
ವಿಜಯದಿಂದುನ್ಮತ್ತರಾಗಿಹರ್ ಸುರಗಣರ್
ವಿಶ್ವವಿಖ್ಯಾಪನಂ ನಿಕ್ಕರಿಸ ತೊಡಗಿಹರ್ ೪೧೦
ಭುವನೇಶ ಭಗವಂತನ ಮೈಮೆ ತಿಳಿಯಬಹುದೆಂ ?
ಮಾಹೇಶ ಮಾಯೆಯಿಂ ಮೋಹಿತರಿವರಂವರ್ಗೆಸೆ !
ಯೋಗಿಜನ ಮನೋಭೂಮಿಯಂ ಭೇದಿಸುವ ಮಾ-
ಯೆಯೇನಗ್ಗಳವೊ ಪೇಳ್ ಭೋಗಿಜನಂಗಳ ಮಾತೇಂ ?

ವಿಜಯ ಪ್ರಾಪ್ತಿಯಿಂ ಸುರರುದ್ಧತರ್ ಮೇಣು ದುರು-
ದ್ದೇಶಸಂಯುತರುದ್ರಿಕ್ತ ಮನಸ್ಕರಾಗಿಹರ್ ;
ಇದಕಂಡು ಮನನೊಂದು ಸುರಗುರು ಬೃಹಸ್ಪತಿಯ್ಯು,
ಗರ್ವಾಂಧಲೋಚನರಿ ಸುರರೆ ಗರ್ವೋನ್ಮತ್ತರ್ಕೆ,
ರಕ್ಕಸರ ಗೆದ್ದವರ್ ನೀವೆಂದು ಬಗೆಯದಿರಿ ೪೧೦

CC-0. Jangamwadi Math Collection. Digitized by eGangotri

ನೇಣ್ ಹೆನ್ಮ್ಕಿ ಹೋಂದದಿರಿ, ಬಲನಿಮ್ಮ್ದೇನಲ್ಲ ;
ನಿಮ್ಮ್ಧೀನದಲ್ಲಿಲ್ಲ ; ಬಲಮಂ ಪ್ರೇರಿಸುವ
ಶಕ್ತಿಯದು ಬೇರುಂಟು ಸುರಗಣರೆ ವಿಚಾರಿಸೆ

ಪ್ರಾಣಮಿರದೆ ದೇಹಂ ದುಡಿಮೆಯಂ ತಾಂಮಾಡ
ಬಲ್ಲುದೇಂ ತಾಂತ್ರಕಂ ತಾನಿರದೆ ಜಂತ್ರಮದು
ನಡೆವುದೇನಪರಂತೆ ಸಮಸ್ತನಿಯಾಮಕಂ

ತಾನಾದ ಮಹಾಶಕ್ತಿಯ ಪ್ರೇರಣೆಯಿಲ್ಲದೆ
ನಡೆಯುವೈ ಸಮಸ್ತರ ಸರ್ವಕಾರ್ಯಂಗಳವು.
ವಿಗಿಲೇನು ನಾನೀಗ ನುಡಿವುದುಂ ಶಕ್ತಿಯಾ
ಪ್ರೇರಕತೆಯಿಂದೈಸೆ ; ಆಕಾಶ ಮಂಡಲದೆ ೪೩೦

ತಾರೆಗಳ್ ತೊಳಗುವುದು, ಚಂದಿರಂ ಬೆಳಗುವುದು.
ನೇಸರನುದಯಿಸುವುದು ಮುಳುಗುವುದು, ಗಾಳಿ ತಾಂ
ಬೀಸುವುದು ಮೇಣ್ ಬೆಂಕಿ ಸುಡುವುದು ತಿಳಿಯಲ್ಕೆ

ಸರ್ವಶಕ್ತ ಮಾಗಿಹಾ ಪರಮ ಶಕ್ತಿಯಿಂದೆ !
ಶಕ್ತಿವಿಶಿಷ್ಟಮಿದಂ ಬ್ರಹ್ಮಾಂಡಮರಿಯಲ್ಕೆ !
ಇದನರಿದು ಸುರಗಣರೆ ಎನಯದಿಂದಾ ಸಕ್ತಿ
ಯಂ ಭಜಿಸಿರೆಂದು ಬೋಧಿಪನ್ ಬಗೆ ಬಗೆಯಾಗಿ !

ಆದಡೇಂ ಬೋಧೆಯದು ಬರಲಿಲ್ಲ ಮನಸ್ಸಿಗೆ
ಸುರರಿಂಗೆ ; ಗುರುವಿನುಪದೇಶಮದು ಜೋದ್ಯದಾ
ವಸ್ತು ತಾನಾಗಿ ಪರಿಹಾಸ್ಯಕೆಡೆಯಾದಪುದು ; ೪೪೦

ಅದೇನೋ ಶಕ್ತಿಯಂತೆ ಮತ್ತಂ ಪ್ರೇರಣೆ–
ಯಂತೆ ಪೂಜೆಯಂತೆ ಭಜನೆಯಂತೆ-ಮಾಳ್ಪರಾರ್ ?
ಜಡಮತಿಯು ಮಾತಿದಂ ಸ್ವಾತ್ಮಬಲಮಿಲ್ಲದೆ

ದೈವಮೇಂ ಮಾಳ್ಪುದೋ ? ದೈವಂ ಮೇಣದೃಷ್ಟಂ
ನಿಯಾಮಕ ಮಿದೆಲ್ಲಮಂ ಈ ಗೊಡ್ಡು ಹಾರುವರ್
ಹೊಟ್ಟೆ ಹೊರೆಯಲೋಸುಗಂ ಹುಟ್ಟಿಸಿಹ ಬಿಟ್ಟನುಡಿ

ಗಳಿವೆಂದು ಬಂದಂತೆ ಮಾತಾಡಿಕೊಳ್ಳುವರ್ !
ಆಗಳಾ ಬೃಹಸ್ಪತಿ ಮರುಮಾತು ನೂಂಕದೆ
ತನ್ನ ನಿಯತಕಾರ್ಯ ಕ್ರಿಯೆಗೆ ತಾನ್ ತೆರಳಿಹನ್ !

CC-0. Jangamwadi Math Collection. Digitized by eGangotri

ಬಾನಾಡಿಗರ ಗರ್ವಭಾವಮಂ ಪರಿಹರಿಸೆ
ಪರವಸ್ತು ಮಹೋಜ್ವಲ ಜ್ಯೋತಿಸ್ವರೂಪದಿಂ-
ದಾವಿರ್ಭವಿಸುವನ್ ದಶದಿಕ್ಕುಗಳ ಬೆಳಗುತ್ತೆ ;
ದೇವತೆಗಳಾ ಮಹಾ ಜ್ಯೋತಿಯಂ ನೆರೆಕಂಡು
ಬೆಕ್ಕಸಂ ಬೆರಗಾಗಿ ತಾನಿದೇಂ ಮಾಯೆಯೊ
ಮೇಣಸುರ ಮೋಸವೋ ಸೂರ್ಯಶತಿಗಳ ಬೆಳಕೊ
ಮೇಣಗ್ನಿ ಜ್ವಾಲೆಯೊ ಎಂದು ಚಿಂತಿಸುತಿರೆ
ಜ್ವಾಲೆಯದು ಬಂದಪುದು ಬಾನಿಗರ ಸನಿಹಕ್ಕೆ ;
ಬರುತಿರಲ್ ದೇವೇಂದ್ರನಿದಕ್ಕೇನುಪಾಯ
ಮೆಂದು ಯೋಚಿಸುತ್ತಿರೆ ಮನಮರುಕದಿಂದಗ್ನಿ
ಕಂಡು ತಾಂ ಮುನ್ನುಗ್ಗಿ ಬಳಿ ಬಂದು ನೀನೇಕೆ
ಚಿಂತಿಸುವೆ, ತೇಜಮಂ ಭಂಗಿಸುವೆನೆಂದುರೆ
ಬೆಸಗೊಂಡು ಬರುವನಾ ತೇಜಸ್ಸಿನ ಸನಿಹಕ್ಕೆ !

ತೇಜಾಂಶಮದು ಶಕ್ತಿರೂಪದಿಂ ಮೆಯ್ದಳೆದು
ಮಿಗೆ ಧೈರ್ಯದಿಂ ನುಗ್ಗಿ ಬರುತಿರ್ಪ ನೀನಾರು-
ಎಂದಗ್ನಿಯಂ ಕೇಳುತಿರೆ ಸಂಭ್ರಮದಿಂದಗ್ನಿ
ತಸ್ನಿರಿವ ಜಾಲೆಗಳ ಸುತ್ತಲುಂ ತಾಂ ಕೆದರಿ
ಭೀವಿಯಿಂ ಕುತ್ತಿಗೆಯ ತಿರುವಿ ತಿರಸ್ಕಾರದಿಂ-
ದಿಂತಿಯೇ ನಿನ್ನರಿವು ? ಕಲ್ಪ ಕಲ್ಪಾಂತದು-
ರ್ದಾಂತವಹ ಮಹಾನಲವೆಂದಾನು ವಿಶ್ವಜೊಳ್
ವಿಖ್ಯಾತನಾದೆನ್ನನಂ ಕಂಡು ಕೇಳರಿಯೆಯಾ ?
ಮತ್ತಮಾ ಹೋಮಾದಿ ಯಜನಂಗಳೊಳ್ ಕೊಡುವ
ಹವಿರ್ಭಾಗಂಗಳಂ ಸುರರಿಂಗೆ ಕೊಂಡೊಯ್ದು
ಕುಡುತ್ತಿಹ ದೇವಮುಖಮಾನೆಂಬುದಿದು ನಿನಸೆ
ತಿಳಿಯದಂತಿರ್ಪುದಚ್ಚರಿಯಲ್ತೆ ? ಜಗತ್ತಿನ
ಹೊರವೊಳಗೆ ತುಂಬಿರ್ಪೆ, ಪ್ರಳಯದೊಳ್ ವಿಶ್ವಮಂ
ಸುಟ್ಟುರುಪುವೆಂ ಮತ್ತಮಾನಿಲ್ಲದೇ ಸೃಷ್ಟಿ
ಸ್ಥಿತಿಲಯಂಗಳಾಗವು ನಾನನಾದ್ಯನಂತಂ ;
ಹಸಾತ್ತಾಗಿಲ್ಲಿಗಂ ಬಂದಿರ್ಪ ನೀನಾರು ?
ಮುನ್ಮೊದಲ್ ತಿಳುಹೆಂದು ದನಿಯೆತ್ತಿ ಗದರುವನ್ !

CC-0. Jangamwadi Math Collection. Digitized by eGangotri

ಆಗ್ನೇಯಾ ಮಾತಿಂಗೆ ಶಕ್ತಿಯದು ನಸುನಕ್ಕು
ಪಮ್ಮುಗೊಂಡಗ್ನಿಯೆದುರಿನೊ ಕೊಂದು ಹುಲ್ಲುವಂ
ಜಿಲ್ಲಿ ಸುಟ್ಟುರುಹೆಂದು ಪೇಳುತಿರೆ ಮತ್ತನಿತು
ಸಿಟ್ಟಿನಿಂ ಕಡೆಗಣಿಸಿ, ನಿನ್ನ ಕೀಳ್ತನಮಿದೇಂ ?
ಬ್ರಹ್ಮಾಂಡ ಕೋಟಿಗಳ ಸುಟ್ಟುರುಪುವೆನಗೀ
ಹುಲ್ಲೆಸಳ್ ತಾನಿದೀಡೇನ್ ಪೇಳು ಶಕ್ತಿಯೇ ?
ಕ್ಷುದ್ರರ್ಗೆ ಕೀರ್ತಿಬುದ್ಧಿ ತಾನೆಂದು ತೊಲಗುಗುಂ ?
ತಾನಿದಮಂತಿಕ್ಕು ಮುಮ್ಮೊದಲ್ ಹುಲ್ಲುವಂ ಸುಟ್ಟು
ನಂತರಂ ನಿನ್ನನುಂ ಕೆಯ್ಪಿಡಿದೆ ಕಬಳಿಸಲ್
ಆಗಳೆಸ್ಸಯ ಶಕ್ತಿ ತಿರೆಗೆಲ್ಲ ತಿಳಿಪುದಯ್
ಎಂದೆಸುತಲೆದೆಯುಬ್ಬಿ ತಾತ್ಸಾರ ಬುದ್ಧಿಯಿಂ
ಮುಂದಿರ್ದ ತೃಣಮುಂ ದಹಿಸಲೆತ್ನಿಸುವನೊರ್ಮೆ
ಪ್ರಯೋಜನಮಿಲ್ಲಾಯ್ತು ; ರೇಗಿಹನ್ ರಭಸದಿಂ
ತನ್ನೇಳುರಿನಾಲಗೆಗಳಸುರೆ ಹೊರಚಾಚಿ
ಹುಲ್ಲುವಂ ಸುಡಲೆಳಸಿ ಸೋತಿಹನ್ ಮತ್ತೊರ್ಮೆ
ಪ್ರತಿಯಾಗಿ ಹುಲ್ಲೆಸಳದಗ್ನಿಯಾ ತೇಜಮಂ
ನುಂಗಿತಯ್ ತುತ್ತಾಗಿ ತಾನುಳಿಯದಂತೆಪೊಲ್ ;
ತಾನಗ್ನಿ ನಿಸ್ತೇಜನಾಗಿ ಮೇಣ್ ನಿರ್ವಿಣ್ಣಂ
ತಾನಾಗಿ ನಿಂತಿಹನ್ ದೈನ್ಯದಿಂ ಸೊನ್ನದಿಂ
ತಲೆವಾಗಿ ; ಶಕ್ತಿತಾಂ ನಕ್ಕಳಯ್ ಗಹಗಹಿಸಿ !
ಹಿಂದಿರುಗಿ ಸುರಗಣರ ಸನಿಹಕ್ಕೆ ತಾಂಬಂದು
ತನಗಾದ ಪರಾಭವವನೊಪ್ಪಿಕೊಂಡಿಹನ್ !

ಆಗ್ನೇವಾಣಿಯ ಕೇಳಿ ಸಹಸ್ರಾಕ್ಷನುಂ ಮನ
ಗುಂದುವನ್ ತನಗಿರ್ಪ ಬಲಮುಂ ಕಡೆಗಣಿಪನ್ ;
ಅನಿತರೊಳ್ ಗಾಳಿಯದು ತಾನೆದ್ದು, ದೇವೇಂದ್ರ
ನೀ ಬರಿದೆ ಬೇವಸಂಗೊಳ್ಳದಿರ್ ತಾನಿದಕೆ ;
ಸೋತಡೇನೆನ್ನ ಕೆಳೆಯ ನಾನಿಲ್ಲವೇನಿದೊ
ನಾಂ ಪೋಗಿ ದೀಪ್ತಿಯಂ ಕಾಲ್ಕೀಳಿಸಿ ಬರುವೆ-
ನೆಂದು ಜಂಬಮಂ ಬಿಚ್ಚಿ ನೆರೆಹೆಚ್ಚಿ ಬಂದಪ-
ನಾ ಕಳಾಮಯ ಶಕ್ತಿಯ ಸನಿಹಕೆ ವೇಗದಿಂ !

CC-0. Jangamwadi Math Collection. Digitized by eGangotri

ಶಕ್ತಿಯದು ನೀನಾರು ನೀನೇಕೆ ಬಂದಿಹೆ ೪೧೦
ಎಂದೆನಲ್ ವಿಶ್ವದೊಳ್ ವಿಖ್ಯಾತ ವಾಯು ನಾಂ
ನಿನ್ನಂ ಸೊದಲ್ಗೊಂಡು ಸಮಸ್ತ ಪ್ರಾಣಿಗಳ
ಶ್ವಾಸ ನಿಶ್ವಾಸಗಳಿಗೆಲ್ಲ ನಾಂ ಪ್ರೇರಕಂ ;
ವೇಗದೊಳ್ ಮತ್ತಂ ಪ್ರಭಾವದೊಳ್ ಪ್ರಬಲದೊಳ್
ಹೆಗಲೆಣೆಯರಾರಿಲ್ಲ ದೇವಾಸುರರೊಳಗಂ
ವಿಶ್ವ ವಿಪ್ಲವದಲ್ಲಿ ಸಪ್ತ ಸಮುದ್ರಂಗಳಂ
ವೇಗದಿಂದಲ್ಲೋಲ ಕಲ್ಲೋಲ ಗೆಯ್ಯುವೆನ್
ನೀಲಾಗಸೆತ್ತರಕೆ ಬೆಳೆದಿರ್ದ ಹೆಮ್ಮರಂ
ಗಳನುರುಳಿಸಬಲ್ಲೆಂ, ಪೆಬ್ಬೆಟ್ಟಗಳನಿರದೆ
ನಡುಗಿಸಿ ಬಿಡಬಲ್ಲೆ, ಸಖನಗ್ನಿಯೆನ್ನಯ ಸ- ೪೨೦
ಹಾಯದಿಂದುರಿಯಬಲ್ಲನೆನಲ್ಕೆ ನೀನೆನಗೇಂ ?
ನೀರಾರು ನೀನೇಕೆ ಬಂದಿರ್ಪೆಯೆಂಬುದಂ
ತಿಳಿಯಲ್ಕೆ ಕಳುಹಿರ್ಪರೆಲ್ಲ ಬಾನಾಡಿಗರ್
ಕೆಮ್ಮನೇ ಪೇಳೆನಗೆಲ್ಲವಂ ಪರಮೇಶ !

ಎನ್ನರಿಕೆಯದಂತಿರಲಿನಿತೆಲ್ಲ ಕೊಚ್ಚುತಿಹ
ನೀ ತೃಣವನನಲ್ಲಾಡಿಸು ನೋಡುವೆನ್ ನಿಸ್ಪಲವ-
ನೆನಲ್ ವಾಯು ತನ್ನೆಲ್ಲ ವೇಗಮಂ ಪ್ರಯೋಗಿಸ್ಕೆ
ಹುಲ್ಲುಕೊನೆಯಲ್ಲಾಡದಾಯಿತ್ತು, ಸೋಲಿನಿಂ
ನೋವಿನಿಂ ಲಜ್ಜಿತಂ ತಾನಾಗಿ ತಲೆಕೆಳ-
ಕ್ಕಿರಿಸಿ ಮರುಮಾತಿಲ್ಲದಂತೆ ಪಿಂತಿರುಗಿಹನ್ ೪೩೦
ತನಗೊದಗಿದ ಸೋಲನ್ನೊಪ್ಪಿಹನ್ ಸುರರೆದುರಿನೊಳ್ !

ಆ ಮೇಲೆ ಕೇಶವಂ ವಾಯ್ವಗ್ನಿಗಳ್ ಸೋತು
ಬಂದುದಂ ತಿಳಿಕೊಂಡು ಸರ್ವರೊಡಗೂಡಿ ತಾ-
ನಲ್ಲಿಗೈತರುವನ್ ಮನಸ್ಸಿನೊಳ್ ಚಿಂತಿಸುತ !
ಅನಲಾನಿಲರ್ಗೆ ಮುಖಭಂಗಮಂ ಮಾಡಿರ್ದಾ
ತೃಣಮನುರೆ ಕಿತ್ತೆಸೆಯಬೇಕೆಂದು ಬಗೆಯುತಂ
ಯತ್ನಿಸಲ್ ತೃಣವನಲ್ಲಾಡಿಸಲ್ಕಾಗದಂ-
ತಿರಲ್ಕವಮಾನದಿಂ ತಲೆವಾಗಿ ನಿಂತಿಹನ್
ಉಳಿದೆಲ್ಲ ಸುರರ್ಗಳ್ ನಾಮಮುಂದು, ನೀಂ ಮುಂದು

CC-0. Jangamwadi Math Collection. Digitized by eGangotri

ಎಂದೆನುತ ಮೇಲ್ವಾಯ್ದು ಬಂದಲ್ಲಿ ತಂತಮ್ಮ
ನಿಶಿತಾಯುಧಂಗಳಿಂ ಹೊಡೆದಡಂ ಹುಲ್ಲೆಸಳ
ತುದಿಸೊದಲಂ ಕತ್ತರಿಸಲಾಗದಂತಿರ್ದರವರ್ ;
ದೇವತೆಗಳೆಲ್ಲರಾ ಹೆಮ್ಮೆಯದು ಹುಡಿಗೂಡಿ
ಹೋಗಿಹುದು ನೋಡೆ ಕೇವಲಂ ತೃಣಮಾತ್ರಕ್ಕೆ !
ಸೋಜಿಗಂ ದಲ್‌ದಳೆದು ನಮ್ಮೆಲ್ಲರ ತೇಜೋ
ಭಂಗಮಂ ಮಾಳ್ಪ ತೇಜಸ್ಸಿದಾವುದೆಂಬು
ದಂ ತಾನು ತಿಳಿಯದಂ ತಾಯಿತಕ್ಕಟಕ್ಕಟಾ ;
ಎಂದು ಪೇಚಾಡುತಿರೆ, ತಟತ್ಕೋಟಿನಿಭ ಪ್ರ–
ಭಾಯುತಂ ಪರಾಶಕ್ತಿಯದೊಂದು ದಶದಿಕ್ಕು-
ಗಳ ತನ್ನ ಪ್ರಭೆಯಿಂದೆ ಬೆಳಗುತ್ತ ಬಂದಿತ್ತು,
ಶಕ್ತಿಗೇ ದೇವತೆಗಳೆಲ್ಲರುಂ ಮಣಿಮಣಿದು,
ಓ ದೇವಿ, ನೀಂ ದಿವ್ಯ ತೇಜಸ್ಸಿ ಓಜಸ್ಸಿ
ನಮಗೆ ನೀನಾರೆಂಬುದಂ ತಿಳುಹಿ ಕಾಪಿಡೌ
ಎಂದು ಮಿಗೆ ಮೊರೆಯಿಡಲ್ ಶಕ್ತಿತಾನಿಂತೆಂದಳು ;

ಓ ಸುರರೇ ಲೋಕಮಂ ಕಾಪಿಡುವ ನೀವುಗಳೆ
ಆ ಬೃಹಸ್ಪತಿಯ ಹಿತವಾಕ್ಯಮಂ ಹೃದಯದಿಂ
ಕೇಳದಲೆ ಗರ್ವಾಂಧರಾಗಿರ್ದ ನಿಮ್ಮಗಳ್ಗೆ
ಬುದ್ಧಿಕಲಿಯಲಿಂತೆಸಗಲಾಯಿತು ತಿಳಿಯಿರೆ !
ತೇಜಮದು ಹೇಮಕೂಟಾಧಿಪತಿ ವಿರೂಪಂ
ನಾನವನ ಪರಶಕ್ತಿ ಪಂಪಾಂಬೆ ಹೇಮವತಿ,
ನಿಮ್ಮಗಳ ಕಾಪಿಡಲ್ ನಾನಿಲ್ಲಿಗೈತಂದಿಹೆನ್ !
ಹತ್ತಿರದೊಳಿರ್ಪ ಮಾಣಿಭದ್ರೇಶ್ವರನ ಪೂಜಿಸಿ
ಬಳಿಯಿರ್ಪ ಸರಸಿಯೊಳ್ ಸ್ನಾನಮಂ ಮಾಡಿದಡೆ
ನಿಮ್ಮಗಳ ಆಜ್ಞಾನ ಮೇಣ ಹಂಕಾರವಳಿಗು-
ಮಿಂತೆಂದು ತಿಳಿಹೇಳಿ ಅದೃಶ್ಯಳಾಗಿಹಳ್ !

ಅವರೆಲ್ಲ ಪಾಪಹರ ತೀರ್ಥದೊಳ್ ಮಿಗೆಮಿಂದು
ಬಗೆಸಂದು ಮಾಣಿಭದ್ರನನ್ನಾರಾಧಿಸಿ
ಮುಕ್ತರಾಗಿಹರ್ ಪಾಶವೀಯ ಜೀವನದಿಂದೆ ;
ಬಂದಿಹುದು ತೀರ್ಥಕ್ಕೆ ಪಾಪಹರ ಹೆಸರಂದು !

CC-0. Jangamwadi Math Collection. Digitized by eGangotri

ಶಿವಶಕ್ತಿಗಿಂತಲುಂ ಮಿಗಿಲಿಪ್ಪ ದೊಂದಿಲ್ಲ ;
ಶಿವಶಕ್ತಿಯುಳ್ಳವರ್ ಬಾಳುವರ್ ನಿಡುಗಾಲ
ಲೋಕದೊಳ್ ಸರ್ವರ್ಗೆ ಹಿತರಾಗಿ ಹಿತಚರಿತ-
ರಾಗಿ ಮೇಣ್ ಶಿವತೇಜದಿಂಕೂಡಿ ಬೆಳಗುವರ್ !
ಸುಗುಣಭರಿತರೇ ಸುರರೆನಿಸುವರ್ ಸತ್ಯದೊಳ್
ವಿಂದನೀರ್ ಪಾಪಹರ ತೀರ್ಥಮೆಂದೆನಿಪುದಾ !

ಋಷಭತೀರ್ಥ ಋತಚರಿತಂ ಮೇಣ್
ಮಾನನಿಯ ಶಿವಭಕ್ತಿ ಮೌಲ್ಯಂ

ಓ ಶಿರುವೆ ಶರಣಪ್ಪೆ ಗುರುಹಸ್ತಸಂಜಾತೆ
ಶಿವಶಕ್ತಿ ಮೌಲ್ಯಮಂ ನೀನಾಲಿಸಿದ ಮೇಲೆ
ಶಿವಭಕ್ತಿ ಮೌಲ್ಯಮಂ ನೀನಾಲಿಸೊಲುಮೆಯಿಂ
ನಾವಿರದೆ ಪೇಳ್ದಪೆವ್ ಸೌರಾಷ್ಟ್ರ ದೇಶದಾ
ಸರಲರಸ-ಮಾನಿನಿಯರಸಿಯರಾ ಶಿವಭಕ್ತಿ-
ಯಿಂದಾವ ಋಷಭತೀರ್ಥದ ಚರಿತಮಂ !

ಸರಲಂ ಸೌರಾಷ್ಟ್ರ ಪ್ರಾಂತಪಾಳುವರಸಂ
ಸರಲದಸನರಸಿಯಾ ನಲ್ವೆಸರ್ ಮಾನಿನೀ !
ಇವರಿರ್ವರನುದಿನಂ ಶಿವಾರ್ಚನ ಸಂಯುತರ್
ಶಿವಧರ್ಮದೊಳ್ ನಿಷ್ಠೆಯುಳ್ಳವರ್ ತಾವಾಗಿ
ಪರಸ್ಪರಮಳ್ಕರಿಂದಿರುತಿರ್ದರನುಕಂಪ
ಹೃದಯದಿಂ ಸರ್ವಪ್ರಜಾನುರಾಗಿಗಳಾಗಿ !
ಇಂತಿರಲ್ ದುರ್ವಾಸರಾಗಮಿಸುವರೊರ್ಮೆ
ಪೂಜಿಪರ್ ರಾಜರಾಣಿಯರಿರ್ವರಾದರದೊ-
ಳತ್ಯಂತ ವೈಭವದೊಳದರಿಂದೆ ಪ್ರಸನ್ನ
ರಾಗುವರ್ ಮುನಿಪುಂಗವರ್ ದಂಪತಿಗಳ್ಗೆ
ಶಿವದೀಕ್ಷೆಯಂ ಮಾಳ್ಪರ್ ಮೋಕ್ಷಸುಖಕಾಗಿ
ಮೇಣ್ ಧರ್ಮಸಂವೃದ್ಧಿಗಾಗಿ ಸಂಸೃತಿಗಾಗಿ !
ಅಸಾರಂ ಸಂಸಾರಂ ಸೌರಂ ಶಿವಸೇವನಂ
ಭೌತಿಕ ನಶ್ವರಂ ಮೇಣ್ ದುಃಖಸಾಗರಂ
ಭೋಗಕ್ಕೆಳಸುತಿಹರ್ ವಿವೇಚನ ವಿರಹಿತರ್
ಬೇವಸಂಗೊಳ್ಳುವರ್ ಕೀಟಗಳ ತೆರದಂತೆ !

CC-0. Jangamwadi Math Collection. Digitized by eGangotri

ಸಾತ್ವಿಕರ್ ತಾತ್ವಿಕರ್ ಸೌಶೀಲ್ಯಶಾಲಿಗಳ್
ಶಿವಲಿಂಗಪೂಜಕರ್ ಗುರುದೇವ ಸೇವಕರ್ ೬೦೦
ನೀವಾಗಿ ರಾಜ್ಯಭೋಗಗಳೊಡನಿರುತ್ತಿರಲ್
ಪರಶಿವನ ಪದವಿಯಂ ಪಡೆವಿರೀ ಜನ್ಮದೊಳ್ !
ಭಕ್ತಿಯಿಂ ಬಲವೊದಗಿ ಹುಲುಬಯಕೆಗಳ ನೀಗಿ
ಶಕ್ತಿಯಂ ಪೊಂದುವಿರಿ ಶಿವಪೂಜೆ ಫಲದಿಂದ !
ಸರ್ವ ಶೈವಂಗಳೊಳ್ ವೀರಶೈವಂ ಪರಂ,
ಸರ್ವಭೋಗ ಮೋಕ್ಷಂಗಳಂ ತಾನೀಯುಗುಂ !
ಇಂತೆಂದುಪದೇಶಿಸಿ ತೆರಳಿಹರ್ ಮುನಿವರರ್
ಧರ್ಮ ಮೇಣ್ ಸತ್ಯಸಂಸ್ಕೃತಿಗಳ ಪ್ರಚಾರಕೆ !

ದುರ್ವಾಸಮಹಾಮುನಿಗಳವರಿಂ ಶಿವಲಿಂಗ
ದೀಕ್ಷೆಯಂ ಪಡೆದನಾವೇ ಧನ್ಯರೆಂತೆಂದು ೬೧೦
ಬಗೆಯುತ್ತ ಬಗೆದುಂಬಿ ಬಾಳಿಹರ್ ಭಕ್ತಿಯೊಳ್
ದಿವ್ಯ ಗುರುದೇವನಂ ಗುರುವಿತ್ತ ಲಿಂಗಮಂ
ನೆನೆಯುತ್ತ ಮಲಗುವರ್ ನೆನೆಯುತ್ತಲೇಳುವರ್
ಮೆಯ್ದೊಳೆದು ಪೂಜಿಪರ್ ಮನದೊಳೆದು ಜಾನಿಪರ್
ಮಜ್ಜನಂಗೆಯ್ಯುವರ್ ಭಸಿತಮಂ ಧರಿಸುವರ್
ಮೇಣ್ ಪತ್ರೆಪುಷ್ಪಂಗಳನಲಂಕರಿಸುವರ್
ಧೂಪಮಂ ಹಾಕುವರ್ ದೀಪಮಂ ಬೆಳಗುವರ್
ಬೆಳ್ಗೊಡೆಯ ಹಿಡಿಯುವರ್ ಸೀಗುರಿಯ ಬೀಸುವರ್
ಮಂತ್ರಮಂ ಜಪಿಸುವರ್ ಕಪ್ಪುರಂ ಹಚ್ಚುವರ್
ಮಂಗಳಂ ಪಾಡುವರ್ ಹೂಬೊಗಸೆಯೀಯುವರ್ ೬೨೦
ನೈವೇದ್ಯಮಂ ನಿವೇದಿಸುವರ್ ನಮಿಸುವರ್
ಸ್ವಾತ್ಮಾರ್ಪಣದಿಂ ನಿಬ್ಬೆರಗಾಗಿ ನಿಬ್ಬರದೆ
ಪರಮ ಪರಿಣಾಮಮಂ ಪೊಂದುವರ್ ಪಡಿದಿನಂ !

ಆವರಿಗಾಗುವರಯ್ದು ಜನ ಗಂಡು ಮಕ್ಕಳವ-
ರೊಳ್ನಾಲ್ಕು ಜನರ್ ತಂದೆ ತಾಯ್ಗಳ ತೆರದಂತೆ
ಶ್ರೀಗುರೂಪದೇಶಕ್ಕೊಳಗಾಗಿ ವಿದ್ಯೆಯಂ
ಕಲಿಯಲ್ಕೆ ಹಂಪೆಯಾ ಮಾಣಿಭದ್ರೇಶ್ವರನ
ಬಳಿಯಿಪ್ಪ ಋಷಭಮುನಿಗಳ ಬಳಿಗೆ ಬರುವರು.

CC-0. Jangamwadi Math Collection. Digitized by eGangotri

'ಅಲರ್ಕ' ಪೆಸರಿನ ಕೊನೆಯ ಮಗನು ತೌಕಿಕದ
ಮಾರ್ಗದೊಳ್ ಪ್ರವರ್ತಿಸಿ ಕ್ಷಾತ್ರವಿದ್ಯೆಯ ಗಳಿಸುವನ್ ;
ತಂದೆ ಸರಲಂ ಶಿವೈಕ್ಯನಾಗುತಿರಲಲರ್ಕಂ
ರಾಜ್ಯವಾಳ ತೊಡಗುವನತ್ಯಂತ ವೈಭವದೆ !
ಕಳೆಯುತೆನಿತೋ ಕಾಲಮಾಮೊಡೇನಲರ್ಕಂ
ಧಾರ್ಮಿಕಾಚಾರ ಮಾರ್ಗಕ್ಕೆ ಬಾರದಾದನೆಂ–
ಬುವ ಚಿಂತೆಯಿಂ ಮಾತೆ ಮಾನಿನಿಯು ತನಗಂತ್ಯ
ಕಾಲಮೊದಗಿರೆ ಯೋಚಿಸಿಹಳ್ಕಗಸುದ್ಧಾರ
ಮಾರ್ಗನುಂ–, ಬರೆದಿತ್ತಳಿಂದೊಳ್ಳಿತೋಲೆಯಂ ;
ಅಲಕ್ಕನೆ, ನಿನಗೆ ಕರಕಷ್ಟಮೊದಗಿ ಬರಲೀ–
ಕೈಯೋಲೆಯಂ ಬಿರ್ಚಿ ನೀನೋದು, ನಿನಗೆ ಮನ
ಬಂದಂತೆ ಮುನ್ನಡೆದುಕೊಳ್ಳೆಂದು ಪೇಳಿದಳ್
ಮಾತೃವಾತ್ಸಲ್ಯದಿಂದೋಲೆಯಂ ತೆಗೆದಿರಿಸಿ
ಕೊಂಡಿಹನ್ ತಾನಲರ್ಕರಾಜಂ ಶ್ರದ್ಧೆಯಿಂ !
ದಿನಗಳೆಯೆ ಮಾನಿನಿಯು ಸರಲರಸಿ ಲಿಂಗದೊಳ್
ಐಕ್ಯಮಂ ಪೊಂದುವಳ್ ಲಿಂಗಪೂಜಾನಿಷ್ಠೆ-
ಯಿಂ ಪರಮಸದ್ಗತಿಂ ಯೋಗಿಜನ ದುರ್ಲಭಂ
ನಿಃಕಲಂ ನಿರವಯಂ ನಿರ್ಗುಣಂ ನಿರಾಳಂ !

ಮತ್ತೊರ್ಮೆ ವಂಗದೇಶದರಸಂ ಜಯಸೇನಂ
ಸೌರಾಷ್ಟ್ರ ದೇಶಮಂ ಜಯಿಸಲ್ಕೆ ದಂಡೆತ್ತಿ
ಬಂದಿಹನ್ ಮುತ್ತಿಹನ್ ರಾಜಧಾನಿಯಂ ಮೇಣ್
ಸೋಲಿಸಿಹನಲರ್ಕರಸನಂ ತೆಗೆದುಕೊಂಡಿಹನ್
ರಾಜ್ಯಮಂ ಸ್ವಾಧೀನಕೆ, ಏರಿಹನ್ ಸೌರಾಷ್ಟ್ರ
ರಾಜ್ಯದಾ ಪೀಠಮಂ ಸಾತಿಶಯ ಶೌರ್ಯದಿಂ !

ಅಲರ್ಕಂ ರಾಜ್ಯದಿಂ ಭ್ರಷ್ಟನಾಗಿ ನಾನಾ
ವಿಧ ಕಷ್ಟಕೀಡಾಗಿ ದಿಕ್ಕು ದೆಸೆ ತೋರದಿರೆ
ಮಾತೆ ಮಾನಿನಿಯಿತ್ತ ಪತ್ರಮಂ ತೆಗೆದೋದಿ
ತಾನದರೊಳಿಂತು ಬರೆದಿರ್ಪ ಹಿತಪದ್ಯಮಿಪ್ಪು ;
"ವ್ಯಸನೇಷ್ವಪಿ ಸರ್ವೇಷು ಸತ್ಸಂಗಃ ಸಂಪದಂ ನೃಣಾಂ |
ಸತ್ಸಂಗೇನೈವ ಸರ್ವೇಷಾಂ ವ್ಯಸನಂ ನಾಶಮೇಷ್ಯತಿ || "

CC-0. Jangamwadi Math Collection. Digitized by eGangotri

ಇದನರಿವನಲರ್ಕಂ ಸತ್ಸಂಗಮಂ ಬಯಸಿಹನ್
ಬೆದಕುತ್ತ ಬಂದಿಹನ್ ತೆಂಕಣದ ಕಾಶಿಯೆಂದು
ಹೆಸರಾಂತ ಹಂಪೆಗಂ ಮಾಣಿಭದ್ರ ಜೆಟ್ಟಿದ
ಬಳಿಯಿರ್ಪ ಋಷಭೇಶ್ವರಾಶ್ರಮಕೆ ಪಡೆದಿಹನ್
ಋಷಿವರನ ದರ್ಶನಂ ಮತ್ತಮಾ ಸೋದರರಂ ;
ಶಾಂತಿಯಂ ಪೊಂದಿಹನ್ ಋಷಭೋಪದೇಶದಿಂ,
ಮತ್ತಮಾ ಋಷಭಮುನಿ ನಿರ್ಮಿತವಹ ತೀರ್ಥದೊಳ್
ಮೈದೊಳೆದು ಮುಕ್ತನಾಗಿಹನಲರ್ಕನರಸಂ !

ಓ ಗುರುವೆ ಧನ್ಯಳಾಂ ಶಿವಶಕ್ತಿ ಶಿವಭಕ್ತಿ–
ಗಳ ನಿರೂಪಿಸುವ ಪಾಪಹರ ಮತ್ತಂ ಋಷಭ–
ತೀರ್ಥಂಗಳ ನೆಪದಲ್ಲಿ ಶಕ್ತಿ-ಭಕ್ತಿಗಳಿರಡರ
ಹಿರಿಮೆಯಂ ತಿಳಿದಿಹೆನ್ ನಿಮ್ಮ ಕಾರುಣ್ಯದಿಂ !

ಶಿವಶಕ್ತಿ ಬಲಾಬಲಂ !

(ಮಾಣಿಭದ್ರ ಸರ್ವಮಂಗಳೋಪಾಖ್ಯಾನಂ !)

ಗುರುವರನೆ ಜಗದಲ್ಲಿ ಶಿವಶಕ್ತಿ ಭೇದಮಂ
ಗಣಿಸುವರ್ ; ತಾನಿದಂ ಸತ್ಯಮೇಂ
ಭೇದಮಂ ಭಾವಿಪುದು ಪಾಪಮದು ಪೇಳೆನಗೆ ತಾನಲ್ತೆ ?
ಮಾನಸಿಕ ಶುದ್ಧಿದಂ ಸರ್ವರ್ಗಿ ಶುಭಪ್ರದಂ
ತಾನಾದ ಮಾಣಿಭದ್ರೇಶ್ವರನ ಮೇಣ್ ಸರ್ವ–
ಮಂಗಳೆಯ ಚರಿತಮಂ ಪಾಗಮೃತದೊಳುಸುರಿನಗೆ !

ಓ ಕಾರುಣ್ಯಕಂದಳೆ, ಕೇಳಿದುದು ಲೇಸಾಯ್ತು
ಪೇಳುವೆನ್ ನೀಂಕೇಳು ಪ್ರಕೃತಿ ಪುರುಷರ್ಗಿ ಭೇ–
ದ ಮಿಲ್ಲದ ಶಿವಶಕ್ತಿಯರ ಪೂರ್ವಚರಿತಮಂ
ಸಮಭಾವ–ಸಹಯೋಗ ಸಾಧನ ಸ್ವಭಾವಮಂ !

ರಮ್ಯವಹ ಕೈಲಾಸನಗರದಲ್ಲೊರ್ಮೆ ಶಿವ-
ಪಾರ್ವತಿಯರಾನಂದದಿಂ ಪಗಡೆಯಾಡುತ್ತ
ಕುಳಿತಿರಲ್ಕಾಟದೊಳ್ ನಾಂಗೆದ್ದೆ, ನಾಂಗೆದ್ದೆ-
ಎಂದಿರ್ವರ್ ಕಲಹಮಂ ತಾವ್ಮಾಡತೊಡಗಿಹರ್ ;
ಪಾರ್ವತಿಯು ಪ್ರೇಮ ಕೋಪಾನ್ವಿತಳ್ ತಾನಾಗಿ,

CC-0. Jangamwadi Math Collection. Digitized by eGangotri

'ಸೃಷ್ಟಿಸ್ಥಿತಿ ಲಯಂಗಳಂ ನಡೆಸುವಾದಿಶಕ್ತಿ
ನಾನಲ್ತೆ ನೋಡಿನೀನೆನ್ನಧೀನನಾಗಿಹೆ ;
ಇಂತಿರಲ್ ನೀನೆನ್ನ ಪರಾಭವಗೊಳಿಸುವ
ಪರಿಯೆಂತು ? ವಿಶ್ವಮಯ ವಿಲಾಸದೆ ವಿಹರಿಸುವ
ನಾನಸದಳ ಕಜ್ಜಂಗಳನೆಸಗಲಳವಿಗರ್ ;
ಚಣವಲ್ಲಿ ಹೆಗ್ಗಡಲಮಂ ಬತ್ತಿಸುವೆನ್ ಮೇಣ್
ಕಗ್ಗಲ್ಲಮಂ ಕೋಮಲಂಗೊಳಿಸುವೆನ್ ಮಂಜು
ವುರಿವಂತೆ ಮಾಳ್ಪೆನೆಂಬುದಂ ನೀನರಿಯೆಯಾ ?
ಕಾರಣಂ ನಿನ್ನಂಗೆಲಿದವಳಾನೇ ದಿಟಂ !
ಪ್ರಬಲ ಪ್ರಕೃತಿಯ ಮುಂದೆ ನಿನ್ನದೇಂ ಪೌರುಷಂ ?
ತಿಳಿಯೆ ತಾನನಿತಕಂ ನೀಂಮಿಗೆ ಮರುಳನಲ್ತೆ ? '

ತಾನಿಂತು ಪಾರ್ವತಿಯು ಗರ್ವದಿಂ ನುಡಿಯಲ್ಕೆ
ಶಂಕರಂ ಸೈರಿಸದೆ ಶಂಕರಿಯ ಹಂಕಾರವ
ಖಂಡಿಸುತ್ 'ಓ ಗೌರಿಯೆ ನಿನಗೀ ಸಾಮರ್ಥ್ಯ—
ಮೊದಗಿರ್ದುದೆನ್ನ ಸನ್ನಿಧಾನದಿಂದೈಸೆ !
ದೃಷ್ಟಿಯೆನ್ನದು ನಿನ್ನ ಮೇಲ್ಬೀಳೆ ನೀಂ ಚಿದ್ರೂ
ಪಳಾಗುವೆಯಲ್ಲವೇಂ ಜೈತನ್ಯಶೀಲಳಾ
ಗುವೆಯಲ್ತೆ ? ಇಲ್ಲದಿರೆ ಜಡರೂಪಳಲ್ಲವೇಂ ?
ನಿನ್ನಂತವರಿನಿಬರಂ ಸೃಜಿಸಬಲ್ಲಳವಿಗಾನ್ !
ನೀಂ ಜಗದ ಸೃಷ್ಟ್ಯಾದಿಗಳಂ ನಡೆಸುವುದೆನ್ನ
ಕಾರುಣ್ಯದಿಂದಲ್ತೆ ? ಆಲಿಸಾನಾಡೊಡಂ
ನೀನಿರದೆ ಲೀಲೆಯಿಂ ನಡೆಸುವೆನ್ ವಿಶ್ವದ
ಸೃಷ್ಟಿ ಸ್ಥಿತಿಲಯಂಗಳಂ ತಿರೋಧಾನಮಂ
ಮತ್ತಮನುಗ್ರಹಮಂ ಬೀರುವೆನ್ ಸ್ವೇಚ್ಛೆಯಿಂ !

ಎಂದೆನಲ್ ತ್ಯಜಿಸಿದರ್ ಗರ್ವಮಂ ಗಿರಿಜೆ ತಾಂ
ತೊಟ್ಟಹರ್ ಭಕ್ತಿಯಂ ಸಮನ್ವಿತ ಭಾವದಿಂ ;
ಓ ದೇವ, ನೀನೇಕೆ ಹೆಮ್ಮುನಿಸನು ತಳೆದಿಹೆ ?
ವಿನೋದಕ್ಕಾಗಿ ನಾನಿಂತೆಂದೆನಲ್ಲದೆ—
ಬೇರಿಲ್ಲ ಕ್ಷಮಿಸೆನ್ನ ನೀಂ ದಯಾಹೃದಯದಿಂ
ನಾಂಗೆಯ್ದ ಸಾಹಸಮಿದಂ ದಿಟಂ ಪುಸಿಯಲ್ತೆ !

CC-0. Jangamwadi Math Collection. Digitized by eGangotri

ಮತ್ತೆ ನಾಂ ನಿನ್ನಿಂದ ಪ್ರೇರಿತಳ್ ರಕ್ಷಿತಳ್
ನಿನಗಾನು ಪಡಿದೊತ್ತು ; ನೀನೆಸಗೆ ನಿಜಕರ್ತೃ !
ಎಂದೆನಿತು ಶಿವೆ ಬೇಡಿಕೊಂಡಡಂ ಲೆಕ್ಕಿಸದೆ
ಸ್ವಾಭಿಮಾನ ಸಂಪನ್ನ ಗಿರೀಶಂ ದಂಡಿಸಲ್
ಗಿರಿಜೆಯಂ ತೊರೆದು ಪಂಪಾಕ್ಷೇತ್ರಕೈತರುವನ್
ಬಡಗಣದ ದಿಕ್ಕಿನೊಳ್ ಪ್ರಶಾಂತಮಯಮಾಗಿಹ
ಕ್ಷೇತ್ರದೊಳ್ ಕುಳಿತಿಹನ್ ತಪಕಾಗಿ ತಾಳ್ಕೆಯಿಂ !
ಕರದಲ್ಲಿ ಜಪಮಾಲೆ, ಕೊರಳಲ್ಲಿ ಕಾಯ್ದೊಡಿಗೆ,
ಹಣೆಯಲ್ಲಿ ವಿಭೂತಿ, ಜಡೆಯಲ್ಲಿ ಗಂಗೆಯಂ
ತಾಂ ಧರಿಸಿಹನ್ ದೃಷ್ಟಿಮನ ಭಾವಂಗಳಂ ವಳಂ
ತನ್ನಾತ್ಮ ತೇಜದೊಳ್ ತಾನಿಟ್ಟು ತನ್ಮಯಂ
ತಾನಾಗಿ ತುರ್ಯದೊಳ್ ತೂರಿಹನ್ ಸಾರಿಹನ್ !
ಇಂದೀವರ ನೇತ್ರೆ ಶ್ರೀಗಿರಿಜೆಯಾಜ್ಞೆಯೊಲ್,–
ಇಂದ್ರಾದಿ ದೇವತೆಗಳೈತಂದು ಸ್ತುತಿಸಿಹರ್
ಮೇಣ್ ತಾನೆ ಪರವಸ್ತುವಾಗಿರ್ದು ಮತ್ತಾರ್ಗಿ
ತಪಂಗೈವನೊ ಜಪಂಗೈವನೋ ವಿಶ್ವದೊಳ್
ವಿಸ್ಮಯಂ ಬೇರುಂಟೆ ಬಗೆಯಲ್ಕೆ ; ಪರಶಿವಂ
ತಪಸ್ಯೆಗೆ ಕುಳಿತಿರುವೀ ಕ್ಷೇತ್ರಮೇಂ ಪವಿತ್ರವೊ ?
ಅನಿತರೊಳ್ ಹರಿವಿರಿಂಚಿಗಳಲ್ಲಿಗೈತಂದು
ಸ್ತುತಿಸಿಹರ್ ಪರಮೇಶನಂ ಶಾಂತಿಸಾಗರನಂ ;
ಅವರೆನಿತು ನುತಿಸಿದಡಮಚ್ಚಿಯಂ ಬಿಡವಿಲ್ಲ;
ಮನಮೆಚ್ಚರಂಗೊಳಲಿಲ್ಲ ತಸ್ಮೋಳ್ ತಾನಿಹನ್ !
ಇದಕಂಡು ನಿರ್ಜರರು ನಿಖಿಲಜಗಜ್ಜನನಿ
ನಗಜೆಯಾ ಬಳಿವಿಂಪು ಮೊರೆಯಿಟ್ಟು ಪೇಳಿಹರ್
ತಮಗಾದ ವೈಫಲ್ಯಮಂ ಮೇಣ್ ವಿಷಾದಮಂ !
ಶಿವೆಯವರ್ಗಂಜದಿರಿ ಮೇಣಳುಕದಿರಿ-ಎನ್ನ
ಪೈಜೆಯಂ ಸಾಧಿಸುವೆ, ನಿಮ್ಮಗಳ ರಕ್ಷಿಸುವೆ
ಯೋಚನೆಗೆ ಕಾರಣಮದಿಲ್ಲೆಂದರುಹಿ ಕಳುಹಿಪಳ್ !

ಹೂಣಿಗಳ್ ಹೈಮವತಿ ಸೃಜಿಸಿಹಳ್ ಸುಂದರಾಂ
ಗಿಯರಾದನೇಕಾಪ್ಸರೆಯರಂ ಪೇಳಿಹಳ್
ನೀವೆಲ್ಲಕೂಡಿ ಹಂಪೆಗೆ ತೆರಳಿ ಹಾವಭಾ-

CC-0. Jangamwadi Math Collection. Digitized by eGangotri

ವಂಗಳಿಂ ಮೀಣ್ ವಿಲಾಸೈಭವಂಗಳಿಂ-
ದುಪಾಯಾಂತರಗಳಿಂ ಶೂಲಿಯಾ ತಪಸ್ಸಿಗೆ
ಕಲಂಕಿತ ಕಂಟಕವ ತಂದೊಡ್ಡಿ ಬನ್ನಿರೌ
ಬಯಸಿವಡೆ ನಿಮ್ಮೊಡನೆ ನಾಂಬಂದು ನಿಮಗೊದಗಿ
ಬಪ್ಪ ಕಂಟಕಂಗಳಂ ನಿವಾರಿಸಿ ಕಾಪಿಡುವೆ !

ದೇವಿಯಪ್ಪಣೆಯಂತೆ ಬಂದಪರ್ ಚಲುವೆಯರ್
ದೇವನಿರುವಲ್ಲಿಗೆ ; ಒಯ್ಯನೊಯ್ಯನೆ ನಡೆದು
ಹಾಡಿದರ್ ಬೀಣೆಯಂ ಬಾಜಿಸುತ ಬಳಕುತ
ಮತ್ತಪೊಯ್ಯಾರದಿಂ ನರ್ತಿಸುತ ವರ್ತಿಸುತ
ಪಾರ್ಥಿಪರ್ ಕಾಮತೃಪ್ತಿಯಂ ನೆರಿಕೋರುತ್ತ !
ಕಾಮ ಕೇಳಿಯಂ ಸಲಿಕಂಡು ನುಡಿಗಳಂ ಕೇಳಿ
ಕ್ರೋಧದಿಂ ಕನಲುತ್ತ ದುಶ್ಶೀಲ ದುಷ್ಪಿಯರೆ
ದುರ್ವ್ಯಸನ ನಿರತೆಯರೆ ನೀವೆಲ್ಲ ಪಿಶಾಚಿಗ
ಳಾಗಿ ಪಾಪಿಗಳಾಗಿ ಜನರಿರದ ಮಸಣದೊಳ್
ಸಂಚರಿಸಿರೆಂದೆನುತ ಶಾಪಮಂ ಕೊಟ್ಟಪನ್ ;
ಗಿರಿಸುತೆಯ ಬಳಿಬಂದು ಬಗೆಗೆಟ್ಟು ಬಿನ್ನವಿಸಿ
ಗೋಳಿಡಲು, ಹೆದರದಿರಿ ನೀವೆಲ್ಲ ಸನ್ನಂಪ-
ದಿಂ ರಣದೆ, ಮಾರಿಕಾ, ಭೈರವೀ, ಸ್ಫೋಟಿಕಾ,
ದುರ್ಗೆಯರ್ ಎಂತೆಂಬ ಹೆಸರ್ವಡೆದು ದೇವಮಾ-
ನವರಿಂದ ಮುನಿಪುಂಗವರಿಂದ ಪೂಜಿತರಾಗಿ-
ರೆಂದು ಹರಸಿ ಕಳುಹಿಸಳಂಬಿಕಾ ಭವಾನಿಯು.

ಮಾಹೇಶಿ ಮೋಹಿನಿಯ ರೂಪದಿಂ ನಿತ್ಯಯೌ-
ವನವಂತೆ ಚಾರುವಂತೆ ಸರ್ವಲೋಕಮೋಹಕ-
ವಂತೆ ಛಲವಂತಿ ತವೆ ತಾನಾಗಿ ನಡೆತರುವಳ್ ;
ಋಷಿಸಂಘರಾಜಿತಂ ತರುಲತಾಮಂಡಿತಂ
ಮೃಗ ಪಕ್ಷಿ ಸಂಕುಲಾರವ ಮನಾಕರ್ಷಕಂ
ಷಡ್ರುತುಜ ಸೌಭಾಗ್ಯ ಸಮೃದ್ಧಂ ಪ್ರಸಿದ್ಧಂ
ತಾನಾವ ತಪೋವನಕೆ ಶಿವಸನ್ನಿಧಾನಕೆ !
ಸೊಬಗಿನಿಂ ಸುಳಿಯುವಳ್ ಬೆಡಗಿನಿಂಬಳುಕುವಳ್
ಬಗೆಬಗೆಯ ಭಾವಭಂಗಿಗಳಂ ತೋರುವಳ್

CC-0. Jangamwadi Math Collection. Digitized by eGangotri

ಮನುಮುನಿಗಳ್ ಮೇಣ್ ದೇವದಾನವರ್ ಮಾನವರ್
ಮನಮೋಹಿತರಾಗುವರ್ ಪರಿಭ್ರಾಂತರಾಗುವರ್
ದೆಸೆ ದೆಸೆಗೆ ತಿರುಗುವರ್ ಮೂಢಮತಿಗಳಾಗಿ !
ಇಂದ್ರ ಚಂದ್ರೋಪೇಂದ್ರ ಗುರುಕುಬೇರಾದಿಗಳ್ ೭೮೦
ಕೂಡಿ ತಾವು ಮೃಡಾಣಿ ಮೋಹಿನಿಯ ಬಳಿಬಂದು
ಬಿನ್ನವಿಸಿಕೊಂಡಿಹರ್ ಬಗೆಬಗೆಯಿಂ ಬಾಗುತಂ !
ಮತ್ತೆ ಸುರ ಪತ್ನಿಯರ್ ವರಗಳಂ ಬೇಡಿಹರ್ ;
ಸರಸ್ವತಿ ಬ್ರಹ್ಮಂಗೆ ಸ್ರಷ್ಟೃತ್ವ ಶಕ್ತಿಯಂ,
ಮೇಣ್ ತನಗೆ ವಿದ್ಯಾಧಿಕಾರಮಂ ಬೇಡಿಹಳ್,
ಇಂದ್ರಾಣಿಯಿಂದ್ರಂಗೆ ಶರೀರಾರೋಗ್ಯಮಂ
ಮೇಣ್ ಭೋಗಭಾಗ್ಯಮಂ ತ್ರೈಲೋಕ್ಯಾಧಿಪತ್ಯಮಂ
ಪ್ರಾರ್ಥಿಪಳ್ ; ಶ್ಯಾಮಲೆಯು ಯಮಧರ್ಮರಾಜಂಗೆ
ಮೂಲೋಕ ಜಂತುಗಳ ನಿಯಂತೃತ್ವಮಂ ಮೇ–
ಣರುಂಧತಿ ಪತಿವ್ರತಮಂ ತಾವ್ ಬೇಡಿ ಪಡೆವರ್ ! ೭೯೦
ಬಾನಿಗರ ಬಿನ್ನಪವ ನಾಲಿಸಿ ಮೋಹಿನಿಯು
ಮೋಹರೂಪವನುಳಿದೊಡನೆ ಸರ್ವಮಂಗಳೆಯ
ರೂಪಮಂ ತಾಳುವಳ್ ; ತೆರಳುವರ್ ಸುರರೆಲ್ಲ
ಸ್ವರ್ಗಕ್ಕೆ ; ದಾನವರ್ ಪಾತಾಳಲೋಕಕ್ಕೆ ;
ಮಾನವರ್ ತಂತಮ್ಮ ನಗರಂಗಳಿಗಿರದೆ !

ನಂತರಂ ಸರ್ವಮಂಗಳೆ ಶಿವನ ಸುತ್ತಲುಂ
ಸುಳಿದಾಡಿ ಇಂಚರದೆ ಹಾಡಿ ಕಡೆಗಣ್ಣೋಟ-
ದಿಂ ನೋಡಿ ಹೂವುಗಳ ಸೂರಾಡಿ ನಲಿದಾಡಿದಳ್
ಆ ಮಧುರಗಾನರಸ ಸೇಚನ ಪ್ರಭಾವದಿಂ
ಬಳಿಯಿರ್ದ ಮರಬಳ್ಳಿ ಚಿಗುರಿದವು ಚಲುಹೂವು ೮೦೦
ಗಳರಳಿದವು ದುಂಬಿಗಳ್ ಜೇಂಕರಿಸಿದವು ಮೇಣು
ಕೋಗಿಲಂಗಳ್ ಮಂಜುಳಸ್ವರದಿಂ ಪಾಡಿದವು
ಗಿಳಿವಿಂಡು ಪಾರಿದವು ; ಬಸಂತಂ ಬಂದಿಹನು
ಮನಸಿಜಂ ತನ್ನಯ್ದು ಪೂವಂಬುವನೆಸೆವನು.

ಇಂತಿರಲ್ ಕಂತುಹರಂ ಕಣ್ದೆರೆದು ಕಾಣುವನ್
ತನ್ನುಸಿರಿನೊಲ್ ಸುಳಿವ ಶ್ರೀಸರ್ವಮಂಗಳೆಯಂ

CC-0. Jangamwadi Math Collection. Digitized by eGangotri

ಮುರಮುರಳಿ ಕಣ್ಣಿರಿದು ನೋಡುವನ್ ಮನವಿಟ್ಟು
ಬಗೆಸಟ್ಟು ನೋಡುವನ್ ಅತ್ಯುತ್ಕಟತೆಯಿಂದೆ !
ಯಾವಿವಳ್ ಜಗನ್ಮೋಹನ ರೂಪವೆಂದಾಶ್ಚರ್ಯ
ಎಂದೆಣಿಸುತಿರೆ ಪಾಡುವಳಿನಿದನಿಯಿಂದಾಗ ; ೮೧೦

ಕೇಳುತಂ ಮತ್ತನಿತು ಮೋಹಕೊಳಗಾಗುವನ್
ಸ್ಮರತಾಪ ವಿಕಾರಮೊಳರೆಚಣಂ ತಳುವದಲೆ
ಸರ್ಪಮಂಗಳೆಯ ಸನಿಹಕ್ಕೈತರುತ್ತಿರಲ್
ಲಜ್ಜೆಯಿಂ ಗರ್ವದಿಂ ಶಂಕರನ ವಂಚಿಸುತ
ಕೆಯ್ಸೈಸಿಕ್ಕುಪೊಲೆಸಗಿ ತಪ್ಪಿಸುತ ಮುನ್ನಡೆವಳ್
ತನ್ನ ಮಾಯಾಜಾಲದಿಂ ಸೆಳೆದೆಳೆದೆಳೆದು
ದೂರ ದೂರಕೆ ಪೋಗಿ ಕಾಣದಂತಾಗುವಳ್ !
ಬೆದಕಿಹನ್ ಬವಡರಂ ಸ್ಮರಹರಂ ಶಂಕರಂ
ತಾನಲ್ಲಿಗಲ್ಲಿಗಂ ಪೋಗಿ ಮನ ಮೋಹಿನಿಯಂ
ದಟ್ಟವಹ ಪಿಟ್ಟಸೊಳ್ ದೂರ ದೂರಕೆಸಾಗಿ ೮೨೦

ನಟ್ಟ ಕಣ್ಣಿನಿಂ ದಣಿವಿಲ್ಲದಲೆ ತಣಿಯದಲೆ
ಸ್ಮರಜ್ವರ ಜ್ವಾಲೆಯಿಂ ಜೆಂಜೆಂದು ಜೆಂಡಾಗಿ
ಹುಚ್ಚು ಹಿಡಿದವನಂತೆ ತಿಳಿಯಚ್ಚಿಯಿಲ್ಲದಲೆ
ಮಿಗ ಪಕ್ಕಿಗಳಂ ಮತ್ತಕಾಡಪಶುಗಳಂ
ಕೇಳುವನ್ ಸರ್ಪಮಂಗಳೆಯಿತ್ತ ಸೋದಳೆಂದು ;
ವಿರಹದಾ ವ್ಯಥೆಯಿಂದ ಕಂಗೆಟ್ಟು ಮುಂಗೆಟ್ಟು
ಗಿಡು ಮರಂಗಳಂ ಮೇಣ್ ಲತೆಗಳಂ ತಬ್ಬುವನ್ ;
ಮತ್ತೊರ್ಮೆ ಮುನಿಸಿನಿಂ ಸಿಡಿದೆದ್ದು ಕಿತ್ತೆಸೆವನ್—
ಲತೆಗಳಂ, ಮುರಿದಿಕ್ಕುವನ್ ಮರದ ಕೊಂಬೆಗಳಂ !

ಸುಟ್ಟುರುಪುವೆನ್ ಪಿಟ್ಟಗಳಂ, ಕುಡಿದು ಬಿಡುವೆನ್ ೮೩೦
ಸಪ್ತಸಾಗರಂಗಳನೆಂದೆನುತ ಘೋಷಿಪನ್
ಮೇಣೆನ್ನ ಧನುಸ್ಸಿನಿಂ ಬಾಣದ ಮಳೆಗರೆದು
ಮುಚ್ಚಿ ಬಿಡುವೆನಂಬರ ವಿಸ್ತಾರವನ್ನೆಲ್ಲ ;
ಹುಡುಕುವೆನ್ ಬಿಡದೆನ್ನ ಚಿತ್ತರಮಣಿಯಂಕಾ
ತ್ಯಾಯನಿಯನೆಲ್ಲಿರ್ದಡಮ್ಮಿಂದುಂ ಗುಡುಗಿಹನ್ !

CC-0. Jangamwadi Math Collection. Digitized by eGangotri

ಶಿವನಾರ್ಪಟವನಾಲಿಸಿ ಋಷಿತಪಸ್ವಿಗಳ್
ಪರಿತಪಿಸಿಪರೈ ಹಾಹಾಕಾರ ಗೈಯುತಂ
ಮೇಣ್ ಸುಟ್ಟು ಪೋದಪವು ತರುಲತಾರಾಜಿಗಳ್
ಉದಿರಿದವು ಗಗನದಿಂದ ನಕ್ಷತ್ರರಾಶಿಗಳ್
ನೋವಿನಿಂ ಕೂಡಿಹರ್ ದಿಗ್ದೇವತೆಗಳೆಂದು
ತಾನಿಂತು ಸಂಭ್ರಾಂತಮಾಗಿತ್ತು ಜಗತ್ತು
ರಕ್ಷಿಸೈ ರಕ್ಷಿಸೈ ಎಂದು ಮೊರೆಹೊಕ್ಕರಾ–
ವಿಷ್ಣುವಂ ಬ್ರಹ್ಮಾದಿ ದೇವಗಣರೆಲ್ಲರು.
ಆಗವರೊಡಂ ವಿಷ್ಣು ತಾಂ ಬಂದು ಶಂಭುವಂ
ಪರಿಪರಿಯಾಗಿ ಪ್ರಾರ್ಥಿಸಿ ಪ್ರಸನ್ನೀಕರಿಸಿಹನ್
ಕೋರಿಕೆಯಂ ಮನ್ನಿಸಿ ಶಂಕರಂ ಶಾಂತರೂ–
ಪವಿಂದಭಯವನ್ನಿತ್ತು ಮೇಣ್ ತಪಂಗೆಯ್ದಿಹನ್ !

ಆತ್ತ ಕೈಲಾಸಕ್ಕೈತಂದಿರ್ದ ಮಂಗಳೆ
ಪತಿಗಾಗಿ ಪರಿತಪಿಸುತಿರ್ದಳಯ್ ಕಾಡಿನೊಳ್
ಕೆಯ್ವಿಡಿಯೆ ಬಂದಿರ್ದ ಚಂದ್ರಧರನ ವಂಚಿಸಿ
ಬಂದುದಕೆ, ಮನದಲ್ಲಿ ಮೂಡಿರ್ದ ವಿರಹಕೆ ;
ಮತ್ತೀಗ ಮನದಾಳ್ದನ ಸೇರುವ ಬಗೆಯೆಂತು ?
ಸೇರದಿರೆ ತಾಳದೀ ಮನಂ ಮೇಣ್ ತಾಳದೀ
ಪ್ರಾಣಂ, ನಿಮಿನಿಮಿಷಂ ವರುಷಮಾಗಿಹುದಕ್ಕುಟಾ !
ನಿಂತಡಂ ಶಶಿಧರಂ, ಕುಂತಡಂ ಶಶಿಧರಂ
ಉಂಡಡಂ ಶಶಿಧರಂ, ಉಟ್ಟಡಂ ಶಶಿಧರಂ
ಮೇಣ್ ಮನೆಗೆಲಸಂ ಕೈಕೊಂಡಡಂ ಶಶಿಧರಂ ;
ಮಾಡುತಿಹ ಮಾಟದೊಳ್ ನೋಡುತಿಹ ನೋಟದೊಳ್
ಕೂಡುತಿಹ ಕನಸಿನಾ ಕೂಟದೊಳ್ ಶಶಿಧರಂ !
ತೆರಳುವೆನ್ ವೇಷಾಂತರದಿಂದಿರಲಳವಿಲ್ಲ ;
ಎಂಪೆನುತ ಮೋಹನದ ವಿಗವಾಗಿ ಬಂದಿಹಳ್
ಶಾಂತಚಿತ್ತದಿಂದಂ ತಪಿಸುತ್ತ ಕುಳಿತಿರ್ದ
ಶಶಿಧರನ ಸುತ್ತಲುಂ ಸುಳಿಯುತಿರೆ ನೋಡಿಹನ್
ಜಿಗಿವೆಯಾ ಮೆಯ್ಬಣ್ಣ ಜಿನ್ನದೊಲ್ ಮೆರುಗಿತ್ತು,
ಕೋಡುಗಳ್ ಕೂರಾಗಿ ಕಂಗೊಳಿಸುತಿರ್ದನೈ
ಕೊರಳದಂ ಹೊಂದಾವರೆಯ ದೇಂಟಿನೊಲ್ ಮೇಣು

CC-0. Jangamwadi Math Collection. Digitized by eGangotri

ಖುರಪುಟಂ ವಜ್ರದೊಲ್ ಶೋಭೆವಡೆದಿರ್ದವೈ ;
ಚಿಲು ಮೊಗಂ ಜೆಲುಮೂಗು ಜೆಲುಗಣ್ಣು ತಾಸುಳ್ಳ
ಮಿಗಮದಂ ವನದೇವತೆಗಳ ನೋಹಿಸುವಂತಿತ್ತು,
ಅದಕಂಡು ಶಶಿಧರನ ಜಪಮಾಲೆ ನಿಂತಿತ್ತು ; ೮೭೦

ಮನಮುಗ್ಧವಾಯಿತು ; ಜಿಂಕೆಯಾ ಬಳಿಬಂದು
ಹಿಡಿತಂದು ಮುದ್ದಿಸುತ ಬಳಿಯಿರಿಸಿಕೊಂಡಿಹನ್
ಹರಿಣ ಲೀಲಾವಿಲಾಸಂಗಳಂ ನೋಡುತ್ತ
ನಲಿಯುತ್ತ ತಿಂಡಿಯುಂ ತಿನಿಸುತ್ತ ತಾನಿರಲ್
ತನಗೆ ಮೋಹಿತನಾದುದಂ ತಿಳಿದು ಹರಿಣಮದು
ತನ್ನ ರೂಹಂ ಬಿಟ್ಟು ಸತಿಯ ರೂಹಂ ತೊಟ್ಟು
ನಿಲ್ಲುತಿರೆ ಕಣ್ತುಂಬಿ ಕಾಣುತಂ ನಲಿದಿಹನ್
ಕೆಯ್ತುಂಬಿ ನಳಿದೋಳ್ಗಳಿಂ ಸೆಳೆದು ತಬ್ಬಿಹನ್
ಸಂತಸಂ ಸೋಜಿಗಂ ತಳೆದಿರ್ದನೊಮ್ಮಿಂಗೆ !
ಸರ್ವಮಂಗಳೆ ಚರಣಕೆರಗಿಹಳ್ ಸಮರಸದೊ ೮೮೦

ಳಿರ್ದರವರಂದಿನಿಂದಗಲದೊಲ್ ಮುಂದಕ್ಕೆ !
ಪ್ರಕೃತಿಯಲ್ಲಿ ಪುರುಷಂ, ಪುರುಷನಲ್ಲಿ ಪ್ರಕೃತಿ
ಮಣ್ಣುನೀರ್, ನೀರ್ಬೆಂಕೆ, ಬೆಂಕೆಯಸಿಲ್, ಗಾಳಿಮುಗಿಲ್
ಜೊತೆಗೂಡಿ ಯಿರುವಂತೆ ತಾವಿರುವರರಿಯಲ್ಕೆ
ಅಂಗಲಿಂಗಗಳಿರುವವಿವುಗಳೊಲ್ ಶರಣಪ್ಪಿ !
ಹಾಲಿನೊಳ್ ಮಧುರತ್ವ ಶುಭತ್ವಗಳಿರ್ಪಂತೆ
ಜೀವನದೊಳ್ ಶಿವಶಕ್ತಿ ಸಮ್ಮಿಳಿತಮಾಗಿಹವು.
ಓ ಗುರುವೆ, ಶಿವಶಕ್ತಿಯೊಂದೆಂಬ ತತ್ವಮಂ
ತಿಳಿದು ನಲಿದೆನಯ್ ನಿನ್ನ ಕೃಪಾ ಕಟಾಕ್ಷದಿಂ !
ಗಣಂಗಳ್ ಪತ್ರಪುಷ್ಪಂಗಳಂ ಮನೆಮನೆಗೆ ೮೯೦

ತಂದೀವ ಕಾಯಕದ ಫಲಮದೇನೆಂಬುದಂ
ಕಂದಳ್ಕಿ ತಿಳಿಹೇಳಿ ಕರುಣಿಸಲ್ ಬೇಡುವೆನ್ ;
ಎಂದೆನಲ್ ಗುರುವರಂ ಪೇಳ್ದಪನ್ ಮುಂದಿನೊಲ್ ;

CC-0. Jangamwadi Math Collection. Digitized by eGangotri

ಪತ್ರಪುಷ್ಪ ಸೇವಾಫಲಂ
ಮೇಣ್ ಮಾಲ್ಯವಂತ ಗಿರಿಮೌಲ್ಯಂ

ಮರೀಚಾತ್ರ್ಯಂಗಿರಸ ಪುಲಸ್ತ್ಯ ಪುಲಹ ಕ್ರತು
ವಸಿಷ್ಠರ್ ಸ್ವಾಯಂಭುವ ಮನ್ವಂತರದ ಸ–
ಪ್ತರ್ಷಿಗಳ್ ನಾಗತೀರ್ಥ ಸಂದರ್ಶನವೆಸಗಿ
ಬಂದಪರ್ ಬಂಧುರದ ಮೌಲ್ಯವಂತಗಿರಿಗೆ ;
ವಂದಿಪರ್ ಗಿರಿಯ ಪ್ರಕೃತಿಪೈಭವವಮಂ ಕಂಡು
ಮೈಯುಬ್ಬಿ ಮನವುಬ್ಬಿ ಭಕ್ತಿಭಾವಂ ತಬ್ಬಿ
ಮೇಣು ಪ್ರೇಮೋದ್ರೇಕದಿಂದಚ್ಚರಿಗೊಂಡು ೯೦೦

ತಪೋವರರಾ ಗಿರಿಯ ಹಿರಿಮೆಯಂ ತಿಳಿಯಲ್ಕೆ
ಕೇಳಿಹರ್ ಆಲ್ಲಿರ್ಪ ಸುಕ್ಷೇತ್ರ ಪಾಲನಂ ;
ಪೇಳಿಹನ್ ಕ್ಷೇತ್ರಪಾಲಂ ಸಪ್ತರ್ಷಿಗಳ್ಗೆ
ಮೌಲವಂತ ಹೂವಾಡಿಗನ ವೃತ್ತಾಂತಮಂ !

ಕೇರಳದ ಪ್ರಾಂತದೊಳ್ ಪೂರ್ವದೊಳ್ ತಾನಿಹನ್
ಜಯಸಿಂಹನಾಮದಿಂ ಮಹೀಪಾಲನೋರ್ವಂ
ಶಿವಪೂಜೆಯೊಳ್ನಿರತಂ ಶಿವಭಕ್ತಿಯಿಂ ಭರಿತಂ ;
ಶೈವಸಾಹಿತ್ಯ ಸಂಸ್ಕೃತಿ ಪ್ರೇಮ ಸಂಯುತಂ !
ಆತನಾ ರಾಜಧಾನಿಯೊಳಿರ್ದ ಹೂಗಾರ–
ಮೌಲ್ಯವಂತಂ ನಿತ್ಯದೊಳ್ ರಾಜಪೂಜೆಗಂ ೯೧೦

ವೇಳ್ಕೈಸಿತು ಪೂಮಾಲೆಗಳ ಕಟ್ಟಿ ಕೊಡುತಿಹನ್
ಇಂತಿರುತ್ತಿರಲೊರ್ಮೆ ದುರ್ದೈವದಿಂ ಪುಷ್ಪ-
ಮಾಲೆಯೊಳ್ ತಲೆಗೂದಲೊಂದು ಕಾಣುತ್ತಿರೆ
ರಾಜದೂತರೀ ದೋಷಮಂ ಮೌಲ್ಯವಂತನ
ಮೇಲಿಸಿರಿ ಹೆಂಗಸರ್ ಮುಡಿದ ಹಾರಿರವೇಳ್ಕು–
ಮೆಂದುಸುರಿ ನಿರ್ಮಾಲ್ಯತನವನಾರೋಪಿಸಿದರ್ !
ಜಯಸಿಂಹ ಭೂಪಾಲಂ ಕೋಪದಿಂ ಬೇರೇನು
ವಿಚಾರಿಸದೆ ಮೌಲಾಕಾರನಂ ದೇಶದಿಂ
ಸೊರಗಟ್ಟಿ ಬಿಟ್ಟಿಹನ್ ಶೀಲ ಸಂಪ್ರೇಮದಿಂ !

CC-0. Jangamwadi Math Collection. Digitized by eGangotri

ಇಂತು ನಿಷ್ಕ್ಕರಣಂ ನಿಸ್ಪಾಸಿಶನಾಗಿಹ
ಮೌಲ್ಯವಂತಂ ದೇಶಪರ್ಯಟನಂ ಗೈಯುತಂ
ಬುಮ ನಿಂತಿಹನ್ ವಿಜಯನಗರಿಗೆ ; ಮೆಣ್ ತನ್ನ
ಕಾಯಕದೆ ಪತ್ರಪುಷ್ಪಂಗಳಂ ಸಂಚಯಿಸಿ
ಹೂಗಳಿಂ ಹಾರಂಗಳಂ ರಚಿಸಿ ಜೆಲುವಾಗಿ
ನಿತ್ಯದೊಳ್ ಶಿವಭಕ್ತ ಜನಂಗಳ ಮನೆ ಮನೆಗೆ
ಕುಡುತ್ತಿದ್ದನಾತಂ ಶ್ರದ್ಧೆಯಿಂ ತಪ್ಪದೊಲ್
ಸಂತಸಂ ಪಡಿಸುತಿದ್ದನ್ ಪರಮಭಕ್ತರಂ !
ಇಂತಿರುತ್ತಿರಲೊಕ್ಕೆ ಮತವ ಶ್ರೀಗುರುವಿನಿಂ
ಮುಂತ್ರೋಪದೇಶಮಂ ಪೊಂದುವನ್ ನಿಷ್ಠೆಯಿಂ ;
ನಿತ್ಯದೊಳ್ ಪರಮಪಂಚಾಕ್ಷರಂ ಜಪಿಸುತ್ತ
ನಿಶ್ಚಲದೆ ಲಿಂಗಮಂ ಪೂಜಿಸುತ್ತ ನಿರ್ಮಲ
ಚಿತ್ತದಿಂ ನಿಡುಗಾಲ ತಾನಿರುತ್ತಿರೆ–ಶಿವ
ನೊಲಿದಬಿಲ ಸೌಭಾಗ್ಯಗಳನಿತ್ತು ರಕ್ಷಿಪನ್
ಮೌಲ್ಯವಂತನ ಪುಣ್ಯಕೆಣೆಯಿಲ್ಲದಂತಾಯ್ತು ;
ಹೂಗಾರ ಕಾಯಕದೆ ಪಾವನಂ ತಾನಾದ
ಬೆಟ್ಟಕ್ಕೆ ಮಾಲ್ಯವಂತಗಿರಿಯೆಂದುಸುರುವರ್ !

ಇಂತಿರಲ್ ಶ್ರೀರಾಮಲಕ್ಷ್ಮಣರ್ ಸೀತೆಯಂ
ಪುಡಕುತ್ತ ವಿರಹದಿಂ ವೇದನಂ ಬಡುತ್ತ
ತಾಲ್ಯದಿಂ ಲೋಕದವರಂತೆಪೊಲ್ ಗಳಹುತ್ತ
ಮಾಲ್ಯವಂತ ಬೆಟ್ಟಕ್ಕೈತಂದು ನಿಂತಿಹರ್
ಒಂದಿನಂ ವಿರಹವೇದನೆಯುಂ ಸಹಿಸದಲೆ
ಶ್ರೀರಾಮನಸುತಾಪದಿಂ ಕೂಡಿ ತನ್ನನುಜ
ಲಕ್ಷ್ಮಣನ ಬಳಿಕರೆದು, ನನ್ನಂತೆ ನೀನೇಕೆ
ದುಕ್ಕಕ್ಕೊಳಗಾಗುವೆ ? ನೀನಯೋಧ್ಯೆಗೆ ಪೋಗಿ
ಭರತಾದಿಗಳೊಡನೆ ಸೊಗಸಿನಿಂದಿರೆಂದುಸುರಿ
ನನ್ನಿಂದ ಸೀತೆಯ ವಿರಹ ವ್ಯಥೆಯುಂ ಸಹಿಸ
ಲಾಗದಿದೆ ನಾಸಿಲ್ಲಿಯೇ ಪ್ರಾಣತ್ಯಾಗಮುಂ
ಮಾಳ್ಪೆಂ ಬೇರೊಂದು ಪಾಯಮಿಲ್ಲೆಂದುಸುರಿ
ಗುಹೆಯೊಂದರೊಳ್ ಪೋಗಿ ತಾಂ ಕುಳಿತುಕೊಳ್ಳುವನ್ !
ಲಕ್ಷ್ಮಣಂ ನಿಡಿಲೆರಗಿಹ ಮರದಂತೆ ನೆಲಕುರುಳಿ

CC-0. Jangamwadi Math Collection. Digitized by eGangotri

ಕೋದಿಸುತ ಯೋಚಿಸುತ ಗವಿಯ ಬಾಗಿಲ ಮುಂದೆ
ಕುಳ್ಳಿರಲ್ ಮಾಲ್ಯವಂತನಲ್ಲಿಗೆ ಬಂದು ತಾನ್
ಚಿಂತಿಸುವ ಲಕ್ಷ್ಮಣನ ವಿಚಾರಿಸಿ ದಯೆಯಿಂದ
ನೆರವಾಗಿ ಗವಿವಾಗಿಲಂ ತೆರೆದು ರಾಮನಂ
ಹೊರಬರಿಸಿ ಬಳಿಯಿರ್ಪ ತೀರ್ಥದೊಳ್ ಮೀಯಿಸಿ
ಸಹೋದರರ್ಕಳ್ಗೆ ಧೈರ್ಯಮಂ ಪೇಳುತ್ತ
ಪಂಚಾಕ್ಷರ ಮಂತ್ರೋಪದೇಶ ಮನೆಸಗುವನ್ ;

ಓ ರಾಮ, ನೀಂ, ಶಿವಂ, ಮೇಣ್ ಸೀತೆ ಪಾರ್ವತಿಯು,
ಲಕ್ಷ್ಮಣಂ ಕುಮಾರಂ, ಭರತಂ ಗಣಾಧಿಪಂ,
ಶತ್ರುಘ್ನಂ ವೀರೇಶಂ ಮಾಲ್ಯವಂತಗಿರಿಯೆ
ತಾನಯೋಧ್ಯಮೆಂದುಂ ಭಾವಿಸಿರೆ ನಿಮಗಕ್ಕು
ಲೇಸಮದು ಶಿವಭಕ್ತರಾದುದಕೆ ಶಿವಭಕ್ತ
ರಾಷಣಂ ಸೀತೆಯುಂ ಸುಲಭದೊಳ್ ತಂಡೊಪ್ಪಿ
ಸುವನ್ ನಿಮಗೆಂದುಸುರಿ ಸಂತಸಂಗೊಳ್ಳುವರ್
ಶ್ರೀ ಮಾಲ್ಯವಂತನಾ ಮೌಲ್ಯಮಂ ಮನಗಾಣು
ವರ್ ಮೇಣು ಗೌರವಿಸುವರ್ ಸಲೆ ಸಹೋದರರ್ !
ಶ್ರೀಮಾಲ್ಯವಂತನಾ ಜೀವನಕೆ ಮೌಲ್ಯಮಂ
ತಂದಿತ್ತಿತ್ತೈ ಪತ್ರಪುಷ್ಪಗಳ ಕಾಯಕಂ !
ಶ್ರೀಮಾಲ್ಯವಂತನಿಂ ಶ್ರೀರಾಮ ಲಕ್ಷ್ಮಣರ್
ಶಿವಭಕ್ತರಾಗಿ ಶಿವಲಿಂಗಮಂ ಪೂಜಿಪರ್ !
ಪತ್ರ ಪುಷ್ಪಂಗಳಾ ಕಾಯಕಕ್ಕೆ ಮೊದಲಿಗ–
ನಾವ ಮಾಲ್ಯವಂತನದೇಂ ಭಾಗ್ಯವಂತನೋ ?
ಗುರುವೆ, ನಿನ್ನಿಂದಿದಸರಿದ ನಾವೇಂ ಪುಣ್ಯಕೊ ?
ಹೂಗಾರ ಬಳಗಮದು ದಿಟವಿಂಧನ್ಯಮಲ್ತೆ !

ಪುಷ್ಪ ಪ್ರಸಾದ ಮಾಹಾತ್ಮ್ಯಂ
ಮೇಣ್ ಕೋಟಿಲಿಂಗತೀರ್ಥಂ !

ಓ ಗುರುವೆ ಶಿವಭಕ್ತ ಜನಕಲ್ಪ ತರುವೆ ನೀಂ
ಪೇಳ್ ಲಿಂಗಪೂಜಾ ಪ್ರಸಾದ ಮಹಾತ್ಮ್ಯಮಂ ;
ಎಂದು ಶಿವ ಶರಣನ್ವೆ ಸೆರಗೊಡ್ಡಿ ಪ್ರಾರ್ಥಿಸಲ್
ಶ್ರೀದೊಡ್ಡ ಬಸವಾರ್ಯರಿಂತೆಂದು ಪೇಳಿದರ್ ;

CC-0. Jangamwadi Math Collection. Digitized by eGangotri

ಪೂರ್ವವಾಹಿನಿಯಾವ ತುಂಗಭದ್ರಾ ತೊರೆಯು
ಚಕ್ರತೀರ್ಥದಾ ಬಳಿ ಗುಡ್ಡಗಳೆರಡರ ನಡುವೆ
ಬಡಗಣಕೆ ತಿರುತಿರುಗಿ ಹರಿಯುತಿಪ್ಪೆ ತಿಳಿಯಾಗಿ,
ನಾಡ ಜನರಿಗೆಲ್ಲಾ ಪುಣ್ಯಫಲ ಪ್ರದವಾಗಿ !
ಈ ನೆಲೆಯ ಬಲಗಡೆಯ ಪೆಟ್ಟವದು ಋಷ್ಯಮಾ
ಕಮೆಂದುಸುರುವರ್ ಅವರೆದುರಿನೊಳಿರ್ಪ ಮೂಡಣದ
ಭಾಗದೊಳ್ ಬಿತ್ತರದ ಬಂಡೆಗಳ ಮೇಲ್ಗಡೆ
ನೂರಾರು ಲಿಂಗಗಳ ಕಡೆದಿಹರ್ ಶಿಲ್ಪಿಗಳ್ ; ೧೦೦೦
ಈಗಿದಕೆ ಕೋಟಿಲಿಂಗಮೆಂದುಂ ಮೇಣ್ ಕೋಟಿ–
ತೀರ್ಥಮೆಂದುಸುರವರ್ ಹಂಪೆಯಂ ಬಲ್ಲಿದರ್ !

ಪಿಂತೊರ್ಕಿ ಸುರೇಂದ್ರಂ ತೊರೆಯ ಮಳಲಿನ ಕೋಟಿ
ಲಿಂಗಗಳ ಮಾಡಿ ಪೂಜಿಸಿದನೆಂದುಸುರುವರ್ !
ಇದು ನಿಸರ್ಗ ಜೆಲುವಿನ ಮೇಣೊಲವಿನ ನೆಲೆವೀಡು,
ಓಮಗಾ, ನೀನೊರ್ಕ್ಕೆ ನಡೆತಂದು ನೆರೆ ನೋಡು ;
ನಿನ್ನ ಕಣ್ಣಿಗೆ ಮನಸ್ಸಿಗೆ ಆಗುವುದು ಹರುಷ,
ನಿನ್ನ ಬುದ್ಧಿ ಭಾವಗಳಿಗಾಗುವುದು ವಿಕಾಸಂ !

ಪೂರ್ವದೊಳ್ ಶಿವಂ ಕೈಲಾಸದೊಳ್ ನೆರೆದಿರ್ದ
ತುಂಬಿದೋಲಗ ನಡುವೆ ರತ್ನ ಸಿಂಹಾಸನದೆ ೧೦೧೦
ಶಿವೆಯೊಡನೆ ಕುಳ್ಳಿರ್ದು ಸಲೆ ರಾಜಿಸುತಿರ್ದಂ
ಮೂಲಕುಮಿ ಬಾಗಿ ಸೀಗುರಿಯ ಬೀಸುತಿರ್ದ್ದಳ್
ಸರಸತಿಯ ನಿಡುವೀಣೆಯಂ ಬಾಜಿಸುತಿರ್ದ್ದಳ್
ಶಚಿಯ ಶ್ರೀಚರಣಮಂ ಮಿಗೆ ಪೂಜಿಸುತಿರ್ದ್ದಳ್
ಪ್ರಮಥಗಣರೆಲ್ಲರ್ ನೆರೆದೋಲೈಸುತಿರ್ದರ್
ಇಂತಿರಲಾ ಸಮಯದೊಳ್ ದುರ್ವಾಸ ಮುನಿಪುಂಗ
ವಂ ಶಿವನ ಸಂದರ್ಶನಕ್ಕೆಂದು ಬಂದಿಹನ್
ಭಕ್ತಿಪರವಶನಾಗಿ ಸಾಂಬನಂ ಸ್ತುತಿಸಿಹನ್
ಭಾವರಸ ಪೂರ್ಣಮಾಗಿ ಮೇಣರ್ಥವತ್ತಾಗಿ !
ಗಿರಿಜೆ ದುರ್ವಾಸಮುನಿಸ್ತುತಿಗೊಲಿದು ನಲಿನಲಿದು ೧೦೨೦
ಕುಡುವಳೊಂದನರ್ಘ್ಯವಹ ಪುಷ್ಪದ ಹಾರಮಂ !
ಕೇಶವಂ ಮಹಾದೇವನಂಗೆ ಸಮರ್ಪಿಸಿರ್ದ

CC-0. Jangamwadi Math Collection. Digitized by eGangotri

ಹಾರಮದು ಸರ್ವಸಿದ್ಧಿದಂ ಮೇಣ್ ಸರ್ವಸಂ–
ಪತ್ಪ್ರದಾಯಕಂ ಮೇಣಾನಂದ ವರ್ಧಕಂ !
ಆ ಮಾಲೆಯಂ ದುರ್ವಾಸಮಹರ್ಷಿಯು ಶ್ರದ್ಧೆಯಿಂ
ಸ್ವೀಕರಿಸಿ ಶಿರಕೊತ್ತಿ ಮೂಸುತ್ತ ನಲಿಯುತ್ತ
ಕೈಲಾಸವತ್ತಣಿಂ ಪೊರಡುವನ್ ಪಯಣಕೆ ;
ಮಾರ್ಗದೊಳ್ ಚಿಂತಿಪನ್ ವಿರಕ್ತಂಗೀಹಾರ
ದಿಂದೇಂ ಪ್ರಯೋಜನಂ ? ಭೋಗಿಗಳ್ಗಿತ್ತಡಂ
ಕಂಪಿನಿಂ ಸೊಗಸುವರ್ ಸಡಗರಿಸುವರ್ ಗಡಾ ! ೧೦೩೦
ಎಂದೆನುತ ನಡೆತರುವನಮರಾವತಿ ಕಡೆಗೆ ;
ಕಾಂಬನ್ಐರಾವತಿಯನೇದಿರ್ದ ಶಚೀ ಪತಿ–
ಸ್ವರ್ಗಾಧಿಪತಿ ಮೇಣ್ ಸುರೇಶನಂ ದಾರಿಯೊಳ್
ದುರ್ವಾಸನಾಜೋಸಿಹನ್ ಶಂಭುವಿತ್ತಿರ್ಪ
ಹಾರಕೀತನೆ ತಕ್ಕವನೆಂದಿತ್ತಿಹನ್ ಗಡಾ !
ಮದೋದ್ಧತ ದೇವೇಂದ್ರನಾ ಹಾರಮಂ ಕೊಂಡು
ಐರಾವತದ ತಲೆಯ ಮೇಲೆಸೆದನಸಡ್ಡೆಯಿಂ !
ಬಳಿಕಮ್ಐರಾವತಂ ಪಶುಸಹಜ ಚೇಷ್ಟೆಯಿಂ
ತನ್ನ ತಲೆಮೇಲಿರ್ದ ಹಾರಮಂ ಸೊಂಡಿಲಿಂ ೧೦೪೦
ತೆಗೆದೆಳೆದು ಕಾಲ್ಗಳಿಂ ತೊತ್ತುಳಿವುದರೆ ಚಣದೊ
ಳಿದಕಂಡು ಮುನಿವರಂ ಮುನಿಸಿಂದ–ಓ ಇಂದ್ರ,
ನಿನಗೆನಿತು ಗರ್ವವೋ ಶಂಭುಪ್ರಸಾದಕ್ಕೆ
ಕಿಂಚಿತ್ತು ಬೆಲೆಯಿಲ್ಲದಾಯ್ತು ನಿನ್ನಲ್ಲಕ್ಕಟಾ ;
ನೀಂ ಸರ್ವ ಸಾಮ್ರಾಜ್ಯದಿಂ ಭ್ರಷ್ಟನಾಗೆಂದು
ಶಪಿಸಿಹನ್ ದಿವ್ಯಾತ್ಮ ದುರ್ವಾಸಯತೀಂದ್ರಂ !
ಯತಿಶಾಪ ವಾಕ್ಯಮಂ ಕೇಳುತಿರೆ ಸೊಕ್ಕಡಗಿ
ಆನೆಯಿಂದಿಳಿದು ದುರ್ವಾಸಮುನಿ ಪದಕೆರಗಿ
ಬೇಡುವನ್ ಬಗೆಬಗೆಯಿಂ ಕ್ಷಮಾದಾನಮಂ
ಶಚಿದೇವಿ ಸುರಗಣಂ ಮುನಿವರನ ಮೊಲೆವೊಕ್ಕು ೧೦೫೦
ಪ್ರಾರ್ಥಿಪರ್ ಕೋಪಮಂ ವಿಸರ್ಜಿಸಿ ಶಾಂತಿಯಿಂ
ನಿಶ್ಯಾಪಮಂ ಪಾಕಶಾಶನಂಗನುಗ್ರಹಿಸಲ್ ;
'ದೇವದೇವನಂ ಶಂಕರನನಾರಾಧಿಸಲ್-
ಲಭಿಸುಗುಂ ಮರಳಿ ನಷ್ಟ ಸಾಮ್ರಾಜ್ಯಮಿದೆಂದು'
ನಿರೂಪಿಸಿ ನಡೆದಿಹನ್ ದುರ್ವಾಸಮುನಿವರಂ !

CC-0. Jangamwadi Math Collection. Digitized by eGangotri

ಮುನಿಶಾಪ ವೃತ್ತಾಂತಮನಾಲಿಸಿ ಬಲೀಂದ್ರ-
ನಾಚರಣಂ ದೇವರಾಜನ ಮೇಲೆ ದಾಳಿಯಂ
ಗೆಯ್ದಿಹನ್ ಸುಲಭದೊಳ್ ಸ್ವರ್ಗಮಂ ಗೆದ್ದಿಹನ್
ಸುರವರಂ ತಾನಾಗಿ ಗದ್ದುಗೆಯನೇರಿಹನ್ !
ಸ್ವರ್ಗಾಧಿಪತ್ಯಮಂ ಕಳಕೊಂಡ ಶಚೀಪತಿ
ಕಡುನೋವಿನಿಂದಿರಪೆ ಕಂಗೆಟ್ಟು ಕಾಡಿನೊಳ್-
ಗಲೆದಿಹನ್ ನೂರಾರು ಬರಿಸಗಳ ವರೆವಿಗುಂ !

ಆಮೇಲೆ ಗುರುವರನ ಸನ್ನಿಧಿಗೆ ತಾಂಬಂದು
ವಿನ್ನವಿಸಿ ವೈವ ಪಂಚಾಕ್ಷರಿಯ ಬೋಧೆಯಂ
ಮೇಣು ಶಿವಲಿಂಗಪೂಜಾವಿಧಾನವ ಪಡೆದು
ಹಂಪೆಯೊಳ್ ಕೋಟಿ ಲಿಂಗಂಗಳಂ ಪ್ರತಿಷ್ಠಿಸಿ
ದೇವೇಂದ್ರನತಿ ಭಕ್ತಿಯಿಂ ಪೂಜಿಸುತ್ತಿರಲ್
ಪರಮೇಶನೊಲಿದಾಗಮಿಸಿ, ಪದವಿಯೊಳಿರುವಲ್ಲಿ
ಗರ್ವದಿಂ ಬಾಳುವುದು ತರವಲ್ಲ, ಸಾಧು ಸಂ-
ತರ ವರ ಪ್ರಸಾದಮಂ ಕಡೆಗಣಿಪುದುಚಿತವ-
ಲ್ಲೆಂದು ಹಿತಬೋಧನಂಗೆಯ್ದು ಕಾರುಣ್ಯದಿಂ,
'ಓ ಸುರಪ, ಸಮುದ್ರಮಥನಂಗೆಯ್ದು ಸುಧೆಯಂ
ಸಂಪಾದಿಸೆ ನಿನಗೆ ಸೊಗಮಹುದು ಸಗ್ಗ ದಕ್ಕುವು-
ದೆಂದನುಗ್ರಹಿಸುತಂತರ್ಧಾನನಾಗಿಹನ್ !
ಸುರಾಧಿಪನಂತೆಸಗಿ ಸಗ್ಗಕೊಡೆಯನಾಗಿಹನ್ !!

ತಿಳಿಯಲ್ ಹಸಾದದಿಂದೆಲ್ಲ ಹಸಿವುಗಳ್ ಹಿಂಗಿ
ಹೋದಪವು, ಮೇಣ್ ಶಾಂತಿ ತೃಪ್ತಿಗಳ್ ಲಭಿಸುಗುಂ !
ಬದುಕಿಹವು ಸರ್ವಪ್ರಾಣಿಗಳ್ ಪ್ರಸಾದದಿಂ,
ಪ್ರಸಾದದೊಳಿರ್ಪ್ಪುದೈ ಜೀವನದ ಸತ್ವಮದು.
ಮಿಗಿಲಾಗಿ ಗುರುಲಿಂಗ ಪ್ರಸಾದದೆ ವಿಚಾರಿಸೆ
ದೇಹಾತ್ಮಗಳ್ಗೆ ಸತ್ವಮದು ದೊರಕುವುದೈಸೆ !
ಪ್ರಸಾದಂ ಪರಬೊಮ್ಮಮೆಂದುದಾ ಶ್ರುತಿಯದು,
ಪುಸಿಯಲ್ತು ಪರಿಕಿಸಲ್ ತಾನಿದಂ ಶರಣಪ್ಪೆ !

CC-0. Jangamwadi Math Collection. Digitized by eGangotri

ಲಿಂಗಪೂಜಾ ಪ್ರಭಾವಂ,
ಆಮ್ರಕೋಟೀಶ್ವರಾವಿರ್ಭಾವಂ !

ಪತ್ರಪುಷ್ಪ ಪ್ರಸಾದಂಗಳ ಪೆರ್ಮೈಯಿಂತಿರೆ
ಪರಮಲಿಂಗ ಪ್ರಭಾವಮಿನ್ನೆಂತುಂಟೂ ಗುರುವೆ,
ಪೇಳಿಸಗೆ ನೀಂ ತುಳಿಲ್ಗೆಯ್ವೆಂ ತಳರಡಿಗಳ್ಗೆ ;
ಎಂದರಿಕೆಗೆಯ್ಯೆಲ್ಕೆ ಕರಕಂಜ ಸಂಜಾತೆ
ಮತ್ತಮಾ ಲಿಂಗಸತಿ ಲಿಂಗರತಿ ಶರಣಪ್ಪೆಗೆ
ದೊಡ್ಡ ಬಸವಾರ್ಯ ಗುರುವಿಂತೆಂದು ಪೇಳಿಹನ್ ;

ಪಿಂತೊರ್ಕೆ 'ಶಾಂತನಿಧಿ' ಪೆಸರುಳ್ಳ ಶಿವಭಕ್ತ.
ನೊರ್ವನಿರ್ದನಾತಂಗೆ ಕಣ್ಣಿಲ್ಲ, ತಾಯಿಲ್ಲ, ೧೦೯೦
ಮತ್ತಮಾ ತಂದೆ ತಾಂ ಮುನ್ನಿಲ್ಲ–ಇಲ್ಲದೊಡೇನ್
ಗುರುದೇವನೊರ್ವನಿರ್ದನವಂಗೆ ಕಣ್ಣಾಗಿ
ಮೇಣ್ ತಂದೆ ತಾಯಾಗಿ ಬಂಧು ಬಳಗಾಗಿ !

ಇಂತೆಂದು ದೊಡ್ಡ ಬಸವಾರ್ಯಗುರು ಪೇಳುತಿರೆ
ಶರಣಪ್ಪೆ ಕಂಬನಿಯ ಸೂಸಿದಳ್ ಗಳಗಳನೆ
ತನ್ನಂತೆ ಶಾಂತನಿಧಿಯ ಜೀವನಮಿತ್ತೆಂದು
ಬಗೆ ಬಗೆದು ಬಗೆದುಂಬಿ ನವಿರೇಳ್ದು ಕೇಳಿಹಳ್
ಓ ತಂದೆ ನನ್ನಂತೆ ಶಾಂತನಿಧಿ ಹತಭಾಗ್ಯ
ಮತ್ತಮಾ ಜಿತಭಾಗ್ಯ ತಾನಲ್ತೆ ! ಮುಂದೇನು ! ೧೧೦೦
ನೀನೇಕೆ ಶೋಕಿಸುವೆ ಓ ಕಂದ, ನಾನಿರಲ್
ನಿನಗೆಲ್ಲ ತಾನಕ್ಕು, ನಿನ್ ಭವಿಷ್ಯಮುಜ್ವಲಂ ;
ಇಂತುಸುರಿ ಶಿಷ್ಯಳಂ ಸಾಂತ್ವನಂಗೊಳಿಸಿ ತಾನ್
ಗುರುದೊಡ್ಡ ಬಸವಾರ್ಯ ಮುಂದೆ ಪೇಳ್ದೊಡಗಿಹನ್ ;

ಶಮನಿಧಿಗೆ ಗುರುವರಂ ದೀಕ್ಷಸಂಸ್ಕಾರದಿಂ
ಲಿಂಗಮಂ ಕರುಣಿಸಿ ಪಡಿದಿನಂ ಪೂಜಿಸಲ್
ಪೇಳಿಹನ್ ; ಗುರುವಿನಪ್ಪಣೆಯಂತೆ ಶಮನಿಧಿಯು
ನಿತ್ಯದೊಳ್ ಲಿಂಗಮಂ ಪೂಜಿಸದೆ–ಪಂಚಾಕ್ಷರ
ಮಂತ್ರಮಂ ಜಪಿಸದೆ ಭುಂಜಿಸುತ್ತಿರಲಿಲ್ಲ.
ಒಂದಿನಂ ಶ್ರಾವಣದ ಮಾಸದೊಳ್ ಮೆಯ್ದೊಳೆಯೆ

CC-0. Jangamwadi Math Collection. Digitized by eGangotri

ತುಂಗಭದ್ರಾನದಿಗೆ ಬಂದ ಶಾಂತಸಿದ್ಧಿ ಕಾಲ್ ೧೧೧೧
ಜಾರಿ ತೊರೆಯೊಳ್ ಬೀಳ್ದು ನೀರಿನೊಳ್ ತೇಲುತ್ತ
ಬರುತ್ತಿರೆ ಪಂಪಾಸರೋವರದ ದಡದಲ್ಲಿ
ತಾನಿರ್ದ ಮಾಮರದ ಕೊಂಬೆಯಮು ಕೆಯ್ಗೆಟಕು–
ತಿರಲ್ಕದರಾಸರಿಂ ಮೇಲೇರಿ ನೀರಿನಿಂ
ಪಾರಾಗಿ ಬಂದಪಂ ಶಾಂತಿನಿಧಿ ಶಿವಲಿಂಗ
ಪೂಜೆಯಾ ಪುಣ್ಯದಿಂದಾಡೊಡೇಂ ನೋಡುತಿರೆ

ಗುರುಕೊಟ್ಟ ಲಿಂಗಮದು ನೀರಪಾಲಾಗಿತ್ತು ;
ಕಣ್ಣೀರು ಕರೆಯುತ್ತ ಕುಂಟುತ್ತ ಚಿಂತಿಸುತ್ತ
ಕಣ್ಣು ಕಾಣದಂತಿರೆ ಬೀಳುತ್ತ ಏಳುತ್ತ
ಲಿಂಗಮಂ ನೆನೆಯುತ್ತ ಬರುತ್ತಿರೆ ಬಾಲಕರ್ ೧೧೨೦

ಕಾಣುವರ್ ಕನಿಕರದೆ ಕೇಳುವರ್ ನಡೆದುದಂ ;
ಸ್ಪೋಗಲಿರು, ಲೇಸಾಯ್ತು ನೀಂ ನೀರ ಪಾಲಾಗಿ
ಸ್ಪೋಗದಲೆ ಪ್ರಾಣದಿಂದುಳಿದಿಲ್ಲಿಗೈ ತಂದಿಹೆ ;
ತಿನಿಸುಗಳ ತಂದಿಹೆವು ಪಸಿದಿರ್ಪೆ ತೆಗೆದುಕೋ
ಎಂದೆನಲ್ ಗೋಳಿಟ್ಟು ದುಕ್ಕಿಸಲ್ ತೊಡಗಿಹನ್ ;
ಏಕೆಂದು ಋಷಿಕುವರರಂತಃಕರಣದಿಂದೆ
ಕೇಳಲ್ಕೆ ನನಗಿರ್ದ ಲಿಂಗಮದು ಪೋಗಿಹುದು ;
ಲಿಂಗಮಂ ಪೂಜಿಸದೆ ಭೋಜನಂಗೆಯ್ಯೆನಾಂ,
ತಿನಿಸುಗಳ ಮಾತೇಕೆ ? ಓ ಎನ್ನ ಕೆಳೆಯರಿ
ಲಿಂಗಮಿರದೆ ನಾನೆಂತು ಬಾಳ್ವುದೋ ಪೇಳಿರಿ ! ೧೧೩೦

ಎಂದೆನಲ್ ಋಷಿಕುವರರದಕೇನುಪಾಯಮೆಂ
ದು ವಿಚಾರಮಂ ಮಾಡಲೆಳಸಿರ್ ಬಗೆ ಬಗೆಯಿಂ !
ಪೇಳಹನ್ ಪೈಲನೆಂಬೊರ್ವ ಮುನಿಕುಮಾರಂ,
ಎಂತಿವಂಗೆ ಕಣ್ಣಿಲ್ಲ, ಮಾಮಿಡಿಯನೊಂದಿತ್ತು
ತಾನಿದುವೆ ಲಿಂಗವೆಂದು ಪೇಳಲ್ ನಂಬುವನ್
ಪೂಜಿಪನ್ ತಿಂಡಿಯಂ ತಿನ್ನುವನ್ ಬಮುಕುವನ್ ;
ಇದರೊಳಾವ ದೂಸರಮಿಲ್ಲ ತಿಳಿದು ನೋಡಲ್ಕೆ
ಲಿಂಗಮದು ಸರ್ವಗತಮಾಗಿರಲ್ ಮಾಮಿಡಿಯು
ಲಿಂಗಮದು ತಾನಾಗದೇ ನಿದರೊಳ್ ದೋಷಮೇಂ ?
ಎಂದುಸುರೆ ಸರ್ವರದಕೊಪ್ಪಿ ಶಮನಿಧಿ ಕೆಯ್ಗೆ ೧೧೪೦

CC-0. Jangamwadi Math Collection. Digitized by eGangotri

ಮಾಮಿಡಿಯ ಲಿಂಗಮುಂ ತಾವೀಯುವರ್ ಗಡಾ !
ಲಿಂಗಮುಂ ಕೆಯ್ಕೊಟ್ಟ ಮನಮಟ್ಟಿ ಬಗೆದುಂಬಿ
ಓ ಎನ್ನ ಲಿಂಗವೇ ನೀನೆಲ್ಲಿಗೆ ತೆರಳಿದ್ದೆ
ನೀನೇಕೆ ತೆರಳಿರ್ದೆ ನಿನ್ನನಾಸರ್ಚಿಸಲಿಲ್ಲವೇನ್ ?
ನಿನ್ನನುಳಿದೊರ್ಮೈಯುಂ ನಾನೇನುಂಡುದಿಲ್ಲ ;
ಇಂತಿರ್ದೊಡಮೇಕೆನ್ನಗಲಿ ನೀಂ ಪೋಗಿರ್ದೆ
ಬಾರಯ್ಯ ಬಾ ಎನ್ನ ಪ್ರಾಣವೇ ತ್ರಾಣವೇ
ಎಂದೆನುತ ಹರುಷದಿಂ ಕುಣಿಯುವನ್ ಕೂಗುವನ್
ಮುಟ್ಟುವನ್ ತಟ್ಟುವನ್ ತಲೆಯನೇವರಿಸುವನ್
ನಂತರಂ ತಾನೊಂದೆಡೆಯೊಳ್ಕುಳಿತರ್ಚಿಪನ್ ೧೧೫೦
ಅರ್ಚಿಸುವವಸರದೊಳ್ ಕೆಯ್ತಾಗೆ ತಾನುರುಳಿ,
ಬೀಳುಗುಂ, ಬಿದ್ದಿತೆಂಬಾತುರದೆ ಕೈಯಾಡಿ
ಸುತಿರೆ ಸೋಂಕಿತಲ್ಲದೆ ಕೆಯ್ಗೆ ತಾಂ ಬರಲಿಲ್ಲ ;
ಬಿದ್ದೊಡನೆ ಮಾಮಿಡಿಯು ಲಿಂಗಾಗ ನೆಲದೊಳ್
ಪ್ರತಿಷ್ಠಿತಮಾಗಿತ್ತು ; ತಾನದುವೆ ಆಮ್ರಕೂ
ಟೇಶ್ವರಂ ಪೆಸರುಳ್ಳುದಾಗಿಹುದು ಹಂಪೆಯೊಳ್ !
ಶಮನಿಧಿಗೆ ಕಣ್ಣು ಮೇಣ್ ಸಂಪತ್ತು ಬಂದಿತ್ತು.
ಮಾಮಿಡಿಯು ಲಿಂಗಮದು ತಾನಾಯ್ತು ಭಾವದಿಂ
ಭಾವಮೇ ಜೀವನದ ಭವ್ಯತಮ ಸಂಪತ್ತು.

ಆಮ್ರಕೂಟೇಶ್ವರಂ ಮಹಾಮಹಿಮಾನ್ವಿತಂ ೧೧೬೦
ಮಹರ್ಷಿಗಳನೇಕರ್ ತಪಸ್ಸಿದ್ಧಿಯಂ ಪಡೆಯ–
ದೆಲ್ಲೆಲ್ಲಿ ಸಂಚಾರ ಗೈಯುತಂ ಚಿಂತೆಯಿಂ
ದಾಮ್ರಕೂಟೇಶ್ವರನ ಸನ್ನಿಧಿಗೆ ಬಂದಪರ್ ;
ಲಿಂಗ ದರ್ಶನದಿಂದೆ ಸಾತಿಶಯ ಸಂತಸಂ
ಪೊಂದುವರ್ ಮತ್ತಂ ಲಘುರುದ್ರಂ ಮಹಾರು–
ದ್ರಮತಿರುದ್ರಂಗಳಂ ಕ್ರಮದಿಂದ ಪಠಿಸುತ್ತ
ಕಾಲತ್ರಯದೊಳಾರಾಧಿಪರ್ ಕಳೆಗೊಂಡು ;
ಅನಿತರೊಳ್ ದುರ್ಮೃಪಾಸುರಂ ವ್ಯಾಘ್ರರೂಪದಿಂ
ದೈತಂದವರಾರಾಧನೆಗಡ್ಡಿಯಂ ತಂದೊ– ೧೧೭೦
ಡ್ಡುವನಾಗಳಾಮ್ರಕೂಟೇಶ್ವರಂ ಪ್ರತ್ಯಕ್ಷ
ನಾಗಿ ತಾಂ ಶೂಲದಿಂ ರಕ್ಕಸನ ಶಿರಚ್ಛೇ

CC-0. Jangamwadi Math Collection. Digitized by eGangotri

ದಂಗೆಯ್ದು ಮುನಿಗಳ್ಗೆ ಕರುಣಿಸುವಸಭಯಮಂ
ಮೇಣ್ ತಪಸ್ಸಿದ್ಧಿಯಂ ತತ್ತ್ವಾಭಿವೃದ್ಧಿಯಂ ,
ತಾದಾತ್ಮ್ಯಬುದ್ಧಿಯಂ, ಲೋಕಪ್ರಸಿದ್ಧಿಯಂ !

ಲಿಂಗದಾ ಮಾಹಾತ್ಮ್ಯಂ ಕೆರಿವಲ್ಲ ಕಾಣಲ್ಕೆ
ಲಿಂಗದೊಳ್ ತಾನಿಹುದು ಜಗಮೆಲ್ಲ ಮತ್ತಮಾ
ಲಿಂಗದಿಂ ಬಪ್ಪುದೈ ಸಾಕಾರ ಜಗಮಾಗಿ !
ಜಗಭರಿತ ಲಿಂಗಮಿದು ಪಿಂಡಾಂಡ ಮಾಗಿಹುದು.
ಸ್ವಾಚಾರ ಲಿಂಗಾಗಿಹುದಾಧಾರ ಚಕ್ರದೊಳ್
ಗುರುಲಿಂಗಮಾಗಿಹುದು ಮೇಣ್ ಸ್ವಾಧಿಷ್ಠಾನದೊಳ್ ೧೧೮೫
ಶಿವಲಿಂಗಮಾಗಿಹುದು ಮಣಿಪೂರ ಚಕ್ರದೊಳ್
ಚರಲಿಂಗ ಮಾಗಿರ್ಪುದನಾಹತ ಚಕ್ರದೊಳ್
ಪ್ರಸಾದಲಿಂಗಮಹುದು ವಿಶುದ್ಧಿ ಚಕ್ರದೊಳ್
ಮಹಾಲಿಂಗಮಾಗಿರ್ಪುದಾಜ್ಞಾ ಚಕ್ರದೊಳ್ !
ಓಂನಮಃಶಿವಾಯ ಮಂತ್ರಮಯಮಾದಪುದು ;
ಮಂತ್ರಮಿದು ತನ್ನ ಪ್ರಾಣಾಂಗದೊಳ್ ಜನಿಪುದು.
ತನ್ನಾತ್ಮ ಸ್ವರೂಪಂ ಲಿಂಗಮಿದು ತಿಳಿಯಲ್ಕೆ
ತನ್ನೊಳಗೆ ಕ್ರಿಯಾಜ್ಞಾನ ಭಾವಂಗಳಾಗಿಹುದು.
ಸಚ್ಛಿಯಾಶೀಲನಾಗಿ ಸುಜ್ಞಾನಿಯಾಗಿ
ಸದ್ಭಾವಿಯಾಗಿರ್ಪುದೇ ಲಿಂಗಪೂಜೆಯದು. ೧೧೯೦
ಹರಿಯುತಿಹ ಪೆದ್ದೊರೆಗೆ ಮೈಯೆಲ್ಲ ಕಾಲ್ಗಳು,
ಉರಿಯುತಿಹ ಜಿಂಕೆಗಂ ಮೈಯೆಲ್ಲ ನಾಲಗೆಯು,
ಸುಳಿಯುತಿಹ ಗಾಳಿಗಂ ಮೈಯೆಲ್ಲ ಕೆಯ್ಗಳು ;
ಪೂಜಿಸುವ ಭಕ್ತಂಗೆ ಮೈಯೆಲ್ಲ ಲಿಂಗಗಳು.
ಅಂಗಮಿದು ಲಿಂಗದೊಳ್ ಲಿಂಗಮದು ಅಂಗದೊಳ್
ಸಂಗಸಮರ ಸಮಾಗಿಹುದೇ ಶಿವಯೋಗಮದು.
ಮನಮಿದಂ ಜ್ಞಾನದೊಳ್, ಜ್ಞಾನಮಿದು ಭಾವದೊಳ್
ಭಾವಮಿದು ಲಿಂಗದೊಳ್ ಜೆರೆದುದಂ ಸಮರಸಂ !

ಚಿತ್ಕಳಾವತರಣಂ ಚಿತ್ಕಳಾಗುರುವಿನಿಂ
ವೀರಶೈವಕರದಿಷ್ಟಲಿಂಗಂ ತಾನಿದೆಂದೆನಲ್ಕೆ
ಶರಣನ್ಗೆ ಹಿರಿಮೆಗಂ ಪೆರತೊಂದು ಮಾತುಂಟೆ ; ೧೨೦೦
ಪೆರತೊಂದು ಪರಮೈವ ತಾನುಂಟು ತನ್ನೊಳಗೆ ?

CC-0. Jangamwadi Math Collection. Digitized by eGangotri

ಕೃತಾರ್ಥಂ ತಾನಾದ ಗೌರೀತೀರ್ಥಂ :

'ಬಿಳಿಯ ಕರಿಕೆಯ ತೊರೆಯ ತೊಡೆಯ ಮಳಲ ತಂದು
ಗೌರಿಯಂ ನೋಣುವಾ ಬನ್ನಿರೇ' ಎಂತೆಂದು
ಭಕ್ತಿ ಭಂಡಾರಿ ಬಸವಣ್ಣ ಪೇಳಿಹನಿಂತು
ಕಾರಣಂ ಗೌರಿಯಾ ಮಹಿಮೆಯಂ ಪೇಳಯ್ಯ,
ಗುರುವರನೆ ಎಂತೆಂದು ಶರಣಪ್ಪೆ ಕೇಳುತಿರೆ,
ಗುರುದೊಡ್ಡ ಬಸವಾರ್ಯರಿಂತೆಂದು ಪೇಳಿಹರ್ ;

ಅಹುದಹುದು ಕಂದಳೇ ಕೇಳಿದುದು ಲೇಸಾಯ್ತು
ಗೌರೀಮುಖತೀರ್ಥವೊಂದುಂಟು ಹಂಪೆಯೊಳ್ ೧೨೧೦
ಗೌರಿಗದು ಪ್ರಿಯಕರಂ ತಾನಿರುವಳಲ್ಲಿಯೇ ;
ಸುಮಂಗಲಿಯರದರೊಳ್ ಸ್ನಾನಮಂಗೆಯ್ದೊಡಂ
ಸೌಭಾಗ್ಯ ಸಂವೃದ್ಧಿಯಪ್ಪುದೆಂದು ಸುರವರ್
ಮತ್ತಮಾ ಹಂಪೆಯೊಳಗಿರ್ಪ ತೀರ್ಥಂಗಳೊಳ್
ಉತ್ತಮೋತ್ತಮಂ ಶ್ರೀಗೌರಿ ಮುಖತೀರ್ಥಮಿದು,
ಸರ್ವರ್ಗಿ ಸರ್ವಾರ್ಥ ಫಲಪ್ರದ ಮಾದುದೌ
ಮಿಗಿಲಾಗಿ ಸುವಾಸಿನಿಯರ್ಗಿ ಸುಖದಾಯಕಂ
ಪಾಪ ಪರಿಹಾರಕಂ ಪರಮಗತಿಕಾರಕಂ !

ಪೇಲಾsಗ್ರಹಾರಮೆಂಬುದೊಂದಿತ್ತು ಪೂರ್ವದೊಳ್
'ಕರಭ' ಪೆಸರಿವ್ವ ಬಡ ಹಾರುವನದರೊಳಿರ್ದ– ೧೨೨೦
ಮಾತಂಗೆ ನಾಲ್ಕುಜನ ಗಂಡು ಮಕ್ಕಳಿರ್ದ–
ರಾ ನಾಲ್ವರೊಳಿರ್ವರ್ಗಿ ಹತ್ತತ್ತು ಮೊಮ್ಮಕ್ಕಳು
ತಾವಾಗಿ ಮರಿಮಕ್ಕಳಂ ಪಡೆದಿರ್ದನಾ
ನಾಲ್ವತ್ತು ಜನಮರಿಮಕ್ಕಳೊಡಲುಗಳಲ್ಲಿ !
ಇಂತಾಗಿ ಕರಿಭಂಗೆ ಪುತ್ರ ಪೌತ್ರ ಪ್ರಪೌತ್ರ–
ರಿಂ ಮೀರಿ ಬೆಳೆದಪ್ಪು ಮನೆಯೊಳ್ ಪರಿವಾರಂ !
ಮನೆತನದ ಕಾರ್ಪಣ್ಯದಿಂದೇವ ಮಂದಿರದ
ಲ್ಲಿಲ್ಲರುಂ ತಮ್ಮಡಿಗರವರಾಗಿ ತಾವಿಹರ್ ;
ಮಜ್ಜನಕೊಬ್ಬ ಭಸ್ಮಕೊಬ್ಬ ಗಂಧಕೊಬ್ಬ ೧೨೩೦
ಬಿಲ್ವಮಂ ತರಲೊಬ್ಬ ಬಿಲ್ವಾರ್ಚನಕ್ಕೊಬ್ಬ

CC-0. Jangamwadi Math Collection. Digitized by eGangotri

ದೀಪಕೊಬ್ಬ ಮತ್ತಂ ಧೂಪಕ್ಕೆ ಮತ್ತೊಬ್ಬ
ಮಂತ್ರಕ್ಕೊಬ್ಬ ಮತ್ತಂ ತಂತ್ರಕ್ಕೆ ಪೆರತೊಬ್ಬ
ಪೆಚ್ಚಿಹರ್ ಪೂಜೆಗಿಂ ಪೂಜಾರಿಗಳ್ ನೋಡೆ
ಕೊಚ್ಚಿಹರ್ ದ್ರವ್ಯಮಂ ಸದ್ಭಕ್ತರಿಂ ನಾಡೆ !
ಆದಡೇಂ ಹಿಂಗದಂ ಮನೆತನವ ಬಡತನಂ
ನಡೆಯಲಿಲ್ಲದು ಮನೆಯ ಜೀವನ ನಿರ್ವಹಣಂ
ಕಳವಿಂಗೆ ಮೊದಲಾಯ್ತು ಪೂಜೆಗೆ ಹಗೆಗಳಾಗಿ !
ದೇವಂಗೆ ತಂಪುದಂ ತಾನದೇನಿರ್ದೊಡಂ
ಬಿಡದೆ ತುಡುಗುತನವಂ ಮಾಡತೊಡಗಿಹರವರ್ ;
ಅವರವರ ಕೆಯ್ಗಳ್ಗಿ ನಿಲ್ಕುದಂ ಬಿಡಲಿಲ್ಲ ೧೪೪೦

ಎಳೈಣ್ಣೆ ಕಮ್ಮೆಣ್ಣೆ ಮೇಣ್ ತುಪ್ಪ ಜೇನ್ತುಪ್ಪ
ಕಡ್ಡಿ ಪೆಟ್ಟಗೆ ಮತ್ತಮೂದು ಕಡ್ಡಿಗಳಮಾ–
ತೆಂಗಾಯಿ ಕಪ್ಪುರಂ ಮೇಣ್ ಬಾಳೆ ಹಣ್ಗಳಂ
ನೈವೇದ್ಯಕರಿಸಿರ್ದ ಭಕ್ಷ್ಯಭೋಜ್ಯಂಗಳಂ
ನವಗ್ರಹಕೆಂದು ತಂದ ನವಧಾನ್ಯಂಗಳಂ
ಪೆರ್ಚೇನು ಕೆಯ್ಗೆ ಸಿಕ್ಕಿದುದೆಲ್ಲವಂ ಬಿಡದೆ
ಪೆರ್ಬುತನ ಪೆಚ್ಚಾಗಿ ಕಳವಿಂಗೆ ತೊಡಗಿಹರ್
ದಕ್ಷಿಣೆಯ ನೆಪದಲ್ಲಿ ಶೋಷಣೆಯ ಮಾಡುವರ್
ಮಾಡಲೇನ್ ಬಿಡಲಿಲ್ಲ ಕಷ್ಟಕಾರ್ಪಣ್ಯಗಳ್
ಮತ್ತನಿತು ಜೀವನದೊಳುಲ್ಬಣಂ ಗೊಂಡಿಹುದು. ೧೪೫೦

ಹೊಡಬಾಳು ಮೊದಲಾಯ್ತು, ಮೇಣ್ ಹುಯ್ಯಲಿಕ್ಕಿತು ;
ನಾರಿಯರ್ ತಾವ್ ವಾರಾಂಗನೆಯರಾದಪರ್ !
ಬೆಳೆಯಿತದು ದಾಯಾದ ಮಾತ್ಸರ್ಯಮವರೊಳಗೆ
ಉಳಿಯದಂತಾಯ್ತವರೊಳೊಲಮೆ ಮೇಣ್ ನೆಮ್ಮದಿಯು ;
ಮೇಣೂಬ್ಬರಿಗೊಬ್ಬರ್ ಹೊಡಿದಾಡ ತೊಡಗಿಹರ್
ಮೇಣೊಬ್ಬರೊಬ್ಬರಂ ದೂರುವರ್ ದೂಷಣಂಗೆಯ್ಯುವರ್
ದುರ್ಮಾನಕೇಡು ತಾವ್ ಮಾಡುವರ್ ದೂಡುವರ್ !

ಅನಿತಕ್ಕೆ ತೀರಲಿಲ್ಲವು ಕುಂದುಕೊರಗುಗಳ್
ಬೇನೆ ಬೆಸರಿಕೆಗಳ್ ಮೊದಲಾದವೆಲ್ಲನ್ನೆ :
ಕುಷ್ಠರೋಗವಡರಿತು ಕಮ್ಮೆಣ್ಣೆ ಕಳ್ಕಂಗೆ, ೧೪೬೦

CC-0. Jangamwadi Math Collection. Digitized by eGangotri

ಭಗಂಧರ ಬಂದಿತ್ತು ಬೆಳ್ಳಿಯ ಕದ್ದಂಗೆ
ಕ್ಷಯರೋಗ ಕಾಡಿತ್ತು ನೈವೇದ್ಯಜೋರಂಗೆ
ಕಣ್ಣುತಾಂ ಪೋಯಿತ್ತು ಬೆಣ್ಣೆಣ್ಣೆ ಕಳ್ಳಂಗೆ
ಹುಣ್ಣುಗಳ್ ಹತ್ತಿಹವು ಹಣ್ಣುಗಳ ತುಡುಗಂಗೆ
ಮಕ್ಕಳಾಗದಾಯ್ತು ರೊಕ್ಕಗಳ ಕದ್ದಂಗೆ
ಸತ್ತ ಸಿಸುಗಳಾಹರು ಹೆತ್ತುಪ್ಪ ಕಳ್ಳಂಗೆ
ದೈನ್ಯತೆಯು ಬಿಡಲಿಲ್ಲ ಧಾನ್ಯಾಪಹಾರಿಗೆ !
ಮತ್ತಮಾ ದರಿದ್ರರ್ ದುಃಖಿಗಳ್ ರೋಗಿಗಳ್
ರಾಗಿಗಳ್ ತಾವಾದರಲ್ಲದಲೆ ಮಿಗಿಲಾಗಿ
ದೇವತಾ ದ್ರೋಹಿಗಳ್ ಭಕ್ತಜನ ದ್ರೋಹಿಗಳ್ ೧೨೦
ಮೇಣ್ ರಾಜದ್ರೋಹಿಗಳ್ ತಾವಾದಕಾರಣಂ
ತಳ್ಳಿದರ್ ದೇವಾರ್ಚಕತ್ವದಿಂ ಮತ್ತಮಾ–
ಗ್ರಾಮದಿಂ ಮತ್ತಮಾ ದೇಶದಿಂ ಕರಭಾದಿ
ಪುತ್ರ ಮೇಣ್ ಪೌತ್ರರಂ ಮೇಣ್ ಹೆಣ್ಣು ಮಕ್ಕಳಂ ;
ನಿರ್ಗತಿಕರಾಗಿ ಹೊರಹೊಂಟರಕ್ಕಟಕ್ಕಟಾ !
ಊರಿಲ್ಲ ಮನೆಯಿಲ್ಲ ಮೇಣು ತಿನ್ನುಣ್ಣಲಿಲ್ಲ
ಉಡಲಿಲ್ಲ ತೊಡಲಿಲ್ಲ ಹೊದೆಯಲ್ಕೆ ತಾನಿಲ್ಲ
ಎಲ್ಲರ್ಗೆ ಮೈಯಲ್ಲಿ ಹದುಳತೆ ಮುನ್ನಿಲ್ಲ
ದುಷ್ಕರ್ಮ ಫಲವಾಗಿ ಕಳಕೊಂಡರೇನೆಲ್ಲ ; ೧೩೦
ದಾರಿದ್ರದಾವಾಗ್ನಿ ಪರಸ್ಪರ ಶಾಪಾಗ್ನಿ
ಭಕ್ತಜನ ಕೋಪಾಗ್ನಿ ಹೆಸಿವುಳ್ಳ ಜಠರಾಗ್ನಿ
ಸಹೋದರ ಕಲಹಾಗ್ನಿ ಪಂಚಾಗ್ನಿಯಿಂ ಬೆಂದು
ಬಸವಳಿದು ಬೆಳ್ಳಕ್ಕರಿಗರಾಗಿ ಬೆಸನದಿಂ
ಕಾಡಾಡಿಗಳ್ ಮೇಣು ನಾಡಾಡಿಗಳ್ ಆಗಿ
ತಿರುಗಾಡಿ ತಿರುಪೆಯಂ ಬೇಡಾಡಿ ಸಾಕಾಯ್ತು.

ಕಿಂಚಿದರ್ಚನ ಮಂತ್ರಪಠನಾದಿ ಪುಣ್ಯದಿಂ
ನಾರದ ಮಹಾಮುನಿಗಳಾಗಮಿಸಿ ಪೇಳಿಹರ್ :
ಹಂಪೆಯಾ ಕ್ಷೇತ್ರಕ್ಕೆ ಹೋಗಿ ಹದುಳವಿರಲ್ಕೆ ;
ಪೋಗುವರ್ ಹಂಪೆಗಂ ವಾಸಿಪರ್ ಕ್ಷೇತ್ರದೊಳ್

CC-0. Jangamwadi Math Collection. Digitized by eGangotri

ತೀರ್ಥೋದಕಂ ಪಾನಗೈದಿಹರ್ ಆದೊಡೇನ್ ೧೯೯೦
ಗೈದಿರ್ದ ಪಾಪಕೋಟಿ ಪರಿಹಾರಮಾಗದೆ
ತೊಳಲಿದರ್ ಬಳಲಿದರ್ ಬೆಂದು ಬೆಂಡಾಗಿಹರ್
ಕೋಣನೊಲ್ ಕ್ಷೇತ್ರದೊಳ್ ವಾಸಿಸಿದಡೇನಹುದೋ ?

ಮತ್ಸ್ಯದೊಲ್ ತೀರ್ಥದೊಳ್ ಮಿಗೆ ಮಿಂದರೇನಂತೆ ?
ಭಕ್ತಿಭಾವಮದಿರಲ್ ಮುಕ್ತಿ ಲಭಿಸುವುದಲ್ತೆ !

ಭಕ್ತಿಯಿಂ ತೀರ್ಥವದು ತೀರ್ಥದಿಂ ಶುದ್ಧಿಯದು ;
ಮತ್ತಮಾ ಶುದ್ಧಿಯಿಂ ಶಾಂತಿ ಸಂವಿತ್ತಿಗಳ್
ಶಾಂತಿ ಸಂವಿತ್ತಿಯಿಂ ಮುಕ್ತಿಸುಖಮಪ್ಪುದೈ.

ಶಕ್ತಿಗಳಲಿ ಗೌರೀ ಶಕ್ತಿಯೇ ಮಾಶಕ್ತಿ,
ಮತ್ತಮಾ ನೋಂಪಿಯಲಿ ಗೌರಿಯದೆ ನಿಡುನೋಂಪಿ ; ೧೯೦೦
ಹವಿಬಡೆಯ ಧರ್ಮದೊಳು ಗೌರಿಯದೆ ಹೆಚ್ಚಳಕ್ಕೆ,
ಕ್ರಿಯಾಶೀಲತೆಯೊಳು ಗೌರಿಯದೆ ಸೆಗ್ಗಳಿಕೆ !
ಗೌರಿಯಂ ನೋಣಿರೇ ನೀವೆಲ್ಲ ಮುಂಬಂದು,
ಎಂತೆಂದು ಕ್ಷೇತ್ರಪಾಲನುಸುರಲ್ ತಾವೆಲ್ಲ
ಒಗ್ಗೂಡಿ ಗೌರಿಯಾ ನೋಂಪಿಯಂಗೈದಿಹರ್—
ನಿಡುಗಾಲ ನಿಷ್ಠೆಯಿಂ, ನಿಶ್ಚಿಂತ ಸ್ವಾಂತದಿಂ,
ನಿತಾಂತ ಬುದ್ಧಿಯಿಂ, ನಿಯಂತ್ರಿತ ಭಾವದಿಂ !
ಸಂತುಷ್ಟ ಶ್ರೀಗೌರಿಯೊಲಿದಿಹಳ್ ನೋಂಪಿಂಗೆ
ಬೇನೆಯವರೆಲ್ಲರಂ ಕರೆತಂದು ಗೌರಿಮುಖ
ತೀರ್ಥದೊಳ್ ಮೀಯಿಸಿಹಳನುಕಂಪ ಹೃದಯದಿಂ ೧೯೧೦
ದೆಲ್ಲರಾ ಕಾಯಗಳೊಳಾರೋಗ್ಯಮೊದಗಿಹುದು.
ಭಕ್ತಿಯಿಂ ಕೆಯ್ಮುಗಿದು ಗೌರಿಯಂ ಜೇಡಿಹರ್
ಓ ಗೌರಿ, ಓ ಗಿರಿಜೆ, ಓ ಅನ್ನಪೂರ್ಣವ್ವೆ
ನಿನ್ನಿಂದ ಮೈಯ ಹದುಳಿಗರ್ ನಾವಾದೆವೆಂದು,
ನಮಗಿರ್ಪ ದೇವಸ್ವ ಹರಣದಾ ಪಾಪಮಂ
ಪರಿಹರಿಸಿ ಭೋಗಮೋಕ್ಷಂಗಳಂ ಕರುಣಿಸೌ

CC-0. Jangamwadi Math Collection. Digitized by eGangotri

ಸಜ್ಜಲ ಶರಣಾಸ್ಪೆ

ನಿನ್ನಡಿಗಳ್ಗೆ ಶರಣಾಗಿಹೆವು ನೀಂ ಕಾಪಿಡೌ
ಎಂದೆಸುತ ಪ್ರಾರ್ಥಿಸಲ್ ಕರುಣಿಸಿಹಳೆಲ್ಲರಂ
ನೀವೆಲ್ಲ ಮುಂತೆ ಶಿವಮಂತ್ರಮುಂ ಜಪಿಸಲ್ಕೆ
ನಿಮಗಕ್ಕು ಕ್ಷೇಮವೆನ್ನತಂ ಮರೆಯಾಗಿಹಳ್ ! ೧೩೨೨

ಗೌರಿ ತಾನ್ ಭುವನೇಶ್ವರಿಯ ನಾಮದಿಂದಿಹಳ್
ಪಾವನದ ಹಂಪೆಯೊಳ್ ಪ್ರಾಚೀನಕಾಲದಿಂ
ಪಂಪಾಪತಿಯಾ ಗುಡಿಯಂಗಣದೆ ಪಂಪಾಂಬೆ
ಪಕ್ಕದೊಳ್ ಸರ್ವರಾರಾಧ್ಯದೇವತೆಯಾಗಿ
ಮೇಣು ವಿದ್ಯಾರಣ್ಯರ್ಗೆ ವಿದ್ಯಾಪ್ರದೆಯಾಗಿ
ಮೇಣ್ ಸುವರ್ಣ ವೃಷ್ಟಿಯಂ ನೆರೆಕರೆದು ಕರುಣಿಸಿ
ಕರ್ನಾಟ ಭುವನೇಶ್ವರಿ ಪೆಸರಿಂದಿರ್ಪಳು
ಪಿಂತೊರ್ಮೆ ಪರಶಿವನ ಪ್ರತಿಭೆಯಂ ಕಾಣವೆಣಿಸಿ
ಪ್ರಾರ್ಥಿಸಲ್ ಜ್ಞಾನಚಕ್ಷುವನಿತ್ತು ತೋರುವನ್
ತನ್ನಯಾ ತೇಜಮಂ ಮೇಣದ್ಭುತ ಶಕ್ತಿಯಂ ೧೩೩೦
ಕರಿನಾಡ ಭುವನೇಶಿ ಕಣ್ತುಂಬ ಕಾಣುತಂ
ಬಗೆದುಂಬಿ ಬಗೆಯುತಂ ಪಡೆಯುವಳ್ ದೀಪ್ತಿಯಂ !
ತಾನಲ್ಲಿ ತಂಗಿಹಳ್ ಭಕ್ತರ್ಗೆ ಕರುಣಿಸಲ್
ಶಿವನಾಜ್ಞೆಯಂತೆವೊಲ್ ಕಲ್ಪಾಂತಮನ್ನೆಗಂ !

ಕುಮತಿಹರಂ ಕುಮಾರತೀರ್ಥಂ !

ಗೌರಿ ಸುತಕುಮಾರಂ ಮಾರಹರ ಕುಮಾರಂ
ತಾರಕಾಸುರ ಮಾರಕಂ ಜನ್ಮತಾರಕಂ
ಭಕ್ತಜನ ತಾರಕಂ ಭಾವಿಸಲ್ ವಿಶಾಖಂ
ಸುಬ್ರಹ್ಮಣ್ಯಂ ಸ್ಕಂದನಾಮಕಂ ಷಣ್ಮುಖಂ
ಮೇಣುಕಾರ್ತಿಕೇಯಂ ಮೃತ್ಯುಲೋಕಾಭಯಂ ೧೩೪೦
ಇಂತಿಪ್ಪ ಸ್ಕಂದನಂ ವಂದಿಸುತ ವಚಿಸುವೆನ್
ತೊಂತಿಪ್ಪ ಭವವಳವ ಗುಹತೀರ್ಥ ಮಹಿಮೆಯಂ
ಸ್ವಾಂತದಿಂ ಕಿವಿಗೊಟ್ಟು ನೀಂಕೇಳು ಶರಣಪ್ಪೆ !

CC-0. Jangamwadi Math Collection. Digitized by eGangotri

ಪಿಂತೊರ್ಮೆ ತಾನಿರ್ದ ಸುನಂದ ಶಿವಭಕ್ತಂ
ಆತಂಗೆ ನಾಗನಾಥನೆಂಬಾ ತನಯನಿಹ
ನಹಂಕಾರಮದುವೇ ಮೆಯ್ವೆತ್ತು ಬಂದಂತೆ ;
ಮೇಣಹಂ ಮನ್ಯತೆಯೊಡಗೂಡಿಹನವಿರತಂ
ನಯ ವಿನಯಮಿಲ್ಲದಿಪ್ಪ ವಿದ್ಯೆಯದಿರ್ಪೊಡೇಂ
ದಿಟಪುಟಮಿರದರಿಮೆಯದೇತರದೊ ನೋಳ್ಪೊಡೆ ?
ವಿದ್ಯಾವಂತನೆಂದೆನಿಸಿರ್ದ ನಾಗನಾಥನ್
ವೃದ್ಧ ಮಾತಾಪಿತೃಗಳಂ ತಿರಸ್ಕರಿಸಿ ತವಿಸಿ ೧೩೫
ಮನೆಯಂ, ತಪಸ್ಯೆಯಂ ಕೆಯ್ಕೊಂಬುವುದಕಾಗಿ
ಬೆಟ್ಟಕ್ಕೆ ಕಟ್ಟಳ್ಕರಿಂ ಪ್ರೇಗಲೆಳಸಿಹನ್ ;
ಕಂಡಿದಂ ತಂದೆ ಶ್ರೀಸುನಂದಂ ಸೊಲ್ಲುವನ್ ;

ಓ ನಾಗನಾಥನೇ, ಮುಪ್ಪಾದ ನಮ್ಮಗಳ-
ನುಳಿದು ನೀಂ ಪ್ರಯಾಣಂಗೊಳ್ಳದಿರ್ ಪರ್ವತಕೆ
ಧರ್ಮಮಲ್ಲಿದು ಜವ್ವನಿಗನಾದ ನಿನಗೆನಿತು ;
ನಮ್ಮಗಳ ಸಲುಹುವುದೆ ಸಲುನಡೆಯು ಸಿಸುವಿಂಗೆ
ಹೆತ್ತವರ ಸಲುಹದಲೆ ಸಫಲಿಸದು ನಿನ್ತಪವು ;
ಹೆತ್ತದೇವರನುಳಿದು ಮತ್ತಾವದೇವರೊಳರ್ ?
ನೀಂ ಪೇಳು ಬಿಜ್ಜೆಯೊಳ್ ಬಲ್ಲಿದಂ ನೀನೆಮಗೆ ! ೧೩೬೦
ಸರ್ವಧರ್ಮಾಧಾರಮೆನಿನಿಸಿರ್ದ ದೇಹಮಂ
ನಿನಗಿತ್ತವರ್ ಹೆತ್ತವರಲ್ಲವೆ ನೀಂ ಸೊಲ್ಲು !
ತಾಯ್ತಂದೆಗಳ ತವಿಸಿ ತಪವನಾಸಿಸುವುದು
ಕಲ್ಲಂಗಡಿ ಪಣ್ಣುಳಿದು ಕಳ್ಳಿಪಾಲ್ಗುಡಿದಂತೆ !

ಮುಂತೆ ಪಾರ್ವಸೊರ್ವನು ತಾಯ್ತಂದೆಗಳನುಳಿದು
ಬೆಟ್ಟದೊಳ್ ನೂರ್ಬರಿಸಮನ್ನೆಗಂ ತಪಂಗೆಯ್ದು,
ಬಳಿಕೊರ್ಮೆ ಕಣ್ತೆರೆದು ನಿಟ್ಟಿಸಲ್ ಮೇಲಕ್ಕೆ
ಹೆಮ್ಮರದ ರೆಂಬೆಯೊಳ್ ಕುಳಿತಿರ್ದ ಕಾಗೆಗಳ್
ತಾವೆರಳ್ ಪಟ್ಪಟನೆ ಸುಟ್ಟುದುರಿಹವು ನೆಲಕೆ
ತಪಸ್ವಿಯ ತೇಜೋಮಯವ ತಪ್ತೋಜ್ವಾಲೆಯಿಂ- ೧೩೭೦

CC-0. Jangamwadi Math Collection. Digitized by eGangotri

ದದರಿಂದಲಾತಂಗೆ ತಾಂ ಮಹಾತಪಸ್ವಿಯೆಂ
ಬ ಗರ್ವಂ ಜನಿಸುಗುಂ ಮಿಗಿಲಾಗಿ ಮನಸ್ಸಿನೊಳ್ !

ಇಂತಿರುತ್ತಿರಲೊಂದ್ಕೆ ಭಿಕ್ಷೆಗೆಂದೂರಿಗೆ
ಪೋಗಿರಲ್ ಪತಿಸೇವೆಯೊಳ್ ನಿರತಳಾಗಿರ್ಪ
ಸತಿಯೊರ್ವಳಾತಂಗೆ ಭಿಕ್ಷೆಯಂ ನೀಡಲ್ಕೆ
ನಸುತಳುಹಿದಪಳದಕೆ ಮುನಿ ಮುನಿದವಳ ಮೊಗಮಂ
ದುರುಗುಟ್ಟಿ ದುಮಗುಟ್ಟಿ ಕಣ್ ಬಿಟ್ಟು ನೋಡುತಿರೆ
ತಪಸ್ವಿಯ ಮುನಿಸಿನ ಮನೋಗತವನರಿದವಳ್
'ನಿನ್ನೊಳ್ನೋಟಮಾತ್ರಕಂ ಸುಟ್ಟುದುರೆ, ಓ ಮುನಿಯೆ,
ನಾನೇನು ಕಾಡಿನೊಳಗಣ ಕಾಗೆ ತಾನಲ್ಲ'
ಎಂದೆನಲ್ ಹದಿಬದೆಯು, ತವಸಿಗಾಯ್ತುಚ್ಚರಿಯು.
ಸಾಧ್ವಿಗಂ ಸಾಷ್ಟಾಂಗಮೆರಗುತಂ ಓ ತಾಯಿ,
ನಿನಗೆಂತು ತಿಳಿಯಿತೌ ವೃತ್ತಾಂತಮೆಂದುಮಿಗೆ
ಬೆಸಗೊಳಲ್ ಪತಿವ್ರತೆ ಪೇಳಹಳ್ ತಪಸ್ವಿಗೆ
ಪರಮಪಾತಿವ್ರತ್ಯಮಹಿಮೆಯಿಂದೆನಗದು
ತಿಳಿಯಿತಯ್, ಮನೆಯೊಳಗಣ ತಪಸ್ಸು ತಕ್ಕುದೇಂ ?

ಓ ತಾಯಿ, ನೀನೆಸಗೆ ಗಾರ್ಹಸ್ಥಧರ್ಮೋಪ
ದೇಶಮಂ ಕರುಣಿಸೌ ಕೇಳುವೆನ್ ಗುರುವೆನಗೆ
ನೀನಿಂದು ಸೈಜದೊಳ್ ಗುರುತ್ವಕೆ ಗಂಡು ಹೆ–
ಣ್ಣೆಂಬ ಲೈಂಗಿಕದ ಭೇದಮಿಲ್ಲದೌ ಧರ್ಮದೊಳ್ ;
ಎಂದುಸುರೆ, ಕಾಶಿಯೊಳ್ ಧರ್ಮವ್ಯಾಧನೊರ್ವಂ
ತಾನಿಹನ್ ನೀನಲ್ಲಿಗೆ ಪೋದಡೆ ಪೇಳುವನ್
ಎಂದೆನಲ್ ಸಲೆ ಸೋಜಿಗಂದಳೆದು ನಡೆದಿಹನ್ ;
ಚಿತ್ತದೊಳ್ ಚಿಂತಿಸುತ ಹದಿಬದೆಯ ಹಿರಿಮೆಯಂ !

ಕಾಶಿಗೈತಂದು ರಿಸಿ ಕೇರಿ ಕೇರಿಗಳಲೆದು
ಮನೆ ಮನೆಗೆ ತೆರಳಿ ಕೇಳುತಿರೆ ದೊರೆವುದಾತನ
ಕಿರಿವನೆಯು ಕೆನ್ನೀರಡಗು ಮೂಳೆಗಳಂದುರೆ
ತುಂಬಿತ್ತು, ಮತ್ತೆ ಕೇಳ್ದಾತಮದು ಹರಡಿತ್ತು ;

CC-0. Jangamwadi Math Collection. Digitized by eGangotri

ಏನಿರ್ದೊಡೇನಧ್ಯಾತ್ಮ ಚಿಂತನೆಗೆನಿತು ಕೊರೆ–
ಯಿರಲಿಲ್ಲ ; ವಿನಯದಿಂ ಸಾಷ್ಟಾಂಗವೆರಗಿಹನ್
ಕೋರಿಹನ್ ವ್ಯಾಧನಂ ಧರ್ಮೋಪದೇಶಮಂ ;
ಓ ಗುರುವೆ, ನೀನಿಹುದು ಕಟಕತನ ವೃತ್ತಿಯೊಳ್
ನಿನಗೆಂತು ನಿವೃತ್ತಿಯು ಲಭಿಸಿತಯ್ ಪೇಳೆಂದು
ಬಿನ್ನವಿಸೆ ಬಿಯದನಾತಂಗೆ ತಾಯ್ತಂದೆಗಳಂ
ತೋರಿಸುತಿವರ ಸೇವೆಯಿಂ ಫಲಿಸಿತೆಂದುಸುರಿಹನ್ ;
ಬಂದ ಮುನಿ ನಿಗೆ ಸೋಜಿಗಂದಳೆದು ತೆರಳಿಹನ್ !

ಇಂತೆಂದು ಸುನಂದಂ ತನ್ನಣುಗನಾಗನಾ–
ಥಂಗೆ ಕಥನಕಲೆಯಿಂ ಕಣ್ಣಿಂಗೆ ಕಟ್ಟುವೊಲ್
ಕಟ್ಟಕ್ಕರಿಂ ಕಟಕಟಯಿಲ್ಲದೆ ಕಥಿಸಿದೊಡೆ–
ಮಣುಗನ ಮನ ಮೆಚ್ಚದೆ ಮೇಣನಚ್ಚದೆ ತಂದೆ–
ಯ ಹಿತೋಪದೇಶಮನುಲ್ಲಂಘಿಸಿ ತೆರಳಿಹನ್
ತಪೋವನಕೆ ನಾಗನಾಥಂ ತುಚ್ಛ ಸ್ಪೃಚ್ಛೆಯಿಂ
ಕೆಯ್ಕೊಂಡನೀರಯ್ದು ಬರಿಸಂಗಳನ್ನೆಗಂ
ಕಠಿಣ ವ್ರತ್ತ ನಿತ್ಯನಿಯಮಂಗಳಿಂದೆ ತಪಮಂ !

ಒಂದಿನಂ ಮೀಯಲ್ಕೆ ತಾಂ ಪೋದೆಡೆಯೊಳಿರ್ಪ
ಚಂಡಾಲ ಕನ್ನಿಕೆಯ ಕಣ್ಣಿಂದ ಕಾಣುವನ್
ಚಲುವಿಂಗೆ ಮನವೆಳಸಿ ಮೋಹಿಸನ್ ಮತ್ತಮಾ
ಬಾಲೆಯೊಳ್ ಬಲಾತ್ಕಾರದಿಂದಂ ರಮಿಸುವನ್
ಬಳಿಕವಳ ವಶನಾಗಿ ಬ್ರಹ್ಮಸೂಪ್ರ ಶಿಖೆಗಳಂ
ತ್ಯಜಿಸುತಂ ತೊಟ್ಟಿಹನ್ ಚಂಡಾಲ ವೃತ್ತಿಯಂ !

ಮತ್ತೊರ್ಮೆ ನಟ್ಟಿರುಳಿನೊಳ್ ನಾಗನಾಥನವಂ
ಸರಿಬರಿಯ ಚಂಡಾಲರೊಡಗೂಡಿ ಆರಮನೆಗೆ
ಕಳವಿಂಗೆ ಪೋಗಿ ರಾಜದೂತನ ಕೆಯ್ಗಟ್ಟುಕೆ
ರಾಜನೆದುರಿಂಗೆ ಕರೆದೊಯ್ದು ನಿಲ್ಲಿಸಲ್ ನೃಪಾಲಂ
ಕಾಲ್ಗಳಂ ಕತ್ತರಿಸಿ ದೇಶದಿಂ ಹೊರಬಿಡ-
ಲಾಜ್ಞಾಪಿಸಲ್ಕೆ ರಾಜದೂತರ್ ನೆಗಳ್ದರಂತೆ !

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ತೆ

ಕುಮತಿಹರಂ ಕುಮಾರತೀರ್ಥಂ

ನಾಗನಾಥಂ ತಂದೆತಾಯ್ಗಳಂ ನೆನೆನೆನೆದು
ಬಗೆಗೆಟ್ಟು ಗೋಳಿಟ್ಟು ದುಕ್ಕಿಸಿದನಾಗಳಂ !
ಅನಿತರೊಳ್ ಸುಕೃತದಿಂ ಲೋಮಶಂ ಮುನಿವರಂ
ತಾನಲ್ಲಿಗೈತಂದು ಕನಿಕರಿಸಿ ಕೇಳುವನ್
ನಾಗನಾಥನ ಕಥೆಯನೆಲ್ಲವಂ ನೋವಿನಿಂ ೧೪೩೦

ಕುಮಾರನ ತೀರ್ಥೋದಮಂ ತಂದು ಸಿಂಚಿಸಲ್
ನಾಗನಾಥನ ಪಾಪ ಪರಿಹಾರಮಾಗಿ ಮೇಣ್
ಪೋದ ಕಾಲ್ಗಳವು ಪೊಸತಾಗಿ ಬಂದು ನಲಿದಿಹನ್
ಮೇಣು ಮುನಿವರನಪ್ಪಣೆಯಂತೊಡನೆದ್ದಿಯ್ದು
ಕುಮಾರನ ತೀರ್ಥದೊಳ್ ಮೆಯ್ದೊಳೆದು ಮೇಣಲ್ಲಿ
ಪ್ರೇಮದಿಂ ನೂರ್ಬರಿಸಮನ್ನೆಗಂ ತಪವನಾ
ಚರಿಸಲ್ಕೆ ವಿರೂಪಾಕ್ಷನೊಲಿದು ಕರುಣಿಸಿಹನ್ !
ಶರಣಮ್ಮೆ ಓ ಏಸ್ನ ಕರಕಂಜ ಸಂಜಾತೆ,
ಪರಿಕಿಸಲ್ ತಿರಿಯೊಳಗೆ ಹದಿಬದೆಯ ಧರ್ಮಮದು
ವರಿಷ್ಠಂ ಮೇಣ್ ಜಗದ ಪತಿಗಳೊಳ್ ಲಿಂಗಪತಿ ೧೪೪೦

ಗರಿಷ್ಠಂ ಹುಟ್ಟಿಲ್ಲ ಸಾವಿಲ್ಲವಾತಂಗೆ
ತನ್ನೊಳಿದಿರುವನಲ್ಲ ಚನ್ನಚಿತ್ಕಳಾತ್ಮಂ
ಕಾರಣಂ ಮುಂತೆನೀಂ ಲಿಂಗಪತಿವ್ರತೆಯಾಗು
ಲಿಂಗಪತಿಯೊಡನೆ ಸಂಗಸಮರಸದಿಂದಿರು
ತುಂಬು ಬಾಳನು ಬಾಳು, ಭವದಲ್ಲಿ ಬಳಲುತ್ತ
ಬಳಬಂದ ಸರ್ವರಾ ಲೇಸಿಂಗೆ ಹಂಬಲಿಸು,
ಮಾನವತೆಯ ಪಥದೊಳ್ ಹೊಂಬೆಳಗ ಹರಡಿಸು.
ಕತೆಯಲ್ಲಿ ಬಂದಿರ್ಪ ಪತಿವ್ರತೆಯತ್ಯಣಂ–
ದತಿಶಯದೆ ಪ್ರತಿಭಾನ್ವಿತಳ್ ನೀನಪ್ಪೆ ದಿಟಂ !

CC-0. Jangamwadi Math Collection. Digitized by eGangotri

ಅತ್ಯಂತ ಪ್ರಶಸ್ತಂ ಅಗಸ್ತ್ಯತೀರ್ಥಂ !

ಷಟಸ್ಥಲ ಸಿದ್ಧಾಂತಸ್ಥಾಪಕಂ ಶ್ರೀರೇಣು ೧೪೫೦
ಕಾಚಾರ್ಯ ಕರಕಂಜ ಸಂಜಾತನಗಸ್ತ್ಯಂ
ಮುನಿಗಳೊಳ್ ಪ್ರಶಸ್ತಂ ಶಿವಸಮಯ ಪ್ರಸಕ್ತಂ
ಅಂತಪ್ಪ ಮಹಿಮನಾ ಪುಣ್ಯಮಯ ನಾಮದಿಂ
ಶುಭತೀರ್ಥ ವೊಂದುಂಟು ಹಂಪೆಯೊಳ್ ಶರಣಾಸ್ಪೆ
ಮಿಗೆ ಸಯ್ಪಿನಿಂದದರ ದರ್ಶನಂ ಲಭಿಸುಗುಂ !

ಈ ಬಗೆಗೆ ಕಥನವೊಂದಂ ನಿನಗೆ ಕಥಿಸುವೆಂ
ಬಗೆಗಿಂಬುಗುಡುತ್ತಂ ನೀಂಕೇಳು ಶರಣವ್ವೆ !
ನಿನ್ನಿಂದ ಲೋಕಹಿತಮಪ್ಪುದೌ ಸತ್ಯದಿಂ
ಷಟಸ್ಥಲಿಯಗಸ್ತ್ಯನವನೇಂ ಸಾಮಾನ್ಯನೆ ?

ದ್ರಾವಿಡದ ದೇಶದೊಳ್ ಧರ್ಮಜ್ಞನೆನಿಸಿಪ್ಪ ೧೪೬೦
ಮೇಣಗಸ್ತ್ಯ ಶಿಷ್ಯಾಗ್ರಣಿ ಚಿತ್ರಸೇನನಂ
ಬರಸನೊರ್ವನಿರ್ದಂ ವೀರಶೈವನಿರತಂ
ಮತ್ತಮಷ್ಟಾವರಣ ಪ್ರತಿಷ್ಠಂ ವರಿಷ್ಠಂ
ಮೇಣು ಪಂಚಾಚಾರ ಪರಾಯಣ ಪ್ರವೀಣಂ
ಷಟ್‌ಸ್ಥಲ ಸಿದ್ಧಾಂತ ನಿತಾಂತ ಮಹಂತಂ
ಶಿವದೀಕ್ಷೆ ತಾನದಂ ಸಪ್ಪೋತ್ತಮ ಶೈವೀ
ಸಂಸ್ಕಾರಮೆಂದು ಸಾಟುತಿರ್ದಂ ಸಂತತಂ
ಮತ್ತಮಂಗದೊಳ್ ಶಿವಲಿಂಗಮಂ ಧರಿಸಿದಾ–
ತಂ ಸತ್ಯ ಶಿವಭಕ್ತನೆಂದು ಪೇಳುತಿರ್ದಂ
ಮತ್ತಮದರಂತೆ ತಾನಾಚರಿಸುತಿರ್ದ ಪಂ ೧೪೭೦
ಕ್ರೀಜ್ಞಾನ ಸನ್ಮಾರ್ಗದೆ ನಿಷ್ಠಾಗರಿಷ್ಠಂ !

ಇಂತಿರಲ್ ವೈಷ್ಣವಂ ತಾನೊಕ್ಕಿ ಶಿವಧರ್ಮ
ಮಂ ಕ್ರಿಯಾ–ಲಿಂಗಮಂ ಗರ್ಹಣಂ ಗೆಯ್ದ ಪಂ ;
ಚಿತ್ರಸೇನಾತನಂ ಶಿಕ್ಷೆಗೊಳಗಾಗಿಸುತ

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಆತ್ಯಂತ ಪ್ರಶಸ್ತಂ ಅಗಸ್ತ್ಯತೀರ್ಥಂ

ಪ್ರಾಂತದಿಂ ಪೊರಗಟ್ಟಿ ಬಿಡುತಿರಲ್ ದುರ್ವ್ಯೂವಿ
ಷ್ಣುವನ ದುರ್ದೆಸೆಗೆ ತುದಿಮೊದಲಿಲ್ಲಾಯ್ತು ;
ಮಾತಿಲ್ಲ ಮೇಣ್ ಮಡದಿ ಮಕ್ಕಳ್ಗೆ ತುತ್ತಿಲ್ಲ,
ತಂಗಳ್ಕೆ ಮನೆಯಿಲ್ಲ ಬಗೆಬಗೆಯ ಬೇನೆಯಿಂ
ಬಳಲುತ್ತ ತೊಳಲುತ್ತ ಹಂಪೆಗಂ ಬಂದಿಹನ್ !

ಕ್ಷೇತ್ರಪಾಲಂ ಕಂಡು ಕಡುನೊಂದು ತ್ವರಿತದಿಂ ೧೪೯೦
ಪೋಗಿರಯ್ ಸನಿಹದೊಳ್ ತಾನಗಸ್ತ್ಯ ತೀರ್ಥ
ವೊಂದುಂಟು ನೀನೆಲ್ಲರದರಲ್ಲಿ ಮಿಂದಲ್ಲಿ
ಶಿವಧರ್ಮ ದೂಷಣದ ಪಾಪಮದು ತೊಲಗುಗುಂ
ಬೇನೆಯದು ಮಾಣುಗುಂ ಸೊಲ್ಲುಗಳ್ ಸಾರ್ಚುಗುಂ
ಎಂದೆನುತ ನುಡಿಯುತಿರೆ ಮುದದಿಂದಗಸ್ತ್ಯತೀ
ರ್ಥಕ್ಕೆ ಪೋಗಿ ಮೀಯುವರ್ ಕೃತಕೃತ್ಯರಾಗುವರ್
ಶಿವಲಿಂಗಧಾರಣಂ ಬೆತ್ತು ತಾವ್ ಶಿವಭಕ್ತ
ರಾಗಿ ಸುಖಸಂತೋಷದಿಂಕೂಡಿ ಬಾಳುವರ್ !
ವೀರಶೈವ ಶ್ರೇಷ್ಠತೆಯ ಸುಗ್ಗಡಿಸುತಿರ್ದರ್ !!

ವಿಂಧ್ಯಾದ್ರಿಯಂ ಬಿಡದೆ ಬಗ್ಗಿಸಿದ ಕುಂಭಸಂ- ೧೪೯೦
ಭವನ ಪೆರತೊಂದು ಮಹಿಮೆಯಂ ಪೇಳ್ವೆನಾಲಿಸು ;
ವಾತಾಪಿ ಮೇಣಿಲ್ವಲರೆಂಬಾ ಮಾಯಾವಿ
ಸಹೋದರರಿರ್ವರಿರ್ದರ್ ಲೋಕಕಂಟಕ
ರಾಗಿ ಮೇಣ್ ಶುಕ್ರನಿಂ ಮಾಯೀಯ ವಿದ್ಯೆಯಂ
ಕಲಿತು ಬಳಿಬಂದು ಜನರಂ ವಂಚಿಸುವರಾಗಿ !
ಅವರಿರುವೆಡೆಗೆ ಬಂದವರಾತಿಥ್ಯಕ್ಕೆಂದು
ಇಲ್ವಲಂ ವಾತಾಪಿಯಂ ಕೊಯ್ದು ಪಾಕವಂ
ಸಲೆಗೆಯ್ದು ಬಂದರ್ಗೆ ಭೋಜನಂ ಮಾಡಿಸಿದ
ಬಳಿಕಮಿಲ್ವಲನವಂ ವಾತಾಪಿ ಹೊರಕ್ಕೆ ೧೫೦೦
ಬಾ ಎಂದು ಕೂಗುತಿರೆ ಕೂಡಲೇ ವಾತಾಪಿ
ಉಂಡವರ ಹೊಟ್ಟೆಯಂ ಬಗಿದು ಹೊರಬರುತ್ತಿರೆ
ಸತ್ತವರ ತಿನ್ನುತಂ ಕಾಲಕಳೆಯುತಿರ್ದರು ;
ನಿತ್ಯದೊಳ್ ಲೋಕಕಂಟಕರಾಗಿ ಬದುಕಿರ್ದರು.

CC-0. Jangamwadi Math Collection. Digitized by eGangotri

ಇಂತಿರುತ್ತಿರಲೊರ್ಮೆ ಕುಂಭ ಸಂಭವಂಬರೆ
ಮುಂತಿನೊಲ್ ಮಾಳ್ಪ ಪರ್ ; ಘಟೋದ್ಭವನಿದನರಿತು
'ವಾತಾಪಿ ನೀನೊಳಗೆ ಜೀರ್ಣನಾಗೆಂದುಸುರೆ
ವಾತಾಪಿ ಘಟೋದ್ಭವ ಜಠರದೊಳ್ ಜೀರ್ಣನಾ-
ಗಿ ಹೊರಬಾರದಂತಾಗುವನಗಸ್ತ್ಯಮ್ಮೆಯಿಂ
ಮುನ್ನಮೇ ಪುಷ್ಪಂಗಳನಿಸಗಿ ಸೇವಿಸಿರ್ದಂ !
ತನ್ನಯಾ ಸಹೋದರಂ ಬಂದ್ಯತಿಥಿಯೊಡಲೊಳಗೆ ೧೫೧೦
ತಾನರಗಿ ಸ್ಫೋದುದಂ ತಿಳಿದು ತಾಂ ಕೋಪದಿಂ-
ದಿಲ್ವಲಂ ಖರ್ಗಮಂ ಸೊರತೆಗೆದು ರಭಸದಿಂ
ಝಳಿಪಿಸುತ್ತಗಸ್ತ್ಯನಂ ಕತ್ತರಿಸಲನುವಾಗೆ
ಘಟೋದ್ಭವನೊಂದು ಕುಶಕೆ ಬ್ರಹ್ಮಾಸ್ತ್ರಮಂತ್ರಮಂ
ಪ್ರಯೋಗಿಸಿ ರಕ್ಕಸನ ಮೇಲೆಸೆಯೆ ನಿಮಿಷದೊ-
ಳಿಲ್ವಲನ ಹೆದ್ದಲೆಯು ನೆಲಕುರುಳಿ ಬೀಳುವುದು.
ಆಂದಿನಿಂ ಕಂಟಕಂ ತಾಂ ತಪ್ಪಿ ಲೋಕಮಿದು
ಶಾಂತಿಯಿಂ ಸೌಖ್ಯದಿಂ ಬಾಳಲನುವಾದತ್ತು !
ಹೆಗ್ಗಡಲ ದಾಂಟರ್ದಗಸ್ತ್ಯಂಗೆ ದಿಟ್ಟಿಸಲ್
ಇಲ್ವಲಂ ವಾತಾಪಿಗಳ ಗೆಲ್ಲುದೊಂದಚ್ಚರಿಯೆ ? ೧೫೨೦
ಶರಣನ್ನೆ ಗುರುಕರುಣ ಪಡೆದರ್ಗೆ ವರಚಿನ್ಮ-
ಯಾತ್ಮರ್ಗೆ ಪ್ರಾಣಪ್ರಕೃತಿಜಯಂ ಜೋದ್ಯಮೇಂ ?

ಹಂಪೆಯಾ ಹೆಂಪಿನ ಬಣ್ಣನೆಯ ಬಿಡುವೆವಾ
ಪರಮನರ್ಚನೆಯ ಪೊಳ್ತಿದೋ ತಾನಾಗಿಪುದು.
ಅಂಗಮಿದು ಮಂಗಳದ ಹತ್ತಿರದ ಹಂಪೆಯೌ
ಸಂಗತಿಸಿಹವಿದರೊಳಗೆಲ್ಲ ಕ್ಷೇತ್ರತೀರ್ಥಂಗಳ್
ಪರಿಶುದ್ಧ ಚೈತನ್ಯಮಿದು ವಿರೂಪಾಕ್ಷನೌ,
ಕ್ರಿಯಾ ಜ್ಞಾನೇಚ್ಛಾದಿ ಶಕ್ತಿಗಳೆ ಪಂಪಾಂಬೆ ;
ಶುದ್ಧೆ ನಿಷ್ಠೆಗಳಿರಲ್ ತುಂಗಭದ್ರಾ ತೊರೆಯು
ಮಿಂದಿದರೊಳರ್ಚಿಸೋಣ ನಡೆಯೌ ಶರಣನ್ನೆ ! ೧೫೩೦
'ವಿರೂಪಾಕ್ಷಸ್ತು ವಿಶ್ವೇಶಸ್ತುಂಗಭದ್ರಾತು ಜಾಹ್ನವೀ |
ಪಂಪಾ ಕಾಶೀ ಸಮಾ ದಿವ್ಯಾ ಭುಕ್ತಿ ಮುಕ್ತಿ ಪ್ರದಾಯಿನೀ ||' –ಸ್ಕಾಂದ

CC-0. Jangamwadi Math Collection. Digitized by eGangotri

೮. ಕಾಷಾಯ ವಸ್ತ್ರಧಾರಣಂ

ಭಾವ ಪರಿವರ್ತನಕೆ ವೇಷಮದು ಕಾರಣಂ
ಸಾತ್ವಿಕದ ಉಡುಗೆಯದು ಸತ್ವಗುಣ ಸಾಧನಂ
ರಾಜಸದ ಉಡುಗೆಯಿಂ ರಜೋಗುಣ ವರ್ಧನಂ
ತಾಮಸದ ವೇಷದಿಂ ತಮೋಗುಣ ವರ್ಧನಂ !

ವಸಂತೋದಯದಿಂದೆ ಪ್ರಕೃತಿಮಾತೆಯಿವಳ್
ಹಸುರುಡುಗೆಯಂ ಹೊದ್ದು ಹದುಳಗಳಾಗುವಳ್
ಕೆಂಪುಡುಗೆಯನ್ನುಟ್ಟು ರಜೋಗುಣಿಯಾಗುವಳ್
ಕಪ್ಪುಡುಗೆಯನ್ನುಟ್ಟು ತಮೋಗುಣಿಯಾಗುವಳ್
ಹಸ್ಲೆಲೆಯುಡುಗೆಯುಟ್ಟು ಜೋಗಿಣಿಯು ಚಾಗಿಣಿಯು
ತಾನಾಗಿ ತೋರುವಳ್ ತಿರೆಯವರ ಕಣ್ಣಿಂಗೆ–
ಮನಸಿಂಗೆ ತ್ರಿಗುಣಗಳನಳವಡಿಸುವಳ್ ಪ್ರಕೃತಿ !
ವೇಷದಿಂ ಸುಸಂಸ್ಕೃತಿ, ವೇಷದಿಂ ದುಷ್ಕೃತಿ !
ವೇಷದಿಂದಪ್ಪುವಂ ತ್ರಿಗುಣಂಗಳುತ್ಪತ್ತಿ !
ಪ್ರಕೃತಿ ಮೇಣ್ ವಿಕೃತಿಗಳ್ಗಿ ವೇಷಂನಿಧಾನಂ

ಮೂಬಗೆಯ ಬಣ್ಣಗಳ್ ತ್ರಿಗುಣಗಳ್ ತ್ರಿಮಲಗಳ್
ಮೂಬಗೆಯ ಅನ್ನಗಳ್ ತ್ರಿಗುಣಗಳ್ಗಿ ಪ್ರಪುಥಮ
ನಿಮಿತ್ತಗಳಾದಪವು ನೈಜದೊಳ್ ಜೀವನದೆ
ಬಣ್ಣಗಳ್ ಬಳಿಕ ಕಾರಣಂ ತ್ರಿಗುಣಂಗಳ್ಗಿ !
ಜೀವನಂ ವಿವಿಧ ವರ್ಣಂಗಳಿಂ ರಂಜಿತಂ
ಕೃತಕ ಪ್ರಾಕೃತಿಕ ವರ್ಣಂಗಳಿಂ ಜೀವಿತಂ
ಉಂಬುವ ಉಣಿಸುಗಳೊಳ್ ಮೇಣುಡುವುಡಿಗೆಗಳೊಳ್
ಮನೆಯ ಭಿತ್ತಿಗಳೊಳ್ ಮೇಣು ಚಿತ್ತಾರಗಳೊಳ್
ಬಾನಿನೊಳ್ ಮೂಡುತಿಹ ಬಗೆ ಬಗೆಯ ಬಣ್ಣದೊಳ್
ನೈಜದಿಂದನುಭವಿಸುವೆವಾನಂದಮಂ ದಿನಂ !
ವರ್ಣಮಯ ವಿಲಾಸಂ ವಿಚಾರಿಸೆ ಜೀವನಂ ;
ಬಣ್ಣಿಕೆಯ ಮಾತಿನಿಂ ಬಣ್ಣವೇರ್ದುದುಬಾಳಿಗೆ

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ಸೆ ಕಾಷಾಯ ವಸ್ತ್ರಧಾರಣಂ

ಬಣ್ಣಗೆಡುವರನ್ನಮುದಿಲ್ಲದಿರಲೊಡಲಿಂಗೆ
ಬಣ್ಣಮಿರದಿರೆ ಬಣ್ಣಗೆಡುವೈ ಕಣ್ಣುಗಳ್
ಬಣ್ಣಮಿರೆ ಬಾಳಿಗದು ಮಿಗೆ ಹೊಳಪು ಮಿಗೆ ಸೊಂಪು.
ದೃಷ್ಟಿಯನಿವಾರಣೆಗೆ ಬೀದಿಯೊಳ್ ಜೆಲ್ಲುವರ್ ೩೦
ಮಂತ್ರಿಸುತ ಬಣ್ಣದೋಗರವ ಮಾಟಗಾರರ್ !

ವರ್ಣದಿಂ ದೃಶ್ಯಮಿದು, ವರ್ಣದಿಂ ದೃಷ್ಟಿಯಿದು ;
ವರ್ಣದಿಂ ದ್ರಷ್ಟಾರನೆಂದೆನಿಸಿಹನಾತ್ಮನ್ !
ವರ್ಣದಿಂ ಜ್ಞಾನಮದು, ವರ್ಣದಿಂ ಜ್ಞಾತೃತಾನ್
ವರ್ಣದಿಂ ಜ್ಞೇಯಮದು ಲಭಿಸುಗುಂ ಲೋಕದೊಳ್ !

ಕಾವಿಯಿದು ತ್ಯಾಗಕ್ಕೆ ಯೋಗಕ್ಕೆ ಸಾಧನಂ
ಕಾವಿಯಂ ಧರಿಸುವರ್ ಯೋಗಿಗಳ್ ತ್ಯಾಗಿಗಳ್ ;
ಸಂನ್ಯಾಸ ಜೀವನಕೆ ಕಾವಿಯದು ಪ್ರೇರಕಂ
ಮತ್ತಮಾ ದರ್ಶಕರ ದೃಷ್ಟಿಮನಭಾವಗ-
ಳ್ಗತ್ಯಂತ ಮುತ್ತೇಜಕಾರಕಂ ಧಾರಕಂ ! ೪೦
ಕಾಷಾಯ ವರ್ಣಮಿದು ಬೀರುಗುಂ ದರ್ಶಕರ
ಜೀವನಕೆ ಸರ್ವೋತ್ತಮ ಪರಿಣಾಮಮಂ ಗಡಾ ;
ಕಾಷಾಯ ವರ್ಣದೊಳ್ ಪಾವನಕೆ ಪಾವನಂ
ತಾನಾದ ಶಕ್ತಿಯಿದೆ ಭಕ್ತಿಯಿದೆ ಶಾಂತಿಯಿದೆ,
ಕಾಂತಿಯಿದೆ ದಾಂತಿಯಿದೆ ಭ್ರಾಂತಿಯಂ ಬಿಡಿಸುತಿದೆ ;
ಪ್ರಪಂಚದ ಪರಜಾಟದಿಂ ದೂರಿರಿಸುತ್ತಿದೆ.
ಕಾಷಾಯದೊಳಗುಂಟು ಶಾರೀರ ವಿಜ್ಞಾನ
ಪೇಣ್ ನೇತ್ರವಿಜ್ಞಾನ, ಮಾನಸಿಕ ವಿಜ್ಞಾನ
ಮತ್ತಮಾ ಮಿಗಿಲಾದ ಸಂನ್ಯಾಸ ವಿಜ್ಞಾನ-
ವೆಂದೆನಲ್ ಸೋಜಿಗಂ ತಾನಿಲ್ಲ ಸತ್ಯದೊಳ್ ! ೫೦

ಇಂತಪ್ಪ ಕಾವಿಯಂ ಶರಣನ್ಸೆ ಧರಿಸುವ
ಸಂತಸದ ಯೋಗಮದು ಬಂದುದಂ ಪೇಳುವೆನ್ ;

CC-0. Jangamwadi Math Collection. Digitized by eGangotri

ಮತ್ತೊರ್ಮೆ ಗುರುದೊಡ್ಡ ಬಸವಾರ್ಯದರ್ಶನಕೆ
ಹಂಪೆಯಾ ಹತ್ತಿರಿರ್ದಾರಾಳ ಹಳ್ಳಿಯ
ವಿರೂಪಾಕ್ಷನೆಂಬೊರ್ವ ಜಾಗಿ ಬಂದಿರ್ದು
ತಾನಲ್ಲಿ ಮೆಯ್ದೊಳೆದು ತಿಳಿಗಾವಿ ಬಟ್ಟೆಗಳ
ಮಡಿಮಾಡಿಯೊಣಗಿಸೆ ಹರವಿರ್ದರ್ ಬಿಸಿಲಿಂಗೆ ;
ಗದಗಿನಾ ಗುರುಗಳಂ ದೀಕ್ಷಿತರಾಗಿರ್ದರು.

ಅಂತಿರಲ್ ಗುರುದೊಡ್ಡ ಬಸವಾರ್ಯರಮ್ಮವ್ವೆಗೆ
ಕಾಷಾಯ ವಸ್ತ್ರಮಂ ಧರಿಸೆ ಸೂಚಿಸುತ್ತಿರೆ ೬೦
ವಿರೂಪಾಕ್ಷತ್ಯಾಗಿಯ ಕಾಷಾಯ ವಸ್ತ್ರಂಗ–
ಳಂ ತೆಗೆದುಕೊಂಡುಟ್ಟರೊಂದ ನಿಸ್ಸೊಂದನು
ತಮ್ಮ ತಲೆಗೆ ತವೆಸುತ್ತಿಕೊಂಡರ್ ಸಂತಸದೆ ;
ಆ ಪೊಳ್ತಿನೊಳಮ್ಮಗಳಾದರಪ್ಪಗಳಂತೆ !
ಎಂದೆನುತಿರಲನಿತನೊಳಲ್ಲಿ ಗೈತರುವರೊಳ
ಬಳ್ಳಾರಿ ಮಲ್ಲಣ್ಣ ಶಾಸ್ತ್ರಿಗಳ್ ; ಗುರುಗಳವ–
ರಂ ಕಂಡುರೆ ಸಂತೋಷದಿಂದೋ ಮಲ್ಲಣ್ಣ,
"ಅಲ್ಲೊಂದು ಯಾವುದೋ ಮುರಿದೇವರು ಬಂದ್ಹಂಗ
ಕಾಣಸ್ತದ ಅದನ್ನು ಇತ್ತಾಗ ಕರೆಯಣ್ಣ"
ಎಂತೆಂದು ತಮ್ಮಯಾ ಭಾಷೆಯೊಳ್ ಪೇಳುತಿರೆ, ೭೦
ಏನೊಂದನರಿಯದಂತಿರ್ದ ಶ್ರೀ ಮಲ್ಲಣ್ಣ,
ಗುರುದೊಡ್ಡ ಬಸವಾರ್ಯರ ನುಡಿಯಂ ನೆರೆನಂಬಿ
ದಿಟದೊಳಾರೊ ಮುಂದೇವರಿರವೇಳ್ಕೆಂದು ಪರಿ
ಭಾವಿಸುತ್ತ 'ಯಪ್ಪಾ ಬುದ್ಧೀಽss ಯಾವೂರು
ನಿಮ್ಮದಪ್ಪ ಗುರುಗಳು ನಿಮ್ಮನ್ನು ಕರೀತಾರ
ದಯಮಾಡಬೇಕಪ್ಪ' –ಎಂದು ಬಿನ್ನವಿಸುವರ್ !
ಮಲ್ಲಣ್ಣ ಶಾಸ್ತ್ರಿಗಳ ಬಿನ್ನಹಂ ನೆರೆಗೇಳ್ದು
ವೇಷದಿಂ ಮುರಿಯಪ್ಪನಾಗಿರ್ದ ಶರಣಪ್ಪೆ
ಲಜ್ಜೆಯಿಂ ಬಳಕುತ್ತ ಕೇಳ್ "ನಾವು ಆರಾಳ ೮೦
ದವರಣ್ಣ ಮಲ್ಲಣ್ಣ" ಎನ್ನತಲೊಡನೊಡನೆ
ಬಂದರ್ ಗುರುದೇವ ಸನಿಹಕ್ಕೆ ನಸುನಗು–

CC-0. Jangamwadi Math Collection. Digitized by eGangotri

ತ್ತಮಿದಾವುದರ್ಥಮಾಗದಂತಿತ್ತು ಶಾಸ್ತ್ರಿ
ಮಲ್ಲಣ್ಣನದರಿಗಿನಿತಾದಡಂ ; ಗುರುವರ್ಯ-
ರಾಗ'ಓ ಮಲ್ಲಣ್ಣ ಈ ಮುರಿನ ದಿಟ್ಟಿಸಿ
ನೋಡಯ್ಯ ; "ಇದುಮುರಿದೇವರಲ್ಲ ನಿನ್ತಂಗಿ
ಶರಣಮ್ಮ"–ಎಂದೆನುತಲಾಶೇಷದಿಂ ನುಡಿಯೆ
ಮಲ್ಲಣ್ಣ ಶಾಸ್ತ್ರಿಗಳ್ ತಂಗಿಯಂ ದಿಟ್ಟಿಸುತ,
'ಓs ಹೋs ಇವಳೆನ್ನ ಸಹೋದರಿ ಶರಣಮ್ಮ,
ಇವಳೆನ್ನ ಸಹೋದರಿ ಶರಣಮ್ಮ' ಎಂದೆನುತ
ಬೆಕ್ಕಸಂ ಬೆರಗಾಗಿ ನಗೆಗಡಲದೆ ತೇಲಿಹರ್ ! ೯೦
ಆ ದಿನಂ ಶರಣವ್ವೆ ಕಾವಿ ಧರಿಸಿದ ಮುಮ್ಮೊ-
ದಲದಿವಸಮಾದತ್ತು ; ಮುಂಸೆ ಬಳಗಾನೂರ
ಚರಮೂರ್ತಿ ವರ್ಯರಾದೇಶದೊಲ್ ಶರಣವ್ವೆ
ನಿತ್ಯದೊಳ್ ಕಾಷಾಯ ವಸ್ತ್ರಮಂ ಧರಿಸುವರ್ !
ಸತ್ಯದೊಳ್ ಶರಣವ್ವೆ ತಾನಾದಳಂದಿನಿಂ-
ದಂತರಂಗವ ತೆರದ ಬಹಿರಂಗದುಡುಗೆಯೊಳ್ !
ಅಂತರಂಗ ಮುಕುರಂ ಬಹಿರಂಗಲಾಂಛನಂ,
ಬಹಿರಂಗ ಲಾಂಛನಕೆ ಸಾರ್ಥಕಂ ತಾನಂತ-
ರಂಗದರಿವಿನಾಚಾರ ಸತ್ಪಥ ಸಂಚರಣಂ ;
ಸತ್ಯಶಿವ ಶರಣವ್ವೆ ಯುಭಯಾಂಗಮೊಂದಾಯ್ತು. ೧೦೦
ಜೋಹದಂತಾಚಾರಮಿಲ್ಲದಿರೆ ಭಾವಿಸಲ್
ಜೋಹವದು ಜೊಕ್ಕಟಂ ತಾನೆಂದೆನಿಸದು ಮೇಣ್
ಜೋಹವಂತೊಟ್ಟ ಬರಿ ಸೋಗು ತಾನಾದಪುದು ;
ಜೋದ್ಯಕ್ಕೆ ಕಾರಣಂ ತಾನಕ್ಕು ಲೋಕದೊಳ್ !
ತ್ಯಾಗಮಂ ಮೇಣ್ ಸಾತ್ವಿಕ ಸ್ವಭಾವಮಂ ಮೇ
ಣಾಜೀವ ಬ್ರಹ್ಮಚಾರಿತ್ವಮಂ ಸೂಚಿಸುವ
ಕಾಷಾಯ ವಸ್ತ್ರಮಂ ಧಾರಣಂ ಗೆಯ್ವುದುಂ
ತಾನೇನನಿತು ಸುಲಭ ಸಾಧ್ಯಮದಲ್ಲವರಿಯಲ್ಕಿ !
ಕಾವಿಯಂ ಧರಿಸಿಯುಂ ತ್ಯಾಗಗುಣಮಿಲ್ಲದಿರೆ
ಕಾಯ ಕರಣೇಂದ್ರಿಯಂಗಳ ಸಂಯಮವಿರದಿರೆ ೧೧೦

CC-0. Jangamwadi Math Collection. Digitized by eGangotri

ಮೇಣು ತ್ರಿಗುಣರಿತೀತನಾಗಿ ತಾಂಬಾಳದಿರೆ
ಕಾಲ ಕರ್ಮ ಮಾಯಾತ್ರಯಂಗಳ ಗೆಲ್ಲದಿರೆ
ಕಾರಣೆಕತನಂ ಬರ್ಪ ಶಕ್ತಿಯಂ ಗಳಿಸದಿರೆ
ಕಾರುಣ್ಯರಸಮದಂ ಹೃದಯದೊಳ್ ಹೊಮ್ಮದಿರೆ
ಕಷ್ಟ ಕಾರ್ಪಣ್ಯಮಯ ಬಾಳಿನೊಳ್ ಬಾಳುತಿರೆ
ಸಾಹಿತ್ಯಸಂಸ್ಕೃತಿಗಳ ಸ್ವಯಂ ಸೃಜಿಸದಿರೆ
ಸತ್ಕ್ರಿಯಾಶೀಲನಾಗಿ ಶಿವವಾಗಿ ಬಾಳದಿರೆ
ಬಾಳುವೆಯು ಬೀಸರಂ ತಾನಹುದು ಭುವನದೊಳ್ !
ತಿಳಿಗಾವಿ ಬಣ್ಣಮದರುಣೋದಯವಾದಂತೆ
ಮತ್ತಮಾ ಚಿಚ್ಚಂದ್ರನುದಿಸಿ ಹೊಂಬೆಳಗುವಂತೆ ೧೩೦
ನೋಡದೋ ಕಾಣುತಿದೆ ಮೆಯ್ಮೀಲೆ ಸೂರಾಡಿ
ಚಿಚ್ಛಕ್ತಿಯಂತೆ ನೀನಿಂದು ಶೋಭಿಸುತ್ತಿಹೆ !
ಕಾವಿಯಿಂದೆ ಜೀವನದ ಪರಿವರ್ತನಮಪ್ಪುದು,
ಭಾವದಿಂ ಸತ್ಯದಿಂ ಧಾರಣಂಗೆಯ್ವರ್ಗೆ ;
ಬರಿಯನುಕರಣ ಮಾಡುವವರ್ ನೂರಕ್ಕೆ ನೂರು,
ತಾನಪ್ಪುದನುಕರಣದೆ ಜೀವನ ನಿರ್ವಹಣಂ !
ಮೇಣುಸಂಸಾರದಿಂ ಶತ್ರುಗಳಿಂರಕ್ಷಣಂ !
ಇಂತಾವ ಕಾರಣಂಗಳಿರಲಿಲ್ಲ ತಾಯಿಗೆ !
ಕಾವಿಯಂ ಪೋಲುತಿಹ ಮೆಯ್ಬಣ್ಣ ತಾಯಿಯದು ;
ಮೆಯ್ಬಣ್ಣ ಪೋಲುತಿಹ ಕಾಷಾಯದುಡಿಗೆಯು ೧೪೦
ಫಾಲದೊಳ್ ತ್ರಿಪುಂಡ್ರಂ, ಕರಗಳೊಳ್ ರುದ್ರಾಕ್ಷಿ,
ಕಳೆದುಂಬಿರುವ ಕಣ್ಣಂ, ಸಲಿಪಲ್ಲು, ನೀಳ್ಗೂಗು,
ಕೆಂಗೆನ್ನೆ ಕೆಂದುಟಿಯು ಕೆಮ್ಮೊಗಂಗಳಿಂ ಮೆರೆ
ದತ್ತು ತಿವಕಳಿ ಸತ್ಯ ಶರಣಾಂಬೆ ರೂಹಿನೊಳ್ !
ವೇಷಕ್ಕೆ ಸಲ್ಲುತಿಹ ವಿನಯಶ್ರೀ, ವಿನಯಕ್ಕೆ
ಸಲ್ಲುತಿಹ ಮೃದುವಾಣಿ, ಮಿದುನುಡಿಗೆ ಸಲ್ಲುತಿಹ
ಸದಾಚಾರ ಮತ್ತಂ ಸದ್ವಿಚಾರಂಗಳಿರ್ದವು.
ಬಡತನದ ಬಾಳಿನೊಳ್ ಕುಗ್ಗಿದವರಲ್ಲ ಮೇಣ್
ಸಿರಿತನದ ಬಾಳಿನೊಳ್ ಹಿಗ್ಗಿದವರಿವರಲ್ಲ. ೧೪೦
ಜೋಹ ಬೇರಾದಂತೆ ಚಪ್ಪೃತ್ತಿ ಬೇರಾಯ್ತು ;
ಸೋಽಹಂ ಶಿವೋಽಹಮೆಂಬ ಭಾವಂ ಬೆಳೆದಾಯ್ತು.

CC-0. Jangamwadi Math Collection. Digitized by eGangotri

೯. ತಪೋನುಷ್ಠಾನಂ ತತ್ತ್ವಾನುಸಂಧಾನಂ

ಶರಣನಾದವನ್ ಸರ್ವಾಂಗದೊಳ್ ಪ್ರಸನ್ನತೆ–
ಯಂ ಬರಿಸುವರ್ಚನಾರ್ಪಣಾನುಭವಂಗಳೊಳ್
ಕ್ರಿಯಾಶೀಲನಾಗಿರ್ಪುದೆ ತಪೋನುಷ್ಠಾನಂ ;
ಮತ್ತಮಾ ಪರಶಿವ ಪರಶಕ್ತಿ ತತ್ತ್ವದೊಳ್
ಚಿತ್ತಮನ ಭಾವ ಜೀವಂಗಳಂ ಪರಿವಿಡಿದು
ಧಾರಣಂ ಗೆಯ್ವುದೇ ತತ್ತ್ವಾನುಸಂಧಾನಂ !
ಪಂಚಭೂತಂಗಳಂ ಪಂಚತನ್ಮಾತ್ರಂಗ
ಳಂ ಪ್ರಪಂಚಕರ್ಮೇಂದ್ರಿಯುಂಗಳಂ ಪಂಚಜ್ಞಾ
ನೇಂದ್ರಿಯಂಗಳಂ ಚಿತ್ತಮಹತ್ತತ್ತಹಂಕಾರ
ಗುಣ ಪ್ರಕೃತಿ ಪುರುಷರಂ ಕಾಲನಿಯತಿಕಲೆವಿದ್ಯೆ ೧೦
ರಾಗಗಳಂ ಶುದ್ಧವಿಸಿ ಸ್ವಸ್ವರೂಪ ಸಿದ್ಧಿ–
ಯಂ ಬಿಡದೆ ತಳೆವುದೇ ತತ್ತ್ವಾನುಸಂಧಾನಂ !
ಶುದ್ಧ ವಿದ್ಯೆಯಂ ವೃದ್ಧಿಸಿಕೊಂಡು ಮಾಹೇಶ್ವ–
ರತ್ವಮಂ ಮೈಗೂಡಿಸಿಕೊಳ್ಳಲ್ ಸದಾಶಿವ-
ತ್ವಂ ಸಮನಿಸುಗುಂ ಮೇಣ್ ಶಿವಶಕ್ತಿ ಸ್ವರೂಪಂ
ತನ್ನೊಳುಂ ತಾದಾತ್ಮ್ಯಭಾವದೊಳ್ ತೊಳಗುಗುಂ !
ರಾಗಮಂ ಜಯಿಸೆ ಶುದ್ಧವಿದ್ಯೆಯದು ಬಪ್ಪುದು,
ಕರಣೇಂದ್ರಿಯಂಗಳಂ ಸಂಯಮಿಸೆ ಮಾಹೇಶ
ನೆನಿಸುವನ್ ಮಂತ್ರಸಿದ್ಧಿಯಂ ಪಡೆಯೆ ಸದಾ–
ಶಿವತ್ವಂ ಲಭಿಸುಗುಂ, ನಿತ್ಯತೃಪ್ತನಾಗಲ್ ೧೦
ಶಿವಶಕ್ತಿ ಸ್ವರೂಪಂ ಸಮನಿಪುದು ಸ್ವಾತ್ಮನೊಳ್ ;
ತಪೋನುಷ್ಠಾನದಿಂ ತತ್ತ್ವಾನುಸಂಧಾನಂ
ಲಭಿಸುಗುಂ ಪರಸ್ಪರ ಸಾಪೇಕ್ಷ ಭಾವದಿಂ
ಶರಣತ್ವ ಸಿದ್ಧಿಗಿವನು ಸಾಧಿಸವೇಳ್ಕುಮಾ !

ಶಿವಶರಣರಾಚರಿಸುವಾಚಾರ ಸಂಹಿತೆಯು
ಶಿವಾಚಾರಮೆನಿಪುದು ಮೇಣ್ ಸದಾಚಾರಮದು ;
ಶಿವಾಚಾರ ಸಂಹಿತೆಗಾಗಮಂ ಪ್ರಮಾಣಂ

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ತಪೋನುಷ್ಠಾನಂ ತತ್ತ್ವಾನುಸಂಧಾನಂ

ಶಿವಾಚಾರದಿಂ ಶಿವಭಾವೋದಯಮಕ್ಕುಂ
ಪ್ರಗತಿ ಮೇಣ್ ಸದ್ಗತಿಗಳಪ್ಪವಿಳೆಯೊಳ್ ಗಡಾ !
ಆಚಾರದಿಂದಾಯು ಶ್ರೇಯಗಳ್ ತಪಜಪಂಗಳ್
ಮೇಣರ್ಚನಾನುಭವಂಗಳಿರದೆ ಫಲಿಸುಗುಂ
ಆಚಾರಮದಂ ಸರ್ವಸಿದ್ಧಿಗಳ್ಗಾಧಾರಂ !

ಧರ್ಮದೊಳ್ ಬುದ್ಧಿ ಪುಟ್ಟುವುದು ಕರಕಷ್ಟಮೈ
ಪುಟ್ಟದೊಡಮಾಚರಿಪುದದು ಕಷ್ಟಮಾಚರಿಸು
ವೊಡಂ ಬರ್ಪ ವಿಘ್ನಂಗಳ್ಗೆ ಹುದಿಮೊದಲಿರದು ;
ವಿಘ್ನಂಗಳನೆಮರಿಸಿ ನಡೆವವನ ನಿಜಶರಣಂ !

ಆಡಿತಡೆಗಳನೆದುರಿಸಿ ನಡೆದಿಹಳ್ ಶರಣಪ್ಪೆ
ನಡೆದಿಲ್ಲಿ ಸಲ್ಲಿದಳ್ ನಡೆದಲ್ಲಿ ಸಲ್ಲಿದಳ್ ;
ನೂರ್ಬರಿಸಮನ್ನೆಗಂ ನಿವೃತ್ತಿಯೊಲ್ ನಡೆದಿಹಳ್
ನಡೆದುದಿಲ್ಲಮಾ ನಸುಪೊಳ್ತು ಪ್ರವೃತ್ತಿ ಮಾರ್ಗದೊಳ್

ನಿತ್ಯದೊಳ್ ಬ್ರಾಹ್ಮೀಮುಹೂರ್ತದೊಳ್ ತಾವೇಳ್ದು
ಗುರುಲಿಂಗ ಧಾನ್ಯಮುಂ ಪೇಣು ಮಂತ್ರ ಜಪಮುಂ
ನೆರವೇರ್ಚಿ ಬಳಿಕ ಶಾಚಾಚಮನಂಗಳ ಸಾರ್ಚಿ
ನೆರೆಮಿಂದು ಮಡಿಯುಟ್ಟು ಮನದಂದು ಕರದಿಷ್ಟ
ಲಿಂಗಾನುಷ್ಠಾನದೊಳ್ ನಿರತರಾಗಿರುತಿರ್ದರ್
ಮತ್ತಮೀರಾರ್ ಸಾಸಿರ ಜಪಂಗಳ ನೆಗಳ್ಚುವರ್ !
ಅವರಾಯ್ತು ಮತ್ತಮವರರ್ಚನೋವರಿಯಾಯ್ತು
ಪೆರತೊಂದೆಡೆಗೆ ಪೋದವರಲ್ಲಂ ಪೆರತೊಂದು
ತರಗುನುಡಿ ಯಾಡುವವರಲ್ಲಮಿಡಿ ಜೀವನಂ
ಲಿಂಗನಡೆ ಲಿಂಗನುಡಿ ಲಿಂಗನೋಟ ಮತ್ತಂ
ಲಿಂಗನೆಸಹಿನೊಳಿರ್ದು ಕೃತಕೃತ್ಯರಾದವರ್,
ಮಂಗಳ ಮಯಾಂಗಮಂ ಲಿಂಗಮಯಮೆನಿಸಿಹರ್

ಗುರುವರಂ ಬೋಧಿಸಿಹ ಪಂಚಾಕ್ಷರ ಮಂತ್ರಮುಂ
ನಿರಂತರ ಜಪಿಸುತಿರ್ದಳಲಸದೆ ಶರಣಪ್ಪೆ

CC-0. Jangamwadi Math Collection. Digitized by eGangotri

ಪಂಚಾಕ್ಷರಂಗಳವು ಪಂಚಮುಖ ಸ್ವರೂಪಗಳ್
ಸಪ್ತಕೋಟಿ ಮಂತ್ರಂಗಳೊಳಿತ್ಯಧಿಕಮವು.
ಮಂತ್ರಜಪದಿಂ ತಾಯ್ಗೆ ವಾಕ್ಸಿದ್ಧಿಯಾಗಿತ್ತು ;
ಚಿತ್ತಶುದ್ಧಿಯಾಗಿತ್ತು ಮನನಿಶ್ಚಲಾಗಿತ್ತು.
ದುಃಖಮಂ ಮರೆಯುತಿರ್ದಳ್ ಮಂತ್ರಾನುಷ್ಠಾನದಿಂ
ಮತ್ತಮಾ ಮನದ ಬಯಕೆಗಳಂ ತಳ್ಳುತಿರ್ದಳ್,
ಪಡೆಯುತಿರ್ದಳ್ ಮಂತ್ರಾರ್ಥಪ್ರಕಾಶದೊಳಿರದೆ
ಪರಮಾತ್ಮ ಸಂದರ್ಶನಮಂ ಸದಾ ಶರಣಪ್ಪೆ !
ಮಂತ್ರದಿಂ ಮಾತು ಜ್ಯೋತಿರ್ಲಿಂಗಮಾಗಿತ್ತು,
ಮಂತ್ರಮಯ ನಾದಮದು ಸಿದ್ಧಿಸಿತ್ತವ್ವೆಗೆ ;
ತಾನುಂ ಮನೋನ್ಮನಿಯುಮಾಗಿರ್ದಳಾತ್ಮದೊಳ್ !
ಹರಮಂತ್ರ ನಾದಮಂ ಕವಿಯಾರೆ ಕೇಳಲ್ಕೆ
ಘೋರತರ ನರಕಮದು ತಪ್ಪುವುದು ನಿಶ್ಚಿತಂ
ಶಿವಮಂತ್ರಮಹಿಮೆಯಂ ಪೇಳಲ್ಕೆ ಮಾತಿಲ್ಲ.
ಓಂಕಾರದೊಳಿರ್ಪರ್ ಸದಾ-ಶಿವಶಕ್ತಿಯರ್
ಮೇಣ್ ನಾದ ಸದ್ಬಿಂದು ಕಲಾತ್ಮಕಮಾಗಿಹುದು.
ಪ್ರಣವಮದು ಜೀವನದ ಸರ್ವಸ್ವಮಾಗಿಹುದು
ಪ್ರಾಣಚೇತನಂ ತಾನಾಗಿಪ್ಪುದದು ದಿಟಂ !
ಓಂಕಾರದಿಂ ಚರಾಚರಮೆಲ್ಲಮಾದಪುದು
ಸರ್ವಸಂಪದಸಿದ್ಧಿ ತಾನಕ್ಕುವೋಂಕಾರದಿಂ !
ಓಂಕಾರದಿಂ ಬೋಧವಪ್ಪವು ಸರ್ವವೇದಂಗಳ್ ;
ಮಸ್ತಂ ಗುಣತ್ರಯಾತೀತಮಪ್ಪುದದರಿಂ !

ಓಂಕಾರ ಸ್ವರೂಪಳ್ ಶರಣವ್ವೆಯಾಗಿಹಳ್
ಗುರುಭಕ್ತಿಯಿಂ ಶುದ್ಧರಾಗಿ ತಾವ್ ಜಪಿಸುಗು
ಸಿದ್ಧಿಕಾರಣಂ ದೀಕ್ಷೆಯಿಂ ಬಂದ ಪ್ರಣವಂ
ಸದ್ವಿಚಾರಾಚಾರಗಳಿಂ ವಶಮಕ್ಕುಮುದಂ
ಪಡಧ್ವಾಚಾರದಿಂ ಸಿದ್ಧಿಸುಗುಮೋಂಕಾರಂ
ಮನಃಪ್ರಸನ್ನಮಾದಪುಮೋಂಕಾರ ಜಪದಿಂದೆ

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ತಪೋನುಷ್ಠಾನಂ ತತ್ತ್ವಾನುಸಂಧಾನಂ

ಮಿಗಪಕ್ಕಿ ಹುಟ್ಟಹುದು ವಾಚಕದ ದೋಷದಿಂ,
ಮೇಣಂತ್ಯಜನಪ್ಪನ್ ಮಾನಸಿಕ ದೋಷದಿಂ
ಮತ್ತಮಚರನಾಹನ್ ಕಾಯಿಕದ ತಪ್ಪಿನಿಂ
ತೊಲಗುವವ್ ಪ್ರಣವದಿಂ ತ್ರಿಕರಣ ದೋಷಂಗಳು
ರೋಗಗಳ್ಗೊಂಕಾರಪ್ಪೊಂದೆ ಸಿದ್ಧೌಷಧಂ !
ಬ್ರಹ್ಮಚರ್ಯಂ ಮೇಣು ದಯೆ ಸತ್ಯಮಕ್ರೋಧಂ
ಶಾಂತ್ಯಾರ್ಜನಂ ತಪಂ ಶಿವಭಕ್ತಿ ಗುರುಸೇವೆ
ಮೇಣ್ ಜಪಂ ದಶವಿಧಿಗಳ್ ಶಿವಮಂತ್ರಸಿದ್ಧಿಗೆ ! ೯೦

ಶರಣಪ್ಪೆ ಜೀವಸದ ಸಾಧನೆಯ ಪಥದಲ್ಲಿ
ಬಾಹ್ಯಪ್ರಪಂಚಮಂ ಕಂಡರಿತವರಲ್ಲ ;
ಲಿಂಗಾನುಷ್ಠಾನಮೇ ಜೀವನದ ಸರ್ವಸಂ,
ಬಂದ ಜನಂಗಳ ಯೋಗ ಕ್ಷೇಮವೇ ಕಾಯಕಂ
ತವಾಗಿಹವು ತಾಯಿಗೆ ತನದೆಂದಿಗುಂವಲಂ ;
ಖಾದಿಯಂ ತೊಡುತಿಹಳ್ ಅವಂತಾನೆ ತೊಳೆಯುವಳ್
ಮುಪ್ಪೊದಗೆ ತೊಳೆಯಡೊಲ್ ತಾನಾಗಿರುತಿಹುದು
ಸೀರೆಗಳ್ ತಾವ್ ದಪ್ಪವಾಗಿಪ್ಪ ಕತದಿಂದೆ ;
ಮತ್ತಮಾ ಹೊಕ್ಕಾಣೆ ಸಂಗಪ್ಪ ಶಿಕ್ಷಕರ
ಒತ್ತಾಯದ ಸಲಹೆಗೆ ತಾವೊಪ್ಪಿ ಬಿಟ್ಟಹರ್ ೧೦೦
ಮುಪ್ಪಿನೊಳ್ ದಪ್ಪಾದ ಬಟ್ಟೆಗಳ ನುಡುವುದಂ !
ಮಿತವಚನ ಮಿತಾನ್ನ ಮಿತಪಾನ ಮಿತನಿದ್ರೆ
ಬಾಳಿನೊಳ್ ಹಾಸುಹೊಕ್ಕಾಗಿಹವ್ ತಾಯಿಗೆ !
ಗುರುದೇವ ಲಿಂಗೈಕ್ಯನಾದಬಳಿಕಂ ತಾಯ್ಗೆ
ತಪೋನುಷ್ಠಾನಮೇ ತಾನೋಗರಮಪಾಯ್ತು.
ವಾರ ಪಕ್ಷ ಮಾಸಗಳು ಮತ್ತಂ ಮಂಡಲಂ
ತಪೋನುಷ್ಠಾನದೊಳ್ ಕಳೆದಪವು ಶರಣಪ್ಪೆಗೆ !
ಹಾಲ್‌ಹಣ್ಣು ಹೆಜ್ಜೇನು ಖರ್ಜೂರ ಶರ್ಕರಂ-
ಗಳೋಗರವಾದಪವ್ ತಪೋನುಷ್ಠಾನದೊಳ್
ಮೂರ್‌ಪೊಳ್ತು ನಸುವಾಗಿ ನಸುವಾಗಿ ತಪಸ್ವಿನಿಗೆ ! ೧೧೦

CC-0. Jangamwadi Math Collection. Digitized by eGangotri

ಸಜ್ಜಲ ಶರಣಸ್ಥೆ ತಪೋನುಷ್ಠಾನಂ ತತ್ತ್ವಾನುಸಂಧಾನಂ

ಗುರುಶ್ರದ್ಧಿ ಗುರುನಿಷ್ಠೆ ಗುರುಧ್ಯಾನ ಪೆರ್ಚ್ಚಿಹವು
ಪಗಲಿರುಳ್ ಗುರುಲಿಂಗಗಳಾರಾಧನ ನಿರತಳ್ !

ಲಿಂಗಭೋಗಮಲ್ಲದೆ ಅಂಗಭೋಗಮಿಲ್ಲ,
ಜಂಗಮಗ್ರಾಹಕಳವಳಾಗಿರ್ದಳಲ್ಲದೆ
ಆ ಪ್ರಾಣಾಭಿಮಾನಗ್ರಾಹಕಳಲ್ಲ
ಪಾದೋದಕ ಪ್ರಸಾದ ಗ್ರಾಹಕಳಲ್ಲದೆ
ನಾಲಿಗೆಯ ರುಚಿಗಾಗಿ ತಾಯಿ ರುಚಿಸುವಳಲ್ಲ.

ಕೇಳ್ದುದಂ ಶಬ್ದಪ್ರಸಾದಮದು, ಕಂಡುದಂ
ಶಿವರೂಪ ಪ್ರಸಾದಂ, ಸೋಂಕಿದುದು ಸುಸ್ಪರ್ಶ-
ಪ್ರಸಾದಂ, ಮೂಸಿದುದು ಸುಗಂಧ ಪ್ರಸಾದಂ ! ೧೨೦

ಸದ್ಭಾವನೆಯಿಂ ಚಿತ್ತವಿಶುದ್ಧಿ ವಿಕಾಸ-
ಗಳಂ ತಾಳುವನ್ ತಾನ್ ಪೃಥ್ವ್ಯಂಗ ಭಕ್ತಂ,
ಸುರಸದಿಂ ಬುದ್ಧಿ ಶುದ್ಧಿಯಂ ಮೇಣ್ ವಿಕಾಸಂ–
ಗಳಂ ಪೊಂದುವನ್ ತಾನ್ ಜಲಾಂಗ ಮಾಹೇಶಂ ;
ಸ್ವರೂಪದರಿವಿಂ ನಿರಹಂಕಾರ ವಿಕಾಸ-
ಮಂ ಪೊರ್ದುವನಗ್ನ್ಯಂಗನಿಷ್ಠಂ ಪ್ರಸಾದಿ ;
ಸುಸ್ಪರ್ಶದಿಂದಾಗಿ ಮನಶುದ್ಧಿ ವಿಕಾಸಂ-
ಗಳಂ ಗಳಿಸುವನ್ ವಾಯ್ವಂಗ ಪ್ರಾಣಲಿಂಗಿಯು ;
ಸುಶಬ್ದ ಪ್ರಾಪ್ತಿಯಿಂ ಜ್ಞಾನಶುಚಿವಿಕಾಸಂ
ಗಳಂ ತಳೆಯುವನಾಗಸಾಂಗ ನಿಷ್ಠ ಶರಣಂ ; ೧೩೦
ಸಂತೃಪ್ತಿಲಾಭದಿಂ ಭಾವ ಶುಭ ವಿಕಾಸಂ-
ಗಳಂ ಪಡೆಯುತಿಹನಾತ್ಮಾಂಗ ಸಂಯುತೈಕ್ಯಂ !
ಚಿತ್ಕಳೆಯೆ ಮಹಾಪತಿ, ಜಡ್ರಸವೆ ಮಹಾಸತಿ
ಚರಾಚರವನೊಳಗೊಂಡ ವಿಭಾಜ್ಯ ದಂಪತಿಗಳ್ !
ಕ್ರೀಜ್ಞಾನ ಕಂಬಿಗಳೆರಡರ ಮೇಲೆ ಸಮವಾಗಿ
ಮಾನವನ ಬಾಳ್ರೈಲು ತಾನೋಡಿದರೆ ಮಾತ್ರಂ
ಮಾನವೀಯ ವಿಕಾಸ ಕೈಗೂಡಿ ಬಪ್ಪುದು ;
ಮೇಣು ಮಾನವೀಯ ಗುರಿಸಾರ್ಥಕಮಪ್ಪುದು.
ಇಲ್ಲದಿರೆ ಜೀವನಂ ಕುಸಿದು ಕುಪ್ಪಳಿಸುವುದು,
ಮಾನವೀಯ ಜನ್ಮಂ ನಷ್ಟಕ್ಕೆಡಪ್ಪುದು. ೧೪೦
ಒಳಗಿರ್ಪ ಕರಣೇಂದ್ರಿಯಂಗಳವು ನಶಿಪವು
ಸಾಕಾರ ಚೈತನ್ಯ ಪೆಸರಿಲ್ಲ ದಂತಪ್ಪುದು.

CC-0. Jangamwadi Math Collection. Digitized by eGangotri

ಸಜ್ಜಲ ಶರಣವ್ವೆ

ತಪೋನುಷ್ಠಾನಂ ತತ್ತ್ವಾನುಸಂಧಾನಂ

ಶರಣಜೀವನಮಿರ್ಪುದಲ್ಲದೇ ತಾಯಿಯೊಳ್
ಹರಣ ಜೀವನವಿರ್ಪುದಿಲ್ಲಂ ನೈಜದೊಳ್ !
ದ್ರವಿಣ ಹಂಬಲ ವಿರದೆ ಶರಣ ಜೀವನದಲ್ಲಿ
ಪ್ರಾಣವನ್ನಿರಿಸಿರ್ದಳಾ ತಾಯಿ ಶರಣವ್ವೆ !
ನುಡಿಯಿಂದ ಸಾಧಿಸದೆ ನಡೆಯಲ್ಲಿ ಸಾಧಿಸಿ
ಶರಣಜೀವನ ಪ್ರಭಾವಮಂ ಬೀರುತಿರ್ದಳ್ !
ಸರ್ವರ್ಗೆ ಪರಿಣಾಮಕಾರಿ ಪ್ರಭಾವಮದು ;
ಸರ್ವರ ಹಿತಕ್ಕಾಗಿ ತಾನಿರ್ದ ಜೀವನಮದು. ೧೫೦
ಮತ್ತಂ ಶಿವಾಚಾರದೊಳ್ತ್ಯಂತಾಸಕ್ತಿ ;
ಮೇಣು ಭೃತ್ಯಾಚಾರದೊಳ್ ಪರಮ ಪ್ರತಿತ್ತಿ ;
ಸದಾಚಾರ ನಿರತರ್ ಮೇಣು ಲಿಂಗಾಚಾರಿಗಳ್ ;
ಗಣಾಚಾರ ನಿಯಮವ ಪಾಲಿಪರ್ ತಪ್ಪದೆ !
ಇಂತು ಪಂಚಾಚಾರ ನಿರತರಾಗಿರ್ದರು ;
ಅತ್ಯಂತ ಸರಳ ಸಹಜಮಾಗಿಹ ಸೌಜನ್ಯ,
ಸ್ವಾಭಾವಿಕಮಾಗಿರ್ಪ ಶೈವೀ ಲಾವಣ್ಯ ;
ನಯವಿನಯ ಪರಿಪೂರ್ಣ ಶಿವಶರಣ ಧರ್ಮಿಗಳ್
ಹೃದಯದೊಳ್ ತುಂಬಿರ್ದ ಭಕ್ತಿರಸಜೀವಿಗಳ್
ಶಿವಯೋಗ ಸಾಧಕರ್ ಭವರೋಗನಿವಾರಕರ್ ೧೬೦
ಶಿವಶರಣ ಧರ್ಮದಾ ಸಜ್ಜಲದ ಸಾಗರರ್
ಮಾನವೀಯ ಸಮಸ್ತ ಸದ್ಗುಣ ಪರ್ವತರ್
ನಿರಾಡಂಬರ ಜೀವನ ಜೀವಂತ ಪರ್ವತರ್
ಸದಾನುಭವಾನಂದ ಸದ್ಭಕ್ತಿ ಬಲ್ಲಿದರ್ !
ಶಿವಶರಣ ಧರ್ಮಕ್ಕೆ ಹೊಸತಿರುವು ಹೊಸಹರವು
ಶ್ರೀವೀರಮಹಿಳಾ ಜೀವನಕೆ ಹೊಸಗೆಲವು.

ಷಟ್‌ಶಕ್ತಿಸಂಪನ್ನ ಶರಣವ್ವೆಯಂಗಮದು
ದಿಟಮಾಗಿ ಸಕಲಲಿಂಗಸ್ವರೂಪ ಮಾದತ್ತು
ಸರ್ವಾಂಗದೊಳ್ ಲಿಂಗಮಯಕಾಂತಿ ಕಂಗೊಳಿ
ಸುತಿತ್ತದು ಸ್ಫಟಿಕ ಘಟದೊಳಗಣ ಸೊಡರಿನಂತೆ ; ೧೭೦
ಸರ್ವಸಮ ಭಾವದೊಳ್ ಶಾಂತಿಯಂ ಪಡೆದಿತ್ತು–

CC-0. Jangamwadi Math Collection. Digitized by eGangotri

ಸರ್ವಾಂತರ್ಯಾಮಿ ಭಾವದಿಂ ಮಿಗೆ ಘನ ಮನಂ !
ಘ್ರಾಣದೊಳ್ ಪೃಥ್ವ್ಯಂಗ ತತ್ವಮಂ ಸೋಸಿದಳ್
ಸ್ವಾಚಾರಲಿಂಗದೊಳ್ ಘ್ರಾಣಮಂ ಸೋಸಿದಳ್ ;
ಜಿಹ್ವೆಯೊಳ್ ಸಲಿಲಾಂಗತತ್ವಮಂ ಸೋಸಿದಳ್
ಮೇಣು ಗುರುಲಿಂಗದೊಳ್ ಜಿಹ್ವೆಯಂ ಸೋಸಿದಳ್ ;
ನೇತ್ರದೊಳ್ ತೇಜಾಂಗತತ್ವಮಂ ಸೋಸಿದಳ್
ಮತ್ತೆ ಶಿವಲಿಂಗದೊಳ್ ನೇತ್ರಮಂ ಸೋಸಿದಳ್ ;
ತ್ವಕ್ಕಿನೊಳ್ ವಾಯ್ವಂಗ ತತ್ವಮಂ ಸೋಸಿದಳ್
ಸೋರ್ಪ ಚರಲಿಂಗದೊಳ್ ಸ್ಪರ್ಶಮಂ ಸೋಸಿದಳ್ ;
ಶ್ರೋತ್ರದೊಳ್ ಗಗನಾಂಗತತ್ವಮಂ ಸೋಸಿದಳ್
ಪ್ರಸಾದದ ಲಿಂಗದೊಳ್ ಶ್ರೋತ್ರಮಂ ಸೋಸಿದಳ್ ;
ಹೃದಯದೊಳ್ ಸ್ವಾತ್ಮಾಂಗ ತತ್ವಮಂ ಸೋಸಿದಳ್
ಚಿನ್ಮಹಾಲಿಂಗದೊಳ್ ಹೃದಯಮಂ ಸೋಸಿದಳ್ !
ಘ್ರಾಣದೊಳ್ ಗಂಧಮಂ, ಜಿಹ್ವೆಯೊಳ್ ರುಚಿಯಮಂ,
ನೇತ್ರದೊಳ್ ರೂಪಮಂ, ತ್ವಕ್ಕಿನೊಳ್ ಸ್ಪರ್ಶಮಂ,
ಶ್ರೋತ್ರದೊಳ್ ಶಬ್ದಮಂ ಹೃದಯದೊಳ್ ತೃಪ್ತಿಯಂ–
ಪರಿಶೋಧಿಸಿ ಪ್ರಸಾದಂಗಳನೆಸಗಿಹಳ್ ಗಡಾ !
ಮೇಣ್ ನಾಸಿಕಾಂಗದೊಳ್ ಸ್ವಾಚಾರಲಿಂಗಮಂ,
ಮೇಣು ಜಿಹ್ವಾಂಗದೊಳ್ ಜ್ಞಾನ ಗುರುಲಿಂಗಮಂ,
ನೋಡೆ ನೇತ್ರಾಂಗದೊಳ್ ಪರಮಶಿವಲಿಂಗಮಂ,
ತಿಳಿಯೆ ಸ್ಪರ್ಶಾಂಗದೊಳ್ ಜಂಗಮದ ಲಿಂಗಮಂ,
ಸೊಗಸೆ ಶ್ರೋತ್ರಾಂಗದೊಳ್ ಪ್ರಸಾದದ ಲಿಂಗಮಂ,
ಪೊದುಳ ಹೃದಯಾಂಗದೊಳ್ ಆ ಮಹಾಲಿಂಗಮಂ
ಪ್ರತಿಷ್ಠಿಸಿ ಪರಮಪ್ರಭಾವದಿಂ ಪಜ್ಜಳಿಸಿಹಳ್ !

ಇಂತಿರ್ದು ಲಿಂಗಯೋಗಿಣಿಯೆಂಬ ಹೆಮ್ಮೆಲ್ಲ,
ಕಂತುಹರ ಚೇತನದ ಸೇವೆಯನುಳಿದವಳಲ್ಲ ;
ಸಾಮಾಜಿಕ ಹಿತಸಾಧನೆಯ ತೊರೆದವಳಲ್ಲ ;
ಸರ್ವತತ್ತ್ವಂಗಳಾ–ದಾರ್ಶನಿಕ ಜೀವನಕೆ
ದೂರಾದ ಸಾಮಾನ್ಯ ಜೀವನಮಿವಳದಲ್ಲ.

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ತಪೋನುಷ್ಠಾನಂ ತತ್ತ್ವಾನುಸಂಧಾನಂ

ಕಾಡಿಂಗೆ ಹೋಗಿದ್ದು ಗಿಡುಬಳ್ಳಿಗಳ ಬೇಡಿ
ಪಡೆದು ಬಾಳುವ ಹಂಗಿನವಳಲ್ಲ ಶರಣಪ್ಪೆ !
ಸಾವಾಜಿಕರೊಳಿರ್ದುಮಿಲ್ಲದೊಲ್ ಮತ್ತಮಾ
ಪಡಿಪದಾರ್ಥಂಗಳಂ ತಾನ್ ಪಡೆದು ಪಡೆಯದೊಲ್
ತಾನಿರ್ದು ವಿರತಿಮಯ ಜೀವನವ ಜರುಗಿಸಿಹಳ್,
ಸ್ವಯೋದ್ಧಾರ ಸರ್ವೋದ್ಧಾರಂಗಳಂ ನೆಗಳ್ಚಿಹಳ್ !
ತನ್ನೆಲ್ಲ ಮನೋಧರ್ಮಂಗಳಂ ಶಿವಯೋಗ
ಮಾರ್ಗದೊಳ್ ನಡೆಸಿಹಳ್ ನಿಷ್ಕಳಂಕಮನದಿಂ ;
ಪಿಂತೆಗೆಯದೆದೆ ನಡುಗದಂತೆ ಮುನ್ನಡೆದಿಹಳ್
ದಿಗಂತ ವಿಶ್ರಾಂತದೊಳ್ ಬಾಳಡಿಗಳನಿಡುತಂ ! ೨೧೦

ತಾಯಿಯಾ ಶರಣಮಯ ಜೀವನದ ಬಳ್ಳಿಯೊಳ್
ಕಣ್ಣರಳಿ ಮನವರಳಿ ಬಗೆಯರಳಿ ನಗೆಯರಳಿ
ಹೂವಾಗಿ ಕಂಪಿಡಿಗಿ ಸೊಂಪಿಡಿಗಿ ಹರಡಿತ್ತು,
ಭಾವಿಸಲ್ ಭಕ್ತಿರಸ ಮಕರಂದ ತುಂಬಿತ್ತು ;
ಮೇಣತೀಂದ್ರಿಯ ಪರಾಶಕ್ತಿಯಂ ಪಡೆದಿತ್ತು ;

ಮತ್ತಮಾ ಶರಣತತ್ತ್ವದ ಬೆಳಕು ಬೆಳಗಿತ್ತು.
ಕಾಣದೋ ಸಜ್ಜಲದ ಗುಡ್ಡದೊಳ್ ಚಿತ್ಸೂರ್ಯ
ನುದಿಸಿಹನ್ ನೈಜದೊಳ್ ಶರಣಾಂಗ ಬಿಂಬದೊಳ್
ಹೊಂಬೆಳಗ ಹರಡಿಹನ್ ಹೃದಯಾಂತರಿಕ್ಷಮಂ
ಬೆಳಗಿಹನ್ ಬೆಳುಬೆಳಗಿ, ತೊಳಗಿಹನ್ ತೊಳತೊಳಗಿ ; ೨೨೦

ಕಳೆಗುಂದಿಸಿಹನ್ ತಾನ್ ಚಂದ್ರನಂಚುಕ್ಕೆಗಳಂ !
ಕಳೆಯೇರಿಸಿಹನ್ ಪಕ್ಷಿವೃಕ್ಷಂಗಳಂ ವಳಂ !!
ಕೇಳುಗಾ, ಕೇಳದೋ ವಾಣಿಯಂ ಕಿವಿಗೊಟ್ಟು
ಪರಾ ಪಶ್ಯಂತಿ ಮಧ್ಯಮೆ ವೈಖರಿಗಳುಲಿಯಂ
ನಿದ್ದೆಯಿಂದೆಚ್ಚತ್ತು ಕುಳಿತಿಹರ್ ಕೆಲಂಬರ್
ಬಿದ್ದ ಕನಸುಗಳ ಕಳೆದುಕೊಂಡಿಹರ್ ಕೆಲಂಬರ್
ಬಂದಾಮಯಂ ಕಳೆದುಕೊಂಡಿಹರ್ ಕೆಲಂಬರ್
ತಂದುಕೊಂಡಿಹರ್ ತಾವ್ ಹದುಳತೆಯಂ ಕೆಲಂಬರ್ !
ಸಜ್ಜಲವ ಗುಡ್ಡದೋ ಬೆಳಗಿತಯ್ ನಾಡೊಳಗೆ,

CC-0. Jangamwadi Math Collection. Digitized by eGangotri

ಸಜ್ಜನರನಾಕರ್ಷಿಸಿತಮೋ ತನ್ನಲ್ಲಿಗೆ ! ೩೩೦
ಏಳರೆಲೊ ನಾಡಿಗರೆ ಸಜ್ಜಲವನು ಕುಡಿಯಿರೆ
ಕೀಳ್ತನಗಳಂ ನೀವೊಡನೆ ಕಳೆದುಕೊಳ್ಳಿರೆ ;
ಕಳೆದುಕೊಂಡೊಡಂ ಜನಜೀವನಂ ಸುಂದರಂ,
ತಿಳಿವೊಡಂ ಮಾನವೀಯ ಸಂಸ್ಕೃತಿ ಬಂಧುರಂ !

೧೦. ತ್ಯಾಗಯೋಗಯುಕ್ತಂಕಾಂಚಾಣಂ

ಧರ್ಮಾರ್ಥ ಕಾಮ ಮೋಕ್ಷಂಗಳೊಳ್ ದ್ವಿತೀಯ–
ಮೆಂದು ನಿರ್ದಿಷ್ಟಮಾಗಿ ಪುರುಷಾರ್ಥಮೆನಿಸಿಹು-
ದರ್ಥಮಿದು ಮೇಣ್ ತ್ರಿವರ್ಗದೊಳ್ ಪರಿಗಣಿತಂ ;
ಮೇಣ್ ಹೊನ್ನು ಹೆಣ್ಣು ಮಣ್ಣುಗಳಲ್ಲಿ ಮೊದಲಿನದು.
ಜೀವನದ ಹೊರಹರಣ ಮೆಂದೆನಿಸಿರ್ಪರ್ಥ ದಾ
ಬಗೆಗರ್ಥ ಶಾಸ್ತ್ರಮೆಂಬುದೊಂದುಂಟೆಯ್ ಬಗೆಯೆ !
ಶಬ್ದಾರ್ಥಮದು ಮೂಲವಸ್ತು ತಾನಪ್ಪುದಲಯ್ ;
'ಮಕ್ಕಳೆದ್ದರೆ ಮನೆ ಚಂದ, ರೊಕ್ಕವಿದ್ದರೆ ಸಂತೆ–
ಚಂದ' ಎಂಬ ನಾಣ್ಣುಡಿಯುಂಟು ರೂಢಿಯೊಳ್ ;
'ಹಣವೆಂದರೆ ಹೆಣ ಬಾಯ್ದೆರೆವುದೈ' ಮತ್ತಮಾ ೧೦
'ಒದಗಿ ಬಂದರೆ ಒಲ್ಲೆನೆಂಬ ತಾಗಿಯು ಯಾರೊ ?'
'ದುಡ್ಡಿದ್ದವನೆ ದೊಡ್ಡಪ್ಪ' 'ಕಾಂಚಾಣಂಕರ್ಮ ಮೋಜಸಂ'
'ಕುರುಡು ಕಾಸು' ಮೇಣ್ 'ಧನಪಿಶಾಚಿ' ಎಂಬರು.
'ಕಾಂಚಾಣವೆಂಬುವಾ ನಾಯಿಯಂ ನೆರೆನೆಚ್ಚಿ
ನಿಮ್ಮನಾಂ ಮುರಿದೆನ್ನೆ ನೋಡಿ ಕಾಂಚನಕೆ ನೇ–
ಳೆಯಲ್ಲದೆ ಲಿಂಗಕ್ಕೆ ವೇಳೆಯದು ತಾನಿಲ್ಲ
ಹಡಕೆಂಗೆ ಮೆಚ್ಚಿರ್ದ ಸೊಣಗಿನಮೃತದ ರುಚಿಯ
ಬಲ್ಲುದೇ ಪೇಳ್ ಕೂಡಲಸಂಗಮದೇವಯ್ಯ ! '
ಎಂದಿವಂ ವಿಚಾರಿಸುವುದು ವಿಚಾರಪರರ್ !

CC-0. Jangamwadi Math Collection. Digitized by eGangotri

ಬಾಳಿನೊಳ್ ಸಿರಿಗಾಗಿಯೊಮ್ಮೊಗದೆ ಯೋಚಿಸಿದ
ದೊಡ್ಡ ಬಸವಾರ್ಯರಾಣತಿಯಂತೆ ಶರಣಪ್ಪ
ಮುಮ್ಮೊದಲ್ ಮಾಡಿರ್ದರರ್ಥತ್ಯಾಗಮಂ ಗಡಾ !
ಗುರುದೇವ ಭೋಧೆಯಿದು : 'ಚಿನ್ನ ಜೇಳಿನರುಹು,
ಕರ್ಚುವುದು ಸೊಂಕೆದಾಗಲೆಲ್ಲಂ ತಾನಿರದೆ,
ಹಾವಿನಂತಿಹ ಹಣಮಂ ತೆಲೆದಿಂಬಿಗಿಟ್ಟುಕೊಂಡು
ಮಲಗಿದಡೆ, ನಿಚ್ಚ ಹಾಲ್ಕುಡಿಸಿದಡೆ ಕಚ್ಚುವುದೆ–
ನಿಚ್ಚಿತಂ; ಕಾರಣಂ ನಾವೆನಿತು ಮನೋಸಿ–
ಗ್ರಹಂ ಮಾಳ್ಪೊಡಂ ಕಾಂಚಾಣ ದಾಸರಾಗ
ಬೇಕಾದ ಪ್ರಸಂಗಮತಿಶಯಮೋ ಶರಣಪ್ಪ,
ಮುಟ್ಟದಿರ್ ದ್ರವ್ಯಮಂ ಕೈಯಿಂದಮೆಂದಿಗುಂ ;
ಚಿನ್ನಮೆಣ್ ರನ್ನದ್ರವ್ಯಂಗಳಂ ಬಯಸದಿರ್–
ಎಂದುಸುರಿ ಗುರುದೇವನಪ್ಪಣೆಯ ತೆರದಂತೆ
ಶರಣಪ್ಪ ದ್ರವ್ಯಮಂ ಹಸ್ತದಿಂ ಮುಟ್ಟದೆ,
ಕಣ್ಣೆತ್ತಿ ನೋಡದಲೆ ತಾವಿಹರ್ ಬಹುದಿನಂ !
ಮನಸ್ಸಂಯಮನಮಂ ತಾಳ್ಕರ್ ಛಲದಿಂದೆ !!

ದರ್ಶನಕೆ ಬಂದವರ್ ಬಾಗಿಲಿನ ಮುಂದೆ ಮೇಣ್
ಹೊಸಿಲ ಮೇಲ್ತಾವ್ ತಂದ ಕಾಣಿಕೆಯನಿರಿಸುವರ್ ;
ತಾಯೂಳಿಗದ ಸಜ್ಜಲಗುಡ್ಡದ ಅಮರಪ್ಪ,
ಮೇಣ್ ಕಂಬಳಿಹಾಳದ ವಗ್ಗಾಲಿ ಭೀಮಪ್ಪ
ಎಂಬುವರ್ ಕೊಂಡೊಯ್ಯುತಿರ್ದರೈ ತಮ್ಮನೆಗೆ ;
ಪಡಿದಿನಂ ತಪ್ಪದಲೆ ಬಂದಿರ್ದುದೆಲ್ಲಮಂ !

ಹುನಗುಂದ ಲಿಂಗೈಕ್ಯ ಶ್ರೀಗುರುಬಸವಾರ್ಯ
ಮಠಮಾಸ್ತರರ್ ದರ್ಶನಕ್ಕಾಗಿ ತಾವ್ಪೋಗಿ
ತರಹರದ ತವಕದಿಂ ಸಜ್ಜಲದ ಗುಡ್ಡಕ್ಕೆ
ಬಂದಿರ್ದು ತಾಯ ದ್ರವ್ಯತ್ಯಾಗದ ನಿಯಮಮಂ
ಸಾರ್ಥಕಂ ತಾನಲ್ಲದಿಹ ವಿರತಿ ಭಾವಮಂ
ನೆರೆಕಂಡು ಬೆರಗಾಗಿ ತಾವ್ ಪೇಳ್ದರಿಂತೆಂದು ;

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪಿ

ತ್ಯಾಗಯೋಗಯುಕ್ತಂ ಕಾಂಚಾಣಂ

ಓ ತಾಯಿ, ದರ್ಶನಾರ್ಥಿ ಜನಗಳ್ ದ್ರವ್ಯಮಂ
ನಿಮಗಾಗಿ ಸಲ್ಲಿಸರ್, ಸಮಾಜಕೆ ಸಂಸ್ಕೃತಿಗೆ
ನಿಮ್ಮಿಂದ ಸಲ್ಲಲೆಂದೀಯುವರ್, ಬತತನದ
ಬಾಳಿನೊಳ್ ತಮ್ಮಿಂದ ಪಿರಿದಾಗಿ ಮಾಡಲಾ
ಗದೆ ನಿಮ್ಮ ಮುಂಪಾಂತರ ಗುರುಲಿಂಗಜಂಗಮಕೆ
ಸಂದು ಸಶ್ವಾತ್ರಕೊದಗಿ ವಂಶೋದ್ಧಾರಣಾ–
ಗಲೆಂದಾಶಿಸಿ ಕಾಣಿಕೆಯ ಸಮರ್ಪಿಸುವರೌ
ಸನ್ನಿಧಿಗೆ; ಸಿರಿಯನೊಲ್ಲದ ನಿಮ್ಮ ಪಾವನ
ದೃಷ್ಟಿಯಿಂ ಸಿರಿತನ್ನ ಜೇಷ್ಟೆಯಂ ಕಳಕೊಂಡು
ಹೆಲ್ಲು ಮುರಿದು ಬಿದ್ದ ಹಾವಿನಂತಾಗುವುದು.
ಹಣದಿಂದೆ ನಿಮಗಾವ ವ್ಯಾಮೋಹವೊದಗಿದೌ
ಮೇಣ್ ವ್ಯಾಕುಲವೊದಗದೌ ಕಾಣಿಕೆಯ ಕೆಯ್ಪಿಡದೆ
ಕೊಂಡಿಟ್ಟು ಸಲ್ಲುವನಿತಂ ಸೇವಕರ್ಗೆ ಮೇಣ್
ಗುರುಲಿಂಗ ಜಂಗಮಕೆ, ಕವಿ ಗಮಕಿ ಕಲಾವಿದ
ಸಾಹಿತ್ಯಸಂಗೀತಗಾರರ್ಗೆ ಮೇಣು ಬಡ
ವಿದ್ಯಾರ್ಥಿಗಳ್ಗೆ ಕೃಪೆಗೆಯ್ವೀಯೆ ಸಾರ್ಥಕಂ
ತಾನಹುದು ಸಮಾಜೋದ್ಧಾರ ಸಂಸ್ಕೃತಿಪ್ರಗತಿ
ಕಲೆಗಳ್ಗೆ ಪ್ರೋತ್ಸಾಹವೊದಗುವುದು ನಿಮ್ಮಿಂದ ;
ಬೆಳಗುವುದು ಸತ್ಕಲಾ ಜ್ಯೋತಿಯದು ನಾಡೊಳಗೆ ;
ನಾಡತಾಯ್ ನೀವಾಗಿ ಲಭಿಸುಗುಂ ಗೌರವಂ
ಮೇಣ್ ಜಸಂ ಮೇಣ್ಲೋಕ ಕಲ್ಯಾಣಂ ಕಂಡರಿಯೆ !
ಕಾರಣಂ ತಾನಾಗಿ ಬಂದುದಂ ತಮಗೆಂದು
ಭಾವಿಸದೆ ಸ್ವೀಕರಿಸಿ ತ್ಯಾಗಯೋಗ ಸಮನ್ವಯ–
ಗೊಳಿಸಿದೌ ಎಂಚೆನುತ ಬಿನ್ನವಿಸಿಕೊಳ್ಳುವರ್ !

ತಾನಿದಂ ಸರಿಯೆಂದು ಬಗೆದಂದು ಶರಣವ್ವೆ
ಬಂದುದಂ ಪಾದೋದಕ ಸಿಂಚನಂಗೆಯ್ಯುತಂ
ದ್ರವಿಣಮಂ ಪ್ರಸಾದವನಾಗಿಸುತಂ ಕೊಳ್ಳುವರ್
ತ್ಯಾಗದೊಳ್ ಯೋಗಮಂ ಯೋಗದೊಳ್ ತ್ಯಾಗಮಂ
ತಳೆದಿಹರ್ ಶರಣವ್ವೆಯೊದಗಿಸಿಹರರ್ಥಕ್ಕೆ !

CC-0. Jangamwadi Math Collection. Digitized by eGangotri

ತ್ಯಾಗಯೋಗಯುಕ್ತಂ ಕಾಂಚಾಣಂ

ಸತ್ಯವಿನಿಯೋಗಮಾದರ್ಥಮದು ಸಾರ್ಥಕಂ
ಕಾಯಕಂ ಸ್ಥಾರಕಂ ಮೇಣ್ ಕಾಯಕವಂತಂ
ಸಾರ್ಥಕಂ ನೋಳ್ಪೊಡಂ ಸಿರಿಕೇಡಿನದಲ್ಲಂ ;
ಸಿರಿಯ ಬಳಸುವಾತಂ ಕೇಡಿಗನಾಗದಿಹುದು.
ಕೇಡು ಲೇಸುಗಳಂ ತಿಳಿಯದಿರ್ಪ ಕರ್ಮಕರ್
ಸಾರ್ಥಕರ್ ತಾವಾಗಿಹರ್ ತಾಯ ಯೋಗದಿಂ ;
ಕೊಂಡೊಯ್ದವರ್ ತಮ್ಮ ಸತ್ಕಲೆಯ ಬೆಳೆಸಿದರ್
ಇದರಿಂದೆ ತಾಯಿಯುಂ ದ್ರವ್ಯಮುಂ ಕೊಟ್ಟವಂ
ಕೊಂಡವಂ ಸಲ್ಲಿದರ್ ತ್ಯಾಗಯೋಗಗಳ್ಗೆ !

ಶರಣನ್ನೆ ಬಂದುದನ್ನೆಲ್ಲಮಂ ಕೂಡಿಡದೆ
ಮಠದಲ್ಲಿ ದಾಸೋಹವೊಂದನಂ ನಡೆಸಿದರ್
ನೇಣ್ ಪುರಾಣಮಂ ಪುಣ್ಯಕಥೆಯಂ ಪ್ರವಚನಮಂ,
ಕೀರ್ತನಂ ಭಾಷಣಂ ಮೊದಲಾದ ಕಾರ್ಯಕ್ರ
ಮಂಗಳಂ ನಡೆಸುತಿರ್ದರ್ ಮೇಲಿಂದಮೇಲೆ
ಸ್ಥಾಪಿಸಿರ್ದರೋದುಗರ್ಗೆ ಪ್ರಸಾದನಿಲಯಮಂ;
ಪಡೆವಪರ್ ಮಿಗಿಲಾಗಿ ವಿದ್ಯಾರ್ಥಿಗಳಲ್ಲಿ ಪ್ರ–
ಸಾದಮಂ ಪ್ರತಿದಿನಮುಚಿತಮಾಗಿ ಹಿತಮಾಗಿ !
ದಾಸೋಹಕೆಂದು ಬಂದವರ ಬೇಡಿದವರಲ್ಲ
ಮೇಣೆಂದಿಂಗೆಂದು ನಾಳಿಂಗೆಂದು ಚಿತ್ತದೊಳ್
ಚಿಂತಿಸಿದವರಲ್ಲಂ ಧನಧಾನ್ಯಗಳ್ ತಾವೆ
ಭಕ್ತರಿಂ ಬರುತಿರ್ದವೈ ಕೊರತೆಯಾಗದೊಲ್ !
ಕೊಡುವುದಕೆ ಕೊಂಬುದಕೆ ನಾನಾರೆನುತಿರ್ದರ್
ತಾವ್ ತಮ್ಮ ಪೂಜೆಯೊಳ್ ತಲ್ಲೀನರಾಗಿರ್ದರ್
ಎಲ್ಲವುಂ ಹಚ್ಚಹಸುರಾಗಿತ್ತು, ಹಸನಿತ್ತು ;
ಎಳ್ಳನಿತು ಕೊರತೆಯಾ ಕೊರಗುತಾನಿರಲಿಲ್ಲ.
ನೂರುಮನೆಗಳ ಚಿಕ್ಕ ಹಳ್ಳಿಯೊಳ್ ತಾಯಿಯ
ಕರುಣೆಯಿಂ ಪ್ರೌಢಶಾಲೆಯೊಂದಾಗಿರ್ಪುದು,
ಸತ್ಯದೊಳ್ ಸೋಜಿಗಂ ತಾಯ್‌ಶಕ್ತಿಯಂತಹುದು.
ಶೈಕ್ಷಣಿಕ ಪ್ರೀತಿಯಂತಹದು, ರೀತಿಯಂತಹದು.

CC-0. Jangamwadi Math Collection. Digitized by eGangotri

ಪ್ರಶಾಂತಂ ಪವಿತ್ರಂ ತಾನಾದ ವಾತಾವ–
ರಣದಲ್ಲಿ ನಡೆದಿರ್ಪ ಶೈಕ್ಷಣಿಕ ಕ್ಷೇತ್ರದೊಳ್
ಜಾತಿಮತ ಕುಲಗೋತ್ರ ಸಂಕೋಲೆ ತಾನಿಲ್ಲ ;
ಪಾಲ್ಗೊಳ್ಳುತಿಹರೆಲ್ಲ ಪಂಥದೋದುಗರ್ ಗಡಾ !
ಶರಣಸ್ಪೆ ಮಾತೃವಾತ್ಸಲ್ಯದಿಂದೆಲ್ಲರಂ
ನೋಡುತಿರ್ದರ್ ನಲಿಯುತಿರ್ದರುದಾರದಿಂ !

ಅರ್ಥ ತ್ಯಾಗಯೋಗಗಳ ಮಾತಿಂತು ಮತ್ತಮಾ
ಕಾಮ ತ್ಯಾಗಯೋಗಗಳ ಸುದ್ದಿಯ ನುಸುರುವೆಂ ;
ಅರ್ಥಮದು ಧರ್ಮಾರ್ಥಮಾಗಿ ಪರಿಣಮಿಸಿತು
ಕಾಮನೋಜನ ಪ್ರೇಮಯೋಜನವಾಂತು
ನಡೆದಿರ್ದ ಶರಣಸ್ಪೆಯ ಪವಿತ್ರ ಚಾರಿತ್ರ
ಕಥನನುಂ ಪೇಳುವೆನ್ ಶ್ರಾವಕ ಶ್ರವಣ ಹಿತಮಂ !
ಮೆಯ್ಯಕ್ಟು ಮೆಚ್ಚುಗೆಯ ಮೂಡಿಸುವ ಹುರಿಗಟ್ಟು,
ಮೆಯ್ಬಣ್ಣ ಕಣ್ಣ ಕೋರೈಸುವ ಚಿನ್ನದ ಬಣ್ಣ ;
ಮೇಣ್ ವಿಶಾಲ ಫಾಲಂ ತುಂಬಿರ್ದ ಕಪಾಳಂ
ಮತ್ತಮೇರುಂಜವ್ವನಂ ಚಿತ್ತಮೋಹನಂ
ತಾನಾದ ಸೌಂದರ್ಯ ಸೌಷ್ಠವದ ದೇಹಮಂ
ತಳೆದಿರ್ದ ಕನ್ನೆಯಂ ಕಣ್ಣಾರೆ ಕಾಣುತಂ
ಕಾಮಿಸುವ ಕಾಮುಕರ ಜಯಸಿದಳ್ ಯಮುನವ್ವೆ
ಮೇಣ್ ಮುತ್ತಿ ಮುತ್ತಿ ಬರುತಿರ್ಪ ಮನದ ಬಯಕೆಗಳ
ಮಾಣಿಸಿದ ಮನಸ್ವಿನಿ, ಮನವಿಕಾರಜನ್ಯ
ತಾಪಗಳ ತೊತ್ತುಳಿದ ತಪಸ್ವಿನಿ ತೇಜಸ್ವಿನಿ !
ನಿದ್ದೆಗೆಡಿಸಿರ್ದ ನಿರ್ನೆರದ ನಿಂದೆ ಕುಂದುಗಳ
ಕೆಜ್ಜೆದೆಯ ಹೆಚ್ಚಿನಿಂ ಕೊಚ್ಚಿ ಮುನ್ನಡೆದಿಹಳ್
ಮದುವೆಯಂ ಮಾಡಲೆಳಸಿದಣ್ಣನ ತೊರೆದಿಹಳ್
ತನುಮನವನಲಗಿಸಿದ ಗುರುವರನ ಗೆದ್ದಿಹಳ್
ಕಾಮಕ್ಕೆ ಕೋಪಕ್ಕೆ ಮೋಹಕ್ಕೆ ಸೋಲದಿಹಳ್
ಪ್ರೇಮಕ್ಕೆ ಸತ್ಯಕ್ಕೆ ಶಿವಕ್ಕೆ ಮನ ಮಾಡಿಹಳ್

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ತ್ಯಾಗಯೋಗಯುಕ್ತಂ ಕಾಂಚಾಣಂ

ಪೆರತೊಂದನರಿಯದಿರ್ಪ ಮನಸ್ಸು ಮತ್ತವಾ
ಮೋಹಕೆಳಸಿ ಕಾಡುತಿಹ ವಯಸ್ಸು-ಇವುಗಳಂ
ಮೀರಿ ನಿಂತಾಧ್ಯಾತ್ಮತೇಜಸ್ಸು ತಾಯಿಯದು ;
ಅಂಗಭಂಗವ ಲಿಂಗದಿಂ ಗೆಲಿದ ಶ್ರೀಯಸ್ಸು ,
ಮನದ ಭಂಗವ ಜ್ಞಾನದಿಂ ಕೆಡಿಸಿದೋಜಸ್ಸು ;
ಪೆತ್ತು ಸಲುಹಿದ ತನ್ನ ತಾಯಿಯಂ ತಾಂ ತೊರೆದು
ಹೊತ್ತು ಸಲುಹಿದ ಸಲುವ ಗುರುತಂದೆಯಂ ಪಡೆದು ೧೪೦
ಇಹದಸುಖ ಪರವಗತಿ ಮಾರ್ಗದೊಳ್ ನೆರೆಸಡೆದು
ಆರಲುಗೊಂಡಿಹ ಕೆರೆಗೆ ತೊರೆಯು ಬಂದಂತಾಗಿ
ಬಾಳಿದಳ್ ಬದುಕಿದಳ್ ಮೇಣು ಧನ್ಯಳಾದಳ್ !
ಸಂಸಾರ ಹೊಲಬಿನ್ನೊಳ್ ಪೆಜ್ಜೆಯಂ ಹಾಕದಲೆ
ಸಂಸ್ಕಾರ ಮಾರ್ಗದೊಳ್ ಮುನ್ನಡೆದ ಮಹಾತ್ಮಳ್ !
ಗುರುದೇವ ಪರತತ್ತ್ವ, ಗುರುದೇವ ಪರವಸ್ತು,
ಗುರುದೇವ ಪರಬ್ರಹ್ಮ, ಗುರುದೇವ ಪರಶಿವಂ
ಗುರುವಿನಿಂ ಪರವಿಲ್ಲಮೆಂದೆನುತ ಪೊಗಳಹವ್
ಸರ್ವಶ್ರುತಿ ಶಾಸ್ತ್ರಂಗಳ್ ತಾವೆಂಬುದನರಿತು, ೧೫೦
ಗುರುದೇವ ಶ್ರೀಚರಣಕೆರಗಿಹಳ್ ಶರಣಪ್ಪೆ

ರಕ್ತಿಯಂ ನೆರೆಗಳೆದು, ಭಕ್ತಿಯಂ ಸಲೆದಳೆದು,
ಸಮರಸದ ಮುಕ್ತಿಯಂ ಪಡೆದಿಹಳ್ ಶರಣಪ್ಪೆ !
ಸಜ್ಜಲದ ಗುಡ್ಡದೊಳ್ ಸಜ್ಜನೆಯು ತಾನಾಗಿ
ಮಜ್ಜನಕ್ಕೆರೆದಿಹಳ್ ಗುರುಲಿಂಗಚರಣಕ್ಕೆ
ಭಕ್ತಿಪ್ರಪತ್ತಿಯಿಂ ಪಾಡಿಹಳ್ ಮತ್ತಮಾ
ಭಕ್ತಿನಿಷ್ಪತ್ತಿಯಿಂ ಕೂಡಿಹಳ್ ಪೂಜೆಯೊಳ್ ;
ಕಾಮಸೀಮೆಯ ಮೀರಿ ಪ್ರೇಮ ನಿಲುಮೆಯಸಾರಿ
ಆ ಮಹಾ ಧಾಮದೊಳ್ ಸಲೆಸೇರಿ ನಿಂದಿಹಳ್ !
ಕರಣ ಚೇಷ್ಟೆಗೆ ಸಿಲುಕದೆ ಹರಣದ ಹರದಾಟ- ೧೬೦
ಕೆ ಸೋಲದೆ ಗುರುಚರಣ ಭಕ್ತಿಯಂ ನಸುಬಿಡದೆ
ಭಕ್ತಿ ತೈಲವನೆರೆದು ಭಾವಬತ್ತಿಯನಿಕ್ಕಿ
ಜ್ಞಾನತೇಜವನಂಟಿಸಿ ಭವ ಬೀಜಂಗಳಂ

CC-0. Jangamwadi Math Collection. Digitized by eGangotri

ಹುರಿದಿಹಳ್ ಚಿನ್ಮಯದ ಚಿತ್ತದಿಂ ಶರಣಪ್ಪೆ !
ಲಿಂಗಮತಿ ಲಿಂಗಗತಿ ಲಿಂಗರತಿ ಗುಣವತಿಗೆ,
ಲಿಂಗನತಿ ಲಿಂಗಸ್ತುತಿ ಲಿಂಗಪತಿ ನಯವತಿಗೆ ;
ಲಿಂಗ ಜೀವನವೆ ನಿಜಜೀವನಂ ಲಿಂಗಾಂಗಿಗೆ,
ಲಿಂಗವನುಳಿದಿರುತಿರಲಿಲ್ಲ ಮನಂ ತಾಯಿಗೆ !

ಗುರುಪುತ್ರಿ ತಾವಾಗಿ ಲಿಂಗಕ್ಕೆ ಸ್ವಾಂಗಮುಂ
ಸಮರ್ಪಿಸಿ ಲಿಂಗಪತಿಗೆ ಸಲ್ವ ಸತಿಯಾಗಿ
ತಂದಿಹರ್ ಗುಡದೂರ ಗುರುವಿಂಗೆ ಕೀರ್ತಿಯಂ ೧೭೦
ತಾಪತ್ರಯದೆ ಬೆಂದ ಜನಮನಕೆ ಶಾಂತಿಯಂ
ಬಡತನದೆ ಕಂದಿ ಕುಂದಿಹ ಮೊಗಕೆ ಕಾಂತಿಯಂ
ಮತ್ತಮಾಜೀವ ಬ್ರಹ್ಮಚರ್ಯದ ದೀಪ್ತಿಯಂ !
ಲಿಂಗದೊಳ್ ತ್ಯಾಗಮಂ ಲಿಂಗದೊಳ್ ಭೋಗಮುಂ
ಲಿಂಗದೊಳ್ ಯೋಗಮಂ ಬೀರಿದಳ್ ಶರಣಪ್ಪೆ,
ಸೇವೆಯೊಳ್ ಕಾಲಮುಂ ಪೂಜೆಯೊಳ್ ಕರ್ಮಮುಂ
ಧಾನ್ಯದೊಳ್ ಮಾಯೆಯಂ ಕಳೆದಿಹಳ್ ಶರಣಪ್ಪೆ ;
ವಿಷಯದೊಳ್ ಕಾಮಮುಂ ಕಾಯದೊಳ್ ಮೋಹಮುಂ
ದ್ರವ್ಯದೊಳ್ ಲೋಭಮುಂ ಕೊರೆದಿಹಳ್ ಶರಣಪ್ಪೆ ,
ತ್ಯಾಗದೊಳ್ ಯೋಗಮಂ ಭೋಗದೊಳ್ ತ್ಯಾಗಮಂ ೧೮೦
ಯೋಗದೊಳ್ ರಾಗಮುಂ ತೋರಿದಳ್ ಶರಣಪ್ಪೆ ;
ಗುರುವಿನೊಳ್ ಭಕ್ತಿಯಂ ಲಿಂಗದೊಳ್ ರಕ್ತಿಯುಂ
ಮಂತ್ರದೊಳ್ ಶಕ್ತಿಯಂ ಬೀರಿದಳ್ ಶರಣಪ್ಪೆ.
ಸಂತದೊಳ್ ಭಕ್ತಿಯಂ ಕ್ಲಾಂತರೊಳ್ ಕರುಣೆಯಂ
ಸ್ವಂತದೊಳ್ ತ್ಯಾಗಮಂ ತೋರಿದಳ್ ಶರಣಪ್ಪೆ.
ಅರ್ಥದೊಳ್ ನಿರ್ಲಿಪ್ತತೆ, ಕಾಮದೊಳ್ ನಿಶ್ಚಿತ್ತತೆ
ಸ್ವಾರ್ಥದೊಳ್ ವಿಶಾಲತೆ ಕೋಪದೊಳ್ ಶಾಂತತೆ
ತಾವಿರ್ದು ತೊಳಗಿಹವು ತಾಯಿಯೊಳ್ ನೆಲೆನಿಂತು !
ನಾನೆಂಬ ತ್ಯಾಗಮಂ, ನೀನೆಂಬ ಯೋಗಮಂ
ಪಾದೋದಕ ಪ್ರಸಾದಭೋಗಮಂ ಬೀರಿಹಳ್ ೧೯೦

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ತ್ಯಾಗಯೋಗಯುಕ್ತಂ ಕಾಂಚಾಣಂ

ಶರಣಪ್ಪೆ ನಿಷ್ಕಾಮ ಜೀವನದೆ ಸಂತತಂ |
ತನುವಿನೊಳ್ ಶಿವಕ್ರಿಯೆ, ಮನಸಿನೊಳ್ ಶಿವಚಿಂತೆ
ಭಾವದೊಳ್ ಶಿವಭಾವ ನೆಲಸಿರ್ದವಾ ತಾಯಿಯೊಳ್ !
ಆಂಗಗುಣ ತ್ಯಾಗಮುಂ ಲಿಂಗಗುಣ ಯೋಗಮುಂ
ಲಿಂಗಾಂಗ ಸಮರಸದ ಭೋಗಮುಂ ಗಳಿಸಿಹಳ್ !
ಕರಿಯು ಕನ್ನಡಿಯಲ್ಲಡಗಿದಂತೆ ಕಾಣಲ್ಕೆ
ಗುರುವು ಶರಣಪ್ಪೆಯಲ್ಲಿಡಗಿಹನ್ ಸತ್ಯಮಿದು.
ಪುಷ್ಪಪರಿಮಳವೇಕೆ ಶರಣಪ್ಪೆಯ ಪರಿಮಳಂ
ಸಜ್ಜಲದ ಗುಡ್ಡದೊಳ್ ಸಂತತಂ ಹರಡಿರಲು ?
ಶರಣಾಯಿ ಹೃತ್ಪುಷ್ಪ ಪರಿಮಳಕೆ ಮನಸೋತು

ಮೈಮರೆತು ಮನಮರೆತು ನೆಲೆಮರೆತು ನಲಿವಾಂತು
ಸಜ್ಜಲದ ಗುಡ್ಡದೊಳ್ ಗೌರಿತಾಯ್ ನೆಲಸಿಹಳ್
ಸತ್ಯಶುದ್ಧ ಕಾಯಕಂ ತಾನಾಗಿ ನಿರಂತರಂ !
ಸಜ್ಜಲದ ಗುಡ್ಡದೊಳ್ ಗಂಗೆತಾಯ್ ನಿಂತಿಹಳ್
ಬಾವಿಯೊಳ್ ತಿಳಿನೀರು ತಾನಾಗಿ ಸರ್ವರ
ಸೇವೆಗಾಗಿ ಮತ್ತಮಾ ವಿಶ್ವೇಶನಿರುತಿಹನ್
ಬಂದವರ ನಿಂದವರ ವಿಘ್ನಂಗಳಂ ಹರಿಸುತ್ತ ;–
ಸಜ್ಜನರ ಹರಸುತ್ತ ! ಸದಾಶಿವಂ ತಂಗಿಹನ್–
ಜನಜಂಗುಳಿಗೆ ಮಂಗಳವನಿರದೆ ಕರುಣಿಸುತ

ಪಶುತನವ ಬಿಡಿಸುತ್ತ ಪಾವನರ ಮಾಡುತ್ತ,
ಹಸನತೆಯ ಬೀರುತ್ತ ಹದುಳತೆಯ ಬರಿಸುತ್ತ !
ಸಜ್ಜಲದ ಗುಡ್ಡದೊಳ್ ಷಣ್ಮುಖಂ ಸಂದಿಹನ್
ವಿದ್ಯಾರ್ಥಿವೃಂದಕ್ಕೆ ವಿದ್ಯೆಯಂ ಬೋಧಿಸುತ
ಶಿಕ್ಷಕರ ರೂಪದೊಳ್ ಶರಣಪ್ಪೆಯಿಚ್ಛೆಯೋಲ್
ಮತ್ತಮಾ ಷಟ್ಸ್ಥಲಾನುಭವಮಂ ನೆರೆಪುತ್ತ-
ಎಂದೆನಲ್ ಸಾಟಿಯಾರ್ ಲೋಕದೊಳ್ ಶರಣಪ್ಪೆಗೆ ?
ಚಿತ್ಕಳೆಯೆ ರೂಹಾಂತು ಬಂದಂತೆ ತಾನಿಹಳ್
ಸತ್ಕಳೆಯ ಶರಣಪ್ಪೆ ಸಜ್ಜಲದ ಗುಡ್ಡದೊಳ್ !
ತನುವಿರ್ದ ನಿರ್ದೇಹಿ, ಮನವಿರ್ದ ನಿರ್ಮೋಹಿ

CC-0. Jangamwadi Math Collection. Digitized by eGangotri

ಹಣವಿರ್ದು ನಿಸ್ಪೃಹಿ ಮೇಣ್ ಸದಾ ದಾಸೋಹಿ ! ೧೫೦
ಸಮಾಜಂ ಕೊಟ್ಟುದಂ ಸಮಾಜಸಂಸ್ಕೃತಿಗಳ–
ಗಿತ್ತಿಹರ್ ವಿಶುದ್ಧ ವಿಶಾಲ ಮನೋಭಾವದಿಂ !
ಆಂತರಂಗದೊಳಂತರಾತ್ಮನಂ ಮತ್ತಮೀ
ಬಹಿರಂಗದೊಳ್ ಸಮಾಜಾತ್ಮನಂ ಯಜಿಸಿಹರ್ !
ವ್ಯಷ್ಟಿಯೊಳ್ ಸಮಷ್ಟಿಯಂ ಸಮಷ್ಟಿಯೊಳ್ ವ್ಯಷ್ಟಿಯಂ
ದೃಷ್ಟಿಸಿಹರವರ್ ಮೇಣ್ ಸಲೆ ಹಾಸು ಹೊಕ್ಕಾಗಿ !
ಶರಣಪ್ಪೆ ಮುಟ್ಟರ್ದ ಪಡಿಪದಾರ್ಥಮದೆಲ್ಲ,
ಮತ್ತಮಾ ಮೆಟ್ಟರ್ದ ಮಣ್ಣೆಲ್ಲ ಚಿನ್ನಾಯ್ತು.
ಜನಜೀವನಾಂಧಕಾರದೊಳ್ ಶ್ರೀಶರಣಪ್ಪೆ
ದಿವ್ಯದೀಪ್ತಿಯಾಗುತ್ತ ಬೆಳ್ಳಂಬೆಳಗಿಹರ್ ; ೧೬೦
ಲಕ್ಷಾಂತರ ಜನರಂ ನಡೆಸಿಹರ್ ಹೊಲಬಿನೊಳ್
ಲಕ್ಷ್ಯಮಂ ತೋರಿಹರ್ ಬಂದ ಜನವೃಂದಕ್ಕೆ !
ಪಾಪಾತ್ಮರಿಲ್ಲ ತಾವ್ ಪೂತಾತ್ಮರಾಗಿಹರ್
ಅಸಂಸ್ಕೃತರಾಗಿಹರ್ ಸುಸಂಸ್ಕೃತ ಜೀವಿಗರ್ !
ಲೋಭಿಗಳ್ ವಿನಿಲಾಗಿ ತ್ಯಾಗಮಂ ಮಾಳ್ಪರ್
ಕೋಪಿಗಳ್ ಪಿರಿದಾಗಿ ಶಾಂತಿಯಂ ತಾಳ್ಪರ್ !
ನಾಸ್ತಿಕರ್ ಜೀವನದೊಳಾಸ್ತಿಕರ್ ತಾವೆನಿಸಿಹರ್
ದುರ್ಜನರ್ ಸಜ್ಜನರ್ ತಾವಾಗಿ ಬಾಳಿಹರ್ !
ಸೇವೆಯಂ ಸಲ್ಲಿಸಿಹ ಹೆಂಗಸರ್ ಸಾರ್ಥಕದ
ಜೀವಿಗಳ್ ತಾವಾಗಿ ಬಾಳಿಹರ್ ಬಾಳಿನೊಳ್ ! ೧೭೦
ತಾಯಿಯಾ ದಿವ್ಯೋಪದೇಶದಿಂ ದೃಷ್ಟಿಯಿಂ
ಮತ್ತಮಾ ಹೃದಯಾನುಕಂಪದಿಂ ನ್ಯೈಜದಿಂ !

CC-0. Jangamwadi Math Collection. Digitized by eGangotri

೧೧. ಏಕಾದಶರುದ್ರ ಮಂಟಪಾರ್ಚನಂ

ಶ್ರೀರುದ್ರವೀರಭದ್ರರನಾದಿ ಕಾಲದವರ್
ಮತ್ತಮಾ ದ್ರಾವಿಡರ ಚಾರಿತ್ರ ಜೇತಸರ್
ಅಂಬಾಮಹಾದೇವ ದಂಪತಿಗಳುದರದೊಳ್
ಮುಮ್ಮೊದಲ್ ಶ್ರೀಮಹಾರುದ್ರದೇವನುದಿಸಿ
ಕಾಳಿಕಾಂಬೆಯ ಕೆಯ್ಪಿಡಿದು ಸೊಗದೊಳಿರುತ್ತಿರೆ
ಪುಟ್ಟಿಹರ್ ಮಹಾರುದ್ರಾಸ್ಪಯದೊಳೇಕಾದ–
ಶ ರುದ್ರರ್; ವೀರಭದ್ರಂ ಶಂಭು ಗಿರೀಶ–
ಮಜಮೇಕಪಾತ್ತಹಿರ್ಬುಧ್ನ್ಯ ಮೇಣು ಪಿನಾಕಿ,
ಸ್ಥಾಣು ಪಶುಪತಿ ಭವಂ ತ್ರಿಕ್ಷಾಂಪತಿಯೆಂಬವರ್ !
ಇಂತಿವರೊಳಾದಿಗಂ ಶ್ರೀ ವೀರಭದ್ರದೇ ೧೦
ವೆನೆಂಬುದು ಗಮನೀಯ ವಿಚಾರಂ ಚರಿತದೊಳ್ !

ಇಂತಿವರೊಳ್ ಶ್ರೀವೀರಭದ್ರದೇವನಪ್ಪಣೆ
ಯಪ್ಪೊಲುಳಿದ ದಶರುದ್ರರಿರದೆ ದಶದಿಕ್ಕೆನ್ನೊಳ್
ವಿಶ್ವಕಲ್ಯಾಣಕಾರ್ಯಂಗಳಂ ನೆಗಳುತ್ತ
ವಿಶ್ವದೊಳ್ ವಿಖ್ಯಾತರಾಗಿರ್ಪ ಕತದಿಂದೆ
ಶ್ರೀರುದ್ರ ಸೂಕ್ತಮಿದು ವಿರಚಿತಮಾಯ್ತಲ್ಲೋ
ರ ಋಷಿಯಿಂ ಮೇಣು ಪರಮೇಷ್ಠಿಯಿಂ ಸಂಸ್ಕೃತದೆ !
ಮತ್ತಮೇಕಾದಶ ರುದ್ರಮಂಟಪ ಪೂಜೆ
ಪೂರ್ವದಿಂ ರೂಢಿಯೊಳ್ ಬಂದಿಹುದು ನಾಡಿನೊಳ್ ! ೨೦
ಪೂರ್ವದೊಳ್ ವಿರೇಶವಿರಚಿತಮಾಗಿರ್ಪ
'ಪೂಜಾ ಮಂಟಪ' ದೊಳ್ ಶ್ರೀರುದ್ರಪೂಜೆಯದು
ನಡೆದತ್ತು ಸಂಭ್ರಮದೆ ಸಾಮೂಹಿಕಮಾಗಿ !
ತಾನದುವೆ ಪರಂಪರೆಯಿಂದ ಮಂಟಪ ಪೂಜೆ–
ಯೆಂದೆನಿಸಿ ಸಾಗುತಿಹುದು ಧಾರ್ಮಿಕ ಕ್ಷೇತ್ರದೊಳ್ !
ಈ ನಿಯತಿಗನುಸರಿಸಿ ಸಜ್ಜಲದ ಶರಣಪ್ಪೆ
ಹತ್ತೊಂಬತ್ತು ನೂರನಾಲ್ವತ್ತೈದರಲ್ಲಿ
ಮೊತ್ತಮೊದಲೊಳ್ ಕಂಬಳಹಾಳದ ಪುಣ್ಯಾಶ್ರಮ

CC-0. Jangamwadi Math Collection. Digitized by eGangotri

ದೊಳೀಕಾದಶರುದ್ರ ಮಂಟಪಾರ್ಚನ ಸಮಾ–
ರಂಭಮುಂ ತಾವೆಸಗಿಹರ್ ಸಂಭ್ರಮದಿಂದೆ !
ಆ ಸಮಾರಂಭಕ್ಕೆ ಅಧ್ಯಕ್ಷರಾಗಿರ್ದರ್ ೩೦
ಹಾಲಕೆರೆ ಲಿಂಗೈಕ್ಯ ಅಂದಾನ ಸ್ವಾಮಿಗಳ್ !
ಮತ್ತಮಾಮಂತ್ರಿಕರ್ ಹತ್ತರಕೆ ಶಿವಾಚಾರ್ಯರ್,
ಗಜೇಂದ್ರಗಡದ ಶಾಂತ ಸ್ವಾಮಿಗಳ್, ಕೊಪ್ಪದ
ಮಹಾಂತಸ್ವಾಮಿಗಳ್ ಮೇಣಮೀಸಗಡದ
ಪ್ರಭುಸ್ವಾಮಿಗಳ್ ಮುಂತಾದವರ್ ಸಂತಸದೆ !
ಹನ್ನೊಂದು ಜನರುದ್ರ ಪೂಜೆಯಂ ನೋಡಲಿ–
ಕ್ಕಯ್ವತ್ತು ಸಾಸಿರಕೆ ಮಿಗಿಲಾಗಿ ಸೇರಿತ್ತು-
ಭಕ್ತಜನ ಸಂದಣಿಮಿಗೆ ಭಾವೋತ್ಸಾಹದಿಂ !
ಸಂಭ್ರಮದ ಸಮಾರಂಭ ದಾಸೋಹಕ್ಕಾಗಿ
ತುಪ್ಪದಕೊಡಗಳಯ್ವತ್ತು, ಸಕ್ಕರೆಯ ಚೀಲಗಳ್ ೪೦
ನೂರಾರು, ಲೆಕ್ಕಕ್ಕೆ ಸಿಕ್ಕದನಿತು ಕುಂಬಳ
ಕಾಯಿಗಳ್ ಗೋದಿಯಕ್ಕಿ ಮತ್ತಂ ಬೆಲ್ಲಗಳ್
ವಿನಿಯೋಗವಾಗಿಹವು, ಲಕ್ಷದೂಟದೆಲೆಗಳು.
ರುದ್ರಪೂಜೆಗೆ ಬಂದ ಹನ್ನೊಂದು ರುದ್ರರ್ಗೆ
ಹನ್ನೊಂದು ಬೆಳ್ಳಿಯಾ ಕರಡಿಗೆಗಳಂಮೇಣು,
ಹನ್ನೊಂದು ತಂಬಿಗೆಗಳನೆಡೆಬಟ್ಟಲುಗಳಂ
ಹನ್ನೊಂದು ಸಟ್ಟುಗಗಳನಿತ್ತರು ಶರಣವ್ವೆ ;
ಮತ್ತಂ ಸಮರ್ಪಿಸಿಹರ್ ಕಾಣಿಕೆಯ ಮೊತ್ತಮಂ,
ಪಡಿಯೊರ್ವರಡಿಗಳ್ಗೆ ಸಿರಿಮುಡಿಯ ಸಾರ್ಚಿಹರ್ !
ಸುಸಮಯದೊಳಿಳಕಲ್ಲಿನ ಕೊಡಗಲಿ ಜಡಿಯಪ್ಪ ೫೦
ನೆಂಬುವರ್ ಬಂದಿರ್ದ ಪ್ರತಿಯೊಬ್ಬ ಶ್ರೀಗಳಿಗೆ
ಹೊದಿಯಲ್ಕೆ ದುಪ್ಪಟ್ಟ, ಮಲಗಲ್ಕೆ ಚಿಡಚಾಪಿ
ಪ್ರಸಾದಗ್ರಾಹಕಕೆ ಬೆಳ್ಳಿಯಾ ತಟ್ಟಿಗಳ
ಕೊಟ್ಟಿಹರ್ ಕಾಣಿಕೆಯ ರೂಪದಿಂ ಪ್ರೇಮದಿಂ !
ಮತ್ತಮಾ ಬಲದಿನ್ನಿ ನೀಲಕಂಠನಾಡ
ಗೌಡರ್, ಬಸರಕೋಡ ಬಸವರಾಜ ನಾಡ-

CC-0. Jangamwadi Math Collection. Digitized by eGangotri

ಸಜ್ಜಲ ಶರಣಾಸ್ಪೆ

ಏಕಾದಶರುದ್ರ ಮಂಟಪಾರ್ಚನಂ

ಗೌಡರ್ ಮೊದಲಾದವರ್ ಧನಧಾನ್ಯಸಮರ್ಪಿಸಿ
ಸೇವೆಸಲ್ಲಿಸಿಹರೈ ಸಂತೋಷಚಿತ್ತದಿಂ !

ಮತ್ತೊರ್ಕ್ಕಿ ಸಜ್ಜಲದ ಗುಡ್ಡದೊಳ್ ಮಸೂತಿ-
ಯ ಶಂಕರ ಶಾಸ್ತ್ರಿಗಳವರಿಂ ಬಾಲ ಲೀಲಾ
ಮಾಹಾಂತ ಶಿವಯೋಗಿ ಪುರಾಣವನೇರ್ಪಡಿಸಿ
ಮಂಟಪದ ಪೂಜೆಯಂ ನಿಷ್ಕಂಟಕಮಾಗಿ
ನಡೆಸಿಹರ್ ; ಲಿಂಗೈಕ್ಯ ಬಂಥನಾಳ ಸಂಗನ
ಬಸವಸ್ವಾಮಿಗಳಮೃತ ಹಸ್ತದಿಂದಮೃತ ಶಿ-
ಲೆಯ ಮಹಾದೇವಿಯಕ್ಕಗಳ ಮಂಗಳಕರ
ಮೂರ್ತಿಯಂ ಪ್ರತಿಷ್ಠಾಪನಂಗೆಯ್ದಿಹರ್ ಗಡಾ !
ಶರಣವ್ವೆ ಪ್ರತಿವರ್ಷ ಮಂಟಪದ ಪೂಜೆಯಂ
ಜರಗಿಸುತ ಶ್ರೀರುದ್ರ ಸಂಸ್ಕೃತಿಯನುಳಿಸಿಹರ್ !
ಮೇಣು ಶತರುದ್ರೀಯ ಜಪವನಾಚರಿಸುವಂ–
ತೆಸಗುತಿರ್ದರ್ ಭೂರುದ್ರ ಜಂಗಮ ತಿಂತಿಣಿಯಿಂ !
ಏಕಾದಶರ್ದಾನ್ಸ್ಯಯದೊಳುದಿಸಿರ್ದುದಾ
ಶತರುದ್ರ ತಿಂತಿಣಿಯು ಸ್ವಯಂಭುಮನ್ವಂತರದೆ !
ಆ ನೂರು ರುದ್ರರಿಂ ಸಹಸ್ರ ಶ್ರೀರುದ್ರರು
ಆ ಸಹಸ್ರರುದ್ರರಿಂ ಗಂಗೆವಾಲುಕಸಮ
ರುದ್ರಗಣರುದಿಸಿ ರುದ್ರಮಯ ಮಾಯ್ತು ಜಗತ್ತು !

ಶತರುದ್ರಪತಿ ವೀರಭದ್ರದೇವಂನೋಡಾ ;
ಜಿತಸ್ಮೈರಿ ಜಿತಶೌರಿ ವೀರಭದ್ರೇಶ್ವರ
ನೀಲವರ್ಣಮಯದ ಶರೀರದಿಂ ಮತ್ತಮಾ
ಫಾಲಲೋಚನದಿಂ ಜಟಾಮಕುಟದಿಂದೇಕ
ವದನದಿಂ ಕಠಾರಿ ಫಲಕ ಚಾಪ ಬಾಣಂಗ
ಳಿಂ ವಸ್ತ್ರ ಗಂಧ ಮಾಲ್ಯಾಭರಣ ರುಂಡಗಳಿಂ
ದಲಂಕೃತನಾಗಿ ಭದ್ರಕಾಳೀಸಹಿತನಾಗಿ
ದುಷ್ಟನಿಗ್ರಹ ಶಿಷ್ಟಪರಿಪಾಲಕನಾಗಿ
ದೀನ ದಲಿತೋದ್ಧಾರಕನಾಗಿ ಮತ್ತಮಾ

CC-0. Jangamwadi Math Collection. Digitized by eGangotri

ನಷ್ಟಾತ್ಮಕ ಹಿಂಸಾತ್ಮಕಯಜ್ಞನಿರೋಧಕ–
ನಾಗಿ ಶೋಷಣ ಘರ್ಷಣ ನಿವಾರಕನಾಗಿ
ಆರ್ಯದ್ರಾವಿಡ ಸಮನ್ವಯಾಚಾರ್ಯನಾಗಿ
ಭಾರತದ ಪ್ರಪ್ರಥಕ್ರಾಂತದರ್ಶಿಯಾಗಿ
ಶ್ರೀವೀರಶೈವಮತ ಸಂಸ್ಥಾಪಕನಾಗಿ
ಕಣ್ಣಡಿಕನೆನಿಸಿ ಕನ್ನಡಿಗರಾದಿ ಪುರುಷ ೯೦
ನೆನಿಸಿ ಮೇಣು ಪೂಜಾಮಂಟಪವರಚಿಸಿ
ಮೆರೆದಿಹನ್ ತಿರೆಯೊಳಗೆ ಶ್ರೀರುದ್ರ ಸುತನೆನಿಸಿ !
ಛಲದಂಕಮಲ್ಲ ಮೇಣ್ ವೀರಕುಲಾಧೀಶ,
ಸೈರಿಕೋಲಾಹಲ ಮೇಣ್ ವೀರಶಿಖಾಮಣಿ,
ಹಲಗೆಯ ಕಡುಗಲಿ, ಕಲಿವೀರ, ಶಿವದೂಷಕ–
ಗಜಕಂಠೀರವ, ಮದಮರ್ದನ, ತಿಮಿರ ದಿವಾ–
ಕರನೆಂದು ಮುಂತಾಗಿ ಪೊಗಳಿದರ್ ಪುರಾತನರ್ !

ಶ್ರೀರುದ್ರರ್ ತತ್ಪಂಗಳಿಗಭಿಮಾನಿಗಳಾಗಿ
ಸ್ಪಾದುರ್ಭವಿಸಿಹರಯ್ ಲೋಕಮಂ ಕಾಪಿಡಲು ;
ಶತರುದ್ರೀ ಲೋಕದೊಳವತರಿಸಿದ ಬಳಿಕ ೧೦೦
ಸ್ಥೂಲವಹ ಭೂತತ್ತ್ವದತ್ತಣಿಂ ದಶಗುಣಾ-
ಧಿಕಮಾಗಿ ನೆಲಸಿರ್ಪ ಜಲತತ್ತ್ವದೊಳವರೇ–
ಶ, ಪ್ರಭಾಸ, ನೈಮಿಷಂ, ಪುಷ್ಕರಂ, ಮತ್ತಮಾ
ಆಷಾಢಿ, ಡಿಂಡಿ ಮೇಣ್ ಭಾರಭೂತಿ, ನಾಕುಲ–
ರೆಂಬ ಪೆಸರುಳ್ಳ ಗುಹ್ಯಾಷ್ಟಕರ್ ತಾವಿಹರ್ ;
ಮತ್ತಮಾ ಜಲತತ್ತ್ವದತ್ತಣಿಂ ದಶಗುಣಾ–
ಧಿಕಮಾಗಿ ನೆಲಸಿರ್ಪ ತೇಜಾಂಶ ತತ್ತ್ವದೊಳ್
ಹರಿಶ್ಚಂದ್ರ, ಶ್ರೀಶೈಲ, ಕಲ್ಪಮಾನ್, ಮಾತರೀ–
ಶ್ವರ, ಮಹಾಕಾಳ, ಮಧ್ಯಮ, ಕೇತಾರ ಭೈ-
ರವರೆಂಬ ಮೊದಲಗುಹ್ಯಾಷ್ಟಕರ್ ತಾವಿಹರ್ ; ೧೧೦
ಮೇಣುತೇಜಸ್ತತ್ತ್ವದತ್ತಣಿಂ ದಶಗುಣಾ-
ಧಿಕಮಾಗಿ ನಿಂತಿರ್ಪ ವಾಯ್ವಂಗ ತತ್ತ್ವದೊಳ್
ಗಯೆ, ಕುರುಕ್ಷೇತ್ರ, ನಾಭಿಲಂಡ, ಖಿಲ, ವಿಮಲಾ-

CC-0. Jangamwadi Math Collection. Digitized by eGangotri

ಸಜ್ಜಲ ಶರಣಾಪ್ಪೆ

ಏಕಾದಶರುದ್ರ ಮಂಟಪಾರ್ಚನಂ

ಟ್ಟಹಾಸ, ಮಹೇಂದ್ರ, ಭೀಮರೆಂಬಾ ಗುಹ್ಯಾದ್ಯ-
ಹ್ಯಾಷ್ಟಕರಿಹರ್ ಮೇಣು ವಾಯುತತ್ತ್ವದತ್ತಣಿಂ
ದಶಗುಣಾಧಿಕಮಾಗಿ ನಿಂತಿರ್ಪ ವ್ಯೋಮಾಂಗ
ತತ್ತ್ವದೊಳ್ ವಸ್ತ್ರಾಪದ, ರುದ್ರಕೋಟ್ಯವಿ ಮುಕ್ತ
ಮಹಾಬಲ, ಗೋಕರ್ಣ, ಭದ್ರಕರ್ಣ, ಸ್ವರ್ಣಾಕ್ಷ,
ಸ್ಥಾಣುಗಳವೆಂಬ ಪವಿತ್ರಾಷ್ಟಕರ್ ತಾವಿಹರ್ !
ಬಳಿಕಂತು ಪೂರ್ವೋಕ್ತ ಲೋಕಪಾಲಾಷ್ಟಕರೊ ೧೬೦
ಡಗೂಡಿದ ಪಂಚಾಷ್ಟಕರಾಗಿಹ ಭೂಲೋಕ
ದೊಳಾಯಾ ನಾಮಧೇಯಂಗಳಿಂದವತರಿಸಿ
ಸಕಲ ಲೋಕಾಭಿಮತ ಫಲದಾಯಕರಾಗಿಹರ್ !

ಮತ್ತಮಾ ಪಂಚತನ್ಮಾತ್ರರೆಂಬ ರುದ್ರರು,
ಕರ್ಮೇಂದ್ರಿಯ ಜ್ಞಾನೇಂದ್ರಿಯ ರುದ್ರರಹಂಕಾ
ರ ಭುವನಮಯ ರುದ್ರರು, ಬುದ್ಧಿತತ್ತ್ವಗುಣತ-
ತ್ತ್ವರುದ್ರರು, ರಾಗ ವಿದ್ಯಾನಿಯತಿ ತತ್ತ್ವರು-
ದ್ರರು, ಕಾಲತತ್ತ್ವ ಮಪಾಯಾತತ್ತ್ವ ರುದ್ರರು
ತಾವಿರ್ದ್ದು ವಿಶ್ವಮಿದು ರುದ್ರಮಯಮಾಗಿಹುದು. ೧೭೦
ಸರ್ವಭುವನಂಗಳುಂ ರುದ್ರರಿಂ ಪಾಲಿತ
ಮಾಗಿ ರುದ್ರಾಧಿಷ್ಠಿತವಾಗಿ ರುದ್ರಮಯಂ !
ಕಾರಣಂ ಪೂರ್ವದಿಂ ಶ್ರೀರುದ್ರ ಪೂಜೆಯಿದು
ಜಗದ ಜನತೆಯೊಳ್ ಜರುಗುತಿದೆ ತಾನೆಯಾಗಿ !

ಶ್ರೀರುದ್ರ ತತ್ತ್ವಮದು ಲಿಂಗಮೂರ್ತಿಯಾಗಿ
ಮಹೇಶ್ವರ ತತ್ತ್ವಮದು ಶರಣಮೂರ್ತಿಯಾಗಿ
ಸದಾಶಿವ ತತ್ತ್ವಮದು ಐಕ್ಯಕೂಟಸ್ಥವಾಗಿ
ನಾಮ ರೂಪು ಭಾವವಳಿದಲ್ಲಿ ಪರಶಿವಮೂರ್ತಿ
ಪರಾಪರದೊಳಗಾಯಿತಿಂತೆಂದು ಪೇಳಿಹನ್
ಕಾಶ್ಮೀರ ಮೋಳಿಗೆಯ ಮಾರಯ್ಯ ಶಿವಶರಣಂ !

CC-0. Jangamwadi Math Collection. Digitized by eGangotri

ಆರ್ಥಪ್ರಣಾಭಿಮಾನದ ಮೇಲೆ ಬಂದಡುಂ ೧೪೦
ಬರಲವ್ವ ಪ್ರಶಹೀನನಂ ನೆರೆಯಲಾಗದವ್ವ
ನೋಡಲಃಂ ಸುತಿಸಲುಂ ತಾನೆಂತುಮಾಗದಂ
ಹರಹರಾ, ಪಾಪವಶದಿಂದೆ ನೋಡಿದಡಮಾ
ರುದ್ರಜಪ–ಮಹೇಶ್ವರ ಪೂಜೆಯಂ ಮಾಳ್ಪುದಂ
ಇಂತಲ್ಲದವರ ಉಲಿಂಗಪೆದ್ದಿಗಳರಸಂ
ನೆರೆನಕ್ಕು ಕಡೆಗಣ್ಣಿನಿಂದೆ ಕಳಿವನವ್ವಾ !
ಇಂತೆಂದು ಹಾಡಿಹಳ್ ಶಿವಶರಣೆ ಕಾಳವ್ವೆ !!
'ವಿಶ್ವಾಧಿಕೋ ರುದ್ರೊ ನದ್ವಿತೀಯಾಯ ತಸ್ಥು:'
'ಓಂ ದ್ಯಾವಾ ಭೂಮೀ ಜನಯನ್ ದೇವ ಏಕ
ಏವ ರುದ್ರೋನ ದ್ವಿತೀಯ' ನಿಂತೆಂದು ಶ್ರುತಿ ೧೫೦
ಸ್ಮೃತಿಗಳ್ ಮಿಗೆ ಸಾರುತ್ತಿಹವು ಜಗವರಿಯಲ್ಕೆ !
'ಏಶ್ವರೂಪಾಯ ವೈ ನಮೋನಮಃ' ಮತ್ತಮಾ
'ಪರಮರೂಪಿಣೇ ನಮಃ ಪರತತ್ತ್ವಾಯ ನಮಃ
ಆದಿಯಾರೂಢ ಭಯಂಕರಾಯ ನಮಃ'–ಎಂದು
ಹರಿಯನಂ ಹರಿಸಿದನೆಂದು ಶ್ರುತಿಸಾರುತಿರೆ
ಸಂಹಾರ ಕಾರಣಾಯ ನಮಃ ನಮ್ಮ ಕೂಡ-
ಲ ಸಂಗಮ ದೇವರ ಮಹಾ ಮಹದ್ಭೈಶ್ವನಮಃ
ಶ್ರುತಿಗಗಮ್ಯ ದ್ವಾದಶಾದಿತ್ಯನಪ್ರತಿಮ
ಮಹಿಮಂಗೆ ಪ್ರತಿಯುಂಟಿ ? ಎಂದಿಹನ್ ಬಸವಣ್ಣ !
ರುದ್ರನೆಂಬಾತನೊಬ್ಬ ಗಣೇಶ್ವರಂ ಮೇಣು ೧೬೦
ಭದ್ರನೆಂಬಾತನೊಬ್ಬ ಗಣೇಶ್ವರಂ ಮತ್ತೆ
ಶಂಕರನೆಂಬಾತನೊಬ್ಬ ಗಣೇಶ್ವರಂ ಮೇಣ್
ಶಶಿಧರನೆಂಬಾತನೊಬ್ಬ ಗಣೇಶ್ವರನಿಹನ್
ಎಂತೆಂದು ಪರಮಾನುಭಾವಿ ಪ್ರಭು ಪೇಳಹನ್ !

'ಇದ್ದಿಲಿಂ ಕರಿದಿಲ್ಲ, ಬುದ್ಧಿಯಿಂ ಪಿರಿದಿಲ್ಲ ;
ಸಿದ್ಧರಿಂದಧಿಕವಹ ಬಲದಿಲ್ಲ, ಪರಜೈವ-
ಶ್ರೀರುದ್ರನಿಂದಿಲ್ಲ ಸರ್ವಜ್ಞ ; ಮತಮಾ

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಏಕಾದಶರುದ್ರ ಮಂಟಪಾರ್ಚನಂ

ರುದ್ರನಕ್ಷೆಯ ಮಣಿಯ ಹೊದ್ದಿ ಧರಿಸಿಪ್ಪರಿಗೆ
ಹೊದ್ದವವು ಪಾಪಭವಮಾಲೆಗಳ್ ಸಾಕ್ಷಾತ್ತು
ರುದ್ರನೇ ತಾನಕ್ಕು ಸರ್ವಜ್ಞ'– ಎಂದಿಹನ್ ೧೭೦

ಭಾವನೇತಕ್ಕೆ ತಾನ್ ಬಾರನೆನ್ನ ಮನೆಗೆ ?
ಹರಿಯ ಮಗನನುರುಹಿದ ಹಿರಿಯ ಗರುವನಾತಂ
ಭಾವನೇತಕ್ಕೆ ತಾನ್ ಬಾರನೆನ್ನ ಮನೆಗೆ ?
ಅಸುರರ ಪುರವಸುಟ್ಟ ವೀರಭಾವನೇತಕೆ–
ಬಾರನೆನ್ನ ಮನೆಗೆ ? ದಕ್ಷನ ಶಿರವ ಹರಿದು,
ಯಾಗವಂ ಪಾಳ್ಗೆಡಿಸಿ ಕುರಿದಲೆಯ ಹತ್ತಿಸಿದ
ಬಿನ್ನಣದ ಬಲುಹವಂ ಭುವನದೊಳ್ ನೆರೆಮೆರೆದ
ತಾನೇಕೋಭಾವನೇತಕೆ ಬಾರನೆನ್ನ ಮನೆಗೆ ?
ಹರಿಯ ನಯನದ ಪೂಜೆ ಚರಣದೊಪ್ಪಿತ್ತೆಂಬ
ದುರುಳತನವು ತನಗೆ ಬೇಡವ್ವ ಓ ಕೆಳದಿ, ೧೮೦
ಆತನಂ ನೀಂ ಕರೆಮ ತಾರವ್ವ ತ್ವರಿತದಿ
ಶ್ರೀಶಂಭು ಜಕ್ಕೇಶ್ವರನ ನೆರೆದು ನೋಡುವೆನ್!

ಹೊಳೆವ ಕೆಂಜೆಡೆಯವನ ಮೇಲೆಯೆಳೆವೆಳುದಿಂಗಳು
ಫಣಿಮಣಿಯ ಕರ್ಣಕುಂಡಲದವನ ನೋಡವ್ವ
ರುಂಡಮಾಲೆಯ ಕೊರಳವನ ಕಂಡಡೊಪ್ಪಿ
ನೀನು ಬರಹೇಳವ್ವ, ಗೋವಿಂದನ ನಯನ
ಉಂಗುಟದ ಮೇಲಿಪ್ಪವನ ನೀಂ ಬರಹೇಳವ್ವ ;
ಚನ್ನಮಲ್ಲಿಕಾರ್ಜುನ ದೇವನ ಕರುಹವ್ವಾ !
ಇಂತೆಂದು ಶರಣೆಯರ್ ಶ್ರೀರುದ್ರ ಭದ್ರರಿ
ಗಾಗಿ ತಾವ್ ಭಕ್ತಿರತಿಯಿಂದಂಗಲಾಚಿಹರ್ ! ೧೯೦

ತಾನಂತೆ ಶರಣಪ್ಪೆ ಶ್ರೀರುದ್ರಪೂಜೆಯೊಳ್
ಭಯಭಕ್ತಿ ಪ್ರಪತ್ತಿಯನಳವಡಿಸಿಕೊಳ್ಳುತಂ
ಕೆಯ್ಮುಗಿದು ಸಿರವಾಗಿ ಭಾವದಾವೇಶದಿಂ
ಸದಮಳಸ್ವರೂಪನೆ ಶ್ರೀರುದ್ರದೇವನೆ

CC-0. Jangamwadi Math Collection. Digitized by eGangotri

ಪದುಳದಿಂದಿರುವಂತೆ ಕರುಣೆಯಿಂ ಪರಕೆಗೆಯ್
ಎಂತೆಂದುಸೆದೆಮುಂಬಿ ಪಾರ್ಥಿಪಳ್ ಪರಿಣಮಿಸಿ ;
ಮುಮ್ಮೊದಲ್ ಪಶುಗಳಂ ಪಟ್ಟದಿಂ ಪಿಡಿತಂದು
ಕಾಪಿಟ್ಟು ಪಾಲ್ಗೊಸರ್ ಬೆಣ್ಣೆ ತುಪ್ಪಗಳನಿತ್ತು
ಜಗತ್ತಿನ ಜನಂಗಳನಾದರದಿ ಪೋಷಿಸಿದ
ಕರುಣಾಳು ಶ್ರೀರುದ್ರನೇ ಕಾಪಿಡೆನ್ನನಂ !! ೨೦೦
ಮಾನವರ ಪಶುಭಾವಮಂ ಮುಮ್ಮೊದಲ್ ಸತ್ಯ
ಸಂಸ್ಕಾರದಿಂ ತವಿಸಿ ಪಶುಪತಿಯು ನೀನೆನಿಸಿ
ಪ್ರಪ್ರಥಮದೊಳ್ ಪಶುಪತಿ ಧರ್ಮರಜಕನಾದ
ಶ್ರೀರುದ್ರದೇವನೇ ವೀರಭದ್ರಪಿತನೇ
ತ್ರಿದೇಹಗಳೆಂಬ ತ್ರಿಪುರಂ ಸಂಹರಿಸಿದವನೆ
ತ್ರಿವಿದಾಂಗದೊಳು ತ್ರಿವಿದಲಿಂಗಗಳನಿತ್ತವನೆ
ಭವಿಗಳಂ ಭಕ್ತರನ್ನಾಗಿಸುತ ಪೊರೆದವನೆ
ಗಂಗೆವಾಳುಕ ಸಮರುದ್ರಗಣ ನಾಯಕನೆ
ಆರ್ಯಜನ ದಾಳಿಯಿಂ ದ್ರಾವಿಡರ ರಕ್ಷಿಸಿದ
ಶ್ರೀ ಮಹಾದೇವನೇ ಬಿಡದೆನ್ನ ಜೀವಭಾ- ೨೧೦
ವಮಂ ತೊಡೆಯುತ ಲಿಂಗಭಾವಮಂ ಕರುಣಿಸುತ
ಕೆಯ್ಪಿಡದೆ ಕಾಪಿಡಯ್ ನೀಂ ನಿನ್ನ ಕುವರಿಯಂ !
ನಿನ್ನಣುಗ ಶ್ರೀವೀರಭದ್ರದೇವನಚ್ಚಳು
ನಿನ್ನ ಮಣಿಹಮಂ ಮುನ್ನಡೆಸಿ ಮಿಗೆ ಮೆರುಗಿಸಿ,
ಪಶುಪತಿಮತದಿಂ ವೀರಶೈವಮತಮೆನಿಸಿ
ವಸುಮತಿಯೊಳೆಸೆದಿಹನ್ ಸರ್ವರುದ್ಧಾರಕನ್
ಆತನುಳಿದು ವೀರನಾರ್ ಭದ್ರನಾರ್ ವಿಶ್ವದೊಳ್
ಸತಿಪೆ ನಾತಂಗೆ ಭದ್ರಕಾಳೀ ಭವಾನಿಗೆ !
ಮತ್ತಮೇಕಾದಶರುದ್ರರೊಂದಾಗಿರ್ಪ
ಕಾಳಿಕಾಭವಾನೀ ಪತಿ ನಿನಗೆ ನಮಿಸುವೆನ್ ! ೨೨೦
ಶ್ರೀರುದ್ರ ಪೂಜೆಯೊಳ್ ತೇಜದೊಳ್ ಕಳೆದತ್ತು-
ದಿನಮೆಲ್ಲ, ಕಳೆದತ್ತು ಪೆರತೆಲ್ಲ ಕಜ್ಜಮದು ;
ರುದ್ರ ಕರ್ಮಿಕೆಯು ತಾನಾಗಿಹಳೊ ಎಂಬಂತೆ

CC-0. Jangamwadi Math Collection. Digitized by eGangotri

ಸಜ್ಜಲ ಶರಣವ್ವೆ

ಏಕಾದಶರುದ್ರ ಮಂಟಪಾರ್ಚನಂ

ಚಲುವಾಂತು ಗೆಲುವಾಂತು ತಾಸಿಹಳ್ ಶರಣವ್ವೆ !
ಪೂರ್ವದಾ ಏಕಾದಶ ರುದ್ರರಿ ತಾವಿಳೆಗೆ
ನಡೆತಂದಿಹರೊ ಎಂದು ಭಾವಿಪಳ್ ಶರಣವ್ವೆ !
ಸೇನೆಯುಂ ಮಾತಿ ನಲಿವಳ್ ನೋಡಿ ನಲಿದಿಹಳ್
ನೆನೆನೆನೆದು ನಲಿದಿಹಳ್ ಸ್ವಾಂತದೊಳ್ ಶರಣಾಯಿ !
ಪುರೋಹಿತರೋದುತಿಹ ಶ್ರೀರುದ್ರ ಸೂಕ್ತಮಂ
ಕಿವಿಯಿಂದ ಕೇಳಿ ನಲಿದಾತಿದಳ್ ಶರಣಾಯಿ ! ೪೯೦

ಆ ರುದ್ರ ಲೋಕಮೇ ಧರೆಗಳಿದು ಬಂದಂತೆ
ಕಂಗೊಳಿಸಿತು ಕಂಬಳಿ ಹಾಲೂರು ತಾನಂದು !
ಹಚ್ಚ ಹಸುರಿನ ಮಂಟಪಂಗಳಾ ಸೊಂಪೇನು,
ಮೆಚ್ಚಿ ನುಡಿಸುತಿಹ ವಾದ್ಯಂಗಳಾ ಇಂಪೇನು ?
ನೋಡಿ ನೋಡಿ ನಲಿದಳ್, ಕೇಳಿ ಕೇಳಿ ನಲಿದಳ್
ಶರಣಾಯಿ ಸಂತೋಷಸಾಗರದೆ ಮುಳುಗಿಹಳ್ !
ಶ್ರೀರುದ್ರಪೂಜೆಯಂ ಪೂರೈಸಿ ಕೃತಕೃತ್ಯ
ಭಾವದಿಂ ನಡೆತಂದಳವ್ವೆ ಬೇಗಂ ಮಠಕೆ,
ಕಂಡುದಂ ನೆನೆದಪಳ್ ಕೇಳ್ದುದಂ ನೆನೆದಪಳ್
ಲೋಕಮುಂ ಕಾಪಿಟ್ಟ ಮೇಕಾದಶರುದ್ರರಂ, ೪೯೫

ನೆಲದಲ್ಲಿ ನೀರಲ್ಲಿ ಬೆಂಕಿಗಾಳಿಗಳಲ್ಲಿ
ಮತ್ತಮಾ ಬಾನಲ್ಲಿ ತುಂಬಿರ್ದ ತೇಜಮಂ
ಸಕಲ ಭೂತಾತ್ಮರೊಳ್ ತಾನಾಗಿ ತುಂಬಿರ್ದ
ಶ್ರೀರುದ್ರ ಚೈತನ್ಯಶಕ್ತಿಯುಂ ನೆನೆದಪಳ್
ತಾಪತ್ರಯಮುಂ ತವಿಪೋಜಮಂ ನೆನೆದಪಳ್
ತೋಷಕ್ಕೆ ಮೇಣ್ ನಿತ್ಯಜೀವಸಕೆ ಕಾರಣಂ
ತಾನಾಗಿಹ ರುತಮುಂ ರೂಪಮಂ ನೆನೆದಪಳ್
ಚಂದ್ರನೊಳ್ ಸೂರ್ಯನೊಳ್ ಮೇಣ್ತಾರಕಂಗಳೊಳ್
ತುಂಬಿರ್ದ ಶ್ರೀರುದ್ರ ತೇಜಮಂ ನೆನೆದಪಳ್ ೫೦೦
ಗಿಡುಮರಂಗಳೊಳ್ ಮೇಣ್ ಬಳ್ಳಿಹುಲ್ಲುಗಳೊಳ್
ಬಿಡದಂತಿರುತ್ತಿರ್ಪ ಶ್ರೀರುದ್ರ ವ್ಯಾಪ್ತಿಯಂ
ನೆನೆಯುವಳ್ ನಲಿಯುವಳ್ ಮನಸಿನೊಳ್ ಶರಣವ್ವೆ !

CC-0. Jangamwadi Math Collection. Digitized by eGangotri

ಏಕಾದಶರುದ್ರರ್ ವಿಶ್ವಶಕ್ತಿಸ್ವರೂಪರ್
ಲೋಕಕಲ್ಯಾಣ ಕಾರ್ಯ ನಿರತರ್ ಸಂತಶಂ;
ಬಡವ ಬಲ್ಲಿದ ದೀನದಲಿತರಂ ರಕ್ಷಿಪರ್
ವೃಷ್ಟಿಯಂ ಬರಿಸುವರ್ ಸಸ್ಯಗಳ ಬೆಳಸುವರ್
ಸೃಷ್ಟಿಯುಂ ಪೋಷಿಪರ್ ದೃಷ್ಟಿಯಂ ಕೊಟ್ಟಪರ್ !
ಎನ್ನಯೀ ಏಕಾದಶಾಂಗಗಳೊಳ್ ಬಡದೆ
ಏಕಾದಶ ಶ್ರೀರುದ್ರತೇಜಂ ನೆಲಸುಗೆ ;
ತ್ರಿಕಾಲದೊಳಿರದೆ ಶರಣಾಗಿಹೆನ್ ನರೆನಂಬಿ ; ೧೬೦
ಮತ್ತಮೀ ಜನಮನದ ಬಯಕೆಗಳ್ ಕೆಯ್ಯೂಡಿ
ಬರುವಂತೆ, ಬೇನೆ ಬೇಸರಿಕೆಗಳ್ ತವಿಪಂತೆ–
ಏಕಾದಶರುದ್ರರ್ ಹರಸಲೆಂದಾಶಿಪೆನ್ !

ಸಜ್ಜಲದ ಗುಡ್ಡದೊಳ್ ಪ್ರತಿಧ್ವನಿಸುತಿತ್ತದು
ಶ್ರೀರುದ್ರ ಸೂಕ್ತಪಠನನಿನಾದಮಸುರಣಿಸಿ,
ಸೇರಿರ್ದ ಸರ್ವಜನ ಕರ್ಣಕುಹರಂಗಳೊಳ್ !
ಸಂತಸಂ ದಳೆದರ್ ಶ್ರೀರುದ್ರಚರಣಂಗಳ
ಗೆರಗಿದರ್ ಮೇಣು ಬೀಳ್ಕೊಟ್ಟರೈ ರುದ್ರರಂ !
ರುದ್ರಬಲಮಿಲ್ಲದಲೆ ಕ್ಷುದ್ರಜನ ಬಾಳದೈ,
ರುದ್ರರುತಮಿಲ್ಲದಲೆ ಪ್ರಾಣಿಗಳ್ ನುಡಿಯವೈ ; ೧೭೦
ರುದ್ರಯೋಗಮಿಲ್ಲದೆ ಸಿದ್ಧಯೋಗಿಗಳೆಲ್ಲಿ ?
ರುದ್ರತ್ಯಾಗಮಿಲ್ಲದೆ ಲೋಕಬದುಕಮಿಜೆಲ್ಲಿ ?
ಏಕಾದಶ ರುದ್ರಾರಾಧನೆಯ ಬಲದಿಂದೆ
ಏಕಾಗ್ರಚಿತ್ತಳ್ ಮತ್ತಂ ವಿಚಾರಾಚಾರ
ಸಂಯುತಳ್ ತಾನಾಗಿ ಶರಣತ್ವಮಂ ಪಡೆದು
ಸ್ವಯಂಜ್ಯೋತಿ ಸ್ವರೂಪಳಾಗಿಹಳಾ ತಾಯಿ !
ರುದ್ರತಪ ರುದ್ರಜಪ ಶಕ್ತಿಯೇಂ ಚಿಕ್ಕದೇ ?
ರುದ್ರದೇವನ ಯೋಗಮೇಯೋಗಂ ಬಾಳಿಗಂ !
ಶ್ರೀರುದ್ರನೊರ್ವನೇ ಜಗಕೆಲ್ಲ ರಕ್ಷಕಂ
ಶ್ರೀರುದ್ರನೊರ್ವನೇ ಜನಕೆಲ್ಲ ದೀಕ್ಷಕಂ ೧೮೦
ಶ್ರೀರುದ್ರನೊರ್ವನೇ ಜನಕೆಲ್ಲ ಚೇತನಂ
ಶ್ರೀರುದ್ರನೊರ್ವನೇ ಜ್ಯೋತಿರ್ಮಯ ಜೀವನಂ !

CC-0. Jangamwadi Math Collection. Digitized by eGangotri

೧೨. ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮಂಗಳ್ !

ಕನ್ನಡದ ನಾಡಿನೊಳ್ ಕಣ್ಮಿಡ್ಡ ಮಾಗಿಹುದು
ಕಂಬಳೀ ಹಾಲೂರು ಶರಣಾಯ ಸಂಬಂಧ
ಮುಂಟಾಗಿ ಪ್ರಶಾಂತಮಯ ಪುಣ್ಯಾಶ್ರಮವೆನಿಸಿ
ತಾಯಿಯಾ ಕಾರುಣ್ಯರಸತೀರ್ಥದಿಂ ಕೂಡಿ
ಸತ್ತೀರ್ಥಮೆನಿಸಿ ಮೆರೆದಿಹುದು ಪೆಸರಾಂತು ;
ಸತ್ಸಂಗ ಪ್ರಭಾವವುದೇಂ ನೋಡೆ ಸಾಮಾನ್ಯವೆ ?
ಸಜ್ಜಲದ ಗುಡ್ಡದಂ ಸವಚೇತಸವನಿತ್ತಿದೆ–
ಸಾಮಾನ್ಯ ಜನತೆಯೊಳ್ ಮಾತೃವಿನ ಕರುಣೆಯಿಂ !
ಪೂಜ್ಯಗುರು ಗುಡದೂರ ದೊಡ್ಡಬಸವಾರ್ಯರಾ
ಪಾದದೂಳಿಯಿಂ ಪಾವನಗೊಂಡಿಹವ್ ಗಡಾ ! ೧೨

ಮತ್ತವಾ ತಾಯಿಗಳ ತಪೋನುಷ್ಠಾನಬಲ
ದಿಂ ಪುಣ್ಯಕ್ಷೇತ್ರಂಗಳಾಗಿಹವ್ ಶಾವೆರಡು !
ಮತಮಾನ್ಯ ಗುರುವಾಸದಿಂ ಧನ್ಯವಾಗಿಹವು
ಊರುಗಳ್ ನಿರಿಕಿಸಲ್ ಚಿಕ್ಕವಾದಡೇನಹುದೊ
ಗುರುಶಿಷ್ಯ ಸಾನ್ನಿಧ್ಯ ಪ್ರಭಾವಂ ಚಿಕ್ಕದೇಂ ?
ದಾಸೋಹಮನೆಯಿಂದೆ ಹೊಮ್ಮಿರ್ದ ಹೊಗೆಯದಂ
ಜನ್ನವನೆಯಿಂದೇಳ್ದ ಧೂಮದಂತೆಸೆದುದಯ್ ;
ಆಶ್ರಮಗಳೆಂತೆನೆಯು ತಿರ್ಪವೆರಡೂರುಗಳ–
ನಾವರಿಸಿ ಹರಡಿತ್ತು ಹಿಮಾಲಯದಂತೆವೊಲ್ ! ೧೩
ಹೊಗೆಗಂಪು ಜನಮನವ ಸೆಳೆದತ್ತು ಪಸಿವಂ ತಾಂ
ಹಿಂಗಿಸುತ ಪಾವನತೆಯಂ ಕುಡುವ ಪ್ರಸಾದಕೆ !
ಪ್ರಸಾದಂ ತಾಂ ಪರಮ ಚೇತನಂ ತಾನಲ್ತೆ ?
ಮೇಣು ಜಗದ ಜನ ಜೀವನ ಶಕ್ತಿತಾನಲ್ತೆ ?
ಇದರಿಂದಲೀ ಶ್ರಮವ ಕಳೆವಾಶ್ರಮಂಗಳಾ
ಗಿಹವ್ ಕಂಬಳಿಹಾಳ ಸಜ್ಜಲದ ಗುಡ್ಡಗಳ್ !
ಶರಣವ್ವೆಯಂ ಬಗೆದಿಹರ್ ಜನರೆಲ್ಲರನ್ನಪೂ–
ರ್ಣೆಯವತಾರಮೆಂದುಂ ಸಂತೃಪ್ತರಾಗಿ ತಾವ್ !

CC-0. Jangamwadi Math Collection. Digitized by eGangotri

ಲಿಂಗಪೂಜಾ ಪ್ರಭಾವಮದು ತಾಂ ಸಂಗಡಿಸಿ–
ತ್ತು ಮಂಗಳಮಯವಾಗಿ ಎರಡೂರಿನಂಗಳದೆ !
ಊರಿರಡು ನಾಮರೂಪಂಗಳಂ ನೋಡಲ್ಕೆ
ಸ್ಥಲಮೊಂದೆ ಶರಣವ್ವೆಯ ಗುಣಕ್ರಿಯಂಗಳೆಂ !
ವ್ಯಷ್ಟಿರೂಪದಲ್ಲಿ ಸಮಷ್ಟಿರೂಪಗೊಂಡುದು,
ಮಂಗಳಮಯ ಮನದಿಂ ಕಾವಿಯುಡುಗೆಯನಟ್ಟು
ಲಿಂಗಪೂಜಾಚಾರ ನೋಂಪಿಯಂ ನೆರೆತೊಟ್ಟು
ನಿತ್ಯಶಿವ ಶರಣವ್ವೆ ಸತ್ಯಋಷಿಯಾಗಿಹಳ್
ಕಂಬಳಿಹಾಳ್ ಸಜ್ಜಲ ಗುಡ್ಡಾಶ್ರಮಂಗಳೊಳ್ !
ಏಳುವಳ್ ಮುಂಜಾವಿನೊಳ್, ಜಾನಿಪಳ್ ಶಿವಸಂ,
ಮಾಡುವಳ್ ಶೌಚಮಂ, ಮೀಯುವಳ್ ನೀರಿನೊಳ್ ;
ಧರಿಸುವಳ್ ಭಸಿತಮಂ, ಮೇಣ್ ಕಾಯ್ದೊಡಿಗೆಯಂ ;
ಗೆಯ್ಯುವಳ್ ಮಜ್ಜನಂ ತನ್ನಿಷ್ಟಲಿಂಗಕ್ಕೆ
ಸೋಸುವಳ್ ಪತ್ರೆಯಂ, ಧರಿಸುವಳ್ ಕರುಹಿಂಗೆ ;
ಹಾಕುವಳ್ ಧೂಪಮಂ, ಬೆಳಗುವಳ್ ದೀಪಮಂ ;
ಬಾಜಿಪಳ್ ಗಂಟೆಯಂ, ಭಾವಿಪಳ್ ನಾದಮಂ ;
ಪೂಸುವಳ್ ಗಂಧಮಂ, ಬೀಸುವಳ್ ಚಾಮರಂ ;
ಪಿಡಿಯುವಳ್ ಛತ್ರಮಂ, ಜಪಿಸುವಳ್ ಮಂತ್ರಮಂ ;
ಪಾಡುವಳ್ ಮಂಗಳಂ, ಮಾಡುವಳ್ ಪುಷ್ಪಾಂಜ–
ಲಿಯಂ ಮೇಣ್ ಹಿಡಿಯುವಳ್ ನೈವೇದ್ಯಮಂಗಡಾ !
ಪೊಂದುವಳ್ ತೃಪ್ತಿಯಂ, ಪೊಂದುವಳ್ ದೀಪ್ತಿಯಂ ;
ಶ್ರದ್ಧೆಯಿಂ ನಿಷ್ಠೆಯಿಂ ಕೂಡುವಳ್ ಲಿಂಗದೊಳ್
ಸಮರಸದ ಭಾವದಿಂದಾಜ್ಞೆಯೊಳ್ ತಾನಾಗಿ !
ತೆರೆಮುಸಗಿ ಮನಹೊಸಗಿ ಸುಖಬಾಷ್ಪವುದುರುತಿರೆ
ಮೈಪುಳಕ ನವಿರೇರೆ, ಮೈಬೆಮರೆ, ಗದ್ಗದಂ–
ಮೆಯ್ದೋರೆ, ಕಂಪನಂ ಸುಳಿಯುತಿರೆ ಮತ್ತಮಾ
ಸೌಖ್ಯರಸಮುಕ್ಕುತಿರೆ ನಿಬ್ಬೆರಗಿನೊಳಿರ್ಪಳು.
ಉಭಯಾಶ್ರಮಂಗಳೊಳ್ ಸತ್ಯಶಿವ ಶರಣವ್ವೆ
ನಿತ್ಯದೊಳ್ ನೀರಜೀವನಂ ಜರಪುತ್ತ ಮೇಣ್

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ನೆ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮಂಗಳ್

ಭದ್ರಮಯಮಾತ್ಮ ಸೌಂದರ್ಯಮಂ ಬೀರುತ್ತ
ಬಾಳಿದಳ್ ತಾಯಿ ತಾನತ್ಯಾಶ್ರಮಿಯಾಗಿ !
ಸಂಚರಿಸಿಹುದು ಮಿರ್ರನೇ ಮಿಂಚಿ ಚಿಜ್ಜ್ಯೋತಿ
ಕಣ್ಣಿನೊಳ್ ವದನದೊಳ್ ಹೃದಯದೊಳ್ ಭಾವದೊಳ್ ! ೬೦
ಶರಣಾಯಿ ಶರೀರವೆ ತಾನೊಂದು ಜೀವಂತ–
ಮಾಶ್ರಮಂ ಚಿಚ್ಛಕ್ತಿಗಾದುದೊಂದಚ್ಚರಿಯೆ ?
ಈ ಶ್ರಮವ ಸಂಹರಿಸಿದವರ್ಗಾಶ್ರಮಂಗಳ್
ತಾವನೆನಿತಾದೊಡೇ ನಿವಂ ರೂಹಿಸಿದಾತ್ಮ
ಜ್ಯೋತಿಯೊಂದೆ ತಾನಲ್ತೆ ನೋಡೆ ಪರಮಾರ್ಥದೊಳ್ ?
ಜಡಾಜಡಗಳೆರಡುಂ ತಾವೊಂದೆ ತತ್ವದೊಳ್ !
ಕರದಿಷ್ಟ ಪೂಜೆಯದು ಮಾನವನ ಚಾರುತರ
ಚಾರಿತ್ರಸೌಧದಾ ಭದ್ರತರ ತಳಹದಿಗೆ
ಬುನಾದಿಯು ತಾನಲ್ತೆ ? ಭಾವಿಸಲ್ ಸಕ್ರಿಯಾ
ಶಕ್ತಿಯದು ಸಾಮಾನ್ಯ ತಾನಲ್ತು ಬಾಳಿನೊಳ್ ! ೭೦
ಕರದಿಷ್ಟ ಪೂಜೆಯದು ತನ್ನ ಪಾವಿತ್ರ್ಯದನು–
ಸಂಧಾನಮಾಗಿಹುದು, ಬಹಿರಂಗ ಮೇಣಂತ
ರಂಗಗಳ್ ಪರಶುದ್ಧಮಾದಪವು ; ಮತ್ತಮಾ
ಪೂರ್ಣತ್ವದತ್ತ ಸಾಗಲ್ಕೆ ಸಾಧನವಹುದು.

ಆಶ್ರಮಂ ಕೈಲಾಸಂ, ಶರಣನ್ನೆ ಶಾಂಭವಿಯು
ಮೇಣು ಗುರುದೇವನೇ ಪರಶಿವಸ್ವರೂಪಂ;
ಸರ್ವಾಂಗದೊಳ್ ವಿಭೂತಿಯಂ ಧರಿಸಿಹ ತಾಯಿ
ಹುಣ್ಣಿಮೆಯ ಬೆಳುದಿಂಗಳಂತೆವೊಲ್ ಮತ್ತಮಾ
ಮುಕ್ಕಣ್ಣನೊಸಲಲ್ಲಿ ಚಲುವಾಂತೆಸೆವ ಚಂದ್ರ ೮೦
ಕಲೆಯಂತೆ ಕಂಡಿಹಳ್ ಕಣ್ಣಿಂಗೆ ಗೌರದಿಂ ;
ಬೆಳುಮುಗಿಲ್ ಮೆಯ್ವೆತ್ತು ತಿರಗಿಳೆದು ಬಂದಂತೆ
ಸಾಲ್ದಡಲ್ ಪರಿದೆಯ್ದು ನಿಂತಂತೆ ಮತ್ತಮಾ
ಕರಸ್ಥಲ ಮೂರ್ತಿಯಾ ಮೊಗನೋಡೆ ಮುಕುರಾಗಿ
ಕರುವಿಟ್ಟ ತೆರದಂತೆ ರಾಜಿಸಿದಳಾ ತಾಯಿ ;

CC-0. Jangamwadi Math Collection. Digitized by eGangotri

ಪಿಂತೊರ್ಕೆ ಶಂಕರನನೊಲಿಸೆಯಾಶ್ರಮಕೆಯ್ದು
ಪಾರ್ವತಿಯೆ ಮುತ್ತಿಲ್ಲಿ ನೋನದಿಂ ಕುಳಿತಂತೆ !

ತಾಯಿಯಿಂ ಕಳೆಗೊಂಡವೆರಡೂರುಗಳಿರದೆ
ಕೈಲಾಸದಂತೆವೊಲ್ ಕೇದಾರದಂತೆವೊಲ್ !
ಶಾಂತಿಯಿಂ ದಾಂತಿಯಿಂ ನೇಣ್ ದಿವ್ಯಕಾಂತಿಯಿಂ
ತಾಂ ಬೆಳಗಿ ಬೆಳಗಿಸಿಹಳಾಶ್ರಮಗಳಂಗಳಂ
ಬೆಳುಜೊನ್ನಮಂ ತುಂಬಿ ತೊಳಗುತಿಹ ತಳಿಗೆಯೊಲ್,
ಕವಿಶೈಲಿ ಸಜ್ಜಲದ ಗುಡ್ಡಾಗಿ ನಿಂದವೊಲ್ !
ನಂದಿಬಟ್ಟಲಗಡುವು ಮೆಯ್ಯುಂಬ ಪೂತಂತೆ
ಸೂಜಿಮಲ್ಲಿಗೆ ಬಳ್ಳಿ ಬೆಡಗಿನಿಂ ಹೂತಂತೆ ;
ತಾಯಿಯ ತಪೋಧೇನು ಪಾಲ್ಗರೆದು ಪರಹಿದೊಲ್
ತೋರ್ಪವಾ ಕಂಬಳೀಹಾಳ್ ಸಜ್ಜಲಗುಡ್ಡಗಳ್ !

ನಲಿದತ್ತೆರಡೂರ್ಜನಂ ನಲಿದತ್ತೃತಂದಜನಂ
ತೊಲಗಿತ್ತು ಪ್ರಾಪಂಚ ತಾಪಮದು ತಾನಿರದೆ !
ಎರಡೂರ ಜನಂಗಳ್ ತಪಸ್ವಿಗಳೊಲೆಸೆದಿಹರ್
ಶರಣವ್ವೆತಾಯಿಯಾ ತಪಃ ಪ್ರಭಾವದಿಂದೆ !
ಶರಣ ಸಾನ್ನಿಧ್ಯತೇಜಸ್ಸದೇಂಗೆಯ್ಯದೋ ?
ಪುಟ್ಟಿದರ್ ತ್ಯಾಗಿಗಳ್, ಮೆಟ್ಟಿದರ್ ಯೋಗಿಗಳ್ ;
ಕಟ್ಟಿದರ್ ತಾಯಿಗಂ ಭವ್ಯಭವನಂಗಳಂ
ಕಟ್ಟಿಕ್ಕರಿಂ ಪುಣ್ಯಾಶ್ರಮ ಕುಚಿತಮಪ್ಪಂತೆ
ದಿಟ್ಟ ಕಬ್ಬಿಗನಿಂ ನಲ್ಗಬ್ಬಮುದಯಿಸುವಂತೆ !
ಕಳೆಯೇರಿದತ್ತಾಶ್ರಮಕೆ ಮತ್ತನಿತು ನೋಡು
ಕಲೆದುಂಬಿ ಬರುವಂತೆ ಕಬ್ಬಿಗನೆ ನೀಂ ಪಾಡು !
ಆಶ್ರಮಂ ತಾನಾಯ್ತು ತಾಯಿಗಂ ನಮೂಜಗಂ,
ತಪಃಸಾಧನಮಾಯ್ತು ಬಂದವರ ಶುಶ್ರೂಷೆ ;
ಮತ್ತಮಾ ನೊಂದವರ ಬಾಳಿಗಂ ನೆಮ್ಮದಿಯು.
ಪೊತ್ತು ಬಾನ್ನೆತ್ತಿಗೇರಿಯಿಳಿದ ಬಳಿಕಂ ತಾಯ್
ಮುಂಬಾಗಿಲ ಬಳಿಗೈತಂದಂಬಿಕೆಯಂತೆಯೋ–

CC-0. Jangamwadi Math Collection. Digitized by eGangotri

ಸಜ್ಜಲ ಶರಣಮ್ಮೆ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮಂಗಳ್

ಲಿಂಬಾಗಿ ಕುಳ್ಳಿರ್ದು ಬಂವರ ನೋವುಗಳ
ತುಂಬು ಹೃದಯದಿಂದಾಲಿಸುತಮುಪಚರಿಸುವಳ್
ಕಾಯ್ಪಣ್ಣು ತಂದವರ್ಗೆ ಕಾಯ್ವಣ್ಣುಗಳನು
ಪುರಿಗಡಲೆ ತಂದವರ್ಗೆ ಪುರಿಗಡಲೆಗಳನು
ತನ್ನಮೃತಮಯ ಹಸ್ತದಿಂದಿತ್ತು ಹರಸುವಳ್
ಕಷ್ಟಿ ಕಪ್ಪುರಂಟಿಸಿ ಮಂಗಳಂ ಪಾಡುವರ್ !
ಶರಣಮ್ಮೆ ಕಾಣುವಳ್ ಸರ್ವರಂ ಮಕ್ಕಳೊಲ್
ಜೇಳಿಹಳ್ ನೋವು ನಲ್ಮೆಗಳೆರಡನಕ್ಕರಿಂ ೧೩೦

ನೋವಿನೊಳ್ ಕುಗ್ಗುವಳ್ ನಲುಮೆಯೊಳ್ ಹಿಗ್ಗುವಳ್
ಅವರವರ ಪರಿಗಳಂ ತಮ್ಮವಾಗಿಸಿಕೊಂಡು !
ಮಕ್ಕಳಿಲ್ಲದವರ್ಗೆ ಮಕ್ಕಳನ್ನಿತ್ತಿಹಳ್
ಮದುವೆಯಿಲ್ಲದವರ್ಗೆ ವದುವೆಯಾಗುವಂತೆಸ
ಗಿಹಳ್ ತಾಯಿ ತನ್ನ ತಪೋನುಷ್ಠಾನಬಲದಿಂ
ಬೇನೆಗಳ ಕಳೆದಿಹಳ್ ಮದ್ದಿಲ್ಲದೆ ಮಂತ್ರದಿಂ
ಮತ್ತಮಾ ತನ್ನ ಸತ್ಸಂಕಲ್ಪ ಶಕ್ತಿಯಿಂ
ನಿರಪೇಕ್ಷ ಲಿಂಗಾರ್ಚನ ಕ್ರಿಯಾಸಿದ್ಧಿಯಿಂ
ಕಾರುಣ್ಯ ಚಿನ್ಮೂರ್ತಿ ಗುರುಚರಣ ಸ್ಮರಣೆಯಿಂ
ಮತ್ತಂ ವಿಶುದ್ಧಮಾದ ವಿಭೂತಿ ಮಹಿಮೆಯಿಂ ೧೪೦
ಬಿಡಿಸಿಹಳ್ ದೆವ್ವಗಳ ಜೇಷ್ಟೆಯಂ ಗಾಳಿಯಂ
ಗ್ರಹದೋಷ ದುಃಸ್ವಪ್ನ ಮೊದಲಾದ ಪೀಡೆಗಳಂ
ಕರುಣಿಸಿಹಳವರವರ ಮನದ ಮುಂಗಜ್ಜಗಳಂ !

ಲಿಂಗಪೂಜಾನುಷ್ಠಾನಕೆ ಮಿಗಿಲ್ ತಪಮಿಹುದೆ–
ಮುಂಗಳಕೆ, ರಸಸಿದ್ಧಿಯಿಪ್ಪುದೇ ವೈದ್ಯಕ್ಕೆ ?
ಯೋಗಮಿಪ್ಪುದೇಂ ಮನ ಸಂಯಮನಕಾರ್ಯಕ್ಕೆ ?
ಜ್ಞಾನಮಿಪ್ಪುದೇಂ ಮಿಗೆ ಪಾಂಡಿತ್ಯದಾರ್ಜನೆಗೆ ?
ಜನ್ಮಮಿಪ್ಪುದೇಂ ಲೋಕಕಲ್ಯಾಣ ಮಣಿಹಕ್ಕೆ ?
ತನ್ನರಿವೆ ಯಿಪ್ಪುದೇಂ ಲಿಂಗಾರ್ಚನೆಯನುಳಿದು ? ೧೪೦
ಲಿಂಗದೊಳು ಸಂಗಡಿಸಿಹವು ಮಂತ್ರಮಣಿ ಮತ್ರ–

CC-0. Jangamwadi Math Collection. Digitized by eGangotri

ಔಷಧಿಗಳಲ್ಲದಲೆ ಮೂಲೋಕವೆಲ್ಲವುಂ
ಮತ್ತಮೀ ಲೋಕಮುಂ ತಿಂದು ತೇಗುತ್ತಿರ್ಪೀ
ಕಾಲಕರ್ಮಮಾಯೆಗಳಂ ಗೆಲ್ವ ಶಕ್ತಿಯುಂ ;
ಇದನರಿದು ಲಿಂಗಪೂಜಾನಿಷ್ಠಳಾಗಿಹಳ್ !
ಬೆಳೆಯಿತಿದರಿಂದಾಶ್ರಮದ ಪರಮಪ್ರಭಾವಂ
ಮತ್ತಮಾ ಪರಿಕರಂ ಶರಣಾಯಿ ವ್ಯಕ್ತಿತ್ವಂ !
ಶಾರದೆಗೆ ಸತ್ಯಲೋಕಂ ಮತ್ತೆ ಶಾಂಭವಿಗೆ
ಕೈಲಾಸಂ ತಾವಿರ್ಪ ತೆರದಂತೆ ಆಶ್ರಮಂ–
ತಾನಿಹುದು ತಿಳಿಯಲ್ಕೆ ಸಜ್ಜಲಶರಣಾಯಿಗೆ !
ಸಕಲ ಸಂಸಿದ್ಧಿಗಳ ತಂದಿಹುದು ತಾಯಿಗೇ !! ೧೫೦
ಧನ್ಯಮಾಶ್ರಮಪದಂ ಧನ್ಯಳಾ ಶರಣವ್ವೆ
ಧನ್ಯರಯ್ ಶರಣಾಗತ ಸಮಸ್ತ ಜನಂಗಳ್ !

ಹರಿದಿಹುದು ಕಿರಿದಾದ ಹಳ್ಳಿಂದು ಬಳಿಯಲ್ಲಿ
ತಿಳಿತಿಳಿಯ ನೀರಿನಿಂ ಜುಳುಜುಳು ನಿನದಿಸುತ್ತ
'ಸಜ್ಜಲ' ವೆಸರಂ ಸಲ್ಲುವಂತೆವೊಲೆಸಗುತ್ತ
ಶರಣವ್ವೆ ಸಚ್ಚರಣ ಸೋಂಕಿನಿಂ ಸುಳಿಯುತ್ತ
ಸಯ್ಪಿನಿಂ ಸಡಗರಿಸಿ ತೀರ್ಥರೂಪಂ ದಳೆಯುತ
ಸಾಗಿ ಸಾಗಿ ಹೋಗುತ್ತಿಹುದು ಮಿಂದಿವರ ಮುಡಿ–
ಮಾಡುತ್ತ ಮತ್ತಮಾ ಮೈಕೊಳೆಯ ಕಳೆಯುತ್ತ
ಹರಿಯುತಿದೆ ಸಜ್ಜನರ ಮಾನಸವ ಹೋಲುತ್ತ ! ೧೬೦
ತಾಯಿಯಾ ಕಾರುಣ್ಯರಸಂ ಜನಹೃದಯಕ್ಕೆ
ತಾನಿರದೆ ಹರಿವಂತೆ. ಹರಿದು ಸಯ್ಪೀವಂತೆ !

ಆಶ್ರಮದ ಮಗ್ಗುಲೊಳ್ ಹೊಕ್ಕು ತುಂಬು ಬಾವಿಯ
ನೀರ್ಗುಡಿದು ನಾರ್ಪೀನೆ ಹೆಚ್ಚಿತ್ತು ಜನರಲ್ಲಿ ;
ತಾಯಿಗುಂ ತಾನಾಗಿ ಕುಂಟುತ್ತ ನೀರ್ತರಲ್
ಮೇಣು ಬಟ್ಟಿಡೊಳೆಯಲ್ ಜೇರೆಡೆಗೆ ಪೋಗುತಿರೆ,
ದಾರಿಯೊಳ್ ಕೊಮನೂರ ಕುಂಬಾರ ಕರಿಬಸವ–
ಪ್ಪಮ್ಮಡಿಯ ಕಂತೆಪ್ಪ ಮೊದಲಾದವರೆದುರಾಗಿ

CC-0. Jangamwadi Math Collection. Digitized by eGangotri

'ಅಲ್ಲಮ್ಮಕ, ನಾನ ಸದಾ ಧ್ಯಾನ ಮಾಡತೀನಿ,
ಲಿಂಗಪೂಜೆಯ ಮಾಡತೀನಿ ಎನ್ನುತ್ತಿ ಹೀ–
ಗಿದ್ದಾಗ ದೇವರೀ ನಾರು ಹುಣ್ಣಾನು ನಿಮ್ಮಂ–
ತವರಿಗೆ ಅಪೇಕೆ ತರಬೇಕು ? ನಿಮ್ಮಂತವರಿಗೆ
ನಿಮ್ಮಶಿವ ಹೀಗ್ಯಾಕ ತ್ರಾಸ ಕೊಡಬೇಕವ್ವ'
ಎಂದು ಮೂದಲಿಸೆ ; ಕೇಳಂತು ತಾಯ್ ಪೇಳಹಳ್ :

'ಅಲ್ಲೆಪಾ, ನೀವು ಬಿತ್ತಿದ ಬೀಜ ಬೆಳೆಯುಬೇ
ಕಾದ್ರು ಕೆಲವು ದಿವ್ಸಾ ಹ್ಯಾಗ ಬೇಕೋ ಹಾಗೆ
ನನಗು ಆ ಶಿವಪೂಜೆಯ ಫಲ ತಟ್ಟಬೇಕಾದ್ರು
ಕೆಲವು ಕಾಲ ಬೇಕ್ರಪ, ಈಗನೀ ತ್ರಾಸು ಹಿಂ–
ದಿನ ಜನ್ಮದ ಕರ್ಮದ ಫಲದಿಂದ ಬಂದದ್ದು.'
ಎಂದುತ್ತರಿಸಿದಪರ್ ಸ್ಪಷ್ಟದಿಂದುಚಿತದಿಂ !
'ಓ ಯವ್ವಾಕ, ನಿನ್ನನ್ನು ಮೂದಲಿಸಿ ಮಾತನಾ–
ಡಿದ್ದು ತಪ್ಪಾಯಿತು, ನಮ್ಮನು ಕ್ಷಮಿಸಬೇಕು ;
ಓ ತಾಯಿ, ಒಳ್ಳೆ ಬುದ್ಧಿ ಹೇಳಿ ನಮಗ ತಿಳಿವ–
ಳಿಕೆಕೊಡ್ರಿ'– ಎಂದೆನುತ್ತ ತಾಯಿಗೆ ನಮಿಸಿಹರ್ !

ತಾಯವರ್ಗುತ್ತರಿಸಿದಂತೆವೋಲಾಶ್ರಮಂ
ತಾನೀಗ ವಿರಾಡ್ರೂಪದಿಂಬಳೆದು ನಿಂತಿಹುದು.
ಅಂದೊಂದು ಕೇವಲಂ ತಾಂ ಪರ್ಣ ಕುಟೀರಂ ;
ಇಂದದಂ ಶರಣಾಯಿ ವಿಶ್ವತೋಷ್ಣನಮಾದ
ಮಹಿಮೆಯಿಂ ಬಳೆದಿಹುದು ಬೃಹದಾಕಾರಮಾಗ !
ಉಭಯಾಶ್ರಮಂಗಳೊಳ್ ಸುಳಿಯುತಿದೆ ಶಿವಗಾಳಿ,
ಬದುಕಿಹುದು ಶಿವಶರಣ ಧರ್ಮವದು ; ಪ್ರಜ್ವಲಿಸು–
ತಿಹುದು ಶಿವಜ್ಞಾನವದು ಮತ್ತಂ ಪ್ರವಹಿಸುವುದು
ಶಿವಭಕ್ತಿ; ಕರದಿಷ್ಟ ಪೂಜೆಯಿಂ ಮಾನವಂ
ದೇವನಾಗಿರ್ಪನಯ್ ಪೇಳಲೇನಾಶ್ರಮವ ?

CC-0. Jangamwadi Math Collection. Digitized by eGangotri

ನಾಡೊಲಿದ ಶರಣನಿರೆ ಶರಣೊಲಿದ ನಾಡವಿರೆ
ನಾಡಿಗರ ಕಲ್ಯಾಣಕೆ ತುದಿಮೊದಲ್ ತಾನಿಹುದೇಂ ?
ಮತ್ತಮಾ ಸುಖಶಾಂತಿಗಳ್ಗೆ ಕೊರತೆಯದುಂಟೇಂ ?
ಮೇಣಹಾಭ್ಯುದಯ ನಿಶ್ರೇಯಂಗಳೊದಗವೇನ್ ?
ಶರಣನ್ವೆಯಾಶ್ರಮಂ ಸಗ್ಗಕ್ಕೆ ಮಿಗಿಲಾಯ್ತು,
ಶರಣನ್ವೆ ನಿಲವಸ್ಸಪೂರ್ಣಿಗಂ ಪಿರಿದಾಯ್ತು ;
ಊರೆರಡರೊಳಿಹ ಜನ ಹರನಗಣರಾಗಿಹರ್
ಶರಣಾಯಿ ಸೇವಕರ್ ಶರಣಸಂತತಿಯಹರ್
ಪಡೆದಿಹರ್ ಮನುಜ ಜೀವನದ ಜೀವನದ ಸಾರ್ಥಕ್ಯಮಂ,
ನೋಡಲ್ಕೆ ಮತ್ತಮಾ ಪರಮ ಪುರುಷಾರ್ಥಮಂ !
ಶಿವಶರಣೆ ಮತ್ತಮಾ ಶಿವಶರಣೆಯಾಶ್ರಮಂ
ತಳೆದಿಹವ್ ತತ್ತ್ವದಿಂ ಜೀವನೋದ್ದೇಶಮಂ !
ಶರಣನ್ವೆಯ ಶೈವೀ ತೇಜಸ್ಸ ಮೆಯ್ವೆತ್ತ
ನಿಂತಿರ್ಪುದಾಶ್ರಮದ ರೂಪದೊಳ್ ರಾಜಿಸುತ,
ಕಂಪಮಂ ಹರಡುತ್ತ ತಾನಿಹುದು ನೆಲಮದಂ,
ಸಜ್ಜಲವ ಪ್ರವಹಿಸುತ್ತಿಹುದು ಕಿರುವಳ್ಳದಂ
ಓಂಕಾರ ನಾದಮಂ ಗೆಯ್ಯುವುದು ಗಾಳಿಯದು
ಮತ್ತಮಾ ಶಿವಸ್ಪರ್ಶಮಂ ಸಮನಿಸುತಿಹುದು
ಸರ್ವಾಂಗಲಿಂಗ ಸಾಮರಸ್ಯಮೆ ಮೆಯ್ದಾಳ್ದ
ಸಂಗಡಿಸಿದಂತಿಹಳ್ ಸತ್ಯಶಿವಶರಣವ್ವೆ !
ಕಿರಿತನವನರುಹಲ್ಕೆ ನಡುಬಾಗಿ ನುಡಿನೀಗಿ
ನಡೆಸಾಗಿ ತಾನಿಹಳ್ ಶರಣವ್ವೆ, ಸೆಳೆದಿಹಳ್–
ಸರ್ವಜನ ಜಂಗುಳಿಯ ಹೃದಯಮಂ ಹದುಳದಿಂ !
ಏಂ ಕಾಂತಿ ದಿಟ್ಟಿಯೊಳ್, ಏಂ ಶಾಂತಿ ಚಿತ್ತದೊಳ್,
ಏಂ ಶಕ್ತಿ ನಿಸ್ಪೃಹದಿವರವೀವ ಹಸ್ತದೊಳ್
ಏಂ ತೃಪ್ತಿ ವರಪಡೆದ ಸರ್ವಜನ ಹೃದಯದೊಳ್ !

ಇಂತಿರುವರೊಳರಿಯಲ್ ಬಲದಿನ್ನಿ ಶ್ರೀಮಂತ
ಲಿಂಗೈಕ್ಯ ನೀಲಕಂಠ ನಾಡಗೌಡ ವಂಶಂ

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮಂಗಳ್

ಕಂಬಳಿಹಾಳ್ ಸಜ್ಜಲಗುಡ್ಡಂಗಳೆರಡಾಶ್ರ
ಮಂಗಳ್ಗೆ ತಾನಾಶ್ರಯಮುದಾಗಿ ನಿಂತಿಹುದು.
ಮತ್ತಮಾ ಜಾಲ್ಹಳ್ಳಿ ವೀರಭದ್ರಪಟ್ಟರ್
ಬಸರಕೋಡದ ಬಸವರಾಜಪ್ಪ ನಾಡಗೌ
ಡರ್ ಮೇಣು ಹುಬ್ಬಳ್ಳಿ ಕರಡಿಯವರು, ಗುಳೇದ
ಗುಡ್ಡದಾ ವಸ್ತ್ರದವರಾಶ್ರಮದ ಬಹಿರಂಗ
ಭಾಗಂಗಳಂ ಬೆಡಗಿನಿಂ ರೂಹಿಸಿಶ್ವರವರ್
ತಾಯಿಯ ಕೃತುಶಕ್ತಿಯ ಪರಿಣಾಮದಿಂದಾಗಿ ೩೩೦

ಕಂಬಳಿಹಾಳ್ ಸಜ್ಜಲಗುಡ್ಡಗಳೆರಡಿಂದು
ಸಕಲಸೌಲಭ್ಯಗಳನು ಪಡೆದಿಹ ಮಾದರಿಯ
ಗ್ರಾಮಂಗಳಾಗಿಹವು ವಿಜ್ಞಾನಯುಗದಲ್ಲಿ !
ವಿದ್ಯುತ್ತಿನ ದೀಪಂಗಳ್ ಬೆಳಗುತಿಹವಲ್ಲಿ
ಕುಡಿಯುತಿಹ ನೀರಿಂಗೆ ಬರಮಿಲ್ಲ, ಸಂಚಾರ
ಸೌಕರ್ಯವೊದಗಿಹುದು ಹೆದ್ದಾರಿ ತಾನಾಗಿ !
ಹಳ್ಳಕ್ಕೆ ನೆರೆಹಾವಳಿಯ ನಿಯಂತ್ರಣಮುಂಟು,
ಪಂಚಾಯ್ತಿ ಮೇಣಂಚೆ ಕಾರ್ಯಾಲಯಂಗಳಿಹವು ;
ಮಾಧ್ಯಮಿಕ ಪ್ರಾಥಮಿಕ ಶಾಲೆಗಳಿಹವು ಕಂತಿ
ಮಂತ್ರಯಾ ಪ್ರಯತ್ನವಿಶೇಷದಿಂ ಮಕ್ಕಳ್ಗೆ ! ೩೪೦

ಶಾಲೆಗಂ ಪೂರಕಮದಾಗಿ ತಾಯ್ಕುರುಣೆಯಿಂ
ನೂರೈವತ್ತು ಮಕ್ಕಳಿಗುಚಿತ ಪ್ರಸಾದ ನಿಲಯ
ಪ್ರತಿಷ್ಠಿತಮಾಗಿರ್ಪುದು ಯುಗಕ್ಕೆ ತಕ್ಕಂತೆ !
ತಾನಿಹುದು ಶಿಕ್ಷಕರ ವಾಸಕ್ಕೆ ವ್ಯವಸ್ಥೆಯು !
ತಾನೊದಗಿಹುದದು ಹೊಸ ಮನ್ವಂತರವಲ್ಲಿ
ತಾಯಿಯಾಗಿಹಳ್ ಮಾನುಷದೇವತಾರೂಪಳು !
ತನ್ನ ಮೇಣು ಜನತೆಯ ಜೀವನದ ಸೌಂದರ್ಯ
ದರ್ಶನಕೆ ಶರಣೆಯ ಮುಖಮೆ ಮುಕುರಮಾಗಿತ್ತು ;
ಮತ್ತೆ ಜನತೆಯ ಜೀವಜ್ಯೋತಿಗಂ ಮನವರಿಯೆ
ಮಾತೆಯಾ ಕಾರುಣ್ಯರಸಮೆಣ್ಣೆಯಾಗಿತ್ತು
ನಲಿಯುವರ್ ತಾಯಿಯಂ ನೆರೆನೋಡಿ ಕಣ್ತುಂಬ ;

CC-0. Jangamwadi Math Collection. Digitized by eGangotri

ಕೇಳುವರ್ ಪಿಸುದನಿಯ ನಸುನುಡಿಯ ಕವಿತುಂಬಿ–
ಸವಿಯಾಗಿ; ಸವಿಯುವರ್ ತಾಯಿತ್ತ ಹಸಾದಮಂ !
ಧನ್ಯತೆಯ ಭಾವಿಪರ್ ಜನರೆಲ್ಲ ಬಗೆದುಂಬಿ !!
ಮಾತೆಯಾ ಕಾರುಣ್ಯ ಕಡಲದೊಳ್ ಮುಳುಂಗಿ–
ದವರ್ಗಂ ದೊರಕುತಿರ್ದವು ಮುತ್ತುರತ್ನಂಗಳು !
ಮಾತೆಯೆರ್ದೆ ತೋಂಟಮಂ ಪ್ರೇಮದಿಂ ಪೊಕ್ಕರ್ಗೆ
ಲಭಿಸುತಿರ್ದವು ಬಗೆಬಗೆಯ ಬೆಡಗಿನ ಹೂಗಳು !
ಶರಣವ್ವೆ ಕರುಣೆಯಿಂ ಭಿಸಿತಮಂ ನೊಸಲೊಳಿಡೆ
ತಾಂತೊಡೆದು ಪೋಗುತಿತ್ತದಂ ಬಿದಿ ಬರೆಹವು ! ೨೭೦
ಶರಣವ್ವೆ ಕಾರುಣ್ಯದೃಷ್ಟಿಯಿಂ ನೋಡುತಿರೆ
ಹರಿದು ಹೋಗುತಿತ್ತದು ಜನಮನದ ವಿಕಾರವು !
ಪೆರ್ಚಾಗಿ ಪೇಳಲೇಂ ಶರಣವ್ವೆ ಸುವಿಚಾರಿ
ಸದಾ ಪೂಜಾನುಷ್ಠಾನವಿಹಾರಿ ಮಹೇಶ್ವರಿ,
ಸಮಸ್ತ ಜನಾಸುರಾಗಿ ಮೇಣ್ ಮಹಾವಿರಾಗಿ,
ಗುರುಲಿಂಗ ಜಂಗಮಪ್ರೇಮಿ ಚಿತ್ತಸಂಯಮಿ,
ಮತ್ತಮನುಕಂಪ ಹೃದಯಿ ಚಿನ್ಮಯಿ ಶರಣಾಯಿ,
ಪ್ರಿಯಭಾಷಿ ಪ್ರಿಯವೇಷಿ ಸತ್ಯಶಿವರೂಪಶಿ,
ಸುಗುಣಮಣಿ ಮೇಣು ಪಂಚಾಚಾರ ಚಾರುಖನಿ,
ರುದ್ರಾಣಿ ಮತ್ತಮಾ ಮೃಡಾಣಿ ಸ್ವರೂಪಿಣಿ ; ೨೭೫
ಇಂತಿರ್ಪ ಶರಣವ್ವೆ ವಾಸವಾಗಿರುತಿರೆ
ಆಶ್ರಮಂ ಕೈಲಾಸವಾಗದೇಂ ಪೇಳಿರೀ !

ವಿದ್ಯುದಾಕರ್ಷಣಕೆ ಮಿಗಿಲಾದಾಕರ್ಷಣ
ಶಕ್ತಿ ಶರಣವ್ವೆಯಲ್ಲಿತ್ತು, ಗುರುವಿನಾಕರ್ಷ–
ಣೆಗೆ ತಾನೊಳಗಾಗಿರ್ದಡೆ ತನ್ನ ಆಕರ್ಷ-
ಣೆಗೆ ನಾಡಜನರಾಕರ್ಷಿತರಾಗಿರ್ದರೈಸೆ !
ತನ್ನೊಳಗೆ ಗುರುವು ಬಿತ್ತಿದ ಬೀಜಮಂತಾನು
ತನ್ನ ಹೃದ್ಭೂಮಿಯೊಳ್ ನೆರೆ ಮೊಳಸಿ ಬೆಳಸಿಹಳ್
ಶಾಖೋಪ ಶಾಖೆಯಾಗಿ ಮತ್ತಂ ಹಚ್ಚಹಸು

CC-0. Jangamwadi Math Collection. Digitized by eGangotri

ಸಜ್ಜಲ ಶರಣವ್ವೆ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮಂಗಳ್

ರಾಗಿ ಮೇಣ್ ಹೂವಾಗಿ ಹಣ್ಣಾಗುವಂತೆವೊಲ್ !
ಲಿಂಗಪೂಜೆ ಮತ್ತಂ ಮಂತ್ರಜಪಮಾಮಂತ್ರಾ–
ರ್ಥ ಭಾವಂಗಳಧ್ಯಯನವೊಂದು ತಾಂ ತಪಸ್ಸು.
ಆ ತಪಸ್ಸಿನಿಂದಾತ್ಮಾನುಭವ ಬ್ರಹ್ಮತಾ–
ನಾಗಿ ರೂಪುಗೊಳ್ಳುವುದೇ ಜೀವನ ಸಂಸಿದ್ಧಿ ;
ಕಾಯದಿಂದಕಾಯಕೆ, ಭಾವದಿಂ ನಿರ್ಭಾವಕೆ,
ಮಾಯದಿಂದಮಾಯಕೆ, ಶಬ್ದದಿಂ ನಿಶ್ಯಬ್ದಕೆ–
ತಾನೆಯ್ದುವುದೆ ಜೀವನದ ಚರಮಸಂಸಿದ್ಧಿ !
ಅನಾಹತ ನಾದದೊಳ್, ಜಲಮಿರದ ಬಿಂದುವಿನೊಳ್,
ತೇಜೋಮಯ (ರೂಪಿರದ) ಕಲೆಯೊಳ್ ತಾನಿಹುದೆ ಸಂಸಿದ್ಧಿ !!
ಮಾತೆಯಾ ರೋಮರೋಮಂಗಳವು ಚಿತ್ಕಳೆಯ
ಕಿರಣಂಗಳಾಗಿ ತೊಳತೊಳಗಿರ್ದವು ನೋಡಲ್
ವಿಭಾವರಿಯಾಕಾಶ ತಾರೆಗಳ ತೆರದಂತೆ ;
ಆಂಗಾಂಗಗಳಿಗೆಲ್ಲ ಧರಿಸಿರ್ದ ಭಸ್ಮಕಣ
ಗಳೆಲ್ಲವು ಚುಕ್ಕೆಗಳ ತೆರದಂತೆ ತೋರ್ದವು ;
ಮೇಣ್ ಬಟ್ಟಬಯಲಿನಾ ನೀಹಾರಿಕೆಗಳಂತೆ !
ತಾರೆಗಳ ತಿಂತಿಣಿಯೊಡವೆರೆದಿರುಳ ಮುಗಿಲೊಲ್
ಶರಣವ್ವೆ ತಾನಿರ್ದಳರಿಯಲ್ಕೆ ಕಳೆಯಾಗಿ–
ವಿಭುವಾಗಿ ಮತ್ತಮಾ ಸತ್ತಾಗಿ, ಪಿಂಡಾಂಡ
ದಲ್ಲಿ ಬ್ರಹ್ಮಾಂಡವಿಹುದೆಂಬುದಂ ದಿಟಗೊಳಿಸಿ !
ಗುರುವಿನಿಂ ದೀಕ್ಷೆಯಂ ಕೆಯ್ಕೊಂಡು ಫಲದಿಂದೆ
ಸಾಧಿಸಿದಳಳ್ಕುರಿಂ ಹಠಯೋಗಿ ಪಾಂಗಿನಿಂ ;
ಮಂತ್ರಸಿದ್ಧಿಯಿಂ ಮಂತ್ರಯೋಗಿನಿಯಾಗಿಹಳ್ ,
ಲಯಯೋಗವನಳವಡಿಸಿಕೊಂಡಿರ್ದಳ್ ತಾಯಿ,
ಮೇಣ್ ರಾಜಯೋಗಮಂ ಶರಣವ್ವೆ ತಾಂ ತೀರ್ಚಿ
ಶಿವಯೋಗದೊಳ್ ಪಳಗಿ ಶಿವಯೋಗಿನಿಯೆನಿಸಿಹಳ್ !
ಆಶ್ರಮದ ಜೀವನವ ಸಾರ್ಥಕಂ ಪಡಿಸುತ್ತ
ಮೇಣು ಲಿಂಗಾಚಾರದೊಳ್ ಲೀನಳಾಗುತ್ತ
ಜಸತಂದಿಹಳ್ ತನ್ನ ಯಾಚಾರ್ಯವರ್ಯಂಗೆ

CC-0. Jangamwadi Math Collection. Digitized by eGangotri

ಸಜ್ಜಲಶರಣಪ್ಪೆ ಕಂಬಳಪಾಳ್ ಸಜ್ಜಲಗುಡ್ಡ ಆಶ್ರಮಂಗಳ್

ಮತ್ತಮಾ ಕೆಯ್ಯೊಂಪ ವೀರಶೈವಾನ್ವಯಕೆ
ಶರಣಧರ್ಮಕೆ ಮತ್ತೆ ತೊಟ್ಟಕಾಷಾಯ ವೇಷಕೆ ! ೩೧೦
ಅಂಗಗ್ರಹಮಂಬಿಟ್ಟು ಲಿಂಗಗೃಹಮಂ ಪೊಕ್ಕು
ಲೋಕಪತಿಗಾಸಿಸವೆ ಲಿಂಗಪತಿಯಂ ವರಿಸಿ
ಗೆಯ್ದಿಹಳ್ ಲಿಂಗಸಂಗದೊಳ್ ಸಂಸಾರಮಂ
ದಿವ್ಯಮಂ ಶಿವಾಚಾರ್ಯಕೊಪ್ಪುವ ಪಾಂಗಿನೊಳ್ !
ಉಭಯಾಶ್ರಮಂಗಳಂ ವೀರಶೈವಾಚಾರ
ದಿಂದತ್ಯಾಶ್ರಮಂಗಳನಾಗಿಸಿಹಳಾ ಮಾತೆ !
ಸಾಧನವ ಸಿದ್ಧಿಗೊಯ್ವುದಂ ಸಾಹಸಮಲ್ತೆ ?
ಸ್ವಾಂತ ಶಕ್ತಿವಂತಂ ನೋವೆನಿತೊದಗಿದಡಂ
ಧೃತಿಗೆಡದೆ ಸಪ್ಪೈಯ ಸಾಧನಂಗೆಯ್ಯುವನ್ ;
ಸಾಧಿಪಳ್ ತಾನಂತೆ ಶರಣವ್ವೆ ಧೈರ್ಯಮಂ ! ೩೨೦
ಗೆಯ್ದಿಹಳ್ ಸಾಧನಂ ಶೋಧನಂ ಸ್ವಾಂತದೊಳ್
ತಾಳ್ದಹಳ್ ಶಾಂತಿಯಂ ದಾಂತಿಯಂ ಚಿತ್ತದೊಳ್ !
ಬಾಲ್ಯದೊಳ್ ತಾಯಿಯಿಂ ಲಭಿಸಿರ್ದ ಸಂಸ್ಕಾರ–
ಸಂವಿತ್ತಿ ತಾನಾಯ್ತು ಕಟ್ಟಟ್ಟ ಬಾಳ್ವತ್ತಿ ;
ಅದರಿಂದೆ ಮುನ್ನುಗ್ಗಿ ಪಡೆದಿಹಳ್ ನಿಷ್ಪತ್ತಿ !
ಚಿಕ್ಕದೇಂ ಶರಣವ್ವೆ ಸಾಧಿಸಿದ ಸಂಪತ್ತಿ ?
ತನ್ನತಾಯ್ ಲಿಂಗಮ್ಮ ನೆರೆನೂತುದುದನಿಂದು
ನೆಯ್ದಿಹಳ್ ಶರಣವ್ವೆ ಸ್ವಯವಾಗಿ ನಯವಾಗಿ !
ಸಾಧಕೆಯು ಸಾಧಿಸಿದ ಸಾಧನಂಗಳ್ಗೆ ಮೇಣ್
ಸದ್ಭಾವನಂಗಳ್ಗೆ ಕಾವ್ಯರೂಪಮಂ ಕುಡುವ ೩೩೦
ಕವಿಯ ಕ್ರಮಶಕ್ತಿ ತಾನದರಿಯಲ್ ಕರಿಯದೇಂ ?
ಅಪ್ರತಿಮ ಪ್ರತಿಭೆಯಿಲ್ಲದೆ ತಾನಳವಡುವುದೇಂ ?
ಶರಣವ್ವೆ ಸಾಸದಿಂ ಕಟ್ಟರ್ಪ ಪುಣ್ಯಾಶ್ರ–
ಮಾಂಗಮಿದು ತೆರುವಾಗಿ ನಿಂತಿಹುದು, ತ್ವರಿತದಿಂ–
ತುಂಬಿ ಬರುವಂತಾಗಲಿ ನವಚೈತನ್ಯಮದು
ಶರಣಾಯಿ ವ್ಯಕ್ತಿತ್ವಕೆಣೆಯಾದ ಶಕ್ತಿಯಿಂ !
ಕೊನೆಯಾದ ಚಿತ್ರಮಂ ಪರಿಪೂರ್ಣಗೊಳಿಸಲ್ಕೆ

CC-0. Jangamwadi Math Collection. Digitized by eGangotri

ಸಜ್ಜಲ ಶರಣಾಸ್ತ್ರಿ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮುಂಗಳ್

ಮೆಯ್ಸ್ತ್ರಿತ್ತು ಬರುವಂತೆ ಹರಸಲಾ ಶರಣಾಸ್ತ್ರಿ !
ಬರಿದಾವ ಮುಹೋನ್ನತದ ಮಹಿಳಾ ಪೀಠಕ್ಕೆ
ಮಹಿಳೆಯೇ ಬರುವಂತೆ ಹರಕೆಗೆಯ್ ಮಾಮಾತೆ ;
ಪುರುಷಪೀಠಂಗಳಿಹವನೆನಿತೋ ನಾಡೊಳಗೆ !
ಶಕ್ತಿಪೀಠಂಗಳಕೊರತೆ ಸಾಕನಿಶಿಹುದಾ !!
ಬಾಯಾರಿ ಬಿಸಿಲ್ಗುದುರೆಯ ನಂಬಿ ಬೆಂಬತ್ತಿ
ಬಸವಳಿವ ಬಗೆಯಂತೆ ನೀನೆಸಗದಿರೋ ಮಾತೆ !
ಕಂಬಳೀಹಾಳದಂ ಶಂಭು ಶಿವ ಶಂಕರನ
ನಂಬುಗೆಯು ಜನರಲ್ಲಿ ತುಂಬಿಬರುವಂತೆಸಗಲಿ ;
ಸಜ್ಜಲದ ಗುಡ್ಡಿದಂ ಮುಂದು ಮುಂದಕೆ ಮನಕೆ
ಕಜ್ಜಲದ ಗುಡ್ಡವಾಗದಿರುವಂತೆ ಹರಸಂಬೆ !
ನೀನಿವಕೆ ಹೆತ್ತಾಯಿ ನೀಂತೊರೆಯೆ ಗತಿಯಾರು ?
ಪರದೇಶಿಯಾಗಿಸದಿರ್ ನಿನ್ನಾಶ್ರಮುಂಗಳಂ,

ಮೆಣ್ ನಿನ್ನನೆರೆನಂಬಿ ನಚ್ಚಿರ್ಪ ಜನಂಗಳಂ !
ನಿನ್ನಗಲಿ ಕಂಗೆಟ್ಟು ತಬ್ಬಲಿಗಳಾಗಿಹರು–
ದಾರಿತೋರದಿಹರಾ ಮತ್ತಿರುಳ ಬರಿಸದಿರು.
ದಾರಿಯಂ ದೋರಿಸುವ ಕುವರಿಯಂ ಕಳುಹಿಸಾ
ನಿನ್ನಂತೆ ಸತ್ಯಶಿವ ಶರಣೆಯಂ ಕರುಣಿಸಾ ;
ನಿನ್ನರಿಕೆ ನಂಮನಕೆ ನಿರಂತರ ವಿರುವಂತೆ ;
ಮೇಣು ನಿನ್ನಾರಾಧನೆಯ ತಪ್ಪದಂತೆವ್ರೊಲ್
ಮೂಳ್ಕಂತೆ ಕರುಣೆಗೆಯ್ ಕಳಾಮಯ ಸ್ವರೂಪಳೆ !
ತರಿಸಂದು ಬಾಳ್ವಂತೆ ಬಗೆಸಂದು ನಿಲ್ವಂತೆ
ನಿನ್ನಡಿಯ ಭಕುತಿಯಂ ಬಿಡದಂತೆ ಬಾಳಿಸಾ !

ಓ ತಾಯೆ, ನಿನ್ನಗಲಿ ಸೀಯುತಿವೆ ಕಣ್ಗಳಿವು,
ಬೇಯುತಿವೆ ನಮ್ಮೆಲ್ಲರ ಹೃದಯಂಗಳಕಟಾ !
ನಮಗಾದ ಗಾಯಕ್ಕೆ ಕಾಯ್ದ ಕಂಬಿಯಿಂ ನೀಂ
ಕೇಸದಿರ್ ಗಾಸಿಗೊಳಿಸದಿರ್ ವಿಭುಜೇತಸಳೆ !
ಸೈಸಲಾರೆವು ತಾಯೆ ಬಾಳಿಗೆ ಸಿಡಿಲ್ ಹೊಡೆದ
ತೆರದಂತೆ ಹೊಡಕರಿಸಿ ಹೆಮ್ಮೈಸುತಿರ್ಪೆವು ನಾವು !

CC-0. Jangamwadi Math Collection. Digitized by eGangotri

ಸಜ್ಜಲ ಶರಣಮ್ಮೆ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮಂಗಳ್

ನಮ್ಮನನುಗ್ರಹಿಸು ನೀಂ ಬಿಡದೆ ಹೃದಯದೊಳಿರ್ದು
ಸಮ್ಮುದಗೊಳಿಸೋ ಶರಣಮ್ಮೆ ನಂಬಿಹೆವು ನಿನ್ನ !
ನೀಂ ಕಲಸಿಹ ಬಸವೇಶ ವಚನಂಗಳಂ ನಾವ್
ಹಾಡುವೆವು ನಿತ್ಯದೊಳ್ ಬೆಳಗುಬೈಗುಗಳಲ್ಲಿ ! ೩೭೦

ಕಲ್ಯಾಣ ಬಸವನೊಳ್ ಭಕ್ತಿಯಿತ್ತು ತಾಯಿಗೆ
ಪ್ರೋಲ್ಲಾಸಗೊಳುತಿರ್ದ ರಂಬಿಕೆಯು ಪೂರ್ಣಚಂ
ದ್ರೋದಯಕೆ ಹೆಗ್ಗಡಲ್ ತಾನುಕ್ಕುಮೋಲಂತೆ ;
ಸಾದರದೆ ಸಂಚರಿಪಳಣ್ಣನಾ ನುಡಿಗಳೊಳ್
ತೆರಗಳವು ತೀರಕಪ್ಪಳಿಸಿ ತೇವಗೊಳಿಸುವ
ತೆರದೆ ಮಿದುಗೊಳಿಸುವಳ್ ಕರಣೇಂದ್ರಿಯಂಗಳಂ !
ಕಳವಿಂಗೆ ಕೆಯ್ಮಾಡಲಿಲ್ಲ ಮನಮಾಡಲಿಲ್ಲ
ಸುಳ್ಮಾಡಲಿಲ್ಲ ನಾಲಗೆ ಮತ್ತಮೆಂದೆನಿತು,
"ತನ್ನ ಬಣ್ಣಿಸಲಿಲ್ಲನ್ಯರಂ ಪಳಯಲಿಲ್ಲ ;
ತನ್ನೊಳಗೆ ನಿತನ್ನೆಯನೆಂದು ಚಿಂತಿಸಲಿಲ್ಲ. ೩೮೦
ಕಂಡುದಂ ಕಾಣಲೆಳಸಲಿಲ್ಲಾ ಶರಣಾಯಿ,
ಉಂಡುದಿಲ್ಲೊಡಲ ಹಸಿವಿಗಾಗಿ ಪ್ರಸಾದಮಯಿ ;
ಅಂಗಶೃಂಗಾರಕೆಳಸಿ ಭಂಗಗೊಂಡವಳಲ್ಲ ;
ಲಿಂಗಸಿಂಗಾರಮಂ ಕಾಣದಿರುವವಳಲ್ಲ.
ಜಗದ ಜಂಗುಳಿಗಳ್ಗೆ ಬೆಂಗೋಲವನ್ನೆತ್ತಿ
ಬಗೆಗೆಡಿಸಿ ಕಾಡುತಿಹ ಮಾಯೆಗಂಜಿದವಳಲ್ಲ.
ಅಲ್ಲದುದ ಮಾಡದಲೆ ಸಲ್ಲುವುದ ಬಿಡದಲೆ
ಸಲ್ಲಿದಳ್ ಲೋಕಕ್ಕೆ, ಸಲ್ಲಿದಳ್ ಪರಮಕ್ಕೆ !
ಕಾಯ ಕತ್ತಲೆಗೆ ಜೀವಜಂಜಡಕೆಳಸಲಿಲ್ಲ ;
ಸುತ್ತಿರ್ವ ಪ್ರಪಂಚಕೆ ಕಿಂಚಿತ್ತೆಳಸಲಿಲ್ಲ, ೩೯೦
ಕಾಮಕೋಪಲೋಭಂಗಳ್ಗೆ ಸಿಕ್ಕವಳಲ್ಲ ;
ಮೋಹಮದ ಮತ್ಸರಂಗಳನರಿತವಳಲ್ಲ.
ಬರಿದೆ ತನ್ನ ಮನದಾಸೆಯ ಸುಳಿಗಳೊಳಗೆ ಮಿಗೆ
ತೆರಣಿಯ ಪುಳುವಿನಂತೆ ಸುತ್ತಿ ಸತ್ತವಳಲ್ಲ.

CC-0. Jangamwadi Math Collection. Digitized by eGangotri

ಸಜ್ಜಲ ಶರಣಾಪ್ತೆ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮಂಗಳ್

ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ
ಬಂದೊದಗು ನೂರಾರು ನೋವ್ಗೆ ನೊಂದವಳಲ್ಲ,
ಎರೆಯಂತೆ ಕರಕರಗಿ, ಮಳಲಂತೆ ಜರಿಜರಿದು,
ಕನಸಿನೊಳ್ ಕಳವಳಿಸಿ ಕಳೆಗುಂದಿದವಳಲ್ಲ.
ವಿಷಯಕ್ಕೆ ಸುಳಿಸುಳಿದು ಪರಿದು ಪೋದವಳಲ್ಲ.
ಅರಸಿಕಂಡಳು ಬೆರಸಿ ಸೊಗಸಿಹಳಾತ್ಮ ಸೊಗವ ! ೪೦೦
ಆಲಿಸಿದಪಳ್ ಗುರೂಪದೇಶವ, ಲಾಲಿಸಿದ–
ಪಳ್ ಗುರೂಪದೇಶವ; ಪಾಲಿಸಿದಪಳ್ ಗುರೂ–
ಪದೇಶವ ಶರಣಾಪ್ತೆ ಕೆಯ್ಪಿಡದೆ ಜೀವನದೆ !
ಹಿಂಡಗಲಿ ಹಿಡಿವಡೆದ ಕುಂಜರದ ಪಾಂಗಿನಿಂ
ಮನಗಂಡು ತನ್ನಾತ್ಮಲಿಂಗಮಂ ನೆನೆದಿಹಳ್ ;
ಬೆಂಬಿದ್ದ ಭವಬಂಧನವ ಹರಿದು ಹಾಕಿದಳ್;
ಕರ್ಮಜನ್ಮವ ತೊಡೆದು ಧರ್ಮಪಥದೊಳ್ ಸಾಗಿದಳ್
ಒಳಗೆ ಶೋಧಿಸಿ ಹೊರಗೆ ಶುದ್ಧವಾದಳು ತಾಯಿ !
ಒಳಹೊರಗು ತೋರುತಿಹ ಬಿರುಕುತನ ಮುಚ್ಚಿಹಳ್
ಬಿಚ್ಚಿಹಳ್ ತನ್ನೆದೆಯ ಬರುವ ಭಕ್ತರಿಗಾಗಿ ; ೪೧೦
ಹಾಲೊಳಗೆ ಹಾಲು ಬೆರಸಿದ ತೆರದಿ ಮಾಡಿದಳ್
ಸ್ಫಟಿಕ ಘಟದೊಳ್ ಬೆಳಗಸಿಟ್ಟಂತೆ ಬೆಳಗಿದಳ್ !
ಗುರುದೇವ ಕರುಣದಿಂ ಲಿಂಗಮುಂಕಂಡಿಹಳ್
ಗುರುದೇವ ಕರುಣದಿಂ ಜಂಗಮವ ಕಂಡಿಹಳ್
ಗುರುದೇವ ಕರುಣದಿಂ ಭಸ್ಮಮಂ ಕೊಟ್ಟೊಡಿಗೆಯಂ
ಮತ್ತಮಾ ಪಾದೋದಕ ಪ್ರಸಾದವ ಕಂಡಿಹಳ್ ;
ಕಂಡಂತೆ ಭಕ್ತರ್ಗೆ ತೋರಿಹಳ್ ಕರುಣೆಯಿಂ
ಶಿವಶರಣ ವಚನಾಮೃತಸಾರಮಂ ಮನಪಣೆಯೆ !

ಆಶ್ರಮದೆ ರಚಿಸಿಹರ್ 'ಅಣ್ಣನಾ ಬಳಗ' ಮೇಣ್ ೪೨೦
'ಅಕ್ಕನಾ ಬಳಗಂ' ಗಳಂ ನಡೆಯಿಸಿಹರ್ ನುಡಿ–
ಯಣಿಗಳಂ ಮೇಣು ನಡೆಯಣಿಗಳಂ ಕೆಯ್ಪಿಡದೆ
ವಾರವಾರಂ ಪರಿಮಿಡಿದು ಗುರು–ಸೋಮವಾ–

CC-0. Jangamwadi Math Collection. Digitized by eGangotri

ರಂಗಳೊಳ್ ಮಕ್ಕಳ್ಗಿ ಮತ್ತಂ ಮಹಿಳೆಯರ್ಗೆ !
ಸೇರುತಿರ್ದರ್ ಕಂಬಳಿಹಾಳ್ ಕೋಡಿಹಾಳ್ ಕೋಮು–
ನೂರು ಪಾಠಶಾಲೆಯ ಬಾಲಕರ್ ಮುಚ್ಚಂಜೆ
ಹೊತ್ತಿನೊಳ್ ಸಾಲಾಗಿ ನಿಲ್ಲುತಂ ಶರಣರಾ–
ಸೂಳ್ನುಡಿಗಳಂ ಪೇಳುತಿರ್ದರ್ ಸೊಗಸಾಗಿ ತಾವ್
ಕಂಠೋಕ್ತಮಾಗಿ ಕಲರವದೊಳೊಕ್ಕೊರಳಿನೊಳ್ !
ನಂತರಂ ತಾಯಿಗಳ್ ಬೋಧಿಪರ್ ಶಿವಾನು–
ಭಾವದುಂ ಭಾವ್ಯಮುಂ ಮಕ್ಕಳ್ಗೆ ತಿಳಿವಂತೆ ; ೪೩೦
ಮುಕ್ತಾಯಗೊಳುತಿತ್ತು ಮಂಗಳಾರತಿಯೊಡನೆ
ಮಂಗಳದ ತಟ್ಟೆಯೊಳ್ ಸಲ್ಲಿಸಿದ ಕಾಸುಗಳ
ಶೇಖುಸಿ ವರುಷಕೊರ್ಮೆ ಹಂಪೆಯ ಹುಣ್ಣಿಮೆಗೆ
ಮಹಾದೇವಿಯಕ್ಕನ ಜಯಂತಿಯನಾಚರಿಪರು ;
ಪಡಿದಿನಂ ನಡೆವುದಯ್ ಹೆಂಗಳೆಯರ ಬಳಗಂ
ತಾಯುಸುರುವಳ್ ಮಹಿಳೆಯರಿಗು ಸವಿನುಡಿಗಳಂ !
ಪಾಡುವುದು ಪೇಳುವುದು ಕೇಳುವುದು ನಲಿಯುವುದು
ನರಸ ಸಮ್ಮೇಳವಾಗಿರ್ಪರಯ್ ತಾಯೊಡನೆ !
ವರು ವರುಷ ಶ್ರಾವಣದ ಮಾಸದೊಳ್ ಕಂಬಳಿಯ
ಹಾಳದೊಳ್, ವೈಶಾಖ ಮಾಸದೊಳ್ ಸಜ್ಜಲದ ೪೪೦
ಗುಡ್ಡದೊಳ್ ನಡೆವವ್ ಪುರಾಣ ಪ್ರವಚನಂಗಳು
ಮತ್ತೆ ಜಾತ್ರೆಗಳ್ ಜರಗುತಿರ್ಪವೆರಡೂರೊಳು
ಜಾತಿಮತ ಪಂಥಗಳ ಭೇದಭಾವಮಿಲ್ಲದೆ ;
ಶರಣವ್ವೆ ದರ್ಶನಕೆ ಜೈನ ಕ್ರೈಸ್ತ ಮುಸ್ಲಿಂ
ಮೊದಲಾದ ಸಕಲಮತಿಯರ್ ಬರುತಿರ್ಪರೈಕ್ಯದಿಂ
ಸಾತಿಶಯ ತವಕದಿಂ ಬಾಗುತಿರ್ದರ್ ತಾಯಿಗೆ !
ಬಂದವರ್ ನೊಂದೊಡಂ ಶರಣವ್ವೆ ನೋಯುವಳ್
ಬಂದವರ್ ನಲಿದೊಡಂ ಮಿಗಿಲಾಗಿ ನಲಿಯುವಳ್
ನೊಂದವರ ಹಿತಪ್ರಾಣಿ ಶರಣವ್ವೆಯಾಗಿಹಳ್
ಉಸುರಿನೊಳ್ ಪರಿಮಳಂ ತುಂಬಿರ್ಪ ತಾಯಿಗಂ ೪೫೦
ಕುಸುಮವನು ಮೂಸುವ ಹಂಗೇಕೆ ಹೇಳಯ್ಯ ?

CC-0. Jangamwadi Math Collection. Digitized by eGangotri

ಸಜ್ಜಲ ಶರಣವ್ವೆ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮಂಗಳ್

ರಸನೆಯೊಳ್ ಮಧುರರಸ ತಾನಿರ್ದ ತಾಯಿಗಂ
ಪೆರತೊಂದು ರಸವನಾಸ್ವಾದಿಸುವ ಹಂಗೇಕೆ ?
ಅಮೃತದಾಸ್ಯಾಯಸಂಗೆಯ್ದರ್ಗೆ ನೊಳ್ಪೊಡಂ
ಅಂಬಿಲದ ಹಂಬಲಂ ತಾನೇಕೆ ? ಮತ್ತಮಾ
ದಮೆ ಕ್ಷಮೆ ಶಾಂತಿ ಸೈರಣೆಯಿರ್ಪಲ್ ಸಮಾಧಿಯ
ಸವಿಯೇಕೆ ? ಪ್ರಾಣಮೇ ಲಿಂಗಮಾದ ಬಳಿಕಂ
ಏಕಾಂತಮೇನು, ಲೋಕಾಂತಮೇನು ಪೇಳಾ ?
ನೋಳ್ಪ ಜನರೆಲ್ಲ ಲಿಂಗರೂಪಂ, ಮಾತಾಡು
ತಿರ್ಪೆಲ್ಲ ಮಾತುಗಳ್ ಮೇಣ್ ಲಿಂಗ ಸ್ವರೂಪಂ ; ೪೬೦
ಮೇಣಾಲಿಸುತಿಹ ನುಡಿಗಳೆಲ್ಲಂ ಲಿಂಗಗಳ್
ತಾವಾಗಿರ್ದವಾ ಶರಣವ್ವೆಗಂ ನಿತ್ಯದೊಳ್ !
ಶರಣವ್ವೆಗಂತರಂಗ ಬಹಿರಂಗಗಳ್ ಲಿಂ–
ಗಗಳಾಗಿರ್ದವೆನಲ್ಕೆ ಪೆರತೇನು ಪೇಳಯ್ಯ ?
ಹಾವಿನಾ ಹಲ್ಲ್ಗಳೆದು ಹಾವನಾಡಿಸಬಲ್ಲ–
ಡೆ ಹಾವಿನ ಸಂಗವೇ ನೆರೆ ಲೇಸು ಕಂಡಯ್ಯ
ಕಾಯಗುಣಗಳೆಲ್ಲವ ಕಳೆದು ಕಾಯ ಸಂಗವ
ಮಾಡಬಲ್ಲಡೆ ಕಾಯ ಸಂಗವೇ ಲೇಸಯ್ಯ !
ಕಾಯಮಂ ತೊರೆದು ಚೈತನ್ಯಮೇನಿರಲಹುದೇ ?
ನೋಳ್ಪೊಡಂ ಪ್ರಾಣಲಿಂಗಮೊಲಿದುದೆ ಶಿವಸುಖಂ ! ೪೭೦
ಬೆಳಗು ಬೈಗುಗಳೆಂಬ ಕೊಳಗವಿದು ಜಾಗತಿಕ
ಜೀವಿಗಳ ಆಯುಷ್ಯರಾಶಿಯಂ ತಾನಳೆದು
ತೀರಿಸುತಿ ಹುದಿದನರಿದು ತ್ವರಿತದಿ ನೆನೆಯಿರೈ
ಲಿಂಗಮಂ ಮನಮಿಟ್ಟು ಬಳಿಕೆಲ್ಲ ಜನ್ಮಮಿದು !
ಗುರುವೆಂಬ ತೆತ್ತಿಗನ್ ಲಿಂಗವೆಂಬಲಗಮಂ
ಕೆಯ್ಯಲ್ಲಿ ಕೊಟ್ಟಹನ್ ನಿಷ್ಠೆಯಿಂ ಕಾದಲ್ಕೆ
ಗೆಲಲಹುದು ಹಗೆಗಳಾರಂ ಮೇಣು ವಿಷಯಂಗಳಂ,
ಮೇಣು ಗೆಲಲಹುದಹಂಕಾರಮಂ ಲಿಂಗಾಗಿ !
ಇಲ್ಲದಿರೆ ಹಮ್ಮೆಂಬ ಹಾವಮಿದು ನುಂಗುವುದು ೪೮೦
ತನ್ನನೇ ಬಿಡದಂತೆ, ಭವಂ ಬಿಡದು ಬಳಿಕಂ !

CC-0. Jangamwadi Math Collection. Digitized by eGangotri

ಶರಣವ್ವೆಯನಂಗನ ದಾಳಿಯಂ ಗೆಲಿದಿರ್ದ –
ಳನುದಿನಂ ನೋಟದೊಳ್ ಮತ್ತಮೀ ಮಾಟದೊಳ್
ಲಿಂಗಧಾರಣದಿಂದೆ ಸಂಗಸಮರಸದಿಂದೆ
ತನ್ನಂಗದಾಶ್ರಮದೆ ತಾನಿರ್ದು ನಿಚ್ಚಟದೆ !
ಕಾಣುತಿರ್ದ ಳವ್ವೆಯು ಲಿಂಗಮಂ ದೃಶ್ಯದೊಳ್
ಧರಿಸಿರ್ದ ಳನಂಗನ ಸುಟ್ಟುರುಹಿದ ಭಸ್ಮಮಂ !
ಲಿಂಗಮಂ ನಿತ್ಯದೊಳ್ ಪೂಜಿಸುತ ಪರಿಕಿಸುತ
ಪರಿಣಾಮಿಸುತಿರ್ದಳ್ ಪಾಡುತ ಪರಿಭಾವಿಸುತ !
ಪಾಡದೇ ಸೈರಿಸಳ್ ನೋಡದೇ ಸೈರಿಸಳ್
ಕೂಡದೇ ಸೈರಿಸಳ್ ಲಿಂಗದೊಳ್ ನಿತ್ಯದೊಳ್ ! ೪೯೦
ತಾಯಿಗಂ ಲಿಂಗಮೇ ಪ್ರಾಣಮದು, ತ್ರಾಣಮುದು,
ಮತ್ತಮಾ ಸರ್ವಸ್ವ ಜೈತನ್ಯಮಾದತ್ತು.
ಸಂದು ಸಂಶಯ ಮನಳಿದಿರ್ದಳ್ ಪರಿಪೂರ್ಣ
ಪ್ರಜ್ಞೆಯಿಂ ಮತ್ತಮಾ ಪರಮಾನುಭಾವದಿಂ !
ಜೀವವಿರುವೆಡೆಯಲ್ಲಿ ಕಾಣುತಿರ್ದ ಳವ್ವೆ
ಶಿವ ಸ್ವರೂಪಮಂ ಸದ್ಭಾವ ಸಿದ್ಧಿಯಿಂ !
ಕಾಣುವಳ್ ಪುರುಷರಂ ಸಹೋದರರಂತೆವೊಲ್
ಮತ್ತಮಾ ಸ್ತ್ರೀಯರಂ ಸಹೋದರಿಯರಂತೆ !
ತನ್ನ ನಿಲುವಿಂಗೆ ತಾನಳುಕಿ ನಡೆಯುತಿರ್ದಳ್
ಬಾನೆತ್ತರದ ನಿಲವನುಳಿಸಿಕೊಳ್ಳುತಿರ್ದಳ್ ೫೦೦
ಅಲ್ಲೆನಿಸಿಕೊಂಡವಳ್ ತಾನಲ್ಲ ಬಾಳಿನೊಳ್
ಸಲ್ಪಂತೆ ಬಾಳಿದಳ್ ಗುರುಲಿಂಗಜಂಗಮಕೆ !
ನಿಷ್ಕಾಮ ಸಕಾಮಂಗಳಂ ತಾಂ ನೆರಿಬಿಟ್ಟು
ಸಹಜ ಸಂಕಲ್ಪ ಕಾಷಾಯಮಂ ಮನಕುಟ್ಟು
ಮಾನಸಿಕ ಸಂನ್ಯಾಸಿಯಾಗಿರ್ದ ಳಮ್ಮವ್ವೆ
ಸಂಪತ್ತಿ ಸಂನ್ಯಾಸಿಯಾಗಿರ್ದಂತೆವೊಲ್ ;
ತಾಯಿ ರುಚಿ ಸಂನ್ಯಾನಿಸಿ ಮತ್ತಂ ರೂಪಸಂ
ನ್ಯಾಸಿನಿಯು ತಾನಾಗಿ ನಿರ್ಲಿಪ್ತಳಾಗಿರ್ದ ಳು.
ಸೂರ್ಯಂಗೆ ಕಳ್ತಲೆಯ ಭಯಮಿಲ್ಲದಿರುವಂತೆ :

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮಂಗಳ್

ತಾಯಿಂಗೆ ಕರ್ಕಶೋಟಲೆಯು ತಾನಿರಲಿಲ್ಲ. ೫೧೦
ನಿರ್ದಯತೆ ಕರುಣಾಳು ಶರಣಪ್ಪೆಗಿರಲಿಲ್ಲ
ಶರಣೆತನ ಪಥದಲ್ಲಿ ಹಿಂಜರಿಕೆಯಿರಲಿಲ್ಲ
ಪ್ರಗತಿಗಿರಿಯೇರುವಲ್ಲಿ ಹಿಮ್ಮೆಟ್ಟಿದವಳಲ್ಲ ;
ಸಾಧನೆಯ ಕಳನೇರಿ ಕೈದು ಮರೆತವಳಲ್ಲ
ಮಾರಾಂಕ ದೇವನಂ ಗೆಲಿಯದಿರ್ಪವಳಲ್ಲ
ಅಳಿಮನವನೆಂದಿಗುಂ ನಸುಮಾಡಿದವಳಲ್ಲ
ಕಳವಳಿಸಿ ಕಂಗೆಟ್ಟು ನಿಂತವಳು ತಾನಲ್ಲ
ಗತಿಗೆಟ್ಟು ಮತ್ತೊಬ್ಬರಂ ಬೇಡಿದವಳಲ್ಲ
ಮತಿಗೆಟ್ಟು ಬೆಳಗುಬಪ್ಪೆಯಂ ಬಿಟ್ಟವಳಲ್ಲ.

ಮರಮಿರ್ದು ಫಲಮೇನು ನೆಳಲಿಲ್ಲದನ್ನಕ್ಕ ೫೨೦
ವರಮಿರ್ದು ಫಲಮೇನು ಕರುಣೆಲ್ಲ ದನ್ನಕ್ಕ
ಹಸುವಿರ್ದು ಫಲಮೇನು ಹಯನಿಲ್ಲದನ್ನಕ್ಕ
ಜಸಮಿರ್ದು ಫಲಮೇನು ಗುಣವಿಲ್ಲದನ್ನಕ್ಕ ?
ಶರಣಪ್ಪೆ ನೆಳಲೀಕೆ ಜೊತೆಗೆ ಫಲಿತ ಸುರತರು
ತಾನಾಗಿ ವರವೀವ ಕರುಣೆಯಾಗಿರ್ದಳು !
ಹಾಲ್ಕರೆವ ಸುರಧೇನು, ಧನಮೀವ ಚಿಂತಾಮ
ಣಿಯಂತಿರ್ದರಯ್ ಶರಣಾಗತರ್ಗೆ ನಿರುತಂ !
ತನುಮನ ಧನಂಗಳಂ ಸಲಿಸವೆಸಿ ತಾನಳಿದು–
ತನ್ನ ಗುರುಚೇತನವನುಳಿಸಿರ್ದಳಾ ಮಾತೆ ! ೫೩೦
ಮನ ಬೀಸರಾಗದಲೆ ಮತಿ ಪಲ್ಲಟವಾಗದಲೆ
ಕಾಯಕರಣಂಗಳವು ಗುರುವಿಂಗೆ ಮೀಸಲಾಗಿ
ಅನ್ಯವನರಿಯದೆ ಭಿನ್ನವನರಿಯದೆ ಭಾವಕೆ
ಚನ್ನ ಗುರುದೇವನೊಳ್ ಸಮರಸದೆ ತಾನಿರ್ದಳು.
ಹಸಿವು ತಿಸೆಯೆನ್ನದಲೆ ಹಗಲಿರುಳು ಎನ್ನದಲೆ
ಹಸನಾಗಿ ಸೇವೆಯಂ ಮಾಡಿಹಳ್ ಶರಣಪ್ಪೆ ;
ಗುರುವಿನಪ್ಪಣೆಯಂತೆ ಹರಣವಿರುವನ್ನೆಗಂ !
ಕಾಗೆ ಕಣ್ಣ ಕಾಣದೆ ಚಂದ್ರನಂ ಮತ್ತಮಾ

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮಂಗಳ್

ಗೂಗೆ ಕಣ್ಣು ಕಾಣದೆ ಸೂರ್ಯನಂ ಬಯ್ವಂತೆ
ತಿಳಿಗಣ್ಣವಿಲ್ಲದಿಹ ಲೋಕದೀ ಜನಂಗಳ್
ಕಳಾಮಯ ಗುರುದೇವನಂ ಬರಿದೆ ಬಯ್ಯುವರ್ ;–
ಮುಂಬರುವ ಜನ್ಮದೊಳ್ ತಾವಂಧರಾಗುತಂ
ಪುಟ್ಟುವರ್ ತಪ್ಪದೆಂದು ಸುರುತಿರ್ದರಾ ತಾಯಿ !
ಸೊಂಪೊಡಂ ಚಂದನದ ತೆರದಂತೆ ಕಂಪಸುಳಿ
ದವಳಲ್ಲ ; ಬೆಂಡೊಡಂ ಚೆನ್ನದಂತೆ ಕಳಂಕ
ಗೊಂಡವಳ್ ತಾನಲ್ಲ–ಸತ್ಯ ಶಿವ ಶರಣಪ್ಪೆ !
ನಡೆಯದಿಹ ನುಡಿಗಡಣ, ಮಾಡದಿಹ ಕಲಿತನ
ಚಿತ್ತಾರದೊಳಗಿರ್ಪ ಹೆಣ್ಣಿನಾ ಚಲುವಿನೊಳ್
ಮತ್ತಮಾ ನೀರಿಲ್ಲದ ತೊರೆಯವೊಲ್ ನಿಷ್ಫಲಂ !
ಗುರುತಂದೆ, ಶಿಷ್ಯೆ ಕರಕಂಜ ಸಂಜಾತೆಯಿಸೆ
ಸ್ವಾಯತದ ಸಂಬಂಧ ತಪ್ಪುವುದೆ ಜನ್ಮದೊಳ್ ?
ಮಾಣಿಕ್ಯ ದೀಪ್ತಿಯಿರೆ ಸೊಡರಿನ ಹಂಗೇಕೆ ?
ಪರುಷಮಣಿ ಕೈಯೊಳಿರೆ ಸಿರಿಯಹಂಬಲವೇಕೆ ?
ಸುರದೇನು ಕರೆಯುವಡೆ ಹಸುವಿನಾ ಹಂಗೇಕೆ ?
ಕುರುಹು ಕರಸ್ಥಲದೊಳಿರೆ ಪೆರತೊಂದು ದೇವರೇಕೆ ?
ಕಂಗಳಲಿ ಕಾಂಬೆನೆಂದರಿದಿರುಳ ಸೊಕ್ಕಡೆಂತೊ ?
ಬೆಟ್ಟದುದಿ ಮುಟ್ಟಲೆಂದು ಹಳ್ಳಕಿಳಿದಡೆಂತೊ
ಗುರುವಿತ್ತ ಸುಯ್ದಾನವನೊಲ್ಲದೆ ಬೇರೆ ಬಯ
ಸಿದಡೆಂತೊ, ಕಿರುಕುಳಕೆ ಸಂದಡೆಂತೊ ಸೋಳ್ಪೊಡೆ ?
ಭಾವಿಸಲ್ ದೇಹಮಿದು ತಾನಂಗಮಾಯಿತ್ತು
ಆತ್ಮಮದು ಚಿಲ್ಲಿಂಗಮಾಯಿತ್ತು ಗುರುವಿನಿಂ
ಲಿಂಗಾಂಗ ಸಂಯುತಂ ಸೈವೆರಗು ಸ್ವಾಯತಂ,
ಲಿಂಗರಸ ರುಚಿಯಿಂಪಿ ಸಾರ್ಪುಗುಂ ಸ್ವಾಯತಂ ;
ಬಿಂಧು ಸಿಂಧುವ ಸೇರುವೋಲಕ್ಕು ಸ್ವಾಯತಂ
ಸ್ವಾಯತದ ಸಂಬಂಧದೊಳಿಪ್ಪುದು ವಿಭುತ್ವಂ
ಬಿತ್ತರಂಗೊಳ್ಳುವವ್ ಸಚ್ಚಿದಾನಂದಗಳ್
ನಿತ್ಯಪೂರ್ಣಾಖಂಡ ಲಕ್ಷಣಂ ಲಭಿಸುಗುಂ ;

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮುಂಗಳ್

ಅಹಂಕಾರಾದಿ ಚೂರ್ಣ ಭಾವಕ್ಕಿಂಬಿರದು,
ಸೋಽಹಂ ಸ್ವಭಾವಾತೀತವಹ ಸ್ವರೂಪಮದು,
ವಿರಾಡ್ ವಿಶ್ವವನ್ನೊಳಗೊಂಡ ಲಿಂಗ ಜೈತ
ನ್ಯವೆ ಕಾಯ ಮನ ಹರಣ ಭಾವಂಗಳಾದಪವು–
ಶರಣಪ್ಪೆ ಬಾಳಿನೊಳ್ ! ಮನಗಂಡು ಬಲ್ಲಿಪರ್
ಮಾತೆಯಂ ಪುಸಪ್ಪುನಮುಳ್ಕರಿಂ ದರ್ಯಿಪರ್
ಭಾಷಿಪರ್ ಸಂತಸಂ ಸಂಭ್ರಮಂ ಪೊಂದುವರ್–
ತಾಯೀಽದಾದಡೇಂ ನೆರೆಗುರುತಿಸಲ್ಕುಸದಳಂ
ತಾಯಿಯಾ ನೀಳಾದ ಬಾಳ್ಪದುಕಿನ ನಿಲವಂ !
ಸ್ವಾರ್ಥಕ್ಕೆ ಸಮ್ಮೋಹಕ್ಕೆ ಅಂತರ್ನಯನಮುಂಟೆ ?
ಗುರುವಿಂದ ಪುಟ್ಟರ್ದ ಶರಣವ್ವ ತಾಯಿಗೆ
ಪ್ರಕೃತಿಯಿಂ ಪುಟ್ಟರ್ಪರೆಲ್ಲರುಂ ಮಕ್ಕಳಯ್ !
ನೋಡುವರ್ ಸರ್ವರಂ ಸಮಭಾವದಿಂ ದಿಟಂ ;
ಸಮದರ್ಶಿಯೆಂತೆಂಬ ಸಲ್ಪೆಸರ ಮುಳ್ಕವರ್
ನೋಡಲವರಿವರೆಂಬ ಬಿರುಕಿಲ್ಲ ಭಾವದೊಳ್ ;
ಸಮಷ್ಟಿ ಸ್ವರೂಪವ ಸ್ವೀಷ್ಟಲಿಂಗಕಳೆಯೊಳ್
ಅಸಮಭಾವಕಿಂಬಿಲ್ಲ ವಿಷಮತೆಗೆಡೆಯಿಲ್ಲ ;
ನಾನು ನೀನೆಂಬುದಕೆ ತೆರಹಿಲ್ಲ, ತರತರದ–
ಕುರುಹಿಲ್ಲ, ಸುಳುಹಿಲ್ಲ ಭಾವಗತ ಭ್ರಾಂತಿಗೆ !
ಒಳಗರಿದು ಹೊರಗೆ ಮರೆದವಳಲ್ಲವೊಂದಾಗಿ !!
ಒಳಗೆ ವಿಷ, ಹೊರಗೆ ರಸ ತೋರಿದವಳಲ್ಲ ತಾಯ್,
ಕೊಳಲ ಶಬ್ದಕೆ ಹಾವು ತಲೆದೂಗಿದಂತಲ್ಲ,
ಒಳಗೆ ನಂಜನು ಬಿಟ್ಟಿರುವುದೇನು ಹಾವದು ?
ಒಳಗೆ ನಂಜಿರಿಸಿಕೊಂಡಿರುವವರ್ ಪುಟ್ಟುವರ್
ಮುಂಖರ್ವ ಜನ್ಮದೊಳ್ ಪಾಮಾಗಿ ನೈಜದಿಂ !
ಒಳತೊಪ್ಪಗೊಂಡ ಸಿಪ್ಪೆಯುಳ್ಳಾ ಹಣ್ಣಿನೊಲ್
ಒಳಹೊರಗೆ ತಾನೊಂದೆ ರೂಹಿನಿಂದಿರ್ದಳವ್ವೆ !
ಕರಣೇಂದ್ರಿಯಂಗಳ ಗುಣಕ್ಕೆಳಸಿದವಳಲ್ಲ.
ಸುಟ್ಟನುಲಿಯಂತೆ ಮೇಣ್ ಸೂತ್ರ ತಪ್ಪಿದ ಬೊಂಬೆ

CC-0. Jangamwadi Math Collection. Digitized by eGangotri

ಯಂತೆ ತಾಯ್ ಪ್ರಕೃತಿ ಪೂರ್ವಾಶ್ರಯವ ತ್ಯಜಿಸಿರ್ದಳು !
ಕಾಯಮದು ಮೀಸಲಾಗಿ ಕರದಿಷ್ಟಲಿಂಗಕ್ಕೆ,
ಕರಣಮದು ಮೀಸಲಾಗಿ ಪ್ರಾಣಲಿಂಗಕ್ಕೆ ಮೇಣ್
ಜೀವಮದು ಮೀಸಲಾಗಿ ಭಾವಲಿಂಗಕ್ಕೆ ತಾವ್
ಸಮರ್ಪಿತಮಾಗಿ ನಿರ್ವಿಕಾರದಿಂದಿರ್ದವು. ೬೦೦

ಓದಿಯೋದಿ ಸಂದೇಹಗೊಂಡ ಮನದವಳಲ್ಲ
ಕೇಳಿ ಕೇಳಿ ವಾದಕ್ಕಿಳಿದವಳು ತಾನಲ್ಲ
ಅರಿದರಿದು ಮರೆದವಳು ಮುನ್ನಲ್ಲ ಶರಣವ್ವೆ,
ಅರಿವನಾಚಾರದೊಳ್ ತಾರದಿರುವವಳಲ್ಲ ;
ಸಾವಿಗಂಜಿಯುಸಿರ ಹಿಡಿಪವಳಲ್ಲ ಮತ್ತುಂ
ಭಾವಿಸಲ್ ಬಸಿರ ಬಿಗಿದವಳಲ್ಲ ಶರಣಾಯಿ ;
ಸಾವಾರು, ಸಾವಿಲ್ಲದಂತಿರ್ಪ ಜೀವಾರು ?
ಸಾವಿಗೆಣೆಯಪ್ಪ ಕಾಯಮಿದಾರದು ನೋಡೆ ?
ಲಿಂಗಕಾಯವಾಗಲ್ಕೆ ಸಾವುಂಟೆ ಕಾಯಕ್ಕೆ ?
ಶಾಶ್ವತಾಶ್ರಮಂ ಚಿಲ್ಲಿಂಗಕ್ಕೆ ಕಾಯಮಿದು. ೬೧೦

ಅಂಗ–ಲಿಂಗಗಳಿರಡಕವಿಭಾಜ್ಯ ಸಂಬಂಧ !
ಲಿಂಗಕ್ಕೆ ಪಿರಿದಪ್ಪ ಲಿಂಗಪೆರತೊಂದಿಲ್ಲ
ಅಂಗಕ್ಕೆ ಪಿರಿದಪ್ಪ ಕ್ಷೇತ್ರ ಪೆರತೊಂದಿಲ್ಲ
ಕಾರುಣ್ಯರಸಕಿಂತ ಪೆರತೊಂದು ತೀರ್ಥವಿಲ್ಲ
ಭಕ್ತಿಗಿಂ ಪೂಜೋಪಚಾರ ಬೇರೊಂದಿಲ್ಲ.
ತನ್ನ ಮನೆ ತನಗೆ ಲೇಸೆಂತಿರ್ದೊಡೇನಂತೆ
ಹೆರರ ಮನೆಯು ಪಿರಿದಾದರೇನದರಗ್ಗಳಂ ?
ಲೌಕಿಕಮೆ ಪರಮಾರ್ಥಮಾಗತ್ತು ತಾನದಂ
ಸತ್ಯಶಿವ ಶರಣವ್ವೆ ಬಾಳಿನೊಳ್ ನಿತ್ಯದೊಳ್ !
ಕರದಿಷ್ಟ ಲಿಂಗಮೇ ಉರದಿಷ್ಟಲಿಂಗಮಾ– ೬೨೦
ಗಿತ್ತು ಮೇಣ್ ಶಿರದಿಷ್ಟಮಾಗಿತ್ತು ತಾಯಿಗೇ !
ಒಳಗೊಬ್ಬ ಲಿಂಗಯ್ಯ ಹೊರಗೊಬ್ಬ ಲಿಂಗಯ್ಯ–
ನಿರಲಿಲ್ಲ ಸಾಕಾರ ನಿರಾಕಾರವೊಂದಾಗಿ
ಮತ್ತಮೇಕೋಭಾವ ಶರಣವ್ವೆಗುಂಟಾಗಿ !

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮಂಗಳ್

ಲಿಂಗಯ್ಯ ಸರ್ವಾಂಗ ಪರಿಪೂರ್ಣ ತಾನಾಗಿ !!
ಕ್ರಿಯೆಯೊಂದು ತಿಳಿವೊಂದು ಮತ್ತಮನುಭಾವಮದು
ಮತ್ತೊಂದು ತಾವಾಗಿ ಪರಿಣಮಿಸಿರಲಿಲ್ಲ.
'ಗುರು ಶರಣು' ಎಂತೆಂಬ ಕೂರಲಗ ಕೆಯ್ಕೊಂಡು
ಕತ್ತರಿಸಿ ತಾಂ ಬಿಟ್ಟರ್ದಳ್ ಕರ್ಮ ಪಾಶವಂ
ಮೇಣ್ ಬ್ರಹ್ಮಪಾಶವಂ ಮೇಣ್ ವಿಷ್ಣುಮಾಯೆಯಂ ೬೩೦
ಮೇಣು ಯಮಪಾಶವಂ ಮೇಣ್ ಪಿಂಡಪಾಶವಂ !
'ಗುರು ಶರಣು' ಎಂತೆಂಬ ಪಂಚಾಕ್ಷರಿಯ ಬಲದಿಂ
ಮಂತ್ರಮಯವಮಾಗಿಸಿರ್ದಳ್ ಮಾಂಸಪಿಂಡಮಂ !
ನುಡಿದಂತೆ ನಡೆದಿಹಳ್, ನಡೆದಂತೆ ನುಡಿದಿಹಳ್
ನುಡಿನಡೆಗಳೊಂದಾಗಿ ಬಾಳಿಹಳ್ ಶರಣಪ್ಪೆ !
ಗುರುವಿಂಗೆ ಶರಣೆಂದು ಬಾಳಿದಳ್ ಬೆಳಗಿದಳ್
ಗುರುವಿಂಗೆ ಸಮರ್ಪಿಸಿ ಸಲ್ಲಿದಳ್ ಬಲ್ಲಿದಳ್ !
ಗುರುವೆ ಲಿಂಗಂ, ಲಿಂಗವೇ ಗುರುವು ಪರಿಕಿಸಲ್
ಗುರುಲಿಂಗವೆರಡರೊಳ್ ಕವಲಿಲ್ಲ ಕೆಂಚಿತ್ತು.
ಶಿವಾಚಾರ ವಿಚಾರವುಳ್ಳ ಗುರುವಿನೊಡನಾ– ೬೪೦
ಡಿದ ತಾಯಿ ಜ್ಯೋತಿಯೊಡನಾಡಿದ ವಿಭಾವರಿ
ಯಂತೆ ಮೇಣಗ್ನಿಯೊಡಗೂಡಿದ ಕಾಷ್ಠದಂತೆ
ಗಂಗೆಯೊಡನಾಡಿರ್ದ ಬೆಟ್ಟದಂತಿರ್ದಳಯ್
ತಾಯಿಗಂ ಕುಲಭ್ರಮೆ, ಮತಭ್ರಮೆ, ತನುಭ್ರಮೆ,
ಮನಭ್ರಮೆ, ವಾಗ್ಭ್ರಮೆ ಫಲಭ್ರಮೆಯಿರಲಿಲ್ಲ.
ತಾಯ್ ಹೃದಯಮೆಂದೆಂದಿಗುಂ ಹೊಚ್ಚಹೊಸಹೂವು
ಕಂದಿದುದು ತಾನಲ್ಲ ಕಂಪಳಿದುದು ಮುನ್ನಲ್ಲ.
ಕರದಿಷ್ಟಲಿಂಗಕ್ಕೆ ರೂಪಮಂ ಮೇಣು ಪ್ರಾ–
ಣ ಲಿಂಗಕ್ಕೆ ರುಚಿಯಂ ಮೇಣ್ ಭಾವಲಿಂಗಕ್ಕೆ ೬೫೦
ತೃಪ್ತಿಯಂ ಸಮರ್ಪಿಸಿ ಪರಿವಿಡಿದು ಶುದ್ಧಮೇಣ್
ಸಿದ್ಧಮೇಣ್ ಪ್ರಸಿದ್ಧ ಪ್ರಸಾದಂಗಳನೆಸಗಿ
ಸ್ವೀಕರಿಸಿ ನಿಚ್ಚ ಪ್ರಸಾದಿಯಾಗಿರ್ದಳು.
ಕಣ್ಣಿಂಗೆ ಸಿಂಗಾರ ಗುರುವರನ ದರ್ಶನಂ
ಕರ್ಣಕೆ ಸಿಂಗಾರ ಗುರುದೇವ ಹಿತವಚನಂ

CC-0. Jangamwadi Math Collection. Digitized by eGangotri

ಸಜ್ಜಲ ಶರಣವ್ವೆ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮುಂಗಳ್

ತ್ವಕ್ಕಿಂಗೆ ಸಿಂಗಾರ ಗುರುಹಸ್ತ ಸ್ಪರ್ಶನಂ
ನಾಲಗೆಗೆ ಸಿಂಗಾರ ಗುರುದೇವ ಪ್ರಸಾದಂ
ನಾಸಿಕಕೆ ಸಿಂಗಾರ ಗುರುಪುಷ್ಪ ಪರಿಮಳಂ
ಹೃದಯಕ್ಕೆ ಸಿಂಗಾರ ಗುರುಪ್ರಸಾದ ತೃಪ್ತಿಯುಂ !
ತನು ಕರಗಿ ಲಿಂಗಕ್ಕೆ ಮಜ್ಜನವ ಮಾಡುವಳ್
ಮನ ಕರಗಿ ಲಿಂಗಕ್ಕೆ ಪುಷ್ಪಮಂ ಧರಿಸುವಳ್ ೬೬೦
ಮೇಣ್ ಹೃದಯ ಕರಗಿ ಗಂಧಾಕ್ಷತೆಯಿಕ್ಕುವಳ್
ಮೇಣರಿವು ಕಣ್ದೆರೆದು ಆರತಿಯನೆತ್ತುವಳ್
ಮೇಣ್ ಭಾವಮದು ಕರಗಿ ಧೂಪಮಂ ಹಾಕುವಳ್
ತ್ರಿಕರಣ ಶುಚಿಯಿಂ ತಾಂಬೂಲಮಂ ನೀಡುವಳ್ !
ತಾಯಿಯದು ತನುಶುದ್ಧ ಮನಶುದ್ಧ ಮತ್ತಮಾ
ಶುಚಿ ಚಿತ್ತ, ಶುಚಿವಿತ್ತ, ಶುಚಿ ಜೀವ ನೋಡಯ್ಯ ;
ಸತ್ಯನಡೆ ಸತ್ಯನುಡಿ ಸತ್ಯಲತೆಯ ದಾಂಗುಡಿ ;
ಬಾನೆತ್ತರ ಬಿತ್ತರ ಹಾರುವಾ ಜನದ ಗುಡಿ !

ತನುವಿತ್ತು ದಾಸೋಹಮಂ ಮಾಡಿ ಶ್ರದ್ಧೆಯಿಂ
ಶ್ರೀಗುರು ಪ್ರಸಾದಿಯು ತಾನೆನಿಸಿ ಶುದ್ಧಳು, ೬೬೦
ಮನಮಿತ್ತು ದಾಸೋಹಮಂ ಮಾಡಿ ನಿಷ್ಠೆಯಿಂ
ಪ್ರಾಣಲಿಂಗ ಪ್ರಸಾದಿ ತಾನಾಗಿ ಸಿದ್ಧಳು ;
ಧನಮಿತ್ತು ದಾಸೋಹಮಂ ಮಾಡಿ ಶರಣವ್ವೆ
ಜಂಗಮಪ್ರಸಾದಿಯೆಂದೆನಿಸಿ ಪ್ರಸಿದ್ಧಳು.
ತ್ರಿವಿಧವಿಡಿದು ತ್ರಿವಿಧ ದಾಸೋಹಮಂ ಮಾಡಿ
ತ್ರಿವಿಧದೊಳ್ ಸ್ವಯಂ ಪ್ರಸಾದಿಯಾಗಿರ್ದಳು.
ಆರಸಿ ತೊಳಲಿದಡಿಲ್ಲ, ಹರಸಿ ಬಳಲಿದಡಿಲ್ಲ ;
ಬಯಸಿ ಪೊಕ್ಕಡದಿಲ್ಲ ತಪಸ್ಸು ಮಾಡಿದಡಿಲ್ಲ–
ಮನಮೊಲಿದು ಭಯಭಕ್ತಿಯಿಂ ಮೇಣು ವಿನಯದಿಂ
ತ್ರಿವಿಧಾರ್ಪಣಾತ್ಮಕಂ ದಾಸೋಹಮಂ ಮಾಡಿ– ೬೬೦
ದಲ್ಲದಲೆ ಪರಮ ಪರಿಣಾಮಮದು ಜೊರೆಯದು.
ಪರಮ ಪ್ರಸಾದಿಯೆನಿಸದೆ ಕಂಗಳ ಪಟಲಂ
ಹರಿಯದಯ್ ಮತ್ತಮಾ ಹಣೆಬರೆಹ ತೊಡೆಯದಯ್ !

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಕಂಬಳಿಹಾಳ್ ಸಜ್ಜಲಗುಡ್ಡ ಆಶ್ರಮಂಗಳ್

ಶರಣಪ್ಪೆಯ ಕಾಯದ ಕಾರ್ಪಣ್ಯವರತಿತ್ತು
ಮತ್ತಮಾ ಕರಣಂಗಳ ಕಳವಳವಳಿದಿತ್ತು
ಭಾವಭ್ರಮೆ ಜೀವಜಂಜಡಂ ತೊಲಗಿತ್ತು
ಭಾವಿಸಲ್ ಪರಮ ಪ್ರಸಾದಿಯಾಗಿರ್ದಳು.
ಶರಣಪ್ಪೆ ಮುಟ್ಟಿದುದು ಪಾವನಂ ತಾನಾಯ್ತು
ಮಾತಾಯಿ ಮುಟ್ಟಿ ದೂರವಿಮುಕ್ತ ಕ್ಷೇತ್ರವಾಯ್ತು.
ಕಂಬಳೀಹಾಳದಂ ಕಲ್ಯಾಣವೆನಿಸಿಹುದು. ೧೯೦

ಸಜ್ಜಲದ ಗುಡ್ಡಿದಂ ಶ್ರೀಶೈಲವೆನಿಸಿಹುದು ;
ಶರಣಪ್ಪೆ ಗಂಗಾಂಬೆ ನೀಲಾಂಬೆ ಭ್ರಮರಾಂಬೆ
ತಾನಾಗಿ ತೊಳಗಿಹಳ್ ತ್ರೈವಿಧದ ಶಕ್ತಿಯಿಂ !
ಮನದ ಕಾಳೆಗವ ಗೆಲಿದು ಕಾಯಕೋಂಟೆಯ ಕೆಡಹಿ
ಮೇಣು ಮನೆಯೊಂಬತ್ತು ಬಾಗಿಲಂಗಳ ಮುಚ್ಚಿ
ಮೇಲೇರಿ ಶಿರದರಮನೆಯ ಸೇರಿ ಪರಮಪತಿ–
ಯೊಡಗೂಡಿ ಸಮರಸದ ಪರಮಾಮೃತವ ಸವಿದಳು.
ಆಂಗದೊಳಗಾಚಾರವನಳವಡಿಸಿಕೊಂಡಳ್
ಆಚಾರಮದುವೆ ಲಿಂಗವೆಂದರಿದಿರ್ದಳು ;
ಪ್ರಾಣದೊಳಗರಿವನಿರದೆ ಕರಿಗೊಳಿಸಿಕೊಂಡಿಹ– ೨೦೦
ಳಾ ಅರಿವೆ ಗುರುವೆಂದು ಪರಿಭಾವಿಸಿರ್ದಳು ;
ಭಾವದೊಳಗನುಭಾವಮಂ ಕಂಡುಕೊಂಡಿಹಳ್
ಅನುಭಾವ ಮದುವೆ ಜಂಗಮವೆಂದರಿರ್ದಳು.
ಆಚಾರಲಿಂಗದಿಂದಂಗ ಭಾವಮಳಿದಿತ್ತು
ಜ್ಞಾನಗುರುವಿಂದೆ ಪ್ರಾಣ ಪ್ರಕೃತಿಯಳಿಯಿತ್ತು
ಅನುಭಾವ ಚರನಿಂದೆ ಭಾವಭ್ರಾಂತಿಯಳಿಯಿತ್ತು
ಆನಂದರಸದಿಂದೆ ಜೀವಭಾವಮಳಿದಿತ್ತು.
ಗುಡದೂರು ಗುರುವರನ ಮಗಳಾಗಿ ಬಾಳಿದಳು ;
ಬಡವ ಬಲ್ಲಿದ ಜನಕೆ ತಾಯಾಗಿ ಬೆಳಗಿದಳು. ೨೧೦
ಕಂಬಳಿಹಾಳ್ ಸಜ್ಜಲ ಗುಡ್ಡಗಳಿರಡೂರ್ಗಳ
ಕನ್ನಾಡದೆರಡನೆಯ ಕಲ್ಯಾಣವಾಗಿಸಿದ
ಕಳಾಮಯಿ ಶರಣಾಯಿ ನಿಲವಿಂಗೆ ನಮೋನಮೋ !

CC-0. Jangamwadi Math Collection. Digitized by eGangotri

೧೩. ಮಹಾ ಶಿವಯೋಗದ ಗುಡದೂರ ಆರಾಧನಂ!

ತೀರ್ಥಯಾತ್ರೆ ಮೇಣ್ ಕ್ಷೇತ್ರಯಾತ್ರಗಳಿಗಿಂ ಸಾ–
ರ್ಥಕಂ ಸಮರ್ಪಕಂ ಫಲದಾಯಕಂ ಗುರುಯಾತ್ರೆ !
ಜೀವಂತ ಕ್ಷೇತ್ರಂ ಗುರುವರನ ಪವಿತ್ರಾಂಗಂ
ದೇವಾಧಿ ದೇವ ಗುರು ಜೀತನಂ ಕ್ಷೇತ್ರಜ್ಞಂ !
ಜ್ವಲಂತಂ ದರ್ಶನಂ, ಜೀವಂತಸ್ಪರ್ಶನಂ
ಭಾಷಣಂ ಲಭಿಸುಗುಂ ಸಚ್ಚಿನ್ಮಯಾತ್ಮಕಂ !
ಮತ್ತಮಾ ಗುರುಪಾದ ತೀರ್ಥಕೆಣೆಯಾದುದಂ
ಪೆರತೊಂದು ತೀರ್ಥಮದು ಮೂಲೋಕದಲ್ಲಿಲ್ಲ,
ಪಾದೋದಕಮದು ಸಾಕ್ಷಾತ್ತು ಸಚ್ಚಿದ್ರಸಂ
ಮೇಣಜಡ ಮತೀಂದ್ರಿಯಮನಾಮಯಮನಾದ್ಯಂ ! ೧೦
ಗುರುದೇವದರ್ಶನದೊಳಳವಡುಗು ದೃಗ್ದೀಕ್ಷೆ,
ಗುರುವರ ಸ್ಪರ್ಶನದೊಳಳವಡುಗು ವರಹಸ್ತ–
ಮಸ್ತಕದ ಸಂಯೋಗರೂಪವೇಧಾಧೀಕ್ಷೆ ;
ಗುರುವರನ ಭಾಷಣದೊಳಳವಡುಗು ಪರಮ ಪಂ–
ಚಾಕ್ಷರ ಸ್ವರೂಪವಹ ಮಂತ್ರಮಯದೀಕ್ಷೆಯ
ದೆಂದೆನಲ್ ಗುರುಯಾತ್ರೆಗೆ ಮಿಗಿಲ್ಕತ್ತೊಂದಳವೆ ?
ಈ ಲೋಕ ಪರಶಿವಂ ಗುರುದೇವನಾತನಾ–
ಯೋಗವೇ ಮಹಾಶಿವಯೋಗಮದು ಲೋಕದೊಳ್ !
ಗುರುವಿನೊಡನಿರ್ದು ಗುರುವಿನೊಡನಾಡಿ ಗುರುದೇ–
ವನಾರಾಧಿಸಿ ಶ್ರೀಗುರುವಿಂಗರ್ಪಿಸಿ ಗುರು– ೧೧
ಪಾದೋದಕ ಪ್ರಸಾದಂಗಳಂ ಪಡೆವುದೇ
ಶಿಷ್ಯಂಗೆ ಮಹಾಶಿವಯೋಗಮದು ನೈಜದಿಂ !
ಗುರುವರಂ ಕಳೆಯುವಂ ಕಾರ್ಮಿಕದ ದೋಷಮಂ,
ಮತ್ತೆ ಮಾಯೀಯ ಮಾಣವೀಯ ಮಲಂಗಳಂ !
ಗುರುವರನ್ ಮಾಡುವನ್ ಗಂಧಮಂ ಮೇಣ್ರಸಮಂ
ರೂಪಮಂ ಸ್ಪರ್ಶಮಂ ಶಬ್ದಮಂ ತೃಪ್ತಿಯಂ
ಪರಮ ಪ್ರಸಾದಂಗಳಂ ವರ ಪ್ರಭಾವದಿಂ
ಮತ್ತಮಾ ಸ್ವಕೀಯ ದೃಕ್ರಿಯಾ ಶಕ್ತಿಯಿಂ !

CC-0. Jangamwadi Math Collection. Digitized by eGangotri

ಮಹಾ ಶಿವಯೋಗದ ಗುಡದೂರ ಆಗಮನ

ಇದನರಿತು ಶರಣವ್ವೆ ಪಡಿಬರಿಸ ತಪ್ಪದೊಲ್
ಮಹಾಶಿವರಾತ್ರಿಗಂ ಗುರುವರನ ಗುಡದೂರ್ಗೆ
ತಾವ್ ಪೋಗಿ ಗುರುದೇವನಾ ಕರ್ತೃಗದ್ದುಗೆಯ
ದರ್ಶನಂ ಪಡೆಯುವರ್ ಮೇಣಲ್ಲಿ ವಿಗಿಲಾಗಿ
ಮಾಡುತ್ತಿರ್ದರವರ್ ಜಂಗಮಾರಾಧನಂ !
ಮತ್ತವಾ ಗುರುದೇವನಾ ಕರ್ತೃಗದ್ದುಗೆಯ
ಎದುರಿನೊಳ್ ಕುಳ್ಳಿರ್ದು ಸಂಭಾಷಿಸುತಿರ್ದರ್
ಗುರು ಶಿಷ್ಯರಾತ್ಮೀಯ ಪ್ರಭಾವಮಂತಿತ್ತು ;
ಅದು ಪರಾಶಕ್ತಿ ಅದು ಪರಾವಾಣಿಯಾಗಿತ್ತು.
ಗುರುಶಿಷ್ಯ ಸಂಭಾಷಣಮುಂ ಸಲೆ ಕೇಳ್ದವರ್
ತಾವಿರ್ದರೆಂತೆಂದು ಹೊಸಮನೆ ಗಿರಿರಾಜಂ
ಪೇಳಿಹನ್ ತನ್ನ 'ಸಜ್ಜಲಶ್ರೀ' ಗ್ರಂಥದೊಳ್ ೪೨

ವರಪೂಜ್ಯ ಶರಣವ್ವೆ ಗುಡದೂರಮುಂ ಬಿಟ್ಟು
ಬೇರಿಡೆಗೆ ಪೋಗುತಿರಲಿಲ್ಲ ಗುರ್ವಾಜ್ಞೆಯಿಂ !
ಓ ತಾಯಿ, ಪ್ರಸಾದಕೆ ತವುಡರೊಟ್ಟಯಾದಡಂ
ಮತ್ತಿದೋ ವಾಸಕ್ಕೆ ಹುಲ್ಲುಡಿಸಲಾದಡಂ
ನೀಂ ಕಂಬಳೀಹಾಳ ಸಜ್ಜಲದ ಗುಡ್ಡದೊಳ್
ಬಿಡದೆ ತಂಗಿರವೇಳ್ಕುಮಲ್ಲದಲೆ ಪೆರತೊಂದು
ತಾಣಕ್ಕೆ ಪೋಹಚಪಲಮುಂ ತಾಳದಿರೆಂದು
ಮುಂಬರ್ಪ ದಿನಮಾನದೊಳಂಗೈಯೊಳ್ಳಣ್ಣ
ತೋರುವರ್ ಕೊರಳಲ್ಲಿ ಸರ್ಪಮಂ ತಾವ್ ಸುತ್ತಿ ೪೩
ಕೊಳ್ಳುವರ್ ಬರ್ಪರಾ ಅಂತವರಂ ನೀಂ ನಂಬಿ
ಕೆಡವೇಡ ಮತ್ತೆ ಮೋಸಂಪೋಗಬೇಡೆಂದು
ಮೇಣಾಶ್ರಮಕಾರಾದಡಾಗಲಿ ಬಂದೊಡಂ
ತಾನವರ ಪಾದಮುಂ ಕಾಣಬೇಕಲ್ಲದಲೆ
ಮೊಗವ ನೋಡದಿರೆಂದು ದೂರದಿಂ ನಮಿಸೆಂದು
ಗುರುದೇವನುಪದೇಶಮಾಗಿಹುದು ತಾನದು !
ಶರಣವ್ವೆ ಶ್ರದ್ಧೆಯಿಂ ಪಾಲಿಸುತ ಬಂದಿಹಳ್
ತನ್ನ ಗುರುದೇವನಡಿಗಳನೆ ದಿಟ್ಟಿಸುತ್ತಂ

CC-0. Jangamwadi Math Collection. Digitized by eGangotri

ತಾನಿರ್ದ್ದಳೆಂಬುದದರಿಕೆಗೆ ಬಂದಿಹುದೀಚೆಗೆ
ಗುರುವರನ ಭಾವಚಿತ್ರವಮಂ ಬರೆಯಿಸುವಲ್ಲಿ !
ಗುರುಮುಖಂ ಪಂಚಾಕ್ಷರ ರೂಪದೆ ತಾಯಿಯೊಳ್ ೬೦
ನೆಲಸಿತ್ತು ; ನಕಾರಂ ತಾನಾಗಿ ಘ್ರಾಣದೊಳ್
ಮಕಾರಂ ತಾನಾಗಿ ಜಿಹ್ವೆಯೊಳ್ ಮತ್ತಮಾ
ಶಿಕಾರಂ ತಾನಾಗಿ ನೇತ್ರದೊಳ್ ವಾಕಾರ–
ಮಾಗುತಂ ತ್ವಕ್ಕಿನೊಳ್ ಯಕಾರಂ ತಾನಾಗಿ
ಶ್ರೋತ್ರದೊಳ್ ಗುರುವರಂ ನೆಲಸಿಹನ್ ತಾಯಿಯೊಳ್
ಪಂಚಬ್ರಹ್ಮಮಂತ್ರಮಯವಾಗಿ ಮುಖವಾಗಿ ;
ಮತ್ತಮೋಂಕಾರಮಾಗಿರುತಿಹನ್ ಹೃದಯದೊಳ್
ಗೌಪ್ಯಮುಖಮದಂ ತಾನಾಗಿ ಶ್ರೀಗುರುವರನ್ !
ಇದರಿಂದೆ ಗಂಧರಸರೂಪಸ್ಪರ್ಶ ಶಬ್ದಂಗಳ್
ಸದಮಳ ಪ್ರಸಾದಂಗಳಾಗಿಹವ್ ತಾಯಿಗೆ ! ೭೦

ಗುರುದೊಡ್ಡ ಬಸವಾರ್ಯಲಿಂಗೈಕ್ಯರಹಮುಸ್ಸ
ಕರಕಂಜ ಸಂಜಾತೆಯಂ ಕರೆದು ಓ ಮಗಳೆ,
ಪ್ರತಿವರ್ಷ ನೀನು ಗುಡದೂರಿಗೈ ತಂದಯ್ದು
ಜನ ಜಂಗಮಾರಾಧನೆಯನೆಸಗವೇಳ್ಕುಮೆಂ–
ದುಸುರುವರ್ ; ಓ ತಂದೆ ನಾನಾವುದರಿಂದಾ-
ರಾಧನೆಯನೆಸಗಲೆನ್ನೊಳೀನಿಹುದರಿಯಲ್ಕೆ ?
ಕರಕಂಜ ಸಂಜಾತೆ, ನೀನಯ್ದು ಮನೆಗಳೊಳ್
ಭಿಕ್ಷೆಯಂ ಬೇಡಿ ನೆರವೇರಿಸೌ ಬಿಡದಂತೆ
ಎಂದೆನಲ್ ಶರಣಪ್ಪೆ ಕಂಬಳೀಹಾಳ ಲೋ-
ಕನಗೌಡ, ಹಾವರಗಿ ಶಂಗಪ್ಪ, ಹಿರಿಮಠದ ೮೦
ಬಸವಮ್ಮ, ತಿಮ್ಮನಾಗೌಡ, ವೆಂಕನಗೌಡ–
ರೆಂಬವರ ಮನೆಗಳಲಿ ಭಿಕ್ಷೆಯಂ ಬೇಡಲೊದ–
ಗಿದೊಂಬತ್ತು ಸೇರ್ಗೋದಿ ಮೇಣಯ್ದು ರೂಪ್ಯಂ–
ಗಳವಂ ತಲೆಯ ಮೇಲೆ ತಾವ್ ಹೊತ್ತು ಕಂಬಳೀ
ಹಾಳದಿಂ ಗುಡದೂರ್ಗೆ ನಡೆತಂದು ಜಂಗಮಾ–
ರಾಧನೆಯನೇರ್ಪಡಿಸಿ ಬಂದಿಹರ್ ಭಕ್ತಿಯಿಂ–

CC-0. Jangamwadi Math Collection. Digitized by eGangotri

ಸಜ್ಜಲಕರಣವ್ವೆ

ಮಹಾ ಶಿವಯೋಗದ ಗುಡದೂರ ಆರಾಧನಂ

ದಂದಿನಿಂದಿಂದಿಗುಂ ನಿಲ್ಲದಲೆ ನಡೆದಿಹುದು
ಮುರುವರುಷದಿಂ ಕಂಬಳಿಹಾಳದ ನಾಗರಾಳ್
ವೀರಸಂಗಪ್ಪ ಬಂಡಿಯ ಕಟ್ಟಿ ತಾಯಿಯಂ
ಕುಳ್ಳಿರಿಸಿ ಗುಡದೂರ್ಗೆ ಕರೆದೊಯ್ಯಲಾರಂಭಿ
ಸಿಹನ್ ನಿಸ್ಪೃಹದಿಂ ನಿಜದ ಭಕ್ತಿಭಾವದಿಂ
ಮೇಣ್ ಸ್ವಯಂ ಪ್ರೇರಣೆಯ ಬುದ್ಧಿಯಂ ಶುದ್ಧಿಯಂ !
ಗುಡದೂರ ಮಹಾಶಿವಯೋಗದಾರಾಧನೆಯು
ಬೃಹತ್ತಾಗಿ ಬೆಳೆದಿದೆ, ಮಹತ್ತಾಗಿ ಮೆರೆದಿದೆ.
ಬೇಕಸಿತು ಪಡಿಪದಾರ್ಥಂಗಳೊದಗುವವು ಗುರು–
ಶಿಷ್ಯರಿರ್ವರಾ ನಿಜ ನೈಮೆಯಿಂ ಪೆರ್ಮೆಯಿಂ !
ಕರ್ತವ್ಯಸಿಷ್ಠೆಯಿಂ ತ್ಯಾಗಮನಭಾವದಿಂ
ಸದ್ಭಕ್ತಜನಂಗಳ್ ಜೊತೆಗೂಡಿ ಜರಪುವರ್ !
ಗುರುಶಿಷ್ಯರಿಂ ಜನಾಂಗಂ, ಜನಾಂಗದಿಂ ಗುರು–
ಶಿಷ್ಯರ್ ಪರಸ್ಪರಂ ನೆರವಾಗಿ ಬಾಳಹರ್
ನಿಷ್ಕಳಂಕರಾಗುತ ಬೆಳಗಿಹರ್ ಪರಿಸರದೆ !
ಆರಾಧನೆಗಿಂ ಪಿರಿದಾದ ಧರ್ಮವದಿಲ್ಲ
ಸ್ವಾರ್ಥ ಶೋಷಣಂಗಳವಿಲ್ಲದಿರೆ ಸ್ವಾಂತದೊಳ್ !
ಬಾಳನೇರಿಸುವುದೆತ್ತರಕೆ ಮೇಣ್ ಬಿತ್ತರಕೆ
ಮತ್ತಮಾನಂದಕೆ ತ್ಯಾಗರೂಪಾರಾಧನೆ,
ಮಿಗಿಲ್ ಸಿರಿವಂತಿಕೆಗೆ ಜಗದ ಜಸವಂತಿಕೆಗೆ
ಬೇರಾವ ವಿಕಾರವಿರಹಿತ ಸಂತೃಪ್ತಿಗೆ !
ಶಿವಾರಾಧನೆಯೊಳಡಗಿರ್ದ ಮನಭಾವಂಗಳ್
ಶಿವಲಿಂಗ ಸ್ವರೂಪಗಳಾಗಿ ತಾವಿರ್ಪವು ;
ಗಣಾರಾಧನೆಯೊಳ್ ತೊಡಗಿರ್ದ ತನುಕರಣೇಂ
ದ್ರಿಯಂಗಳ್ ಸತ್ಕ್ರಿಯಾಚಾರದೊಳಗಿರ್ಪವು.
ಶಿವಗಣಾರಾಧನೆಯ ಮಾಡಿ ಮೇಣ್ ನೋಡಿ ಮೇಣ್
ಹಾಡಿ ಮೇಣ್ ಬೇಡಿ ಮೇಣ್ ಕೂಡಿ ನಲಿದಾಡುವರ್
ಹರುಷದೊಳ್ ಮಾಡುವರ್ ಹರುಷದೊಳ್ ನೋಡುವರ್
ಹರುಷದೊಳ್ ಹಾಡುವರ್ ಹರುಷದೊಳ್ ಕೂಡುವರ್

CC-0. Jangamwadi Math Collection. Digitized by eGangotri

ಪರಿಕಿಸಲ್ ಶಿವಗಣಾರಾಧನಂ ಸುಖಮಯಂ !
ಸುಖಮಯಾರಾಧನದ ನಿಲವ ತೋರಿದಾತಂ
ಸತ್ಯಸುಖಿಯಹ ದೊಡ್ಡ ಬಸವಾರ್ಯಗುರುನಾಥಂ !
ಶಿವಗಣಾರಾಧನೆಯ ಸತ್ಕೃತ್ಯದೊಳಿರಲ್ಕೆ
ಸಂಸಾರ ನಿರ್ವಾಣ ತಾನಾಗಿ ಶರೀರ ೧೫೦
ಸಂಮೋಹವಡಗಿ ಸಂಮೋದವೊದಗಿ ನಿಲ್ವರು.
ಗಂಧರಸರೂಪ ಸ್ಪರ್ಶ ಶಬ್ದಂಗಳೆಲ್ಲಂ
ಶಿವಪ್ರಸಾದಂಗಳಾಗಿ ಪರಿಣಮಿಸುವವದರೊಳ್
ಶಿವಗಣಾರಾಧನೆಗೊಲಿದ ಮನಂ ಪರಿಯದು
ತುಂಬಿ ತಾನು ತುಳುಕದು, ನಂಬಿನಚ್ಚಿ ಬಿಚ್ಚದು.
ಧನ್ಯರಯ್ ಶಿವಗಣಾರಾಧನೆಯ ಮಾಳ್ಪರು,
ಪುಣ್ಯರಯ್ ಶಿವಗಣಾರಾಧನೆಯೊಳಿರ್ಪರು.
ಭಕ್ತರೊಳ್ ಭಕ್ತಿಯಾಗಿ ಭಾವಭರಿತೆಯಾಗಿ
ಗುರುವಿನಾರಾಧನೆಯೊಳು ಮೆಯ್ಮರೆತಿರುವರು
ಗುರುಹಸ್ತಸಂಜಾತೆ ಶರಣನ್ನೆ ಮಾಮಾತೆ ೧೬೦
ಸಾಮೂಹಿಕದ ಸಮಾರಾಧನೆಯೊಳಳ್ಕುರಿಂ !
'ಕಂಡ ಭಕ್ತಂಗೆ ಕೆಮ್ಮುಗಿವಾತನೇ ಭಕ್ತ,
ಮೇಣ್ ಸದುವಿನಯವೇ ಸದಾಶಿವನೊಲುಮೆಯಯ್ಯ
ಕೂಡಲಸಂಗಮದೇವನಂತಲ್ಲದೊಲ್ಲ
ನಯ್ಯ–ಎಂಬ ಬಸವಣ್ಣ ನಚನದಂತಿರ್ದಳವ್ವೆ !
ವಿನಯವೇ ತಾನಾಗಿ ತಾನೇ ವಿನಯವಾಗಿ !!
ಗುರುವಿಂಗೆ ತಾನೊಲಿದ ಶರಣನ್ನೆ ಭಕ್ತರ್ಗೆ
ತವೆಯೊಲಿದು ಕರುಣರಸಮಂ ಬೀರುತಿರ್ದಳು ;
ಗುರುಪ್ರಾಣಿಯಾದಂತೆ ಭಕ್ತಜನ ಪ್ರೇಮಿಯಾ
ಗಿರ್ದಳಾ ಶರಣನ್ನೆ ಸಹಜಸ್ವಭಾವದೊಳ್ ! ೧೬೦

ಒರ್ಮೆಯುಂ ಕಾಮುಕಾಂಕ್ಷೆಯಂ ಪಿಡಿದವಳಲ್ತು
ಮತ್ತಮಾ ಚಂದ್ರಂಗೆ ಸೆರಗೊಡ್ಡಿದವಳಲ್ಲ
ವಿರಹಕ್ಕೆ ಧೃತಿಗೆಟ್ಟು ನಡೆದವಳ್ ಮುನ್ನಲ್ಲ
ಎಲ್ಲರ್ಗೆ ಹಂಗುಗಿತ್ತಿಯಾದವಳಲ್ಲ ತಾಯ್ !

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಮಹಾ ಶಿವಯೋಗದ ಗುಡದೂರ ಆರಾಧನಂ

ಮೋಹಕ್ಕೆ ಕಳವಳಿಸಿ ತಲೆಕೆಳಕ್ಕಾದವಳಲ್ಲ
ಸಂಸಾರ ಕಾಂತಾರದಲ್ಲಿ ಸುಳಿದವಳಲ್ಲ.
ಲಿಂಗಪತಿದೇವನ ವಿರಹವ ತೊರೆದವಳಲ್ತು
ಲಿಂಗಸಂಗಸಮರಸ ಸುಖಕೆ ವಂಚಿತಳಲ್ತು
ಕೈಯೊಳಗೆ ಲಿಂಗಯ್ಯ ಕಣ್ಣೊಳಗೆ ಲಿಂಗಯ್ಯ
ಮನದೊಳಗೆ ಲಿಂಗಯ್ಯ ಉಸಿರೊಳಗೆ ಲಿಂಗಯ್ಯ ೧೫೦
ಮೇಣ್ ಭಾವ ಜೀವಂಗಳೊಳಗೆಲ್ಲ ಲಿಂಗಯ್ಯ
ನನಸಿನೊಳು ಲಿಂಗಯ್ಯ ಕನಸಿನೊಳು ಲಿಂಗಯ್ಯ
ನಿದ್ದೆಯೊಳು ಲಿಂಗಯ್ಯ ಎದ್ದೊಡೆಯು ಲಿಂಗಯ್ಯ ;
ಉಂಡೊಡೆಯು ಲಿಂಗಯ್ಯ ಉಟ್ಟೊಡೆಯು ಲಿಂಗಯ್ಯ
ಗುರುಪುತ್ರಿ ಗುರುಪುತ್ರನಂ ಬಿಟ್ಟಿರುತಿರಲಿಲ್ಲ
ಲೋಕಕಲ್ಯಾಣ ಕಾರ್ಯಂಗಳೊಳ್ ಮರೆತು ದೂ–
ರಾಮೊಡೆಂ ಬಾಯಾರಿ ಬಳಬಳಲು ತಿರ್ದಳಯ್
ಹರಣ ಹಾರಿ ಹೋದಂತೆ ಹವ್ವಳಿಸುತಿರ್ದಳಯ್ !
ಅಂಗಯ್ಗೆ ಕಂಗಳ್ಗೆ ಚಿತ್ತಕ್ಕೆ ಭಾವಕ್ಕೆ
ಬಂದಲ್ಲಿ ಪ್ರಾಣಕ್ಕೆ ಪ್ರಾಣ ಬಂದಂತಾಗಿ ೧೬೦
ಹರುಷ ಮುಮ್ಮಡಿಸಿ ಮೇಣ್ ನೂರ್ಮಡಿಸಿ ಪೆರ್ಚ್ಚಗುಂ !
ಕರಸ್ಥಲಲಿಂಗಮಂ ಕಾಣುತ್ತ ಕಾಣುತ್ತ–
ಕಂಗಳಂ ಮುಚ್ಚುವಳ್ ಚಿತ್ತದೊಳ್ ಹೆಚ್ಚುವಳ್ ;
ಲಿಂಗಯ್ಯ ಮಂತ್ರಮಂ ಕೇಳುತ್ತ ಕೇಳುತ್ತ–
ಲಿಂಗದೊಳ್ ತಲ್ಲೀನ ಭಾವಮಂ ತಳೆಯುವಳ್ ;
ಲಿಂಗಸ್ವರೂಪಮಂ ನೆನೆಯುತ್ತ ನೆನೆಯುತ್ತ
ಲಿಂಗ ಸಂಗದೊಳ್ ಸಮರಸಂಗೊಳ್ಳುವಳ್ಗಡಾ ;
ಪರಮಸುಖ ಪರಿಣಾಮದೊಳ್ ಪರವಶಳಾಗುವಳ್ !
ಕೇಳವ್ವ ಕೇಳವ್ವ ಓ ಕೆಳದಿ ನಾನೊಂದು
ಕನಸುವಂ ಕಂಡೆನೌ ಗುರುಪುತ್ರನಂ ಕಂಡೆ, ೧೭೦
ಚಿನ್ಮಯಾತ್ಮ ಸ್ವರೂಪನಂ ಕಂಡೆಳ್ಚತ್ತೆನೌ–
ಎಂತೆಂದು ಪೇಳುವಳ್ ಕನಸಿನೊಳ್ ಕೆಳದಿಗೆ !
ಗುರಲಿಂಗದ ಪೆಚ್ಚುಗೆ ಅಚ್ಚುಗಂ ನಿಚ್ಚದೊಳ್

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಮಹಾ ಶಿವಯೋಗದ ಗುಡದೂರ ಆರಾಧನಂ

ಬೆಚ್ಚಡಂ ಬೆಸುಗೆಯರಿಯದೊಲಾಯ್ತು ತಾಯಿಯೊಳ್ !
ಶರಣಪ್ಪೆ ಮನ ಮಾರುಗೊಂಡಿಹುದು ಲಿಂಗದೊಳ್
ಮತ್ತಮೀ ತನು ಸೂರೆಗೊಂಡಿಹುದು ಸಂಗದೊಳ್
ಇರುವೆಲ್ಲ ಅರಿವೆಲ್ಲ ಲಿಂಗಮಯವಾಗಿಹುದು ;
ನಿರಿಯೆಲ್ಲ ಗುರಿಯೆಲ್ಲ ಲಿಂಗಮಯಮಾಗಿಹುದು.
ಕಾಯಗುಣ ಕೆಟ್ಟತ್ತು, ಮನದಗುಣ ಮಾಣಿತ್ತು ;
ಹರಣಗುಣ ಹರಿದಿತ್ತು, ಜೀವಗುಣ ಜಾರಿತ್ತು ;
ಲಿಂಗಗುಣ ಸರ್ವಾಂಗದೊಳ್ ಸಮನಿಸಿತ್ತವ್ವೆಗೆ
ಮನ ವೇದ್ಯವಾಯಿತ್ತು ಘನಲಿಂಗ ಸೌಖ್ಯಮದು ;
ಆ ಪರಮ ಪರಿಣಾಮದೊಳೇನು ಮರಿಯದಿಹಳು.
ಅರ್ಚನ ಕ್ರಿಯೆಯಲ್ಲಿ ತ್ಯಾಗಾಂಗಮವಿರಳಂ
ಅರ್ಪಣ ಪ್ರಜ್ಞೆಯೊಳ್ ಭೋಗಾಂಗಮವಿರಳಂ
ಅನುಭವಾನಂದದೊಳ್ ಯೋಗಾಂಗಮವಿರಳಂ
ಲಿಂಗಾಂಗ ಸಂದಳಿದು ಸ್ವಯಲಿಂಗವಾಗಿಹಳ್
ಆಂಗಸಂಗ ಕಿಂಚಿತ್ ಉಳಿಯದಂತಾಗಿಹಳ್ !
ತ್ಯಾಗಮೆಂಬುದು ಕದಳಿ, ಭೋಗಮೆಂಬುದು ಕದಳಿ ;
ಯೋಗಮೆಂಬುದು ಕದಳಿ, ತ್ರಿವಿಧ ಕದಳಿಯಳಿದಳು
ತಾನು ತನ್ನೊಳು ತಾನೆಯಾಗಿ ನಿಜದೊಳುಳಿದಳು,
ಜ್ಞಾನ ಶೂನ್ಯಮದಾಗಿ ನಿಶ್ಶೂನ್ಯದೊಳುಳಿದಳು.
ಕಟ್ಟಳೆಗೆ ನಿಲ್ಲದಿಹ ಮನವ ಕಟ್ಟಳೆಗೆ ತಂ
ದಿಹಳ್ ತನ್ನಿಚ್ಛೆಯಲಿ ವರ್ತಿಸುವ ಮನವನವಳ್
ಸ್ವಚ್ಛಗೊಳಿಸಿ ಬಚ್ಚಬರಿಯ ಬಯಲಿನೊಳಿರಿಸಿಹಳ್
ನಿಚ್ಚ ಶ್ರೀಗುರುಪಾದದೊಳ್ ಬೆಚ್ಚಂತಿರಿಸಿಹಳ್
ಗಾಳಿ ಬೀಸದ ನೀರಿನಂತೆ ನಿಶ್ಚಲದೊಳಿತ್ತು
ಮೋಡವಿಲ್ಲದ ಸೂರ್ಯನೊಲಂತೆ ಬೆಳಗುತಿತ್ತು ;
ಕಾಯಮದು ಪ್ರಾಸಾದಿಕ ಕಾಯವಾಗಿತ್ತು
ತಾಯ್ ನಿದ್ದೆಯದು ಯೋಗಸುಸಮಾಧಿಯಾಯಿತ್ತು
ಜಗದೊಳಗಿದ್ದು ಜಗವಂ ಗೆದ್ದು ಬಾಳಿದಳ್
ಗುಡದೂರ ಗುರುವಿನಾರಾಧನದ ಬಲದಿಂದೆ !

CC-0. Jangamwadi Math Collection. Digitized by eGangotri

ಸಜ್ಜಲ ಶರಣವ್ವೆ

ಮಹಾ ಶಿವಯೋಗದ ಗುಡದೂರ ಆರಾಧನಂ

ಶರಣಾಯಿ ಚಿತ್ತಮದು ಸುಯಿದಾನಮಾಗಿತ್ತು
ಸಚ್ಚಿತ್ಸುಖ ಲಿಂಗಮದಜ್ಯೊತ್ತಿದಂತಿತ್ತು
ಹಡಪದಪ್ಪಣ್ಣ ಸತಿ ಲಿಂಗಮ್ಮ ಶರಣೆಯೊಲ್
ನಡೆ ನುಡಿದು ನಿಜಮುಕ್ತೆಯಾಗಿಹಳ್ ನೈಜದೊಳ್ !
ತನುವೆಂದಡಿದು ತಾಮಸಕ್ಕೊಳಗು ಮಾಳ್ಪುದು,
ಮನವೆಂದಡೆ ಮರೆವೆಗೆ ತಾನೊಳಗು ಮಾಳ್ಪುದು
ಧನವೆಂದಡಿದು ಲೋಭ ಪಾಶದೊಳಿರಿಸುವುದು
ತನುಮನ ಧನಂಗಳಂ ಗುರುಚರಣಕರ್ಪಿಸಿಹಳು ;
ಸತ್ಪಥದೆ ನಡೆನಡೆದು ಘನಕೆ ಘನವಾಗಿಸಿಹಳು
ಈ ಲೋಕ ಕಲ್ಯಾಣ ಪಥದಲ್ಲಿ ನವೆಸಿಹಳು.
ಬ್ರಹ್ಮಾಂಡದೊಳ್ ಪುಟ್ಟ ಬ್ರಹ್ಮಡೊಳಗಾದಳು.
ಭವದಲ್ಲಿ ತಾನಿದ್ದು ಭವಪಾಶ ಹರಿದಿಹಳು
ಮರ್ತ್ಯಲೋಕದೊಳಿದ್ದು ಮೃತ್ಯುವಂ ಗೆದ್ದಳು
ಕರ್ತಾರ ಕಮ್ಮಟಕೆ ಶರಣವ್ವೆ ಸಲ್ಲಿದಳು.
ಭವದ ಕತ್ತಲೊಳಗೆ ಮುಳುಗಿದವಳು ತಾನಲ್ಲ
ಶಿವದ ಬೆಳಗಿನೊಳಗೆ ನಡೆಯದಿರುವವಳಲ್ಲ
ಜೀವಗುಣಗಳ್ಗೆ ಜಾರಿಬೀಳ್ದವಳವಳಲ್ಲ
ಪ್ರಾಣಪ್ರಕೃತಿಗೆ ಸಿಲುಕಿ ಸಣ್ಣಗಾದವಳಲ್ಲ
ಗುಡದೂರ ಗುರುವಿನಾರಾಧನೆಯು ನೈಜದೊಳ್
ಶಿವಯೋಗ ತಾನಯ್ತು ಶರಣವ್ವೆ ಸಾಧನೆಗೆ !
ಮುತ್ತಮಾ ಸುತ್ತು ಮುತ್ತಣ ಭಕ್ತಜನಗಳ್ಗೆ
ಮಣಿಮುತ್ತು ಮಾಣಿಕ್ಯ ಕಂಡಂತೆ ತಾನಾಯ್ತು
ಆಣೆಯರ ದೃಮೃತದೋಗರವನುಂಡವೋಲಾಯ್ತು ;
ಗುಡದೂರ ಪೂಜೆಯಂ ನೋಡುತ್ತ ನೋಡುತ್ತ
ಮಂತ್ರಮಯ ಶಬ್ದಮಂ ಕೇಳುತ್ತ ಕೇಳುತ್ತ
ಗುರುದೇವ ಸ್ತೋತ್ರಮಂ ಮಾಡುತ್ತ ಮಾಡುತ್ತ
ಪರಿಣಾಮ ಪರವಶದೆ ಕೂಡುತ್ತ ಕೂಡುತ್ತ
ನವಿರೇಳುತ ನಲಿನಲಿದಾಡಿದರ್ ಜನರೆಲ್ಲ !

CC-0. Jangamwadi Math Collection. Digitized by eGangotri

ಗುಡದೂರ ಗುರುದೇವನಾರಾಧನೆಯ ತೀರ್ಚಿ
ಪಿಂತಿರುಗಿದಳ್ ಶರಣೆ ಸಜ್ಜಲದ ಗುಡ್ಡಕ್ಕೆ
ನೀರಿರದ ಹೆಗ್ಗೆರೆಗೆ ಮಳೆನೀರು ತಾಂ ಪರಿದು
ಬಂದಂತೆ, ಕಳ್ತಲೆಯ ಹೆಮ್ಮನೆಗೆ ನೇಸರಂ
ಬಂದಂತೆ, ಮತ್ತೆ ಹಣ್ಣೆಲೆಗಳುದುರಿ ನಿಂತಿಹ
ಹೆಮ್ಮರಕೆ ಬಸಂತಂ ಪೆಡಗಿನಿಂ ಬಂದಂತೆ !
ಸಜ್ಜಲಗುಡ್ಡದಾ ಸದ್ಭಕ್ತಜನಂಗಳ್
ಮಾತೃಸಂದರ್ಶನದ ಸಂಭ್ರಮಾಧಿಕ್ಯದಿಂ
ಭಕ್ತಿಯಿಂ ಬರಮಾಡಿಕೊಂಡಿಹರ್ ಸೂರ್ಯೋದ–
ಯದೊಳ್ ಪಕ್ಷಿಸಂಕುಳಮೆಳ್ಚತ್ತು ಮುರಿವಂತೆ ೨೪೦
ಗಜಬಿಜಿಸುತ ಜಲಿಸುತ ಮಿಗೆ ನಲಿನಲಿದಾಡುತ
ಪಾಡಿದರ್ ಮಂಗಳಂ ಹಚ್ಚಿದರ್ ಕಪ್ಪುರಂ
ಹಾಕಿದರ್ ಸಾಷ್ಟಾಂಗನಮಸ್ಕಾರಮ ನೇಳ್ದು
ಕೇಳಿಹರ್ ಗುಡದೂರ ಗುರುದೇವನಾರಾಧ–
ನೋತ್ಸವ ವಿಚಾರಮಂ ಮತ್ತಂ ವಿಶೇಷಮಂ
ಪೊಂದಿಹರ್ ಮತ್ತನಿತು ಮಹತ್ತಮಾನಂದಮಂ !
ಪೊಸಶಕ್ತಿ ಬಂದಂತೆ ತಾನಿತ್ತು ಭಕ್ತರ್ಗೆ
ಗುರುಪೂಜೆಯಂ ಹೃದಯ ಭಕ್ತಿಯಿಂ ನೆರವೇರ್ಚಿ
ಗುರುತರದ ದೀಪ್ತಿಯಂ ತಾಂ ಪಡೆದು ಮರಳಿರ್ದ
ತಾಯಿಯಂ ನೆರೆಗಂಡು ಹೃದಯ ಹರುಷಂಗೊಂಡು ! ೨೫೦

ಗುಡದೂರಿನೊಳ್ ಗುರುವಿನೊಳ್ ಲಿಂಗಪೂಜನಂ,
ಸಜ್ಜಲದ ಗುಡ್ಡದೊಳ್ ಲಿಂಗದೊಳ್ ಗುರುಪೂಜೆ
ಸಾಪೇಕ್ಷ ಭಾವದಿಂ ಸಮರಸದ ಭಕ್ತಿಯಿಂ
ಕ್ರಿಯಾಜ್ಞಾನಾನುಭಾವಾನಂದದಿಂ ಕೂಡಿ
ಮೊದಲಾಯ್ತು ಸಕಾಲಕೆ ಮೆಯ್ಮಿಂದು ಜಲದಲ್ಲಿ
ಮನಮಿಂದು ಪರಮಪಂಚಾಕ್ಷರಿ ನೆನಹಿನಲ್ಲಿ
ಹರವಸದುಡಿಗೆಯುಟ್ಟು ಮೇಣ್ ಕಾಯ್ದೊಡಿಗೆದೊಟ್ಟು
ಗುರುದೇವನಾಣತಿಗೆ ನಸುದಪ್ಪದಂತೆವೋಲ್
ಗುರುದೇವ ಚಿತ್ಕಳೆಯು ಮೆಯ್ವೆತ್ತು ಬಂದಂತೆ

CC-0. Jangamwadi Math Collection. Digitized by eGangotri

ತಾನಿರ್ದು ಪೂಜಿಪಳ್ ಸತ್ಯಶಿವ ಶರಣಪ್ಪೆ
ಲಿಂಗನುಯ ತೇಜಮದು ಸ್ವಾಂಗದೊಳ್ ಸಮನಿಸಿ
ಮುಂಗಳಮಯೋಜದಿಂ ತುಂಗತರ ಭಾವದಿಂ
ಕೂಡಿ ಆತ್ಮೋದ್ಧಾರ ಮೇಣು ಲೋಕೋದ್ಧಾರ
ಗಳಿಗಾಗಿ ತನ್ನೊಳಗೆ ತಾನಾಗಿ ಮಿಗಿಲಾಗಿ
ಪೆರತೊಂದನರಿಯದಲೆ ನೋಡದಲೆ ನೆನೆಯದಲೆ
ಹಸಿವು ತಿಸೆಗಳನೀಗಿ ಹಸನಾದೊಲವು ಬೀಗಿ !
ತಪಸಿನಿಂ ದಿಟ್ಟಿಯಿಂ ವಾಣಿಯಿಂ ಪ್ರಸಾದವ
ಕೊಡುಗೆಯಿಂ ಮಾನವರ ಕಷ್ಟ ಕಾರ್ಪಣ್ಯಗಳಂ
ತೊಡೆಯುವಳ್ ಸಂತತಂ ಸಜ್ಜಲದ ಶರಣಪ್ಪೆ
ತನ್ನ ಹೃದಯಾನುಕಂಪದಿಂ ಚನ್ನತನದಿಂ !
ಮತ್ತಮಾ ಸರ್ವಸಮಭಾವದಿಂ ಸ್ಪರ್ಧದಿಂ
ಜೀವರೊಳ್ ಶಿವಶಕ್ತಿಯಿರುವುದಂ ಮನಗಂಡು !

೧೪. ಕಟ್ಟಿ ಶಿವಲಿಂಗಮ್ಮ ಕಂಡ ಶರಣಪ್ಪೆ !

ಕನ್ನಡ ಬರೆಹಗಾರ್ತಿ ಕಟ್ಟಿ ಶಿವಲಿಂಗಮ್ಮ
ಚನ್ನವಹ ಶರಣಪ್ಪೆ ದರ್ಶನವ ಪಡೆದು ಮೆಯ್-
ರೋಮಾಂಚಗೊಂಡುದಂ, ಹೃದಯದಲ್ಲಾನಂದ-
ಮುಕ್ಕಿ ಹೊರ ಹರಿದುದಂ ಬಗೆದುಂಬಿ ಬಣ್ಣಿಪಳ್
ಗಿರಿರಾಜ ರಚಿತ 'ಸಜ್ಜಲಶ್ರೀ' ಗ್ರಂಥದೊಳ್
ಆದನಿಲ್ಲಿ ರೂಹಿಸುವೆ ಕಾವ್ಯಮಯ ಶೈಲಿಯೊಳ್ ;
'ಅದೆಂತಹ ಮೆಯ್ಮಾಟ, ಅದೆಂತಹ ಕಣ್ಣೋಟ,
ಎಂತಹ ಸಗುವಿನಾಟ ? ನೆರಿನೋಡಿ ಮನಮುಗ್ಧ
ಳಾಗಿ ಮೆಯ್ಮರೆತು ನಾಂ ನಿಂತೆ, ತಾಯ್ ನಿಂತಳಾ
ನಾವಿರ್ವರಂತೆನಿತು ಪೊಳ್ತು ನಿಲ್ಲುತಿರ್ದೆವೋ
ಅನಿತರೊಳ್ ಭಕುತನೊರ್ವನಲ್ಲಿ ಗೈತಂದು
'ತೇರಿನಾ ಗಾಲಿಗಳು ಬರ್ತಾ ಇದ್ದಾವೆ ತಾಯಿ'
ಎಂದೆಚ್ಚರಿಸಿಹನಾಗಂ ಶಿವಶರಣೆ ಮಾತನಾಡಿದಳ್ ;

CC-0. Jangamwadi Math Collection. Digitized by eGangotri

'ಯಾವೂರು ನಿಮದಪ್ಪ ಮುಖತೊಳೀರಿ, ಪ್ರಸಾದವ
ತಗೊಳ್ಳಿರಿ ; ಮತ್ತಿನವರಿಗೆ ವ್ಯವಸ್ಥೆಯ ಮಾಡಿರಿ ;
ಇಂದು ಕತ್ತಲಾಗಿದೆಯಪ್ಪ ನಾಳೆ ಹೋಗುವಿ–
ರಂತೆ' ಎಂಪಪ್ಪಣೆಯ ಕೊಡಿಸಿದಳು ಶರಣಪ್ಪ ;
'ಪ್ರತಿಮಾತು ಮಾತೆಯಾ ಮುಖದಿಂದೆ ಮುತ್ತುದುರಿ–
ದಂತಾಗುತಿದ್ದವಾ' ಆಕೆ ಕಣ್ಣಿನ ಬೆಳಕು
ನನ್ನ ಜೀವನ ಕತ್ತಲೆಯನೆ ಕಳೆದಂತೆನಿಸಿತಾ ! ೨೦

ಮರುದಿನಂ ನನ್ನಾಳ್ದ ತಿಳಿಸಿದರ್ ಶರಣೆಗೆ ;
'ಈಕೆ ಮನಸಿಗೆ ಬಹಳ ಹಚ್ಚಿಗೊಂಡು ಕೊರಗ–
ತಾಳ್ಮಮ್ಮಾವರೆ ನೀವು ಸರಿಯಾಗಿ ಹೇಳಿರಿ !'
ಯಪ್ಪಕ, ನಿಮ್ಮಡು ಹಾಲು ಜೇನು ಸೇರಿದಂತಹ
ಸಂಸಾರ, ಯೆಪ್ಪಕ ಏನೂ ಚಿಂತೆ ಬ್ಯಾಡ್ರಿಪ್ಪಕ ;
ಆಕೀಗ ಮನದೊಳಗೆ ಇದ್ದದ್ದು ಬಿಡಬೇಕಾ–
ದ್ರು ಆ ಸ್ಥಾನದೊಳಗ ಮತ್ತೊಂದು ಬೇಕಲ್ರಿಪಾ ;
ಆಗ ತಾನೆ ಬಿಡ್ತಾಳ' – ಈ ನುಡಿ ಮುತ್ತುಗ
ಳನ್ನಾಗಳೆಲ್ಲರೂ ಒಂದೊಂದು ರೀತಿಯಿಂ–
ದರ್ಥವಂ ಮಾಡಿದರ್ ; ಆದರೀಗದರ ನಿಜ ೩೦
ವಾದರ್ಥವಾಗಿಹುದು ; ಅಂದು ಪ್ರಪಂಚಕ್ಕೆ
ಕೊರಗುತಿಹ ಮನವಿಂದು ಪಾರಮಾರ್ಥಕ್ಕೆ ಕುಣಿ
ದಾಡುತಿದೆ ; ಈ ಎನ್ನ ಭವಿಷ್ಯಮನಂದೇ
ಶರಣಪ್ಪ ತಿಳಿದಿರ್ದ ಕೆಂದಡೇನಚ್ಚರಿಯೊ ?
ಸಾಗುತಿವೆ ಶರಣಾಯಿಗಿವೆಲ್ಲ ಸಹಜಮಾಗಿ !

ಶರಣಪ್ಪ ನಿರಾಡಂಬರ ಜೀವಿ, ವಿನಯ ಶ್ರೀ–
ಲೆ, ಮೃದುವಚನ, ವಿಶಾಲಹೃದಯಂ ಮತ್ತಿತರರ
ದುಕ್ಕ ದುಮ್ಮಾನಗಳಂ ತನ್ನವೆಂದೇ ತಿಳಿದು
ಪರಿಹರಿಸುವಳಳುತ್ತ ಬಂವವರ್ ನಗುತ್ತ
ತೆರಳುವರ್ ; ಉಸಿರ್ಗರೆಯುತ್ತ ಬಂದವರ್ ನಲಿ– ೪೦
ಯುತ್ತ ನಡೆಯುವರ್ ನೆರೆ ; ನೋಡೆ ಶಿವರಣಪ್ಪ

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಕಟ್ಟಿ ಶಿವಲಿಂಗನ್ಮು ಕಂಡ ಶರಣಪ್ಪೆ

ವರ ವೀರ ವಿರಾಗಿಣಿ, ಜಿಜ್ಞೋತಿಮಣಿ, ಶಿವ
ಕಳೆಯ ಖಣಿ, ಮುತ್ತವಾ ಶಿವಾನುಭವದ ಗಣಿ,
ನೆನೆದವರ ಮನದರಗಿಣಿ ; ಪ್ರಾಪಂಚಿಕರ್ ಬಂದ
ಡಂ ಪಾರಮಾರ್ಥಿಗರ್ ಬಂದಡಂ ಸರಿ ಮೀಣು
ಸಾಧುಗರ್ ಬಂದಡಂ ಸಂನ್ಯಾಸಿಗರ್ ಬಂದ –
ಡಂ ದಿಟಂ ಸರ್ವರ್ಗೆ ಅವರವರ ಭಾವದಂ
ತವರವರ್ಗೆ–ತೋರುವಳ್ ಮಾಮಾತೆ ಜನವಿನುತೆ !
ತಾಯಿಗಂ ಶಿವಯೋಗಿಗಳಾಗಮಿಸಿದೊಡಾಗು–
ವಾನಂದಕೆ ಪಾರಮುದಿರಲಿಲ್ಲ ; ಜಂಗಮ-
ಪ್ರೇಮಿ, ಲಿಂಗದಕಾಮಿ, ಗುರುನೇಮಿ ಮಾತಾಯಿ !
ಲಿಂಗಾಂಗ ಸಾಮರಸ್ಯ ಸುಖವನ್ನುಣ್ಣುತಿಹ
ಶಿವಯೋಗಿಣಿ ಶಿವಶರಣೆ ಆಕೆಯ ಸರ್ವಾಂಗ
ಮುಂ ಲಿಂಗಮಯಮಾಗಿ ಪರಿಣಮಿಸಿದತ್ತು ಮಿಗೆ,
ಜಿಹ್ವೆಯುಂ ಮಹಾಮಂತ್ರಮಂ ಪಲಿಸಿ ಪಲಿಸಿ
ಗುರುಲಿಂಗಮಾಗಿತ್ತು ; ಅಂತೆಯೇ ಪೋದ ಭ-
ಕ್ತರಿಗೆಲ್ಲರಿಗೇನಪ್ಪಣೆಯನೀವಳೋ ಆದೆ-
ಲ್ಲವುಂ ದಿಟಮಾಗಿ ಪರಿಣಮಿಸುತಿತ್ತರಿಯಲ್ಕೆ ;
ಅದೇ ಮಾಯೆಯಲ್ಲಂ ಮತ್ತೆ ಜಾದುವಲ್ಲಂ
ಮೋಜುವಲ್ಲಂ ಗೋಜವಲ್ಲಂ ಸಹಜಮಾಗಿ
ತಾಯ ಗುರುಲಿಂಗದಿಂ ಸ್ಪುರಿಸಿದುದು ಸತ್ಯಮದು.
ಅದೊ ಅಲ್ಲಿ ಎನ್ನವರ್ ಅನ್ನಿಗರ್ ಎಂಬುವಾ
ಭೇಧ ಭಾವಮದಿಲ್ಲಮವರ್ಗಂ ಪೇಳವೇ–
ಳ್ಕುಮಿವರ್ಗಮರಿಯಲ್ಕೆ ಬೇಡೆಂಬ ಮನಮಿಲ್ಲ-
ವೆಲ್ಲರುಂ ಶಿವನಣುಗರಾಕೆಯಾ ದೃಷಿಯೊಳ್ !
ನೇತ್ರದೊಳ್ ಶಿವಲಿಂಗಮುದು ನೆಲಸಿರಲ್ ತಾಯಿ
ದಿಟ್ಟಿಸಿದುದೆಲ್ಲವುಂ ಶಿವಮಯಂ ತಾನಕ್ಕು !
ಆ ದಿಟ್ಟಿಯೊಳದೆನಿತಘಟಿತ ಘಟಿತಂ ಶಕ್ತಿ
ಯಡಗಿದೆಯೊ ತಾನದಂ ಬಲ್ಲವರೆ ಬಲ್ಲರಯ್ !
ಆರಿಗುಂ ಕಳೆಯಲ್ಕಸಾಧ್ಯವಹ ರೋಗರುಜಿ–

CC-0. Jangamwadi Math Collection. Digitized by eGangotri

ಸಜ್ಜಲಶರಣಪ್ಪೆ

ಕಪ್ಪಟ ಶಿವಲಿಂಗಮ್ಮ ಕಂಡ ಶರಣಪ್ಪೆ

ನಗಳುಮಾಕೆಯ ಕೃಪಾದೃಷ್ಟಿಯಿಂ ವಾಸಿಯಾ-
ದನೇಕ ಉದಾಹರಣಗಳಿರುವವು ನೋಡಲ್ಕೆ
ಭವರೋಗಮಂ ಬಿಡದೆ ಕಿತ್ತಿಸೆವ ಮಹಾವೈದ್ಯ–
ಳಾ ಮಾತೆ ! ಆಕೆಯಾ ತ್ವಚದಲ್ಲಿ ಜಂಗಮ-
ಲಿಂಗಮದು ಜಾಗೃತಂ ತಾನಾಗಿ ನೆಲಸಿಹುದು ;
ಶರಣಪ್ಪೆ ಸ್ಪರ್ಶಿಸುತಕೊಟ್ಟ ಹುಲ್‌ಕಡ್ಡಿಯುಂ
ಸಂಜೀವಿನಿಯಾಗುವುದರೊಳ್ ಸಂದೆಗವಿಲ್ಲ.
ಕರಣದಲ್ಲಿ ಪ್ರಸಾದಲಿಂಗಮದು ಪ್ರಾಪ್ತಿಸಿದ
ಕತದಿಂದೆ ನುಡಿಯೆಲ್ಲ ಶಿವಕೀರ್ತನಮಪ್ಪುದು ;
ಅನುಭಾವ ಪದ್ಯಗಳ್ ಸ್ವಚ್ಛದಿಂ ಕೇಳುವವ್ ; ೮೦
ಗಾಜು ಗೋಜಮ್ಮಂಗೆ ಕೇಳಿಸುವುದಿಲ್ಲ.
ಹೃದಯದೊಳ್ ಮಹಾಲಿಂಗ ಮುಹೂರ್ತಗೊಂಡಿಹುದು ;
ಶರಣಪ್ಪೆ ಸುತ್ತಲುಂ ಸದ್ಭಾಸನೆಯು ಸದಾ
ಕಾಲದೊಳ್ ಹರಡುತ್ತಿರುತ್ತಿಹುದು ಭಾವಿಸಲ್ !

ಮಾರ್ಗದರ್ಶಿಯಾಗಿಹಳಾ ಶರಣೆ ಶಿವಯೋಗ
ಸಾಧಕರ್ಗೆ ಮತ್ತಂ ಕೈದೀವಿಗೆಯಾಗಿ-
ರ್ದ್ದಳನುವನಿತ್ತನುಷ್ಠಾನಮನಲ್ಲಿ ಮಾಳ್ಪರ್ಗೆ !
ಆಕೆಯಾ ಮುಂದೆ ಶಿವಶರಣರ ಶಿವಯೋಗಿ
ಗಳ ಮಾತನೆತ್ತಿದಡೆ ಸಂತೋಷ ಬಾಷ್ಪಂಗಳ-
ನುದರಿಸುತ್ತ ಶಿವಧೋ ಶಿವದೋ ಎನುತ್ತ ಮೈ ೯೦
ದುಂಬಿ ಭಜನೆಯಂ ಮಾಡಲನುವಾಗುವರ್ ಗಡಾ !
ಆಗಳಾಕೆಯ ನೋಡೆ ಶಿವನೆ ತಾನ್, ತಾನೆ ಶಿವಂ ;
ಚಿನ್ಮಯತೆ ತನ್ಮಯತೆ ಹೈನ್ಮಯತೆಗಳಂ ತಾಂ
ಕಣ್ಣಾರೆ ಕಂಡವರೆ ಧನ್ಯರೈ ಪುಣ್ಯರೈ !
ಶರಣಪ್ಪೆ ಜೀವನಂ ತೀರ ಸಾದಾಸೀದಾ !
ತಾನೊಂದೆ ಹೊಳ್ತಲ್ಪಮಂಬಲಿಯ ಪ್ರಸಾದಂ !
ಕರದಲ್ಲಿ ಕೂರಳಲ್ಲಿ ರುದ್ರಾಕ್ಷಿ ಮಾಲೆಗಳ್
ಕಾಯದೊಳ್ ಕಾವಿಬಟ್ಟೆ ಪಣೆಯಲ್ಲಿ ತ್ರಿಪುಂಡ್ರಂ,
ಶರಣಾಯಿ ದರ್ಶನಮೆ ಮನದ ತೃಪ್ತಿಗೆ ತೃಪ್ತಿ !

CC-0. Jangamwadi Math Collection. Digitized by eGangotri

ಸಜ್ಜಲಶರಣನ್ನೆ

ಕಟ್ಟಿ ಶಿವಲಿಂಗಮ್ಮ ಕಂಡ ಶರಣನ್ನೆ

ಶರಣಾಯಿ ದರ್ಶನಕೆ ಬಂದಿಹನ್ ಬ್ರಾಹ್ಮಣಂ
ತಾನೊರ್ಮೆ ಕೆಳೆಯದಿಂದೊಡಗೂಡಿ ಸಂಸಾರ–
ದೊಳ್ ಮನಂ ಬೇಸತ್ತು ನೊಂದಿಹನ್ ಬೆಂದಿಹನ್
ಮನೆಯಲ್ಲಿ ಪತ್ನಿ ಪುತ್ರರಿದ್ದರು, ಸಿರಿಯಿದ್ದಿತು,
ಮೇಣು ಪಿರಿಯಧಿಕಾರಮಿದ್ದಿತು ; ಇರ್ದೊಡೇಂ
ಮನಕೆ ಶಾಂತಿಯು ಸಮಾಧಾನಂಗಳಿರಲಿಲ್ಲ ;
ಮನೆ ಬಿಟ್ಟು ಎಲ್ಲಿಗಾದಡಂ ಪೋಗಲೆಳಸಿರುವೆ
ಎಂದೆನುತ ಬಿನ್ನವಿಸಿಕೊಂಡಿಹನ್ ಶರಣ್ಪೆಗೆ !
'ಸಂತೋಷಮೆಲ್ಲರುಂ ಸಿರಿ ಮನೆಗಳ ಕೇಳ್ವರ್'
ಮೇಣ್ ನೀವು ಶಾಂತಿಯಂ ಕೇಳುವಿರಿ ಸಂತಸಂ ;
ಶಾಂತಿಯದು ಪೊರಗಿಲ್ಲ, ನಿಮ್ಮೊಳಿರ್ಪುದು ನೀವು–
ದುಡಿವ ಕಾರ್ಯಾಲಯವೆ ದೇವಾಲಯಂ, ನೀವು
ಮಾಡುತಿಹ ಕಜ್ಜ ಮಾತನ ಪೂಜೆ, ನೀವಲ್ಲಿ
ನಿರ್ವಹಿಸುವ ಮಾತುಗಳ್ ಜಪಂಗಳಿರಿಯಲ್ಕೆ
ಭಾವಮಿದು ದೃಢಮಾಗಿ ಬೆಳೆದು ಬರುವಂತೆಸಗ–
ಲಾಗ ನಿಮ್ಮೊಳು ಶಾಂತಿ ಸಮಾಧಾನಮೊದಗುಗುಂ ;
ನೀವ್ ಬಿಡದೆ ಪ್ರಯತ್ನಿಸಿ ಮತ್ತೊರ್ಮೆ ಬನ್ನಿರಿ,
ಎಂದುಸುರಲಾತಂಗೆ ಸಂತೋಷಮಪ್ಪುದು ;
ಎನ್ನ ಕಾರ್ಯಾಲಯವೆ ದೇವಾಲಯವಾಗಲ್
ನ್ಯಾಯ ನೀತಿರೀತಿಗಳಿಂ ಸತ್ಯಧರ್ಮದಿಂ
ನಡೆಯಲ್ಕೆ ತೊಡಗಿಹನ್ ಶಾಂತಿಯಂ ಪೊಂದುವನ್
ಮನೆತೊರೆದು ಪೋಗುವ ವಿಚಾರಮಂ ತೊಡೆದಿಹನ್ !

ಮತ್ತೊರ್ಮೆ ಬಂದಿಹರ್ ಶರಣ್ಪೆ ದರ್ಶನಕೆ
ಶ್ರೀಗಳೊರ್ವರ್ ಭಕ್ತರೊಡಗೂಡಿ ತಾಯ್ಪಳಿಗೆ ;
ತುಳಲ್ದೈಯ್ದ ಭಕ್ತರಂ ಪ್ರಸಾದಕೆ ಕಳುಹಿ
ಶ್ರೀಗಳಂ ಕೇಳಿದರನುಷ್ಠಾನ ವಿಷಯಮಂ ;
'ಸಾಗುತಿಹುದೋ ತಾಯಿ ಆಗನಿತು ಈಗನಿತು'
ಎಂದೆನುತ ಪೇಳಿಹರ್ ಸ್ವಾಮಿಗಳ್ ನಡೆವುದಂ !
'ತಮಗೆನಿತು ವಯಸ್ಸದು ಅಪ್ಪಗಳೀ ?' ಎಂಬೆನಲ್

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ನೆ

ಕಟ್ಟೆ ಶಿವಲಿಂಗಮ್ಮ ಕಂಡ ಶರಣನ್ನೆ

'ಮಗನ ವಯಸ್ಸು ತಾಯ್ಗೆ ತಿಳಿಯಬೇಕಲ್ಲದೆ
ಮಗನೆಂತು ಬಲ್ಲಹನು ಪೇಳವ್ವ ಓ ತಾಯಿ ?
ಸ್ವಾಮಿಗಳ ಜಾಣತನದ ಮಾರ್ನುಡಿಯನಾಲಿಸಿ,
'ಅಪ್ಪಗಳೆ, ತಮ್ಮನುಷ್ಠಾನವದೆಲ್ಲಿಯೆಂತ
ಸಾಗುತಿಹುದೆಂಬುದಂ ಪೇಳವೇಳ್ಕುವೆನಲಾ
ತಾಯಿಯಾ ಕಳಕಳಿಯ ಬಿನ್ನಹವನಾಲಿಸಿ,
ಸ್ವಾಮಿಗಳಿಗಾಯಿತಚ್ಚರಿ ಮತ್ತ ಮಾನಂದ–
ಮಿದರಿಂದುಸುರತೊಡಗಿಹರ್ ತಮ್ಮನುಷ್ಠಾನ
ಬಗೆಯನಿಂತರಿದ ತಾಯ್ ಚಕಿತಗೊಳ್ಳುವೊಲಂತೆ !
ದಶಚಕ್ರ ದಶವರ್ಣ ದಶಪೀಠ ಶಕ್ತ್ಯಾದಿ
ವಿವರಮಂ ಮೇಣು ನಾದಾನುಸಂಧಾನಮಂ
ತಾವನುಭವಿಸಿರ್ಪಾ ಶಿವಾನುಷ್ಠಾನದ ವಿ–
ಸ್ತಾರಮಂ ತಿಳಿಸಿಹರ್ ವಿಶಿಷ್ಟತರಮಾಗಿ,
ಹರ್ಷತುಂದಿಲಳಾಗಿಹಳ್ ಕೇಳಿ ಶರಣನ್ನೆ ;
'ಅಪ್ಪಗಳೆ, ಇಲ್ಲಿಗಂ ಸಾಕಸಿತು ಸ್ವಾಮಿಗಳ್
ದಯಮಾಡಿಸಿಹರಪ್ಪಕ, ಎಲ್ಲರುಂ ತಂತಮ್ಮ
ಮಠ ಮಾನ್ಯಮಂ ಮಠದೆ ನಡೆವ ಕಾರ್ಯಕ್ರಮಂ–
ಗಳಂ ಬಿತ್ತರಿಸಿದುದನಪ್ಪಣೆಯ ಕೊಡಿಸುವರ್ ;
ತಾವಿನಿತು ಚಿಕ್ಕತನದೊಳೆಂತಹ ಸಾಧನವ
ಗೆಯ್ದಿರುವಿರೆನ್ನಪ್ಪಕ ನೀವ್ ಮಠಕೆ ಸ್ವಾಮಿಯ–
ಲ್ಲಪ್ಪ ಘಟಕೆ ಸ್ವಾಮಿಯು ನನ್ನಪ್ಪಕ ಎಂದೆನಲ್
'ಓ ತಾಯಿಯೆ, ಈಹಸುಗೂಸನಂ ಪೊಗಳುವರೇ ?'
ಅಪ್ಪಗಳೆ, ಲೌಕಿಕದ ದೃಷ್ಟಿಯೊಳ್ ನಾಂ ತಾಯಿ,
ನೀವು ಮಗು ; ಅಲೌಕಿಕ ದೃಷ್ಟಿಯೊಳ್ ನೀವ್ ತಂದೆ,
ಮಗಳಾನು ; ಅಪ್ಪಗಳೆ, ತಾವ್ ಸಾಧಿಸಿದಂತೆ
ಮೇಣ್ ತಿಳಿದುಕೊಂಡಂತೆ ನಾನೇನುಮರಿತಿಲ್ಲ ;
ಸುಮ್ಮನೇ ಗುರುವಿನಪ್ಪಣೆಯಂತೆ ಗೆಯ್ಯುತ್ತ
ಹೊರಟಿಹೆನ್ ನನ್ನಪ್ಪಕ ಇಂತೆಂದು ಪೇಳುತಿರೆ
ಪ್ರಸಾದಕೆ ಪೋದಭಕ್ತರೆಲ್ಲರು ಮರಳುವರ್

CC-0. Jangamwadi Math Collection. Digitized by eGangotri

ಸಜ್ಜಲ ಶರಣವ್ವೆ

ಕಪ್ಪ ಶಿವಲಿಂಗಮ್ಮ ಕಂಡ ಶರಣವ್ವೆ

ಶ್ರೀಗಳ ಬಗೆಗಂ ತಾಯಿಂತುಸುರುವಳವರ್ಗೆ
'ಅಪ್ಪಗಳಿ, ಅವ್ವಗಳಿ; ನಿಮ್ಮ ಮಗನೆತ್ತಣ್ಣಿ
ಪೋಗನಿದು ದಿಟಂ, ಪೋಡಡಂ ಬಪ್ಪನ್ ಮರಳಿ
ತಡೆವಿಡಿಯವೇಡಿ ನೀವ್ ಅಂತಂತವನಲ್ಲಂ
ಸ್ವಾಮಿ ತಾನ್ ಮಹತ್ತನು ಸಾಧಿಸಿ ಮಹಂತರಾ-
ಗುವರಪ್ಪನ; ನೀವ್ ಬಿಟ್ಟುಬಿಡಿ ಅವರನಿತಕವರಂ !'
ಎಂದು ಪೇಳ್ದವ್ವೆಯಾ ವಾಣಿಯಂ ಕೇಳ್ದವರ್
ದಿಗ್ಗನೇ ಬೆಚ್ಚಿದರ್ ಬೆದರಿದರ್, ತಾವೊಂದು
ನೆನೆದು ಬಂದೊಡಂ ಬೇರೊಂದಾಯ್ತು ಶರಣವ್ವೆ-
ಸ್ವಾಮಿಗಳ ಪರವಾಗಿ ಪೇಳಿದರ್ ಮುಂದೇನು-
ಎಂದೆನುತ ಚಿಂತಿಸುತ ಚಿಕ್ಕಮೊಗಮಂ ಮಾಡಿ-
ಹರ್ ಬಂದ ಜನರೆಲ್ಲ ಮನದೊಳ್ನಿರಾಶೆಯಿಂ !
'ಏಕಳಕುವಿರೇನುಂ ವಿಚಾರಿಸದಿರಿ ನೀವು,
ದೇವನಾವಾಗಳುಂ ಲೇಸಮಂ ಗೆಯ್ಯುವನ್
ಸರ್ವಮಂ ಸರ್ವರ್ಗೆ ಎಂತೆಂದು ಪೇಳುತ್ತ
ತೋಷಿಪರ್ ಶರಣವ್ವೆ ತನ್ಮಯತೆಯಂ ತಳೆದು !

ಇಂತಮ್ಮನವರನಂತಾನಂತ ಮಹಿಮೆಗಳ್
ನಡೆಯುತ್ತಲಿರ್ದವ್ವೆ ನಿತ್ಯದೊಳ್ ಸಹಜದಿಂ-
ದಾ ಪವಾಡಂಗಳಂ ತಿಳಿದುಕೊಳ್ಳುವ ಬುದ್ಧಿ
ನಮಗಿಲ್ಲ ಕಂಡುಕೊಳ್ಳುವ ಕಣ್ಣು ನಮಗಿಲ್ಲ ;
ಮತ್ತಮಾ ಕೇಳ್ವಕಿವಿ ನಮಗಿಲ್ಲ ; ನೋಳ್ಪೊಡಂ
ನಮಗಿರ್ಪ ಪಂಚೇಂದ್ರಿಯಂಗಳೆಲ್ಲಾದಿಭೌ-
ತಿಕಕ್ಕಾಗಿ ಹಂಬಲಿಸುತಿರ್ಪವು ; ಇವುಗಳ್ಗೆ-
ಜ್ಞಾನವೆಂತಪ್ಪುದಾಧ್ಯಾತ್ಮಿಕಮಭೌತಿಕಂ ?
ತಾನಕ್ಕು ಸಾಹಸಂ ನಡೆದಲ್ಲಿ ಮತ್ತಮಾ
ಗುರುಕರುಣೆಯಾದಲ್ಲಿ ಸಯ್ಪಿರಲ್ !
ಶರಣವ್ವೆ ಶಾಲೆಯೊಳ್ ಕಲಿತಿಲ್ಲ ಮೇಣು ಶಾ-
ಸ್ತ್ರಾಭ್ಯಾಸಮುಂ ತಾವು ಮಾಡಿಲ್ಲ ; ಸಜ್ಜಲ
ಗುಡ್ಡದಾಚೆ ಕಮಡಾಳಂ ಬಿಟ್ಟು ಪೋಗಿಲ್ಲ ;

CC-0. Jangamwadi Math Collection. Digitized by eGangotri

ಸಜ್ಜಲ ಶರಣವ್ವೆ ಕಟ್ಟಿ ಶಿವಲಿಂಗಮ್ಮ ಕಂಡ ಶರಣವ್ವೆ

ನೋಡೆ ಪೊರ ಜಗತ್ತಿನ ಸಂಪರ್ಕ ತಾನಿಲ್ಲ ;
ತಾಯಿಗಾದಡಮಿನಿತು ಸಾಧನಂ ತಾನೆಂತು
ಸಾಧಿಸಿತೊ ತಾನೆಂತು ಸಿದ್ಧಿಸಿತೊ ಜೋಡ್ಯವ್ವೆ !
ವಿಜ್ಞಾನಿಗಳ್ಗದಂ ದುರ್ಗಭಂ, ಸುಜ್ಞಾನಿ– ೧೯೦
ಗಳ್ಗಿದಂ ಸುಲಭಂ ಸಹಜಂ ಮೇಣರಿಯಲ್ಕೆ !
ಭಕ್ತಿಸ್ಥಲದಿಂದೈಕ್ಯಸ್ಥಲಕೇರಿ ಮ–
ತ್ತಂ ಶರಣಸ್ಥಲದಲ್ಲಿ ನಿಂದು ಭಕ್ತಕೋಟಿಯ-
ನುದ್ಧರಿಸುತಿರುವಳೀ ಸತ್ಯಶಿವ ಶರಣವ್ವೆ !
ಇಂತುಮಾ ಮಹಾಮಾತೆಯ ಬಗೆಗೆನಿತು ಬಗೆದು
ಬರೆದಡಂ ತೀರದಿಹ ವಿಚಾರಂ ವಿಚಾರಿಸ–
ಲಾಕೆಯಾ ದಶ್ಯನಮೆ ಮಹಾಯೋಗಮಾಕೆಯ
ವಾಣಿಯನ್ನಾಲಿಪುದೆ ಮಹಾಪುಣ್ಯಮೆನಿಪುದು.
ಸಜ್ಜಲದ ಗುಡ್ಡದೊಳ್ ಕಾಣುತಿಹ ದೇವರಿದು,
ಬೇಡದಲೆ ತನುಮನಧನಂಗಳನೀಯುತಿದೆ ; ೨೦೦
ಕಲ್ಪತರು ಕಾಮಧೇನುವಿಲ್ಲಿದೆ ; ಪೋಗುತಂ
ದರ್ಶನಂ ಮಾಡಿಕೊಂಡವರ್ ಪಾವನಾತ್ಮರ್
ಪಡೆಯುವರ್ ಮತ್ತಮಾ ಸುಖಶಾಂತಿಗಳಂ ಗಡಾ !

ಕಟ್ಟಿ ಶಿವಲಿಂಗಮ್ಮ ಕವಿಹೃದಯಿ, ಸಾಹಿತಿ ;–
ಮೇಣ್ ಭಾವಜೀವಿ, ಗುರುಲಿಂಗ ಜಂಗಮಪ್ರೇಮಿ,
ತಾನೊರೆದು ಸಲ್ಲಿಸಿಹಳೀ ಭಾವಪೂರ್ಣವಹ
ಬರೆಹವಂ ಸಂವೇದನಾತ್ಮಕಂ ಮತ್ತಮಾ
ಶರಣವ್ವೆಯ ವಾಕ್ಪರುಷ ಸಚ್ಚಾರಿತ್ರವಂ
ಸೌಂದರ್ಯಶೈಲಿಪದ ಪುಂಜದಿಂ ರಂಜಿಪೋಲ್ !
ಕಟ್ಟಿ ಶಿವಲಿಂಗಮ್ಮಗಳಿಪ್ಪತ್ತನೆಯ ಶತ ೨೧೦
ಮಾನದಿನ್ನೊರ್ವ ಶಿವಶರಣೆಯೆಂಬುದು ದಿಟಂ !
ನಿತ್ಯದೊಳ್ ಬ್ರಾಹ್ಮೀ ಮುಹೂರ್ತದೊಳ್ ತಾನೆದ್ದು
ಶೌಚವಿಧಿಯಾಚರಿಸಿ ಮೊಗದೊಳೆದು ಹಲ್ಲುಜ್ಜ
ಮೆಯ್ದೊಳೆದು ಮಡಿಯುಟ್ಟು ಕಳಿಪುರುಳಿನೊಳಣಿಮಾ-
ಡಿಟ್ಟ ಪೂಜಾಗದ್ದುಗೆಯ ಮೇಲೆ ಕುಳ್ಳಿರ್ದು

CC-0. Jangamwadi Math Collection. Digitized by eGangotri

ಪರಿವಿಡಿದು ಪೂಜಿಪಳ್ ಶಾಂತವಹಮನಸ್ಸಿನಿಂ
ಭಸ್ಮಮಂ ಧರಿಸುವಳ್ ರುದ್ರಾಕ್ಷಮಾಲೆಯಂ
ಹಾಕುವಳ್ ಕತ್ತಿನೊಳ್, ರುದ್ರಮಂ ಪಠಿಸುತ್ತ
ಮಜ್ಜನಂ ಮಾಡುವಳ್ ಜಪಿಸುವಳ್ ಮಂತ್ರಮಂ
ಧ್ಯಾನಿಪಳ್ ಲಿಂಗಮಂ ಧಾರಣಂಗೆಯ್ಯುವಳ್ ೨೨೦
ಚಿತ್ತಮಂ ಹೃದಯದೊಳ್ ಬೆಳಗಾಗುವನ್ನೆಗಂ !
ಪಾಕಾದಿಗಳ ಮಾಡಿ, ಪತಿಸೇವೆಯಂಗೆಯ್ದು
ನಂತರಂ ಸಾಹಿತ್ಯಕೃತಿಗಳಂ ರಚಿಸುವಳ್
ಪ್ರೌಢ ಸಾಹಿತ್ಯಗ್ರಂಥಂಗಳಂ ಪಠಿಸುವಳ್
ಜೀವನದ ಸಾರ್ಥಕ್ಯಮಂ ಕಂಡುಕೊಂಡಿಹಳ್ !
ಗದ್ಯಮಾಡೊಡಂ ಹೃದ್ಯದಿಂ 'ಸಜ್ಜಲಗುಡ್ಡ.
ದಾ ಶರಣೆ' ಎಂದು ಬರೆದಿಹಳ್ ಪ್ರಬಂಧಮಂ
ಕಟ್ಟಿ ಶಿವಲಿಂಗಮ್ಮ ಮನಮೆಚ್ಚಿ ಬಗೆಹೆಚ್ಚಿ,
ನಿಟ್ಟಿಸಿಯದನಂ ಕವನಿಸಿಹೆವೀ ಬಗೆಯಲ್ಲಿ ;
ಕಬ್ಬದೊಳಗಚ್ಚಳಿಯದುಳಿಯಲೆಂದಾಸಿಸುತಂ ! ೨೨೦

೧೫. ತಾಯೊರ್ಮೆ ದೊಡ್ಡಾಟ ನೋಡಿದರ್
ಮತ್ತೊರ್ಮೆ ನೋಡದಾದರ್ !

ಶರಣಾಯಿ ಸಾಧನಾಕಾಶದೊಳ್ ನೋಡದೋ
ಉಷಾಂಗನೆ ಮೂಡಣದೆ ಮೂಡಿದಳ್ ತಿಳಿವೆಳಗಿ
ಸಿಂ ಬೆಳಗುತಿರ್ಪವೆಳೆನೇಸರನ ತಿಲಕಮಂ
ಬಾಳದೊಳ್ ತಾನಿಟ್ಟು ಮುಂಬೆಳಗ ಬೀರುತಂ !
ಆ ಹೊಂಬೆಳಗಿನಲ್ಲಿ ಮಂಗಳಮಯಮದಾಗಿ
ಕಂಗೊಳಿಸಿತು ಕಂಬಳಿ ಹಾಳದಂ ಮುಂಗಾರಿ
ಬೆಳಗಳಿಂ ಹಚ್ಚಹಸುರಾಗಿ ಹೆಚ್ಚು ಚಲುವಿಂ
ಕಂಗಳಿಗೆ ಬಾಳಿಗಂ ಮುಂದಾರಿ ತೋರುತಂ !

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ತಾಯೊರ್ಕ್ಕೆ ದೊಡ್ಡಾಟ ನೋಡಿದರ್,
ಮತ್ತೊರ್ಕ್ಕೆ ನೋಡಿದಾದರ್

ಆ ದಿನಂ ಶರಣಾಯಿ ಸಡಗರಿಸಿ ತವಕದಿಂ
ಮುಂಜಾವಿನೊಳ್ ಬೇಗನೆೞ್ಚತ್ತು ಲಿಂಗಾರ್ಚ್ಚ
ನೆಯ ತೀರ್ಚಿ ಲಿಂಗಪ್ರಸಾದಮಂ ಕೊಂಡು ಗುಡ
ದೂರ ಗುರು ದೊಡ್ಡ ಬಸವಾರ್ಯದರ್ಶನಕೆಂದು
ಪಯಣಮಂ ಬೆಳಸಿಹಳ್ ಗುರುದೇವ ಸನ್ನಿಧಿಗೆ !
ಜಾಗತಿಕ ಜನಂಗಳ ಜೀವನದ ನಾಟಕವ
ನೋಡುತ್ತ ನೋಡುತ್ತ, ಯೋಚಿಸುತ ಯೋಚಿಸುತ ;
ಹಲವಾರು ಜೋಹಗಳ ತೊಟ್ಟಿಹರ್ ಹಲಂಬರ್
ಹಲವಾರು ಮಾತುಗಳ ನಾಡುವರ್ ಹಲಂಬರ್
ಹಲವಾರು ಚಟುವಟಿಕೆಗಳೆಂಬುವ ಹಾವ ಭಾ-
ವಂಗಳಂ ಮಾಡುವರ್ ಹಲಂಬರ್ ಜೀವನಕೆ !
ಇಂತಿರುವ ಪಳ್ಳಿಗಳ ಪಗಲಾಟಂಗಳನಾ-
ಲೋಕಿಸುತ ಬರುತ್ತಿರೆ ದಿಟ್ಟ ಹೋಹನ್ನೆಗಂ
ಬಿತ್ತರದೆ ಕಾಣುತಿಹ ಬಯಲಮಂ ಮತ್ತಮಾ-
ಎತ್ತರದೆ ತೋರುತಿಹ ಮುಗಿಲಮಂ ನೋಡುತ್ತ,
ಹಸಿರ್ಮುರಿದಿರ್ಪ ಹೊಲಗಳಂ ಚಲು ಬನ ಸಿರಿಯಂ
ತರುಪಂಕ್ತಿ ಗಿರಿಪಂಕ್ತಿ ಖಗ ಪಂಕ್ತಿಗಳಂ ನೆರೆ
ದಿಟ್ಟಿಸುತ ಸಂತಸಂಗೊಳ್ಳುತ್ತ ಬಂದಿಹಳ್
ಮಾರ್ಗ ಮಧ್ಯದೊಳಿರ್ಪ ಮುದೆನೂರು ಹುಟ್ಟೂರ್ಗೆ ;
ಮುಚ್ಚಂಜೆ ತಾನಾದ ಕಾರಣಂ ಹುಟ್ಟೂರೊಳ್
ತಂಗಿಹಳ್ ಮಾರ್ಗದಾಯಾಸಮಂ ತೀರಿಸಲ್ ;
ಆ ರಾತ್ರಿ ಪಳ್ಳಿಯೊಳ್ ಪಳ್ಳಿಜನರಿಂ ವೀರ-
ಅಭಿಮನ್ಯು ದೊಡ್ಡಾಟ ನಡೆದಿತ್ತುತ್ಸಾಹದಿಂ-
ದೂರವರ್ ಕೂರ್ಮೆಯಿಂ ಪೆರ್ಮೆಯಿಂ ತಾಯಿಯಂ
ಕರೆದೊಯ್ದರಂಗಲಾಜಿ ಬಿಡದೆ ದೊಡ್ಡಾಟಕೆ
ಪಗಲೆಲ್ಲ ನಾಡವರ ಪ್ರಾಕೃತಿಕ ದೊಡ್ಡಾಟ-
ವಂ ನೋಡಿ ನೋಯುತ್ತ ಬಂದಿರ್ದ ಶರಣಪ್ಪೆ
ಯಿರುಳಿಲ್ಲ ಶ್ರೀವೀರ ಅಭಿಮನ್ಯು ನಾಟಕವ

CC-0. Jangamwadi Math Collection. Digitized by eGangotri

ಸಜ್ಜಲ ಶರಣಾಸ್ಪೆ

ತಾಯೊಕ್ಕೆ ದೊಡ್ಡಾಟ ನೋಡಿದರ್,
ಮತ್ತೊಕ್ಕೆ ನೋಡದಾದರ್

ನೋಡುವಂತಾಯ್ತು ಹಳ್ಳಿಗರ ಸಹವಾಸದಿಂ
ಪೆರತೊಂದು ಯೋಚನೆಯು ಮನಸ್ಸಿನೊಳಿಲ್ಲದಲೆ !
ಬಯಲಾಟದೊಳ್ ರಾಗ ವಿರಾಗಗಳಿಲ್ಲದಲೆ
ಬೆಳಗಾಗುವನ್ನೆಗಂ ನೋಡಿದಳ್ ಶರಣಾಸ್ಪೆ !

ಬಾನಂಚಿನೊಳ್ ಭಾನು ಬೆಳಗಿಹನ್ ಬೆಳ್ಳನೇ
ಭೂಮಂಡಲದೊಳೆಲ್ಲ ತನ್ನರುಣ ಕಿರಣಂಗ
ಳಂ ಹರಹಿ ಕವಿದಿರ್ದ ಕಳ್ತಲೆಯನೋಡಿಸಿ,
ಸಕಲಜೀವಕೋಟಿಯನೆಳ್ಚರಿಸಿ ಕಣ್ತೆರೆಸಿ,
ವಿಹರಿಸುವೊಲಂತೆಸಗಿ ಮನಮನಸಗಿ ಹೊಲಬಿನೊಳ್
ಇರುಳಿನೊಳ್ ನಡೆಯುತಿಹ ದೊಡ್ಡಾಟವ ನಿಲ್ಲಿಸಿ !
ಮುಜೇನೂರಿನೊಳ್ ದೊಡ್ಡಾಟಮಂ ತಾಂ ನೋಡಿ
ಭಾಸ್ಕರನ ಬೆಳಗಿನೊಳ್ ತನ್ನೆಲ್ಲಕ್ರಿಯೆಗಳಂ
ನಿರ್ವಹಿಸಿ, ಗುರುದೇವ ದರ್ಶನಕೆ ಹಂಬಲಿಸಿ
ಗುಪದೂರ್ಗೆ ಬಂದಿಹಳ್ ಮರುದಿನಂ ಶರಣಾಸ್ಪೆ ;

ತ್ರಿಕಾಲಜ್ಞಾನಿಗಳ್ ಗುರುದೊಡ್ಡಬಸವಾರ್ಯ-
ರರಿತೊಡಂ ತಾಯಿಯಂ ಕೇಳಿಹರ್ ಪರಿಕಿಸಲ್
ಬಳಿಬಂದು ತಳಿರಡಿಗೆ ಪೊಡಮಡುತಿರುವೆಡೆಯೊಳ್ ;
'ನಿನ್ನೆ ನೀಂ ಮುಜೆನೂರಿನಲ್ಲಿ ದೊಡ್ಡಾಟ ನೋ-
ಡಿದೆಯೇನು ?' ಎಂತೆಂದು ಕೇಳಲ್ಕೆ ಬೆಚ್ಚಿದಾ-
ತಾಯಿ ಗಟ್ಟಿಮನದಿಂ ಸತ್ಯಮುಂ ಪೇಳಿಹರ್ ;
'ಅಹುದೆಪ್ಪ ಓ ತಂದೆ, ದೊಡ್ಡಾಟ ನೋಡಿದೆನ್'
ಎಂದುಸರಿ ಎರ್ದೆಗೆಟ್ಟು ಕಂಪಿಸಲ್ ತೊಡಗಿಹರ್
ಬಾಯ್ದುಟಿಗಳದುರತೊಡಗಿಹವ್ ತಮ್ಮಿಂದ ತಾವ್
ತಪ್ಪಾಯ್ತು ಕ್ಷಮಿಸೆನ್ನ ಕರುಣಾಳು ಗುರುವರನೆ,
ಎಂದೆನುತ ಸೆರಗೊಡ್ಡಿ ಬೇಡಿಹಳ್ ಕಣ್ತುಂಬಿ !
ನೋಯದಿರ್ ನಲುಗದಿರ್ ಕ್ಷಮಿಸುವೆನ್ ತಿಳಿಯದಲೆ
ತಳೆದಿರ್ಪ ತಪ್ಪಮದು ನೀರೊಳಗಣ ಬರೆಹವು ;

CC-0. Jangamwadi Math Collection. Digitized by eGangotri

ಸಜ್ಜಲ ಶರಣವ್ವೆ

ತಾಯೊಕ್ಕಿ ದೊಡ್ಡಾಟ ನೋಡಿದರ್,
ಮತ್ತೊರ್ಕ್ಕೆ ನೋಡದಾದರ್

'ಕಂದ, ಮುಂತೆಂದಿಗುಂ ನೀನಾಟ ಬಯಲಾಟಂ-
ಗಳಂ ಮತ್ತಂ ನಾಟಕಂಗಳಂ ನೋಡದಿರ್
ಸಂಸಾರಿಗಳಿಗವೆಲ್ಲವುಗಳಲ್ಲದೆ ನೋಡೆ
ಸಂನ್ಯಾಸಿಗಳಿಗಲ್ತು, ಮೇಣು ಶರಣರಿಗಲ್ತು ;
ಮನರಂಜನೆಯು ಮನೋವಿಕಾರಕೆ ಕಾರಣಂ.
ಘನಲಿಂಗ ನಿಷ್ಠೆಯುಳ್ಳವರ್ಗಂ ಲಿಂಗಯ್ಯ
ನೊಡನಾಡುವುದೆ ಮನೋರಂಜನಂ ಮತ್ತಮಾ
ಸದ್ಭಾವವರ್ಧನಂ ರಂಗಸ್ಥಲಮಂಗೈ .
ಮೇಣಲ್ಲಿ ಲಿಂಗಯ್ಯನೆಂಬ ಪಾತ್ರಧಾರಿಯೋ
ಡಂ ಕಾಯವೆಂಬುವಂಗನೆಯು ಕುಣಿಯಬೇಕಾ
ಆಗಳಾ ವಿಕಾರವಿರಹಿತ ಮನರಂಜನೆಯು
ದೊರಕುವುದು, ತಾನದುವೆ ಸಾಧಿಸುವ ಶಿವಯೋಗ !
ನೀನೀ ಶಿವಯೋಗವ ಸಾಧಿಸಲ್ ಹೊರಗಣೀ
ಬಯಲಾಟ ಮೊದಲಾದವುಗಳ್ ಬೇಕಾಗವು
ಶೃಂಗಾರದಿಂ ಮನವಿಕಾರ ಕಾರಣಗಳಿವು.

ಗುರುವಿನೀ ತಾತ್ವಿಕದ ವಾಣಿಯು ತಾಯಿಯೊಳ್
ತಾನೆಸಗಿತು ಪ್ರಾಯಶ್ಚಿತ್ತಮಂ ಸತ್ತಮಂ
ಮುಂ ಮತ್ತೆ ಶರಣವ್ವೆ ನಾಟಕವ ನೋಡವಂ
ತಿರಗಲಿತಳಾ ಜೀವ ಪರ್ಯಂತ ಸ್ವಾಂತದಿಂ !
ತಿರೆಯೊಳಗೆ ತಿಳಿತಿಳಿದು ಕಾಣಲ್ಕೆ ಮಿಗಿಲಾದ
ಮಾನವೀಯ ಜೀವನಮಿದೊಂದು ಬಯಲಾಟಂ !
ಎಂದರಿದು ಭಯಭಕ್ತಿಯಿಂ ಬಾಗಿ ನತಿಸುವಳ್
ಹೃದಯದಿಂ ಹರಿಹೊಮ್ಮಿ ಹಮ್ಮಳಿದು ನುತಿಸುವಳ್ ;

ಗುರುವೆ ಚಿದ್ಭಾನುವೇ, ಸದ್ಭಕ್ತ ಸುರತರುವೆ,
ಮಾನಿಸರ ಜೀವನಾಂಧಕಾರದ ತೇಜವೆ
ಲೋಕಕಾನಂದಕರ ಸಚ್ಚಿತ್ ಸ್ವರೂಪವೇ
ಶಾಂತಿಸುಖ ಸಾಮ್ರಾಜ್ಯ ಮಹಾ ಚಕ್ರವರ್ತಿಯೆ

CC-0. Jangamwadi Math Collection. Digitized by eGangotri

ಸಜ್ಜಲ ಶರಣವ್ವೆ

ತಾಯೊಕ್ಕೆ ದೊಡ್ಡಾಟ ನೋಡಿದರ್
ಮತ್ತೊಕ್ಕೆ ನೋಡದಾದರ್

ನನ್ನ ಕಣ್ಣಿಗೆ ಮುಂಜು ಮುಸುಗಿಸ್ಪುದು ಮಾಣಿಸು
ಲೋಕದಾಟವ ನೋಡುವಾಸೆಯಂ ತೊಲಗಿಸು ;
ಧರ್ಮ ಪಥವಂ ತೋರಿ ಧರ್ಮಿಯನ್ನಾಗಿಸು
ಜ್ಞಾನ ಜ್ಯೋತಿಯ ಗೆಯ್ದು ಕಣವೃಂದವ ಬೆಳಗಿಸು
ಮುಂತ್ರವಗ್ಧವ ತಿಳುಹುತಾತ್ಮ ಶೋಧವಗೆಯ್ಯಿಸು
ಮೂಢಳಾಗುತ ರೂಢಿಯೊಳ್ ಪೋಪುದಂ ಬಿಡಿಸು
ಸ್ವಾನುಭಾವದೆ ನಡೆವ ಶಕ್ತಿಯಂ ಕರುಣಿಸು
ಸಾವಧಾನದಿಂದಾಚರಿಸುವಂತನುಗ್ರಹಿಸು
ಲೋಗರಂತಿರುವುದಂ ತಪ್ಪಿಸಯ್ ಜೇಳುವೆಂ
ಯೋಗ ಪ್ರಭೆಯೊಳು ಕಣ್ಣ ತೆರೆವಂತೆ ಕೇಳುವೆಂ ! ೧೮೦
ಎಂದೆನುತ ಕಂಬನಿಯ ಸುರಿಸಿದಳ್ ಶರಣವ್ವೆ
ವಂದಿಸುತ ಗುರುವರನ ಚರಣಮಂ ಸ್ಮರಿಸಿದಳ್ ;
ಮತ್ತಮಾ ತತ್ಪ್ರೋಪದೇಶದಾ–ಭಾವಮಂ
ಮುಂತೆ ಬಾಳಿಗೆ ಬಲವನೀವಾನು ಭಾವಮಂ,–
ಅರಿಮೆ ಜೇನುವೆರಸಿಹ ಮಿಗಿಲ್ವವಿ ಪಾಲಮಂ
ಪೆರರಿಂದೆ ಮೀಸಲೋಸರಿಸದ ಪ್ರಸಾದಮಂ !!
ಗುರುದೇವನುಪದೇಶಮೆಂಬ ವರ ಪ್ರಸಾದಂ
ಗುರುಶಿಷ್ಯೆ ಶರಣೆಯಾ ತಿಳಿಯೊಡಲ ತುಂಬಿತ್ತು
ಮನದಳಲ ಹಿಂಗಿತ್ತು ಮಹತ್ತಮಾನಂದವು ಕೂಡಿತ್ತು
ಸತ್ಯ ಶರಣವ್ವೆಯಾಂತರಾತ್ಮಂ ನಗುತಿತ್ತು. ೧೯೦
ಕೊಡಗೂಸು ಲಿಂಗದೊಡಲೊಳಗಿರದೆ ಪೋದಂತೆ
ಪೋಗಿಹಳ್ ಶರಣವ್ವೆ ಗುರುವಿನಂತಃಕರಣದೊಳ್ !
ತನ್ನ ಭಕ್ತಿರಸಮುಂಕುಡಿಸಿಹಳ್ ಗುರುವಿಂಗೆ,
ಗುರುವಿನಾ ಕಾರುಣ್ಯರಸವ ತಾ ಕುಡಿದಿಹಳ್
ಅಜ್ಞಾನದನಾಚಾರ ಹಸಿವಂ ನೀಗಿದಳ್
ಸುಜ್ಞಾನದಾಚಾರ ತೃಪ್ತಿಯೊಳ್ ಶಣಿದಿಹಳ್ !
ಲೋಕರಂಜನೆಯೊಳಿರೆ ಗುರುಭಕ್ತಿ ತಾನಿಲ್ಲ
ವೇಷಧಾರಿಗೆ ನೈಜ ತತ್ತ್ವಜ್ಞಾನಮದಿಲ್ಲ ;

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ತಾಯೊರ್ಕೆ ದೊಡ್ಡಟ ನೋಡಿದರ್
ಮತ್ತೊರ್ಕೆ ನೋಡದಾದರ್

ಎಂಬುದನರಿದು ಮನದೆ ಹಿಗ್ಗಿದಳ್ ಹೆಚ್ಚಿದಳ್
ನಂಬಿದಳ್ ನಚ್ಚಿದಳ್ ಗುರುದೇವ ತತ್ತ್ವಮಂ ! ೧೪೦
ಅಸತ್ಯಕೆ ಹೊರಗಾಗಿ ಸತ್ಯಕ್ಕೆ ಒಳಗಾಗಿ
ಸತ್ಯಸ್ವರೂಪ ಲಿಂಗಮಂ ಮಿಗೆ ಮೆಚ್ಚಿದಳ್
ಲೌಕಿಕದ ನಾಟಕವ ನೋಡ-ವುದ ತಾಂ ತೊರೆದು
ಅಲೌಕಿಕ ಸ್ವಯನಾಟಕವ ನೋಡತೊಡಗಿಹಳ್ !
ಗುರುಸೂತ್ರಧಾರನಂ ತಾಂಬಿಡದಲಾಧರಿಸಿ
ಆಡಿದಳ್ ಪಾಡಿದಳ್ ಲಿಂಗಪತಿಯೊಡಗೂಡಿ;–

ಬಾರಯ್ಯ ಗುಡದೂರ ಗುರುವರ್ಯ ಬಸವಾರ್ಯ
ಬಾರಯ್ಯ ಬಾರಯ್ಯ ಗುರುವರ್ಯ ದೊಳು ಧುರ್ಯ
ಬಾರಯ್ಯ ಬಾರ ಶಿವಭಕ್ತೈಕ ಬಂಧುವೆ
ಬಾರಯ್ಯ ಬಾರ ಕಾರುಣ್ಯರಸ ಸಿಂಧುವೆ ೧೪೧
ಓ ಗುರುವೆ, ಓ ಪರವೆ ಏ ಎನ್ನ ಪ್ರಾಣವೆ,
ಓ ಎನ್ನ ತ್ರಾಣವೆ, ಓ ಎನ್ನ ಜೀತನವೆ,
ಬಾರಯ್ಯ ಬಾರ, ನೀಂ ಬಾರದಿರೆ ಬಾಳೆನಾಂ
ತಾಳದೆನ್ನಯ ಮನಂ ಬಾಳದೆನ್ನಯ ಮನಂ !
ನಿಮಿ ನಿಮಿಷಕೆ ನೆನೆನೆನೆಯುತ್ತ ಮನವೆರ್ರುವಳ್
ಪ್ರೇಮರಸದೊಳ್ ಮೆಯ್ ಪುಳಕಿಸುವಳ್ ಪುಟವೇರ್ವಳ್
ತಣಿವು ತೀರದೆ ಮತ್ತೆ ಮತ್ತೆ ತವಕಿಸುತಿಹಳ್
ನುಡಿಸುವಳ್ ಮನದೊಳಗೆ ಗದ್ಗದಿಪಳ್ ಸ್ವರದೊಳಗೆ
ತನ್ನಂತರಂಗದೊಳ್ ಗುರುವರನ ಸ್ವರೂಪವ
ಚನ್ನಾಗಿ ಕಾಣುವಳ್ ಕಳಿಗೊಂಡು ನಲಿಯುವಳ್ ! ೧೪೨
ಕಣ್ಣಳಲಿ ಗುರುವರಂ ಕರಣಗಳಲಿ ಗುರುವರಂ
ಮನದಲ್ಲಿ ಗುರುವರಂ ಮತಿಯಲ್ಲಿ ಗುರುವರಂ
ಕನಸಿನಲಿ ಗುರುವರಂ ನನಸಿನಲಿ ಗುರುವರಂ
ಮಾತಿನಲಿ ಗುರುವರಂ ನೀತಿಯಲಿ ಗುರುವರಂ
ಗುರುಭಕ್ತಿ ವೈಭವದೆಯುರ್ಬುವಳ್ ಕೊರ್ಬುವಳ್
ಗುರುಭಕ್ತಿ ಸಂಭ್ರಮದೆ ನಲಿಯುವಳ್ ಉಲಿಯುವಳ್ !

CC-0. Jangamwadi Math Collection. Digitized by eGangotri

ಸಜ್ಜಲಶರಣನ್ನೆ

ತಾಯೊಕ್ಕೆ ದೊಡ್ಡಟ ನೋಡಿದರ್
ಮತೆತ್ತಿರ್ಕ್ಕೆ ನೋಡದಾದರ್

ಬಂದುದನರಿಯಳ್ ಹೋದುದನರಿಯಳಮ್ಮವ್ವೆ
ನಿಂದುದನರಿಯಳ್ ನೆಲೆದರನರಿಯಳಮ್ಮವ್ವೆ !
ಊಟವನರಿಯಳ್ ವೇಣುಪಚಾರವನರಿಯಳ್
ಮಾಟವನರಿಯಳ್ ವೇಣ್ ನೋಟವನರಿಯಳವ್ವೆ
ನಿದ್ದೆಯನರಿಯಳ್ ನೀರಡಿಕೆಯ ನರಿಯಳವ್ವೆ !
ಮುರ್ಡವನರಿಯಳ್ ಭವರೋಗವನರಿಯಳವ್ವೆ !!

ಒಳಗೆ ಭಕ್ತಿಯ ಗುಣ್ಪು, ಹೊರಗೆ ಶಕ್ತಿಯಸೊಂಪು,
ಒಳಗೆ ಶಾಂತಿಯ ನುಣ್ಪು, ಹೊರಗೆ ಕಾಂತಿಯ ಸೆಂಪು,
ಒಳಗೆ ಮಂತ್ರದ ಇಂಪು, ಹೊರಗೆ ಮಾತಿನ ತಂಪು,
ಒಳಗೆ ಆತ್ಮದ ಪೆಂಪು, ಹೊರಗೆ ಲೋಕಕೆ ಸೊಂಪು.
ಸತ್ಯಶಿವ ಶರಣನ್ನೆ ಸತ್ಪಥದ ಸಾಧನೆಯು
ಒಳಹೊರಗೆ ಸಮುಚಿತದ ರೂಪದೊಳ್ ಸಾಗತ್ತು
ಪೆರರಿಯದಂತೊಳಗೆ ಲಿಂಗಾರ್ಚನ ನಿರತಳು,
ಪೆರರಿಯೆ ಹೊರಗೆ ಜನಂಗಳನನುಗ್ರಹಿಸುವಳು;

ಹೆರವರಿಗೆ ಹಾಲೆರೆದು ಸಾಕಿದಳ್ ಶರಣನ್ನೆ
ಹೆರವರಿಗೆ ಹಿತಹೇಳಿ ಸಲಹಿದಳ್ ಕರುಣೆಯೊಳ್ !
ಜನಹಿತವೆ ಶಿವಭಕ್ತಿ, ಜನಹಿತವೆ ಶಿವಶಕ್ತಿ,
ಜನಹಿತವೆ ಶಿವಾರ್ಚನ, ಜನಹಿತವೆ ಶಿವಾರ್ಪಣ ;
ಜನಹಿತವೆ ಶಿವಯೋಗ, ಜನಹಿತವೆ ಪರಯೋಗ ;
ಜನಹಿತವೆ ಶರಣವ್ವೆಯ ಬಾಳಿನ ಸತ್ಪಸ್ಸ !
ಶರಣವ್ವೆಯರ್ಚನೆಯ ಬಣ್ಣಿಸಲ್ಕಳವಲ್ಲ
ಪರಶಿವಂಗಚ್ಚರಿಯು ಕಾಣದರ ಮಾತೇನು ?
ಕೂಡಲಿಗೆ ಸಂಗಯ್ಯ ಸಜ್ಜಲದ ಗುಡ್ಡಕ್ಕೆ
ನಡೆತಂದ ಕೂಡಲಾ ಸಂಗಮವ ತಾಂ ತೋರೆದು ;

ಶ್ರೀಶೈಲ ಮಲ್ಲಯ್ಯ ನಡೆತಂದನಲ್ಲಿಗೆ
ಕೈಲಾಸ ಶಿವನೆ ನಡೆತಂದನೆನೆ ಪೇಳ್ವುದೇನ್ ?
ಶರಣವ್ವೆ ಸಾಧನೆಯು ಪೆರ್ಬಿಡೊಲ್ ಸಜ್ಜಲ-
ಗುಡ್ಡದಾ ಪೆರ್ಮೆಗೆ ಪೆರ್ಬಿಹುದು ನಾಡಿನೊಳ್ !

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ತಾಯೊಕ್ಕೆ ದೊಡ್ಡಾಟ ನೋಡಿದರ್
ಮತ್ತೊಕ್ಕೆ ನೋಡದಾದರ್

ಶರಣಪ್ಪೆ ಸಾಧನೆಯು ಸತ್ಯದಾ ಸಾಧನೆಯು,
ನಿತ್ಯದೊಳ್ ನಡೆದಿತ್ತು ಹೊರವೊಳಗೆ ತಪ್ಪದಲೆ !
ಹಿಂದನರಸಪೆ ಮುಂದುಗಾಣಿಸದೆ ಶರಣಪ್ಪೆ
ಸಂದಿಹಳ್ ಗುರುಲಿಂಗ ಸೇವೆಯೊಳ್ ಸಂತತಂ ;
ಹಿಂದನರಿಯುತ ಮುಂದು ಸರಿಗೊಳಿಸುತ ಜನಗಳ
ಕುಂದು ಕೊರತೆಗಳ ನೀಗುತಿರ್ದಳ್ ನಿಸ್ಪೃಹತೆ ! ೧೪೦
ನಡೆ ನುಡಿಯೊಳಗೆ ರಂಜನೆಯು ತೋರುವವಳಲ್ಲ
ತೊಡಿಗೆಗಳ ತೊಟ್ಟು ಮೆರೆವ ಹಂಬರಿಗಳವಳಲ್ಲ.
ಕಣ್ಣ ಮುಂದಿಹ ಮಹಾ ಮಾಣಿಕ್ಯಗುರುವರಂ,
ಕೈಯೊಳಿಹ ಕಲ್ಪತರು ಮೇಣ್ಪುರುಷ ಲಿಂಗಯ್ಯ ;
ಬಾಯೊಳಿಹ ಕಾಮಧೇನು ಗುರುದತ್ತಮಂತ್ರಮದು ;
ಮನದೊಳಿಹ ಚಿಂತಾಮಣಿ ಚಿತ್ಕಳಾಲಿಂಗವದು.
ಮರೆದುನೋಡಳು, ಮರೆದು ಮುಟ್ಟಳು, ಮರೆಡೊರಗಳು ;
ಮರೆದು ನುಡಿಯಳು. ಮರೆದು ನೆನೆಯಳಾತ್ಮ ಬಾಹ್ಯವಂ !
ಮರೆದು ನಡೆಯಳು, ಮರೆದು ಕೇಳಳೈ ಕಿವಿಯಿಂದೆ,
ಮರೆದು ಮೂಸಳು, ಮರೆದು ಸವಿಯಳೈ ಶರಣಪ್ಪೆ ! ೧೫೦
ಆಗದಾಗದು ಮರವೆಯ ಮನುಜಂಗೆ ಶಿವಸುಖಂ–
ಅರಿವಿರದೆ ನೋಡುತಿರೆ ಮಾಡುತಿರೆ ಆಡುತಿರೆ !
ಅರಿವಿರ್ದು ಮಾಡುವೊಡೆ ನೋಡುವೆಡೆ ಆಡುವೊಡೆ
ಗುರುವಿಹನು ಲಿಂಗವಿಹುದರಿವೆ ಸುಖಕಾರಣಂ !
ಮೇಣ್ ಗುರ್ ಪ್ರಸಾದಿಯಹ ಶರಣತ್ವ ಕಾರಣಂ !!
ಗುರುವಿರದರಿವು ಬಾರದಾಚಾರ ಬಾರದಯ್
ಲಿಂಗಬಾರದು ಲಿಂಗಸುಖಬಾರದಂಗನಿಗೆ !
ಮೇಣ್ ವಿಭೂತಿ ಬಾರದು, ವಿಭೂತಿತ್ವಬಾರದು.
ರುದ್ರಾಕ್ಷಿ ಬಾರದಯ್ ರುದ್ರ ಪ್ರಜ್ಞೆಯೆ ಅಕ್ಷಿ !
ಮನನದಿಂ ರಕ್ಷಿಸುವ ಮಂತ್ರಮದು ಬಾರದಯ್ ೧೬೦
ಭವರೋಗಮಂ ಕಳೆವ ಪಾದೋದ ಪ್ರಸಾದಂ–
ಗಳವು ಬಾರಬಾರವು ಗುರುದೇವನಿಲ್ಲದಲೆ !

CC-0. Jangamwadi Math Collection. Digitized by eGangotri

ಸಪ್ಪಲ ಶರಣಪ್ಪೆ

ತಾಯೊಕ್ಕ ದೊಡ್ಡಾಟ ನೋಡಿದರ್,
ಮತ್ತೊಕ್ಕ ನೋಡಿದಾದರ್

ಗುರುಕರುಣಿಸುವ ಅರಿವು ಮಂಗಳಮಹಾಬೆಳಗು ;
ಅದರೊಳಂತರಾತ್ಮನ ಮುಖಮುದಂ ಕಾಂಬುದು,
ಸುಖಮುದಂ ಸಮನಿಪುದು, ಶಿವಪ್ರಕಾಶಮಪ್ಪುದು ;
ಆಸೆಯಾಮಿಷರೋಷದೋಷನಿಶೆಗಳಿರವು
ಕಾಯಗುಣ ಕರಣಗುಣ ಪ್ರಾಣಗುಣಗಳಿರವು
ಮೇಣ್ ಭಾವಗುಣ ವಿರದು ಭ್ರಾಂತಿಗುಣಕೆಂಬಿಲ್ಲ
ಬಯಕೆ ತಾಂಬಯಲಾಗಿ ಮಾಯಗುಣವಿರದರಿಯೆ !
ಭಾವಗುಣ ವಿರದಿಹುದೆ ಶರಣತ್ವ ಸಿದ್ಧಿಯದು ೧೧೨
ಮಹಾಲಿಂಗ ಸಮರಸ ಸುಖಕ್ಕೆ ಸಾಧನವಹುದು
ಮನವುನ್ಮನವಹುದು, ರವಿಶಶಿಯೊಡಗೂಡುವವು
ಶಿವಜೀವರ ಸಂಗಮು ಸಮನಿಪುದು ಶರಣಂಗೆ !
ಅಂಗಕಲೆಯಳಿವುದಯ್ ಲಿಂಗಕಳೆ ಯುಳಿವುದಯ್ !
ಲಿಂಗಕಳೆ ತಾನದಂ ಮಂಗಳದ ಮಹಾಕಳೆಯು.
ಮಂಗಳದ ಮಹಾಕಳೆ ಮೂಡಿತ್ತು ತಾಯ್ಗೊಕ್ಕೆ
ಶಿವಜೀವರ ಸಂಗಮವಾಗಿತ್ತು ಅಂತರಂಗಕ್ಕೆ
ಕಾಯಮದು ಶಿವಕಾಯಮಾಗಿತ್ತು ನೋಳ್ಪೊಡಂ
ಧ್ಯೇಯಮದು ಶಿವಧ್ಯೇಯಮಾಗಿತ್ತು ತಾಯಿಯದು. ೧೧೦
ಕಂಡಿಹೆನ್ ಶಿವಶಕ್ತಿಯಾಗಿರ್ಪ ತಾಯಿಯಂ
ಕಂಡಿಹೆನ್ ಶಿವಭಕ್ತಿಯೊಳಿರ್ಪ ತಾಯಿಯಂ
ಕಂಡಿಹೆನ್ ಶಿವಸಾಖ್ಯದೊಳಿರ್ಪ ತಾಯಿಯಂ
ಕಂಡಿಹೆನ್ ಸದ್ಭಕ್ತರಂ ಪೊರೆವ ತಾಯಿಯಂ !
ಕಂಡಲ್ಲದೊರೆದಿಲ್ಲ ಕಾವ್ಯಮುಂ ಶ್ರವ್ಯಮುಂ ;
ಕಂಡಲ್ಲದಿರಲಿಲ್ಲ ಶರಣಪ್ಪೆ ದಿವ್ಯಮುಂ !

ಕಾಯ ಮನ ಪ್ರಾಣ ಭಾವಂ ಮತ್ತಮೀ ಜೀವ
ಧರ್ಮಂಗಳಂ ಜಯಿಸಲ್ ಲಿಂಗಧರ್ಮ ಮುತ್ತಮೋ
ಪಾಯವೆಂಬ ಗುರೂಪದೇಶಮಂ ತನ್ನಯ
ತ್ರಿವಿಧ ಲಿಂಗಾಚಾರ ವಿಚಾರಂಗಳಿಂ ಸಾ–

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ತಾಯೊಕ್ಕ ದೊಡ್ಡಾಟ ನೋಡಿದರ್,
ಮತ್ತೊಕ್ಕ ನೋಡದಾದರ್

ರ್ಥಕಂ ಪಡಿಸಿಹಳ್ ಸತ್ಯಶರಣ ಜೀವನದಲ್ಲಿ ;
ಗುರುದೇವ ಸಂದರ್ಶನದ ಲಾಭಮಂ ಪಡೆದಳ್ !
ಮತ್ತಮೀ ಮಾನಿಸದ ಜನ್ಮಸಾಫಲ್ಯಮಂ !

ಹೃದಯ ಸಿಂಹಾಸನದೆ ಕುಳ್ಳಿರಿಸಿ ಲಿಂಗಮಂ
ಸದ್ಭಾವವೀಣೆಯಂ ಮಿಡಿಮಿಡಿದು ನುಡಿಸಿದಳ್
ಮಾರ್ಗಕ್ರಿಯೆ-ಮೀರಿದಕ್ರಿಯಾಚಾರ ಕಾಲ್ಗಳಿಂ [ಪದಗಳಿಂ]
ನೃತ್ಯಮಂ ಮಾಡಿಹಳ್ ಷಡಂಗನ್ಯಾಸಹಾವ-
ಭಾವದಿಂ, ಹಾಡಿಹಳ್ ರುದ್ರಗಣ ಸ್ತೋತ್ರಮಂ ;
ಕ್ರಿಯಾಜ್ಞಾನೇಚ್ಛಾದಿ ಶಕ್ತಿಯರೊಡಗೂಡಿ,
ದಶನಾದಗಳ್ ಮೊಳಗು ಸುಶ್ರಾವ್ಯವಾದ್ಯಗಳ್ ;
ಹೂಮಳೆಯ ಕರೆದಿಹಳ್ ಲಿಂಗಪತಿಶಿರದಲ್ಲಿ
ಮತ್ತಮಂಗೈಯ ರಂಗಸ್ಥಲದ ಹರವಾಗಿ !
ಆಚಾರ ಗುರು ಶಿವಚರ ಪ್ರಸಾದ ಮಹಾ-
ಲಿಂಗಗಳ್ ಪಾತ್ರಂಗಳಾಗಿ ಸಹಕರಿಸಿಹರ್
ಗುರುವರ ನಿರೂಪಿಸಿದ ಶರಣಾಯಿ ನಾಟಕದೆ !
ಸಚ್ಚಿತ್ಕಳೆಗಳೆರಡು ವಿದ್ಯುದ್ದೀಪಂಗಳಾಗಿ
ಅಚ್ಚಳೆಯದೆ ಬೆಳಗಿಹವು ಸರ್ವಾಂಗರಂಗಮಂ ;
ಪಂಚಭೂತಂಗಳ್ ಪರದೆಗಳಾಗಿ ಎಸೆದವು,-
ಹಸನಾಗಿ ಹಲವಣ್ಣಗಳಿಂ ಮೈಹಾಸಿ ಮನ-
ವನಾಕರ್ಷಿಸಿ ಮೇಲು ಮೇಲಕ್ಕೆ ಚಲುವಿಂದೆ !
ಕಲೆಗಳ್ ನಿವೃತ್ತಿ ಪ್ರತಿಷ್ಠೆ ವಿದ್ಯೆ ಶಾಂತಿಗಳ್
ತಾವಾಗಿ ಚಲುವಾಂತು ತೋರಿಹವ್ ಬಾಳಿನೊಳ್
ನಿಷ್ಠೆ ಮೇಣ್ ಕರುಣ ಶಾಂತ್ಯನುಭಾವರಸಂಗಳ್ ;
ಮಾತೆ ಏಕೋಭಾವದಾರತಿಯ ನೆತ್ತಿಹಳ್
ಚಿಜ್ಜ್ಯೋತಿಯ ಪ್ರಭೆಯದು ಹರಡಿಹುದೊಳಹೊರಗೆ
ಭಕ್ತ ಜನರನುರಾಗವು ಚಿಮ್ಮಿಹುದಾಶ್ರಮದೆ !
ವಿಭಾವರಿಯಾಗಿಹುದು ಜ್ಞಾನಶೂನ್ಯಸ್ಥಲಂ

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ನೆ

ತಾಯೊಕ್ಕೆ ದೊಡ್ಡಾಟ ನೋಡಿದರ್,
ನುತ್ತೊಕ್ಕೆ ನೋಡದಾದರ್

ಮೌನ ಭೋಧೆಯೊಳ್ ನಡೆವಿಪ್ಪುದದುನಾಟಕಂ
ಶರಣನ್ನೆ ಸತ್ಯಸ್ಯಯ ಜೀವನ ರಂಗದೊಳ್ !

ಕಂಡಿಹೆನ್ ಕೇಳಿಹೆನ್ ಚಿತ್ತದೊಳ್ ಸಂತಸಂ
ಪಡೆದಿಹೆನ್–ಎಂತೆಂಬ ಭಿನ್ನ ಭಾವಂಗಳಂ–
ಬಿಟ್ಟಿಹಳ್; ನಡೆದಿಹೆನ್ ನುಡಿದಿಹೆನ್ ಎಂತೆಂಬ
ಮಾಟವುಂ ತೊಡೆದಿಹಳ್; ಉಂಡಿಹೆನ್ ಉಟ್ಟಿಹೆನ್
ಎಂತೆಂಬ ಹಂಗಮುಂ ತೊರೆದಿಹಳ್ ಶರಣನ್ನೆ
ಜಗದಾಟವಂ ತವಿಸಿ ಕೋಟಲೆಯ ಕಳೆದಿಹಳ್ ;
ಶರಣಸ್ಥಲದ ತುತ್ತತುದಿಯನೇರಿಹಳ್ ತಾಯ್
ಸ್ಥಿರಭಾವದಿಂ ಬಾಳಿಹಳ್ ತೊಳಗಿ ಬೆಳಗಿಹಳ್
ಬೆಳಗು ಬೈಗುಗಳನುಳಿದು ನಿತ್ಯಮುಕ್ತಳಾಗಿಹಳ್
ವಸ್ತುವಿನ ನೆಲೆಗಂಡು ಚಿತ್ತಮನ ಕಳೆದಿಹಳ್
ಮೇಣು ನಿತ್ಯಾನಿತ್ಯ ಭಾವಮುಂ ಬಿಟ್ಟಿಹಳ್
ನಿಶ್ಚಿಂತ ನಿತಾಂತ ನಿರಾಮಯವನೈದಿದಳ್ !

ಇನ್ನೇಕೆ ಜಗದಾಟಮುಂ ನೋಡುವಾಸೆಗೆ ?
ಎನ್ನೊಳಿಹ ಲಿಂಗಪತಿಯಾಟವುಂ ಕಂಡುದೇ–
ಸಾಲದೇಂ ? ಕಾಯೇಂದ್ರಿಯಕರಣಂಗಳಿದರಿಂ
ಕಳೆಯೇರ್ದ ವಾನಂದಸಾಗರದೆ ತೇಲಿಹವ್
ಗುರುವರನ ಕರುಣರಸ ಸಾಖ್ಯಮುಂ ಪಡೆದಿಹವ್
ಮನದಣಿಯಲನುಭವಿಸಿ ಮೋದದಿಂ ಪೆರ್ಚಿಹವ್
ಸೊಂಪೇರಿ ಚಿತ್ತಕ್ಕೆ ತಂಪೇರಿ ಭಾವಕ್ಕೆ–
ಪೆಂಪೇರಿ ಜೀವಕ್ಕೆ ಪುಳಕಿಸುತ್ತಿರುತಿರೆ !

ಇಂತೆಂದು ತನ್ನೂರ್ಗೆ ತ್ವರಿತದಿಂ ನಡೆತಂದು,
ಸುದಿರ್ಪ ಸಂತಸದೆ ತಾನಿಹಳ್ ಶರಣನ್ನೆ !

CC-0. Jangamwadi Math Collection. Digitized by eGangotri

೧೬. ಅನುಕಂಪದಾ ನಲ್ವರಕೆಗಳ್

ದಿನದಿನಂ ನೇಸರಂ ತನ್ನ ಬಿಸಿಗದಿರಂಗಳಿಂ
ಜನಜಗವನಿರದೆ ಬೇಯಿಸುತ ಬಳಲಿಸಿದೊಡಂ
ತನ್ನ ತಂಗದಿರಂಗಳಿಂ ತಂಬೆಳಗನುರೆ
ಬೀರುತುಂ ಜಗದೊಳ್ ಜನರ ತಣಿಪ ಶಶಿಯಂತೆ ;
ಮೇಣ್ ವರುವರುಷಕೊರ್ಮೆ ಬೇಸಿಗೆಯು ಭುವನಮಂ
ಬಿಸಿಗೆಯ್ದು ತಲ್ಲಣಿಸುವಂತೆವೋಲೆಸಗುತಿರೆ
ಮಳೆ ಹುಯ್ದು ತಂಪಾಗಿಸುವ ಮೇಣು ಹಸುರಿನಿಂ
ಮಳೆ ಹುಯ್ದು ತಂಪಾಗಿಸುವ ಮೇಣು ಹಸುರಿನಿಂ
ಸೊಂಪಾಗಿಸುವ ಪ್ರಕೃತಿ ಮಾತೆಯೊಲ್ ಕರುಣಾಳು
ಶರಣವ್ವೆ ಸಂಸಾರ ಸಂತಾಪದಿಂ ಬೆಂದು
ಬೆಂಡಾಗಿ ಬಸವಳಿದು ಬಂದು ಬೆಸಗೊಳ್ಳುವ– ೧೦
ರ್ಗನುಕಂಪದಿಂದನಂತವಿಧದಿಂ ನಲ್ವರಕೆ–
ಗಳನಿತ್ತು ಸಂತೈಸಿ ಕಳುಹುವಳ್ ಸಂತಸದೆ !
ತಾನವುಗಳಂ ಗಣಿಸಲಳವೇಂ ಗುಣಿಸಲಳವೇಂ ?
ಬಾನ್ ಚುಕ್ಕೆಗಳ ತೆರದೊಳಗಣಿತಂಗಳಹವೈ !
ಅವುಗಳೊಳ್ ಪೇಳ್ದಪೆವ್ ತಾನೊಸೆದು ತಿಳಿದಿರ್ಪ
ಪಲಕೆಲವುಗಳಂ ಸಹೃದಯರ್ ಮನ ಮೆಚ್ಚುವೊಲ್
ಪರಿಪರಿಣಮಿಸಿ ಮಿಗಿಲ್ ಹೃದಯದಿಂ ಹೆಚ್ಚುವೊಲ್
ಶರಣವ್ವೆ ನಾಡ ಜನಕಿತ್ತ ನಲ್ವರಕೆಗಳಂ !
ಮಗುವಾಡು ತೊದಲ್ನುಡಿಗಳಂ ಕೇಳುತಂ ಮಿಗೆ
ತಾಯ್ ನಲಿಯದಿರ್ಪಳೇಂ ಮನವೊಲಿಯದಿರ್ಪಳೇಂ ? ೨೦
ಕನ್ನಡದ ನುಡಿಯಾಗಸದೆ ಚುಕ್ಕೆಗಳ ತೆರದಿ
ಕನ್ನಡದ ನೆಲದೆ ಪೂಗಳರಳ್ದ ತೆರದಂತೆ
ಶರಣವ್ವೆ ನಲ್ವರಕೆಗಳ್ ತಾವು ಹರಡಲಯ್
ಹೊಳೆಯಲಯ್ ಪರಿಮಳಂ ಬೀರಲಯ್ ಜಲುವಾಗಿ ! [ಬಗೆಬಗೆಯಿಂ]

CC-0. Jangamwadi Math Collection. Digitized by eGangotri

ಕಂಬಳೀಹಾಳದೊಳ್ ತಳವಾರ ಸೆಂಕಪ್ಪ–
ಕುಮಾರಂ ಭೀಮಪ್ಪನೆಂಬುವಂ ತಂದೆಯಂ
ಕಳೆದುಕೊಂಡು ತಬ್ಬಲಿಯಾಗಿಹನ್ ತನ್ನಹದಿ–
ನಾರರೇರುಂಜವ್ವನದ ವಯಸ್ಸಿನೊಳ್ ಗಡಾ !
ಸೆಂಕಪ್ಪ ಅನುವಂಶಿಕವಾಗಿ ಬಂದಿರ್ದ
ಊರೋಲೆಕಾರನಾಗಿ ಮತ್ತಂ ಮರ್ದನೀ
ಯವನಾಗಿ ಸಂಸಾರಮಂ ಸಾಗಿಸುತಿರ್ದನ್ !

ಸೆಂಕಪ್ಪ ಸಾವನಪ್ಪಿದ ಬಳಿಕ ಭೀಮಪ್ಪ
ಸಂಕಟಕ್ಕೊಳಗಾಗಿ ಹೊಟ್ಟೆಯಂ ಹೊರೆಯದಿಹನ್
ಗೋಡೆಯುಂ ಕಟ್ಟುಗೆಲಸಮಂ ಕೈಕೊಂಡಿಹನ್ ;
ಒಂದಿನಂ ಕಂಬಳೀಹಾಳ ತೀರ್ಥನೆಯ ಮೂ–
ಡಣದೊಳಿರ್ಪ ಸಂಗನ ಬಸವಯ್ಯ ಗದ್ದುಗೆಯ
ಗೋಡೆಯುಂ ಕಟ್ಟಲ್ಕೆ ಬಂದಿರ್ಪ ಭೀಮನಂ
ತಾಯ್ಕರೆದು ನಿನ್ನಪ್ಪನಂತೆವೋಲ್ ವೈದ್ಯಮಂ
ಮಾಡಲ್ಕೆ ನಿನಗೆ ಬಪ್ಪುದೇನೆಂದು ಕೇಳಲ್ಕೆ
'ಸ್ವಲ್ಪ ಸ್ವಲ್ಪ ತಪ್ಪಲಾ ತೋರಿಸ್ಯಾನ ತಾಯಿ'
ಎಂದೆನಲ್ ಪೋಗಿ ನೀಂ ಕೆಸರ್ಗೆಯ್ ತೊಳಕೊಂಡು
ಬಾ ಇಲ್ಲಿ ನೋಡೋಣ ; ಎಂದಾಣತಿಯನೀಯೆ
ಭೀಮಪ್ಪ ನಡಗುತ್ತ ಕೆಯ್ದೊಳೆದು ಬರುತಿರಲ್
ತಾಯಿ ಕರುಣೆಯಿಂದಾತನಾ ಬಲ ಹಸ್ತದೊಳ್
ತೀರ್ಥಮಂ ಹಾಕಿ, ಇಂದಿನಿಂ ನೀಂ ಗೋಡೆಯಂ
ಕಟ್ಟುವುದು ಬೇಡ ನಿನ್ನ ಕೆಯ್ ಸಂಜೀವಿನಿಯು ;
ನೀನಿನ್ನು ವೈದ್ಯಮಂ ಮಾಡು ನಿನ್ ತಂದೆಯೊಲ್
ಎಂತೆಂದು ಹೃದಯದಿಂ ಹರಸುತ್ತ ಮೇಣಾಯು–
ರ್ವೇದ ಗ್ರಂಥವೊಂದಂ ಶರಣನ್ವೆ ಕರುಣಿಸಿಲ್
ಕೊಂಡೊಯ್ದು ಪಠಿಸುತ್ತ ಪಂಡಿತನಾಗಿಹನ್ ;
ಬಂದವರ ಬೇನೆಗಳಂ ಕಳೆವುತ್ತ ಪೆಸರಾಂತು
ಸಂತೋಷದಿಂ ಬಾಳತೊಡಗಿಹನ್ ಭೀಮಪ್ಪ
ಕಾಳಿಕಾದೇವಿಯಿಂ ಕಾಳಿದಾಸನಾತಂ

CC-0. Jangamwadi Math Collection. Digitized by eGangotri

ವಿಶ್ವದೊಳ್ ವಿಖ್ಯಾತ ಕವಿಯಾದ ತೆರದಂತೆ,
ತಾಯಿಯಿಂ ಭೀಮಪ್ಪ ವೈದನಾಗಿ ಮತ್ತಂ
ವಿದ್ಯಾವಂತನಾಗಿ ಜನಾನುರಾಗಿಯೆನಿಸಿಹನ್ ;
ತಾಯಿಯಾ ಅಮೃತಮಯ ಹಸ್ತದಿಂ ಮತ್ತಮಾ
ಹೃದಯಮಯ ಸತ್ಯಸಂಕಲ್ಪದಿಂ ಕರುಣೆಯಿಂ !
ತಾಯನುಗ್ರಹದಿಂದ ವಿದ್ಯಾವಂತನಾಗಿಹನ್—
ನೋಡೆ ವಿದ್ಯಾವಂತನೆನಲೇನಚ್ಚರಿಯೋ ?

ಮತ್ತೊರ್ಮೆ ಇಳಕಲ್ಲ ಶ್ರೀಕಂಠಿ, ಮಾತೆಯ
ದರ್ಶನಕೆ ಬಂದಿರುತಿರಲೆಂದಿನೊಲ್ ಹಾಸುಗೆಯ
ಮೇಲೆ ಕೂರಿಸದೆ ಪೀಠವೊಂದನಿರಿಸಿ, ಅದರ
ಮೇಲೆ ಕುಳಿತುಕೊಳ್ಳಲು ಪೇಳುತಿರೆ ಕಂಠಿಯವ—
ರೊಪ್ಪದಾಗುವರ್, ತಾಯೊತ್ತಾಯ ಮಾಡುತಂ
ಕುಳ್ಳಿರಿಸಿ ಕುಸುಮಮಾಲೆಯಂ ಕೊರಳ್ಗಿ ಹಾಕಿಸಿ,
'ನಮ್ಮಪ್ಪ ನಮ್ಮಪ್ಪ, ತಾನರಸನಾಗುವನ್',
ಎಂತೆಂದು ಪೇಳುತ ಮುಗುಳ್ನಗೆಯ ಬೀರುವರ್ !
ಏಕಿಂತು ಗೆಯ್ದರೆಂಬುದಂ ಶ್ರೀಕಂಠಿಯವರು
ತಿಳಿಯದಾದರಂದುಂ, ತಿಳಿಯಲಹುದೇನ್ ಶರಣ—
ಮೈಮೆಯನು ? ಮೂಕರಂತೆಲ್ಲರುಂ ನಿರೀಕ್ಷಿಸು—
ತಿರ್ದರಾ ಪ್ರಸಂಗಮಂ ಚಿತ್ತರದ ಬೊಂಬೆಗಳ
ತೆರದಂತೆ ಮಾತು ಮೌನವಾಗಿ ಪರಿಣಮಿಸಿತ್ತು.
ಮುಂತೆ ತಿಂಗಳೊಂದರೊಳು ನಿಜಲಿಂಗಪ್ಪನವ
ರಿಂ ಮುಖ್ಯ ಮಂತ್ರಿ ಪದವಿಯಂ ಪಡೆದರೆಂಬುದು
ಸೋಜಿಗಂ ತಾನಲ್ತೆ ; ತಾಯ್ ಶಕ್ತಿಗೆದುರುಂಟೆ ?
ತಿಳಿಯಲಂತಃಶಕ್ತಿಯಿರುತ್ತಿರೆ ತಾನದಂ
ಮಾತಿನೊಳ್ ಬರ್ಪುದೆಂಬುದಕಿದಂ ಸಾಕ್ಷಿಯು ;
ಅವರಾಗುವರುದಾರ ಚರಿತ್ರರ್ ಸರ್ವರು—
ದ್ಯಾರಕ್ಕೆ ಚಿಂತಿಸುತಿಹರ್ ಸ್ವಾರ್ಥವಿಲ್ಲದಲೆ ;
ಸಂಕುಚಿತ ಭಾವವಿರದು ಸಂತತಮುತ್ಸಾಹ—
ಶೀಲರಾಗಿ ಮೇಣಂತಸ್ಸತ್ವರಾಗಿರುವರ್ !

CC-0. Jangamwadi Math Collection. Digitized by eGangotri

ಸಜ್ಜಲ ಶರಣವ್ವೆ

ಆನುಕಂಪದಾ ನಲ್ವರಕೆಗಳ್

ಮುಂಬರ್ಪ ಜೀವನವನರಿಯುವರ್ ಆರುಹುವರ್
ಅಚಲ ನಿರ್ಧಾರದೊಳ್ ತಮ್ಮಾತ್ಮ ಸಾಕ್ಷಿಯೊಳ್ !
ಬದುಕಿನೊಳ್ ಬಾನೆತ್ತರೇರುವರ್ ಬಿತ್ತರಕೆ
ಪರ್ಬುವರ್ ವಿಭುವಪ್ಪ ಚೈತನ್ಯ ಶಕ್ತಿಯಿಂ !

ಸುತ್ತಲು ಪರ್ಬಹುದು ಮತ್ತೊಂದು ಸುದ್ದಿಯಿದು :
ಕನ್ನಡ ಖ್ಯಾತಕವಿ ಈಶ್ವರ ಸಣಕಲ್ಲರ್ಗೆ
ಮಾಸಾಶನಂ ದೊರಕಡಿತ್ತು ರಾಜಕಾರಣದೆ ;
ತೀವ್ರವಾದಾರ್ಥಿಕದ ಮುಗ್ಗಟ್ಟಿನೊಳಿರ್ದರು. ೧೦
ಇಂತಿರುತ್ತಿರಲೊರ್ಮೆ ಇಲಕಲ್ಲ ಶ್ರೀವಿಜಯ
ಮಹಾಂತ ಶ್ರೀಗಳವರರುವತ್ತನೆಯ ಪುಣ್ಯ
ತಿಥಿಗತಿಥಿಯಾಗಿ ಬಂದಲ್ಲಿಂದೆ ಕಂಬಳ
ಹಾಳಿಗೈತಂದು ಪೂಜ್ಯತಾಯಿಯ ದರ್ಶನಂ
ಮಾಡುವರ್ ; ಗಿರಿರಾಜ ಹೊಸಮನೆಯವರಾಗಳ್
ಬಿನ್ನವಿಸುವರ್ ತಾಯಿಯಲ್ಲಿ ಕವಿ ವರ್ಯಂಗೆ
ರಾಜ್ಯದಿಂ ಮಾಸಾಶನ ಧೊರೆವಂತನುಗ್ರಹಿಸ–
ವೇಕೆಂದು ! ಶರಣವ್ವೆ ಒಳಮನೆಗೆ ಪೋಗುತ್ತ–
ಮಯ್ದು ರೂಪ್ಯಂಗಳಂ ಮೇಣುತ್ತತ್ತಿಕಲ್ಲುಸ– ೧೧೦
ಕ್ಕರೆಗಳಂ ತಂದೀಯುವರಂತಃಕರುಣದಿಂ ;
'ಓ ಅಪ್ಪ ಮತ್ತೊರ್ಮೆ ನೀವಾಗಮಿಸುವನಿತ
ರೊಳ್ ದೇವನೆಲ್ಲ ಬಗೆಯಿಂದೆ ಕಲ್ಯಾಣಮಂ
ಮಾಡುವನ್ ಪೋಗಪ್ಪ' ಎಂದೆನುತ ಹರಸುವರ್ !
ಮುಂತೆ ಕೆಲದಿನಂಗಳೊಳುಮೀಶ್ವರ ಸಣಕಲ್ಲ
ಕವಿಗೆ ಮಾಸಾಶನಂ ದೊರಕುಗುಂ ಕರುಣೆಯಿಂ !
ಶರಣಾಯಿ ಹೃದಯದಾ ಕೋರಿಕೆಯೆ ಪೆಯ್ವೆತ್ತು
ಬಂದಂತೆ ಬಂದಿತಯ್ ಮಾಸಿಕದ ಪ್ರಾಪ್ತಿಯುಂ ;
ಶರಣವ್ವೆ ಶ್ರೀವಾಣಿ ಸಫಲಮಪ್ಪುದು ತಪ್ಪದೆ !
ಆರ್ತಜನ ಕಲ್ಪತರು ಸತ್ಯ ಶಿವ ಶರಣವ್ವೆ ೧೧೦
ಕೊನೆಸಾಗಿಸಿಹಳ್ ಸಂಕಟದ ಸಂಕೋಲೆಯಂ
ಬಡತನದ ಬೇಗೆಯುಂ ಬಾಳಿನೀ ಬವಣೆಯಂ ;

CC-0. Jangamwadi Math Collection. Digitized by eGangotri

ಕಡುತರದ ಸತ್ಸಾಧನೆಯ ಸ್ವಾತ್ಮ ಶಕ್ತಿಯಿಂ !
ಪರಿಶುದ್ಧ ಕಾಯವಾಙ್ಮನ ತ್ರಿಕರಣಂಗಳಿಂ–
ದರಳ್ದ ಮಹಾಚೈತನ್ಯ ಸಜ್ಜಲದ ಶರಣನ್ನೆ
ಕಾಯದಿಂ ವಾಕ್ಕಿನಿಂ ಮನಸಿನಿಂ ಬೆಳೆಬೆಳೆದು
ಧ್ಯೇಯದೊಡನೆ ಜನ ಜೀವನವ ರೂಪಿಸುತಿಹಳ್ !
ಅಂಗದಿಂ ಮಂಗಳವ ಕರುಣಿಪಳ್ ಜನರಿಂಗೆ
ಮಾತಿನಿಂ ಮಂಗಳವ ಕರುಣಿಪಳ್ ಜನರಿಂಗೆ !

ಸಜ್ಜಲದ ಗುಡ್ಡದೊಳ್ ಕೊಬ್ಬಿದತ್ತು ಗೂಳಿಯು
ತಾನೊಂದು ಕಂಡವರ ಹೊಲಬಣವೆಗಳಂ ಪಾಳ್ ೧೪೦
ಗೆಯ್ಯುತ್ತ ಮೇಯುತ್ತ ಪಡಿದಿನಂ ತುಡುಗಿನಿಂ–
ದೂರವರ್ ಕಂಡಿದಂ ರೊಚ್ಚಿಗೇಳ್ದ ಪರ್ ಮಿಗೆ
ಕೊಲ್ಲವೇಳ್ಕುಮಥವಾ ಮಾರುವೇಳ್ಕುಮೆಂದುಂ
ತರಿಸಂದು ಕೋಲ್ಕೊಡಲಿಗಳಂ ಪಿಡಿದು ಕೆಯ್ಕೊಳುಂ
ಬೆನ್ನಟ್ಟಿಹರೆಲ್ಲರ್ ಹೋರಿಯಂ ಬಿಡದಂತೆ ;
ಸಿಕ್ಕದಲವರ ಕೆಯ್ಗೆ ತಾನೋಡಿ ಬಪ್ಪುದಂ
ತಾಯಿಯಾಶ್ರಮದ ಬಳಿ, ಕಂಡರದನಮ್ಮವ್ವೆ ;
ಮತ್ತಂ ವಿಚಾರಿಸಿಹರೈತಂದು ರೈತರಂ ;
ಪೇಳಿಹರ್ ಶರಣವ್ವೆ : ಅಪ್ಪಗಳೆ ಕೊಲ್ಲದಿರೆ
ನೀವುಗಳ್ ಕೊಂದಪರಾಧಕೆರವಾಗದಿರೆ ೧೫೦
ನಿರ್ನ್ನೆರ ಮುಮಾಧವ ಶಿವ ವಾಹನವಿದ್ದೆಸೆ
ಮೇಣು ಬೆಲೆಗೆಯ್ಯದಿರೆ, ತಾನಿದಂ ದುಡಿದು ಬೆಳಿ–
ದೆಗೆದು ಮನೆ ಬಾಳಿಸುವ ಹಿರಿಯ ಮಗ ರೈತರ್ಗೆ ;
ಅನಿತಕಂ ನಿಮಗೆಲ್ಲ ಬೇಡಾಗಿ ಇರದಿದೆಂ–
ದುಸುರಿ ತಾಯ್ ಗೂಳಿಯಂ ಕಾರುಣ್ಯದೃಷ್ಟಿಯಿಂ
ನೋಡಿಹಳ್ ; ಓ ಬಸವ, ಮಂದಿಗೇಕೆ ನೀನಿರದೆ
ನಿರ್ನ್ನೆರಂ ನೋವನೀವೆ ನೀಂ ಪೇಳ್ ? ಉಪದ್ರವಿ–
ಯಾಗದಿರ್ ನೀನಿನ್ನು ಪೋಗಿ ಬಿಡು ನಾಳಿಗಂ
ನಿನ್ನೊಡೆಯನ ಬಳಿಗಂ ! ಎಂದಾಣತಿಯೀವರ್ !
ವರುದಿನ ಹೋರಿಯದು ಶಿಷ್ಟಾಧೀನಮಪ್ಪುದು ೧೬೦

CC-0. Jangamwadi Math Collection. Digitized by eGangotri

ಅನುಕಂಪದಾ ನಲ್ವರಕೆಗಳ್

ಶರಣಪ್ಪೆಯ ಪ್ರಾಸಾದಿಕ ವಾಣಿಯಂತೆಯೊಲ್ !
ತಾಯಿಯವನಾಶ್ರಯದ ಸನಿಹದೊಳ್ ಬೆಳೆದಿರ್ದ
ಬಿಲ್ವಮರದ ಬುಡದೊಳ್ ಸಮಾಧಿಯನೆಸಗಿಸಿದರ್
ಸಂಕಲ್ಪ ಸಿದ್ಧಿಯಂಪಡೆದಿಹರ್ ಶರಣಪ್ಪೆ !
ಬದುಕಿಹರ್ ರೈತರುಂ ಮಕ್ತಮಾ ಗೂಳಿಯುಂ
ಪರಸ್ಪರಮಾವ ತಪ್ಪುತಡೆಗಳ್ ಘಟಿಸದಲೆ !
ಹಕ್ಕಿಲ್ಲ ಲೋಕಕಂಟಿಕರಾಗಿ ಬಾಳಲ್ಕೆ
ಆರಿಗುಂ ಲೋಕದೊಳ್ ನಿಚ್ಚಯಂ ತಾನಿದಂ !
ಎಂಬುದಂ ಸಾಟಿದಳ್ ಶರಣಪ್ಪೆ ಮಣಿಹದಿಂ ;
ಸತ್ಯ ಸಂಸಿದ್ಧ ಶಿವ ಸಂಕಲ್ಪವಾಣಿಯಿಂ ! ೧೫೦

ಮತ್ತೊಂದು ದಿವಸದೊಳ್ ಹುಸಗುಂದ ಮಠಗುರುಗ–
ಳವರೊಡಂ ಮೇಣು ಮಾಮಲ್ಲಪ್ಪ ಭಕ್ತಿಯಿಂ
ತಾಯಿಯಾ ದರ್ಶನವ ಪಡೆದೊಡನೆ ಪಯಣಿಸಲ್
ತೊಡಗಿರಲ್ ತಾಯ್ 'ಬೇಡಿ, ನಾಳೆ ಪೋಗುವಿರಂತೆ'
ಎಂತೆಂದು ವಿನಂತಿಸಿಕೊಂಡಿಹರ್ ಮುಂದರಿದು ;
ಮಠಗುರುಗಳ್ ಕಾರ್ಯನಿಮಿತ್ತಮಾಗಿ–
ಕರಡಿಗಂ ಪೋಗವೇಳ್ಕುಂ ತಾಯಿ ಅಪ್ಪಣೆಯ
ಕುಡವೇಳ್ಕು ಮೆಂತೆಂದು ತಾಯಿಯೊಳ್ ವಿನಂತಿಸಿ
ಬೇಡೆನಲ್ ಕೇಳಿದಲೆ ಚಕ್ಕಡಿಯನೇರ್ಪರ್ ೧೬೦
ಹೊರಡುವರ್ ; ಕೋಡಿಹಾಳ್ ಸನಿಹದೊಳ್ ಬಂಡಿಯ–
ಹೊರಗೀಲು ಮುರಿದಲ್ಲಿ ನಿಲ್ಲವೊಲ್ ತಾನಕ್ಕು ;
ತಾಯಿ ತಾಂ ಬೇಡೆಂದೊಡಮವರ ಮನಸೋಯಿಸಿ
ಬಂದುದಕ್ಕೆ ತಗು ಶಿಕ್ಷೆಯಾಯ್ತುಮಾ ಮಲ್ಲಪ್ಪ–
ಎಂದು ಮಠಗುರುಗಳ್ ಪಶ್ಚಾತ್ತಾಪಮಂ ಪಡುವರ್ !
ದೊಡ್ಡವರ ಮಾತು ಮೀರಿದಡಾಗುವುದಿನಿತಂ
ಸಜ್ಜಲದ ಗುಡ್ಡದಲ್ಲಿರ್ದೊಡಂ ಲೇಸಿತ್ತು
ಎಂದೆನುತ ನೊಂದಿಹರ್ ಮಾಳ್ಪುದೇಂ ಮಿಂಚಿರಲ್ ?
ಪಣೆ ಬರೆಹಮಂ ಪೇಳು ತೊಡೆವರಾರ್ ಬಾಳಸೊಳ್ !
ಕೋಡಿಹಾಳ್ ಗ್ರಾಮದೊಳ್ ತಂಗಿದರ್ ಸ್ನಾನಾರ್ಚನ–

CC-0. Jangamwadi Math Collection. Digitized by eGangotri

ಪ್ರಸಾದಂಗಳಿಲ್ಲದೆ ಕರಡಿಗೆಗೆ ಪೋಗದೆ ! ೧೬೦
ನಡುದಾರಿಯೊಳ್ ನಿಲ್ಲುವಂತಾಯ್ತು ನಿರ್ನೀರಂ
ತಾಯಿಯಾ ನುಡಿಗಳಂ ಲೆಕ್ಕಿಸದೆ ಬಂದುದಕೆ !

ನರಸಣಗಯೆಂಬವರ್ ಕಲಬುರ್ಗಿ ಪಿರಿಯೂರಿ
ನಿಂ ತಾಯ ದರ್ಶನಕೆ ಬಂದಿರಲ್ ತಳುವದೊಲ್
'ಬರಬೇಕು ಬರಬೇಕು ' ಎಂದಾಣತಿಯನೀವರ್
ಕೆಲಪೊಳ್ತು ಕುಳ್ಳಿರ್ದು ತಾಯೊಡಂ ಮಾತಾಡ
ವೇಕಿತ್ತು. ತಾಯದೇಕೊ ಬೇಗಂ ಹೊರಮಡಲ್
ಪೇಳ್ದರೋ ಎಂತೆಂದು ಯೋಚಿಸುತ ಕಾರೇರಿ
ಹೊರಡುವರ್ ; ಲಿಂಗಸೂರ್ ದಾಂಟುತಿರೆ ಮಳೆಹುಯ್ಯ
ತೊಡಗಿಹುದು ; ಸುರಪುರಂ ಮತ್ತಮಾ ಶಹಪುರಂ ೧೬೦
ಸನಿಹದೊಳ್ ಮಳೆಗಾಳಿ ಮಿಗಿಲಾಗಿ ಮುಂಗಾಣ
ದಂತಾಗಿ ಕಾರಿನಾ ಹಿಂಬದಿಯೊಳೊಂದು ಹೆ–
ಮ್ಮರಂ ಮುರಿದು ನೆಲಕ್ಕುರುಳಿದತ್ತು ಭಯಂಕರ
ಶಬ್ದಮಂ ಮಾಡುತ್ತ ಮಾರ್ಗಕಡ್ಡಮಾಗ !
ತಾಯಿಯಾಣತಿಗಿದುವೆ ಕಾರಣಂ ತಾನೆಂದು
ಬಗೆದಿಹರ್ ; ತಿಳಿದಿಹರ್ ತಮ್ಮ ದಿವ್ಯ ದೃಷ್ಟಿಯಿಂ
ತಾನಿಂತು ಸಂಭವಿಸುವುದೆಂದುಂ ತಾಯಿಯು !
ತಾಯಿಯಪ್ಪಣೆ ಮೀರಿ ನಾವ್ ಪಯಣಿಸಿರ್ದಲ್ಲಿ
ಕಂಟಕಕೆ ಸಿಲ್ಕದಿರುತಿರಲಿಲ್ಲ ನೋಳ್ಪೊಡಂ
ದಾರಿ ಸಗದಂತಾಗಿ ಮಿಗೆ ತೊಳಲ ವೇಕಿತ್ತು. ೧೯೦
ದೇವಕೃಪೆಯುದಿರಲ್ಕೆ ತಾಯಂತು ಪೇಳಿದುದು
ಲೇಸಾಯ್ತು ಲೇಸಾಯ್ತು ಎಂತೆಂದು ಹರುಷಿಸುತ
ಮುಂದಕ್ಕೆ ಮುದದಿಂದೆ ಪೋಗಿಹರವರೂರ್ಗೆ ;
ಕಾಪಿಟ್ಟ ತಾಯಿಯಂ ಮನದಲ್ಲಿ ನೆನೆಯುತ್ತ
ಮತ್ತನಿತು ಮಾತೆಯೊಳ್ ನಿಷ್ಠೆಯಂ ದಳಿಯುತ್ತ !
ನಿರ್ಮಲರ ನಲ್ವರಕೆ ತಾನಕ್ಕು ರಕ್ಷಕಂ ;
ನಲ್ವರಕೆಗಿರದೆ ಸಲ್ಲುವಂತಿರವೇಳ್ಕುಮಾ !

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಅನುಕಂಪದಾ ನಲ್ವರಕೆಗರ್

ಸಂತರ ಸಹವಾಸಂ ಸಂತೋಷಕಾರಣಂ
ತಾನೊಪಗುತಿರ್ಪ ಕಂಟಕಂಗಳ ನಿವಾರಣಂ !

ತಾನೊರ್ಮೆ ಬಲದಿಸ್ಸಿ ನಾಡಗೌಡರವರು
ಕಂಬಳೀಹಾಳ್ಗಡಿಯ ಬದಿಯಲ್ಲಿ ಶರಣಪ್ಪೆ–
ಯೊಡಂ ಮಾತಾಡುತ್ತ ನಿಂತಿರ್ಪ ಪೊತ್ತಿನೊಳ್
ತಾನಿದ್ದಿಹನಗಸರ ಅಮೀನಪ್ಪನೆಂಬುವನ್ !
ಅತನಿಂ ಮಳೆ ಮಾತು ಮೊದಲಾಗಿ ನೀಲಕಂ–
ಠ ಗೌಡರ್ ; ಓತಾಯಿ ಮಳೆ ತಾನಿಲ್ಲದಲೆ
ದನಗಳ್ಗೆ ಹುಲ್ಲಿಲ್ಲದಾಗಿಹುದು, ಜನಗಳ್ಗೆ
ಆಹಾರಮಿಲ್ಲದಂತಾಗಿಹುದು ನಾಡೊಳಗೆ ;
ನಡುನೆತ್ತಿಗೇರಿ ಹೊತ್ತು ಕಾಯ್ದಿದೆ ಮಣ್ಣಿದು ;
ನಿಲ್ಲದಂತಾಗಿಹುದು ಕರುಣಿಸೌ ಮಳೆಯ ನೀ–
ನಿಲ್ಲದಿರೆ ಜನದನಗಳುಳಿಯ ವೆಂದುಸುರುತಿರೆ
ಶರಣಪ್ಪೆ ; 'ಅಹುದಹುದು ಸೋಡಪ್ಪ ಆ ಮುತ್ಯಾಸ
ಆದೇಕೋ ಮುನಿಸಿಕೊಂಡಾನಪ್ಪಸ' ಎಂದೆನುತ
ಮೇಲಾಗಸಂ ನಿಟಿಸುತಲ್ಲಿಯೆ ನಿಂತಿರ್ದ
ಅಗಸರ ಅಮೀನಪ್ಪನಂ ಕರೆದು, ಅಮೀನಾ.
ಎಲ್ಲಿಯಾದರುಂ ಮೋಡಂ ಕಂಡು ಬರುವುದೇ
ನೆಂದು ತಾಯ್ ಕೇಳಿಹಳ್ ; ಅಮೀನಂ ಮುಗಿಲ್ತುಂ
ಬ ಕಣ್ಣಾಡಿಸಿ, ತಾಯಿ–ಮೋಡೆಲ್ಲಿಯುಂ ಕಂಡು
ಬರಲಿಲ್ಲಮೆಂದೆನುತ ಮತ್ತೊರ್ಮೆ ಮೇಲಕ್ಕೆ
ಮೊಗಮೆತ್ತಿ ನಿಟ್ಟಿಸುತ ಓ ತಾಯಿ, ಅಲ್ಲಿನಿತು
ಮೋಡಮದು ಕಾಣುತ್ತೆ ಎಂದೆನಲ್ ಶರಣಪ್ಪೆ
ಅಂತಿರಲಮೀನಪ್ಪಾಸ ಮೋಡಮಂ ಕರೆಯೊ ನೀಂ
ಮಳೆ ಸುರೀಲಿ ಧೋ ಧೋ ಎನ್ನುತಂ ತಾನಿರದೆ
ಎಂದೆನಲ್ ಶರಣಪ್ಪೆ ; 'ನಾಕರದ್ರ ಹ್ಯಾಂಗ್ರೆವಾ ;
ನೀವೆ ಕರದ್ರ ಬರತೈತೆ' ಎನ್ನುವನಮೀನಪ್ಪಾಸ ;
'ಇಲ್ಲಲೇ ನೀನೆ ಕರಿ, ತಾನದೇ ಬರತೈತೆಸ'
ಎಂದೆನಲಮೀನಪ್ಪ ತಾಯಿಯಾಜ್ಞೆಗೆ ಮರು

CC-0. Jangamwadi Math Collection. Digitized by eGangotri

ಮಾತನಾಡದೆ ಶ್ರದ್ಧೆಯಿಂ 'ಬಾರೊ ಮಳೆರಾಯ'
ಎಂದು ಕರೆದು ಕೂಗಿ ಕೆಯ್ಮಾಡಿ ಮರ ಮರಳಿ !
ಬಲದಿನ್ನಿ ನಾಡಗೌಡರ್ ಮೂಕ ಪ್ರೇಕ್ಷಕ
ರಾಗಿಯೀ ಸಂಭಾಷಣೆಯಂ ತಾವ್ ಕೇಳುತ್ತ
ನಿಂತಿಹರ್ ಕೆಮ್ಮನೇ ಭಕ್ತಿಯಿಂ ಬೆರಗಾಗಿ !
ತಾಸೊಂದು ಕಳೆವನಿತರೊಳಾಗಸಮದೆಲ್ಲಂ
ಕಾರ್ಮೋಡ ತಂಡದಿಂ ತವೆ ತುಂಬಿ ನಾಲ್ದೆಸೆಗೆ
ಹುಯ್ಯನೇ ಹುಯ್ಯಿತು ಮಳೆ ಧಾರಾಕಾರಮಾಗಿ !
ನಿಸರ್ಗಂ ಶರಣಾಗತಮಾದಪುದು ಶರಣರ್ಗೆ
ಎಂಬುವಾ ನಿಯತಿಯೊಲ್ ಶ್ರೀಮಾತೆಯಾಜ್ಞೆಗೆ
ತಲೆವಾಗಿಹುದು ತಾನದಂ ನಿಸರ್ಗಂ ದಿಟಂ
ಆತ್ಮಶಕ್ತಿಗೇ ಸರಿಮಿಗಿಲುಂಟೆ ಲೋಕದೊಳ್ ?
ಪಳ್ಳಮದು ತುಂತುಂಬಿ ಪರಿಯಿತ್ತೈ ರಭಸದಿಂ
ಕೊಳ್ಳಗಳ್ ತುಂಬಿ ತುಳುಂಕಿದವ್ ಪ್ರೊಸನೀರಿಂದೆ
ಕಪ್ಪೆಗಳ್ ಕೊರಚಾಡಿಹವ್ ಮಿಗಿಲ್ ನೆಲಮೆಲ್ಲ
ಹೆಚ್ಚ ಹಸುರಂಟ್ಟು ಪರಿಶೋಭಿಸಿತು ಕಣ್ಣಿಂಗೆ
ಚಲುವಾಗಿ ಹಸುರುಡಿಗೆಯುಟ್ಟ ಪೊಸನೀರೆಯೊಲ್ ;
ಹೊಲಗಳೊಳ್ ಹುಲುಸಾಗಿ ಸುಳಿದೆಗೆದು ಬೆಳೆಯೆಲ
ಬೆಳೆಯುತ್ತಿರೆ ಪಶುಗಳ್ ಮೆಯ್ದು ಮೆಯ್ದುಂಬಿ ನೆಗೆ–
ದಾಡಿಹವ್ ನೋಡಲೊಕ್ಕಲು ಮಕ್ಕಳಾನಂದಿಸಿಹರ್ !

ಗಂಜೇಂದ್ರಗಡದ ಶಾಂತಸ್ವಾಮಿಗಳ್ ತಾಯಿಯಾ
ದರ್ಶನಕೆ ಹೊರಟು ಇಳಕಲ್ಲಿನೊಳ್ ತಂಗಿರ್ಪು–
ದಂ ತಿಳಿದು ತಾಯಿ ಕರಿಬಸವಯ್ಯನೆಂಬವರ
ಕರೆಸಿ ಇಳಕಲ್ಲಿನೊಳ್ ಶಾಂತಸ್ವಾಮಿಯ ಕಂಡು
ಸಜ್ಜಲದ ಗುಡ್ಡಕ್ಕೆ ಬರದಂತೆ ತಿಳುಹಿಸೆಂ–
ದರುಹಿದರ್ ಮೇಣ ನೀನು ಮಿದರಂತೆಗೆಯ್ಯೆಂದು !
ಇಳಕಲ್ಲ ನಗರಕ್ಕೆ ಬೃತಂದ ಕರಿಬಸವಯ್ಯ
ಶ್ರೀಗಳ್ಗೆ ಸಜ್ಜಲದ ಗುಡ್ಡಕ್ಕೆ ಬರಬಾರ
ದೆಂದು ತಾಯಿ ಪೇಳಹರೆಂಬುದಂ ತಿಳಿಸಿಹೆನ್

CC-0. Jangamwadi Math Collection. Digitized by eGangotri

ಈ ನುಡಿಯನಾಲಿಸದೆ ಶ್ರೀಶಾಂತ ಸ್ವಾಮಿಗಳ್
ನಾಂ ಪೋಗವೇಳ್ಕಾಗಿಹುದು ಪೋಗುವೆನ್ ದಿಟ
ಎಂತೆಂದು ಪೇಳ್ದು ಪೆರತೊಂದಾಲೋಚಿಸದೆ
ಬಂದಿಹರ್ ಸ್ವಾಮಿಗಳ್ ಸಜ್ಜಲದ ಗುಡ್ಡಕ್ಕೆ !
ಶರಣಪ್ಪೆ ಮುಂದೊದಗುತಿಹ ಶಿವೈಕ್ಯವನರಿಯ.
'ದಯಮಾಡಿ ದಯಮಾಡಬೇಕೈಪ' ಎಂತೆಂದು
ಪರಿಪರಿಯಿಂ ಪ್ರಾರಿಸಿ ಕೊಂಡೊಡಂ ಸ್ವಾಮಿಗಳ್
ಪೋಗದಲೆ ನಾಲ್ಕಾರು ದಿನಗಳೊಳ್ ಲಿಂಗೈಕ್ಯ
ರಾಗಿಹರ್ ; ಶ್ರೀಗಳ ಸಮಾಧಿಯಂ ನೆರವೇರಿ
ಸಿಹರಲ್ಲಿ ಸಜ್ಜಲದಗುಡ್ಡದಾಶ್ರಮದಲ್ಲಿ !
ತಪ್ಪಿಸುವರಾರ್ ನೋಡೆ ಸ್ಥಲದ ಋಣಮಂಪೇಳಿ
ಅದರೊಳುಂ ಸಚ್ಚಿದಾನಂದಮಯಿ ಶಕ್ತಿಸ್ವ
ರೂಪಿಣಿಯ ಅಮಿಮುಕ್ತ ಕ್ಷೇತ್ರದೊಳ್ ಸಮಾಧಿಗೆ
ಸದವಕಾಶಮಿದು ದೊರೆತುದು ಶಾಂತ ಸ್ವಾಮಿಗಳ
ಪೂರ್ವ ಪುಣ್ಯದಾ ಫಲಮಲ್ಲದಲೆ ಬೇರಲ್ಲ ;
ಅಂತೆಯೊಲ್ ವಿರತಜಂಗಮ ಮೂರ್ತಿಯೊರ್ವರ
ಚೈತನ್ಯ ಸಾನ್ನಿಧ್ಯಪ್ರಾಪ್ತಿ ತಾಂ ಸಜ್ಜಲ
ಗುಡ್ಡ ಕ್ಷೇತ್ರದ ಪರಮ ಪುಣ್ಯಫಲಮಿದಲ್ತೆ !
ಇವರಿರ್ವರಿಂ ಸಜ್ಜಲಗುಡ್ಡಿದು ಸೋಕ್ಕೊಪ್ಪಡಂ
ಶಿವಶಕ್ತಿ ಸಮನ್ವಯ ಸಯ್ಪಿನಾ ಬೀಡಾಯ್ತು.
ಶಕ್ತಿ ಚೇತನಕೆ ಶಾಂತಿ ಚೇತನವೊದಗಿತಯ್
ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಸ್ಥಲವಾಯ್ತು.

ಮತ್ತೊಂದು ಸಮಯದೊಳ್ ಸಮಿಲುಗುಂದದ ಬಸವ-
ಲಿಂಗ ಮಾಸ್ವಾಮಿಗಳ್ ಮಾತೆಯಾ ದರುಶನಕೆ
ದಯಮಾಡಿಸಿ ಪಡೆದರ್ ಪೋಗಲೆಳಸಿಹರವರ್ ;
'ಅಪ್ಪಗಳಿ ತಮ್ಮ ಪೂಜೆಪ್ರಸಾದವಿಲ್ಲಿಯೇ
ಆಗಬೇಕ್ಕೈಪ' ಎಂದು ವಿನಂತಿಸಿಕೊಳ್ಳುವರ್ ;
ಪೂರ್ವದೊಳ್ ಯೋಚಿಸಿದವೊಲ್ ಯೋಜಿಸಿಕೊಂಡಂತೆ,
ಶ್ರೀಗಳವರ ಪೂಜಾ ಮುರಿಗಳ್ ಅಪ್ಪಾ ಆವರು,
ತಾಯಿ ಬಾಗಿಲುಕೋಟೆಯಲ್ಲಿಯೇ ಪೂಜೆ ಪ್ರ-

CC-0. Jangamwadi Math Collection. Digitized by eGangotri

ಸಾದವಂ ಮಾಡುವರ್, ಮೇಣ್ ಪೂಜೆ ಸಾಮಾಸು–
ತಂದಿಲ್ಲವೆಂದು ಸುರುವರ್ ; ಮುರಿಗಳ ಮಾತಿಂಗೆ
ಶ್ರೀಗಳುಂ ದನಿಗೂಡಿಸಿಹರ್ ಮುಂದರಿಯದೆ !
ಅದರೇಂ ತಾಯೊಂದೆ ಮಾತಿಂಗೆ ಬಿಡುವರಲ್ತು
ಪೂಜೆ ಪ್ರಸಾದವಾಗಿದ್ದರೆ ನೆಟ್ಟತ್ತು.–
ಎಂದು ಮೇಲಿಂದ ಮೇಲುಚ್ಚರಿಸುತಿರ್ದುಂ
ಸ್ವಾಮಿಗಳ್ ಪೂಜೆಯುಂ ಗೆಯ್ಯದಲೆ ಪೋಗುವರ್ ;
ಮುಂತೆ ಕೆಲ ದಿನಂಗಳೊಳ್ ಶ್ರೀಗಳ್ಗೆ ಪ್ರಸಾದಂ
ಪೋಗದಂತಾಯಿತು ಬಾಯ್ಗೆ ಹುತ್ತು ಹುಣ್ಣಾಗಿ !
ಶ್ರೀ ಮಾತೆಯಾ ಶರಣವಾಣಿಯನಲಕ್ಷಿಸಿದ
ಕತದಿಂ ಶಿವಪ್ರಸಾದವಂ ಸ್ವೀಕರಿಸ–
ದಂತಾಯ್ತೊ, ಮತ್ತಮೆಮಗೀ ರೀತಿ ತೊಂದರೆ
ಯಾಗಬಾರದೆಂದೇ ತಾಯುಂತು ಪ್ರಸಿಾದಕೆ
ವಿನಂತಿಸಿಕೊಂಡರೋ ?– ಎಂತೆಂದು ಸ್ವಾಮಿಳೆ
ನವಿಲುಗುಂದ ನೀಲಮ್ಮನವರ್ಗರುಹಿದರಂತೆ !
ಮಹಾಶರಣರ ಮಹಿಮೆ ಸೊಲ್ಲಿಂಗೆ ಸಿಲುಕುವುದೇಂ ?
ವ್ಯಕ್ತಿಕಿರಿದಾದಡೇನ್ ಒಳಶಕ್ತಿಯದು ಕಿರಿದೇನ್ ?
ಆವುದೋಕಾರ್ಯಕ್ಕೆ ಆವುದೋಕಾರಣಂ
ತಾನಲ್ತು ತಿಳಿಯಲ್ಕೆ ಸಂಬಂಧಮಿಲ್ಲದಲೆ
ಮೂಲಪ್ರತಿಕ್ರೆಯೆಯು ತೋರದದು ಚಿತ್ರಕೆ !
ಯಾಂತ್ರಿಕೋದ್ದೀಪನಂ ತಾನಲ್ಲ ಗೇಳ್ದಪರ
ಚಿತ್ತಾನುಭಾವ ಜನ್ಯವಹ ಕಾರಣಮಿದಂ !
ಸ್ವಾಮಿಯೋದ್ದೀಪನಂ ಸೋಪಾಧಿಕಂ ದಿಟಂ
ಮುತ್ತಮಾ ಪೂರ್ವಾನುಭೂತಂ ಸಮರ್ಪಕಂ !

ಶರಣಾಯಿ ಕರುಣದಿಂದನಂತ ಮನೆತನಗಳ
ವಂಶದೀಪಂಗಳ್ ಬೆಳಗುತ್ತಿಹವು ನಂದದಲೆ ;
ಲೆಕ್ಕವಿಲ್ಲದವರ್ಗೆ ಮಕ್ಕಳಾಗಿಹ ಉದಾ–
ಹರಣಂಗಳು ಹೇರಳವಾಗಿಹವು ನಾಡೊಳಗೆ !

CC-0. Jangamwadi Math Collection. Digitized by eGangotri

ಸಜ್ಜಲ ತಿಣವ್ವೆ

ಅನುಕಂಪದಾ ನಲ್ವರಕೆಗಳ್

ಹದಿನಾಲ್ಕ ಬರಿಸಂಗಳಿಂ ಮಕ್ಕಳಾಗದಿಹ
ಮುಂಬೈಯ ಶ್ರೀಚಂದ್ರಕಾಂತ ಹಪ್ತಿಯವಕ್ಕ
ಶರಣವ್ವೆ ದರ್ಶನಾಶೀರ್ವಾದದಿಂ ಮಕ್ಕ–
ಳಾಗಿ ಅವರ ವಂಶ ಜ್ಯೋತಿ ಬೆಳಗುತ್ತಿಹುದು

ಮುದ್ದೇಬಿಹಾಳ ತಾಲೂಕಿನಾಲೂರಿನ
ಶ್ರೀದೊಡ್ಡ ಬಸವಪ್ಪನಿಗೆ 'ಥಿಟ್ಸ್' ರೋಗವದು ೩೮೦
ತಾಯಿತ್ತ ಭಸ್ಮಲೇಪನದಿಂದ ಗುಣವಾಯ್ತು.

ಆದಾಪುರದ ಅವಾರಿ ಅಯ್ಯಪ್ಪ ನಾಮಕಗೆ
ತೆಂಗಿನಾ ಕಾಯಿಯಂ ಕರುಣಿಸಿ ಜೇನೆಯಂ
ತಿಂಗಳೊಳ್ ಮಾಣಿಸುತ ಪ್ರಾಣವನುಳಿಸಿಹಳು ;
ಶಾಲೆಯೊಳ್ ಶಿಕ್ಷಕಂ ತಾನಾಗಿ ಬದುಕಿಹನ್ !

ಶ್ರಾವಣದ ಮಾಸದಲ್ಲಿ ಬಾಗಲುಕೋಟೆಯೊಳ್
ಶಿವಯೋಗಿ ಬಂಧನಾಳ ಶ್ರೀಗಳ್ ಪೌರಾಣ
ಕರವರಾಗಿ ಬಿಜಯಂಗೆಯ್ದಿರ್ ಮಹೊತ್ಕ್ರಮ ;
ತಾಯಿಯವರ ದರ್ಶನ ಪಡೆಯುವಭಿಲಾಷೆಯಿಂ ೩೮೫
ನಾಗರಾಳದ ಸಿದ್ಧಲಿಂಗಯ್ಯಗಳಂ ಬರ
ಮಾಡಿಕೊಂಡಾಶ್ರಮಕೆ ಶ್ರೀಗಳಂ ಕರೆಕಳುಹಿದರ್ !
ಪೋಗಲ್ಕೆ, ಬಂದವರ ಕಳುಹಲ್ಕೆ ವಾಹನಂ
ತಾನಿಲ್ಲ. ದಿನಗಳೆದು ಪೋಗೋಣವೆಂದಲ್ಲಿ
ತಾಯಿಯೊಪ್ಪುವುದಿಲ್ಲಮೆಂದೆನುತ ಚಿಂತಿಸುತ
ಹುನಗುಂದಕ್ಕೈತಂದು ಮಠ ಮಾಸ್ತರರಲ್ಲಿಗೆ
ಪೋಗುತಿರೆ ಬಂಧನಾಳ ಶ್ರೀಗಳೈತಂದಿ
ರ್ದರಲ್ಲಿಗೆ ಪೂಜ್ಯ ಶರಣವ್ವೆ ದರ್ಶನಕಾಗಿ !
ಶ್ರೀ ಸಿದ್ಧಲಿಂಗಯ್ಯಗಳ್ ಸಂತಸಂಗೊಂಡು ೩೯೦
ಶ್ರೀಗಳಂ ಕರೆತಂದಿಹರ್ ಕಂಬಳಿಹಾಳಕೆ
ಪೂಜ್ಯ ಶರಣವ್ವೆ ಸಂದರ್ಶನಕೆ ಶ್ರದ್ಧೆಯಿಂ !
ಶರಣಾಯಿ ಸತ್ಯಸಂಕಲ್ಪ ಮಾಹಾತ್ಮ್ಯಮಂ
ಪೊಗಳಲಳವೆ ? ಶರಣರ ಸಿದ್ಧಿಯೇನಗ್ಗಳಮೊ ?

CC-0. Jangamwadi Math Collection. Digitized by eGangotri

ಮತ್ತೊರ್ಕೆ ಮತ್ತೊಂದು ಪ್ರಸಂಗಂ ನಡೆದತ್ತು,
ಕರಜೋದ್ಯಮಾದತ್ತು ; ಜೋಹಮೇ ಪಿರಿದಲ್ತು ;
ಕ್ರಿಯಾಚಾರ–ಜ್ಞಾನಾಚಾರಂಗಳೆ ಪಿರಿದಲ್ತೆ ?
ಕ್ರಿಯಾಶಕ್ತಿ ಜ್ಞಾನಶಕ್ತಿಯಿರೆ ಆರಾದಡೇನ್ ?

ಕೊಪ್ಪಳದ ಗವಿಮಠದ ಶಿವಶಾಂತವೀರಮಾ
ಸ್ವಾಮಿಗಳ್, ಹುನಗುಂದ ಶ್ರೀಮಠದ ಮಾಸ್ತರರ್
ಕನಕಗಿರಿ ಪ್ರಭುಸೆಟ್ಟರ ಮಡಿವಾಳಪ್ಪಗಳ್
ಹೊರಪೆಹರ್ ಹುನಗುಂದದಿಂದೆ ಸೊಲ್ಲಾಪುರಕೆ ;
ದಾರಿಯೊಳ್ ಸಜ್ಜಲದ ಗುಡ್ಡಕ್ಕೆ ಬಂದಿಹರ್
ತಾಯಿಯಾ ದರ್ಶನಾಶೀರ್ವಾದ ಪಡೆಯಲ್ಕೆ
ಸಂತೋಷದಿಂ ತಾಯಿಯಿಂತೆಂದರವರ್ಗೆ ;
'ಯಪ್ಪ ಇಂದು ಸಂಜೆಯ ಪೂಜೆ ಪ್ರಸಾದಗಳ್
ಇಲ್ಲಿಯೇ ಆಗಬೇಕ್ರೆಪಾ ಮುಂಜಾನೆದ್ದು
ನೀವೆಲ್ಲ ಹೋಗುವಿರಿ' ಇಂತೆಂದು ಪೇಳಿಹರ್ ;
ಇದಕೆಂತು ಪೇಳಿಹರ್ ಕೊಪ್ಪಳದ ಶ್ರೀಗಳು;–
'ಇಲ್ಲರೆವ್ವ ನಾಳೆ ಸಂಜೆಗೆ ತಿರುಗಿ ಹುನಗುಂದಕೆ
ಬರುತ್ತೇವೆ ಅಂತಾ ಹೇಳಿದೇವೆ, ಕಾರಣ–
ಈ ರಾತ್ರಿ ಹೊರಟು ಸೂರ್ಯೋದಯಕ್ಕೆ ಸೊಲ್ಲಾ–
ಪುರ ತಲುಪಿ ಮತ್ತೆ ಮಧ್ಯಾಹ್ನಕ್ಕೆ ಸೊನ್ನಲಿ–
ಗೆಯ ಬಿಟ್ಟು ಸಂಜೆ ಹುನಗುಂದಕ್ಕೆ ಬರಬೇ–
ಕಾಗಿಹುದು, ಇನ್ನೊಂದು ಸಲ ನಾವು ಇಲ್ಲಿಗೆ
ಬಂದಾಗ್ಗೆ ಪೂಜೆ ಪ್ರಸಾದ ತೀರಿಸಿಕೊಳ್ಳು–
ತ್ತೇವೆ ; ಈಗ ಹೋಗಲೆ ಬೇಕಾಗಿದೆಂದರು' !
ಇದನೊಪ್ಪದೆ ತಾಯಿಯ 'ಹಾಗಲ್ರೆಪಾ ಪೂಜೆ
ಪ್ರಸಾದಗಳ ತೀರಿಸಿಕೊಂಡು ತಾವಿಲ್ಲಿಯೇ
ವಾಸ್ತವ್ಯ ಮಾಡಬೇಕ್ರೆಪಾ' ಎಂದು ಸುರುವರ್ !

'ಶಿವಪೂಜೆ ಪ್ರಸಾದಂಗಳಾಗಲಿ, ಮುಂದೇನೊ
ನೋಡೋಣ' ಎಂದು ಪೂಜೆ ಪ್ರಸಾದ ಮಾಡುವರ್ ;

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ಸೆ

ಅನುಕಂಪದಾ ನಲ್ವರಕೆಗಳ್

ಅನಿತರೊಳ್ ಮಳೆ ಹುಯ್ಯತೊಡಗಿಹುದು ನಸುಪೊಳ್ತು
ನಂತರಂ ಹೋಗಲೇ ಬೇಕೆಂದು ಹೇಳಿಹರ್–
ಕೊಪ್ಪಳದ ಸ್ವಾಮಿಗಳ್ ; ತಾಯಿಯಿದನೊಪ್ಪವೆ
ನಾಳೆ ಮುಂಜಾನೆ ದಯಮಾಡಿಸಬೇಕ್ಕೆಸ್ವಾ'
ಇಂತೆಂದು ಒತ್ತಾಯ ಮಾಡಿ ಅಂದು ನಿಲ್ಲಿಸಿಹರ್ ;
ಮರುದಿನಂ ಪಯಣಕ್ಕೆ ಸಮತಿಸುಹರ್ ತಾಯಿ !

ಮುಂಜಾವು ಸ್ವಾಮಿಗಳ್ ಕಣ್ಣೆತ್ತಿ ನೋಡವರ್
ಸೊಲ್ಲಾಪುರಕೆ ಹೋಹ ದಿಸೆಯತ್ತ ದಾರಿಯೊಳ್
ಎಲ್ಲಿ ನೋಡಿದಲ್ಲೆಲ್ಲ ನೀರೇ ನೀರಿತ್ತು'
ಹಳ್ಳಕೊಳ್ಳಗಳೆಲ್ಲ ತುಂತುಂಬಿ ಸೂಸುತಿವೆ
ನಿನ್ನೆಯಿಂಜನ ಹೊಳೆಯ ದಾಟಲಾಗದೆ ಕಾಳ–
ರಾತ್ರಿಯೊಳ್ ಮಳೆಗೆ ತೋಯಿಸಿಕೊಂಡು ನಡಗುತ್ತ
ಕುಳಿತಿಹರ್ ಕೂಡಿ ಹೊಳೆ ಹಳ್ಳಗಳ ದಂಡೆಯೊಳ್ !
ವಾಹನಗಳೋಡಾಡಲನುವಿರದೆ ಮುಂದೋರದೆ !!
ಈ ದೃಶ್ಯಮಂ ಕಂಡ ಕೊಪ್ಪಳದ ಸ್ವಾಮಿಗಳ್
'ನಿನ್ನೆ ತಾಯಿಯ ಮಾತು ಮೀರಿ ಬಂದಿರ್ಪಡೆ
ಪಯಣ ಸಾಗದೆ ದಾರಿಯೊಳ್ ಕುಳಿತು ಮಳೆಯಲ್ಲಿ
ನೆನೆಯುತ್ತ ನಡಗುತ್ತ ನೋವ್ ಪಡಬೇಕಾಗಿತ್ತು.
ಇಂತಾಗಬಾರದೆಂದಾಲೋಚಿಸಿ ತಾಯಿ ಕ–
ಳುಹದಿಹಳ್ ಕಂಟಕದಿಂದ ಕಾಪಾಡಿಹಳ್ !
ಎಂದು ತಾಯಿಯ ಲಿಂಗ ಲೀಲೆಗಂ ಮಣಿದಿಹರ್
ಸ್ವಾಮಿಗಳಿಗಿಲ್ಲದಿಹ ಶಕ್ತಿ ಶರಣಮ್ಮೆಯದು.

ಮತ್ತೊರ್ಮೆ ಮುಧೋಳ ಕಿರಿಟ ಮಠದ ಮೃತ್ಯಂ
ಜಯ ಮಹಾಸ್ವಾಮಿಗಳ್ ಬಾಗಿಲುಕೋಟೆಯೊಳ್
ಸಹಸ್ರಗಣಾಧೀಶ್ವರ ಮಂಟಪ ಪೂಜೆಯಂ
ನೆರವೇರಿಸಿಹರದಕೆ ತಾಯಿಯವರಾಶೀರ್ವ
ದಮಂ ಪಡೆದು ಮಂಟಪ ಪೂಜೆಗಾಗಿ ಬಾಗಲು
ಕೋಟೆಗಂ ಬರಲ್ ತಾಯಿಯನ್ನಾಹ್ವಾನಿಸುವರ್

CC-0. Jangamwadi Math Collection. Digitized by eGangotri

ತಾಯಿಯವರದ ಕೊಪ್ಪದೊಪ್ಪಿಹರ್ ತಾವಿಂತು ;
ಶ್ರೀಗಳೊತ್ತಾಯಕ್ಕೆ ಮನಸೋತ ತಾಯಿಯು ;
'ಯಪ್ಪ ಪೂಜಾದ ದಿನ ಇದು ಆಲ್ಲೆ ಬಾಗಿಲು–
ಕೋಟೆಯಲ್ಲಿಯೆ ಇರುತ್ತದೆ ಆಯಿತಿಲ್ಲೆಪ್ಪಾ'
ಎಂದಭಯ ನೀಡಿಹರ್ ಧ್ವನಿ ಸಂಯುಕ್ತಮಾಗಿ !
ಆ ಬಾಗಿಲುಕೋಟೆಯ ಮಂಟಪದ ಪೂಜೆಯ–
ದಿನಂ ತಾಯ್ ಕಂಬಳೀಹಾಳದೊಳ್ ತಮ್ಮಶಿವ–
ಮಂದಿರದೆ ಲಿಂಗಾರ್ಚನೆಗೆ ಕುಳಿತು, ಬಾಗಿಲು
ಕೋಟೆಯೊಳ್ ಮಂಟಪದ ಪೂಜೆ ಮುಗಿವನ್ನೆಗಂ
ಬಹಿರ್ಮುಖರಾಗದಂತಿರ್ದರವರ್ ನೋಳ್ಪೊಡಂ
ಸ್ಥೂಲತನು ವಿಲ್ಲರ್ದೊಡಂ ಸೂಕ್ಷ್ಮತನುವಲ್ಲಿ
ಇರ್ದಿತಯ್ ಶ್ರೀಗಳ್ಗೆ ಅಂದು ಮಾಚಿತ್ತಿಂತೆ !

ಮಂಟಪದ ಪೂಜೆಯಂ ಮುಕ್ತಾಯಗೊಳಿಸಿಹ
ನಂತರಂ ಸ್ವಾಮಿಗಳ್ ದರ್ಶನಕೆ ಬಂದಿರ್ದು
'ಯವ್ವಾ ತಮ್ಮಯ ಕೃಪಾಶೀರ್ವಾದದಿಂ ಬಾಗಿ–
ಲುಕೋಟೆಯ ಮಂಟಪದ ಪೂಜೆಯದು ಯಶಸ್ವಿ
ಯಾಯಿತಾ' ಇಂತೆಂದು ಬಿನ್ನವಿಸಿಕೊಂಡಿಹರ್ !
ತಾಯಿ ಜೈತನ್ಯದಿಂದಲ್ಲಿರ್ದು ಚನ್ನಾಗಿ
ನಡೆಸಿಹರ್ ಸ್ವಾಮಿಗಳ ಮಂಟಪದ ಪೂಜೆಯಂ !
ತಾಯ ಪೂಜಾಮಹಿಮೆಯಂ ಪೇಳಲಳವಲ್ಲ.
ಜಗಭರಿತ ಲಿಂಗದೊಳ್ ಮನವಿರಿಸಿ ಪೂಜಿಸಲ್
ಹೆಬ್ಬುವವ್–ದೃಷ್ಟಿ ಮನಭಾವಗಳ್ ಹರವಾಗಿ !
ಜೈತನ್ಯವಾಪ್ತಿಲಭಿಸುಗುಂ ಮಿಗೆ ತಾನಾಗಿ,
ಮಹಾ ಘನಲಿಂಗಕ್ಕೆ ಜಗಂ ಹತ್ತಿರಮಹುದು.
ಪ್ರಾಂತಮದು ದೂರಾದಡಮೇನಂ ಪೇಳದೋ
ಅಂತಃಕರಣವೊಂದು ತಾನಾಗಿಯಿರುತಿರಲ್ ?
ಹೊರನಾಡು ವೊಳನಾಡು ತಾನಪ್ಪುದು ನೋಡ
ಲ್ಕೊಳನಾಡು ಹೊರನಾಡು ತಾನಾಗಿ ಪರಿಣಮಿಸಿ
ಸರ್ವತ್ರ ಸ್ಥಿತಿ ಲಭಿಸುಗುಂ ಮೇಣು ತನ್ನೊಳಗೆ

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪ

ಅನುಕಂಪದಾ ನಲ್ವರಕೆಗಳ್

ಸರ್ವಜ್ಞ ಸ್ವರೂಪಂ ಸಂಪ್ರಾಪ್ತಮಪ್ಪುದು ;
ಇಂತಾಗಿ ಶರಣಪ್ಪ ತಾನಿರ್ದ್ದಾದಿನಂ !

ಶರಣಾಯಿ ದರ್ಶನಕೆ ಬರುವವರ್ ಮುನ್ಪೊದಲ್
ನಂದವಾಡಿಗೆಗಿಳಿದು ಕಾಲ್ದಾರಿಯೊಳ್ ನಡೆದು–
ಕೊಂಡಿಲ್ಲದಿರೆತ್ತಿನ ಗಾಡಿಯೊಳ್ ಬರಬೇ–
ಕಾಗಿತ್ತು ; ಕೇವಲಂ ಮೂರ್ಕೈಲು ಪ್ರಯಾಣಂ
ಮೂರ ಹರದಾರಿಗುಂ ಪೆರ್ಚು ಮಿಗಿಲಾಗುತಿತ್ತು
ಇದನರಿತು ಇಲಕಲ್ಲ ಜಡಿಯಪ್ಪನೆಂಬುವರು
ಇಂಜನೀಯರರಾದ ಶ್ರೀ ಅಂಟಿನವರಿಂಗೆ
ನಂದವಾಡಗಿಯಿಂದ ಕಂಬಳೀಹಾಳಕ್ಕೆ
ಮಾರ್ಗಮಂ ಮಾಡಿಸಲ್ ಹಲವಾರು ವೇಳೆಯೊಳ್
ಪೇಳ್ದೊಡಂ ಲಕ್ಷಕ್ಕೆ ತಂದುಕೊಂಡಿರಲಿಲ್ಲ.
ಮತ್ತೊಂದು ದಿವಸದೊಳ್ ಧಾರವಾಡದ ರಾವ
ಬಹಾದ್ದೂರ್ ಅಂಗಡಿಯವರ್, ಅಂಟಿನ ಇಂಜನಿಯರ್
ನೋಣ್ ಕಂಪ್ಲಿ ಜಡಿಯಪ್ಪನವರ್ ಮೂವರ್ ಸೇರಿ–
ಶರಣಪ್ಪ ದರ್ಶನಕ್ಕೆ ಬರುತ್ತಿರೆ ದಾರಿಯೊಳ್
ಮಳೆಯಾಗಿ ಕೆಸರಲ್ಲಿ ಕಾರ್ಬಂಡಿ ಸಿಕ್ಕು ಮುಂದೆ
ಸಾಗದಂತಾಗುವುದು, ಎನಿತು ಸಾಸಂಗೆಯ್ದ–
ಡಂ ಸಾಧ್ಯಮಾಗದಿರೆ ಆಗ ಜಡಿಯಪ್ಪಗಳ್
ಅಂಟಿನಾ ಇಂಜಿನೀಯರ್ಗೆ 'ಅಲ್ರಿ ಸಾಹೇಬರೇ
ರಸ್ತೆ ಮಾಡಿಸಿರಿ ಅಂತಾ ಸಾವಿರ ಸಲ ಹೇಳಿ
ದರು ನೀವು ಕಿವಿಯಾಗ ಹಾಕಿಕೊಳ್ಳಲಿಲ್ಲ,
ಅದ್ಯ ಈವೊತ್ತು ಈ ಪರಿಸ್ಥಿತಿಯೊದಗಿದೆ ;
ಈಗಲಾದರು ನೀವು ರಸ್ತೆ ಮಾಡಸ್ತೀನಿ
ಅಂತ ಸಂಕಲ್ಪಿಸಿರಿ, ಅದ್ಹೆಂಗ ಗಾಡಿನಡೆ
ಯೋದಿಲ್ಲ ನೋಡೋಣ ಎಂತೆಂದು ಪೇಳುತಿರೆ
ಆವಾಗ ಅಂಟಿನಾ ಸಾಹೇಬ 'ತಾಯಿಯೆ,
ನಾನು ರಸ್ತೆ ಮಾಡಿಸಿ ಕೊಡತೀನಿ, ಕಾರ್ನಾಡಿ

CC-0. Jangamwadi Math Collection. Digitized by eGangotri

ಮುಂದಕ್ಕೆ ನಡೆವಂತೆ ಮಾಡಮ್ಮ' ಎಂದೆನುತ
ಗಾಡಿಯಲ್ಲಿಯೆ ಕುಳಿತು ಕಂಬಳೀಹಾಳದ
ಕಡೆ ಕೈಯ ಮುಗಿದಾಗ ಗಾಡಿ ನೀರಿನಲ್ಲಿ
ತೇಲಿದಂತೆ ತಾನೆ ನಿರಾಯಾಸವಾಗಿ ಆ
ಕೆಸರಿನಿಂ ಕಡೆಗಾಗಿ ಹೊರಬಂದು ನಿಲ್ಲುವುದು ;
ಮುಂದಕ್ಕೆ ತಡೆಯಿಲ್ಲದೊಲ್ ನಡೆವುದಾಶ್ರಮಕೆ !
ಆಂದು ನುಡಿದಂತೆ ಶ್ರೀ ಆಂಟಿನವರು ಬೇಗನೆ
ನಂದವಾಡಗಿ-ಕಂಬಳೀಹಾಳ ಮಾರ್ಗಮಂ
ಶ್ರದ್ಧೆಯಿಂ ಬಿಡದಂತೆ ಮಾಡಿಸಿಕೊಟ್ಟಹರ್ !

ಆಗಸಾಂಗದೊಳ್ ನಿಲಿಸಿ ಪ್ರಸಾದ ಲಿಂಗಮುಂ
ಸ್ವಾನಂದ ಭಕ್ತಿಯಿಂದಾರಾಧಿಸುತ್ತಿಹ
ಶರಣಂಗೆ ದೃಷ್ಟಿಯೇ ವಶಮಕ್ಕು ತ್ರಿಕರಣದೆ ;
ಎಲ್ಲಿಯೋ ಇರ್ದುದಂ ತಿಳಿಯುವನ್, ನೆನೆದಡಂ
ಕೊರತೆಯಂ ಕಳೆಯುವನ್ ನಿಷ್ಠೆಯಿಂ ನೈಜದೊಳ್
ಸರ್ವವಿಧದೆ ಸರ್ವಾಂತರ್ಯಾಮಿಯಾಗಿಹನ್ !
ಶರಣಪ್ಪೆ ತಾನಿಂತು ಗೈದಿಹಳ್ ಬಂದರ್ಗೆ
ಸತ್ಯಸಾಧನೆಯಿಂದೆ ಶಕ್ತಿವಂತಳಾಗಿ
ಸಹಜಸ್ವಭಾವದಿಂ ಸಂಕಲ್ಪಮಿಲ್ಲದಲೆ !
ಸರ್ವರ್ಗೆ ಸುಕ್ಷೇಮವನೆಸಗಿಹಳನುನಯದಿಂ !!
ಭಕ್ತರ್ಗೆ ಕರುಣೆಯಂ, ಶಕ್ತರ್ಗೆ ಕ್ಷೇಮಮಂ ;
ಸಮಸ್ತಪ್ರಾಣಿ ಸಂಕುಳಕ್ಕನುಕಂಪಮುಂ
ದಯಪಾಲಿಸುತಿರ್ದ್ದಳ್ ದಿವ್ಯಮಯ ಶಕ್ತಿಯಿಂ !

CC-0. Jangamwadi Math Collection. Digitized by eGangotri

೧೭. ನೂರ್ಬರಿಸಮನ್ನೆಗಂ ಬಾಳಿದಳ್ ಶರಣವ್ವೆ !

'ಶತಾಯುರ್ ವೈ ಮನುಜಃ' ಎಂಬ ಶ್ರುತಿ ಸಾರ್ಥಕಂ
ತಾನಾಯ್ತು ಶರಣವ್ವೆಯಾ ಶುದ್ಧ ಜೀವನದೊಳ್ !
'ಆತ್ಮನೊಳ್ ನಂದಾಮ ಶರದಃಶತಂ ವಲಂ
ಭಾವದೊಳ್ ಪ್ರಭವಾಮ ಶರದಃಶತಂ ವಲಂ
ಶ್ರೋತ್ರದಿಂ ಶ್ರುಣುವಾಮ ಶರದಃಶತಂ ಋಶಂ,
ನೇತ್ರದಿಂ ಪಶ್ಯೇಮ ಶರದಃಶತಂ ಋತಂ,
ಎಂಬಶ್ರುತಿಭಾವದೊಳ್ ಬಾಳಿದಳ್ ಶರಣವ್ವೆ
ನೂರು ಬರಿಸಂಗಳಂ ಶರಣಮಯ ಜೀವನದೊಳ್
ಇಲ್ಲಿಯಂ ಸಲ್ಲಿದಳ್ ಮೇಣಲ್ಲಿ ಸಲ್ಲಿದಳ್
ತನ್ನ ಚನ್ನ ನಡೆಯಿಂ ಮೇಣು ಚೆನ್ನ ನುಡಿಯಿಂ ೧೦
ಪುಟವಿಟ್ಟು ಮಿಸುನಿಯೊಳ್ ಸರ್ವಮಂಗಳೆಯಾಗಿ !
ಕಿವಿಯಲ್ಲಿ ಕೇಳಿದಳ್ ಮಂಗಳದವಾರ್ತೆಯಂ
ಕಣ್ಣಲ್ಲಿ ಕಂಡಿಹಳ್ ಮಂಗಳವ ದೃಶ್ಯಮಂ
ಮನದಲ್ಲಿ ನೆನೆದಿಹಳ್ ಮಂಗಳದ ಮೂರ್ತಿಯಂ
ಜಿಹ್ವೆಯೊಳ್ ಸವಿದಿಹಳ್ ಲಿಂಗಪ್ರಸಾದಮಂ
ಘ್ರಾಣದೊಳ್ ಮೂಸಿದಳ್ ಶಿವಲಿಂಗ ಪುಷ್ಪಮಂ
ಸರ್ವಾಂಗ ಪರಿಶುಭ್ರಳಾಗಿ ತಾಂ ಬಾಳಿದಳ್
ಅಂಗಮಂ ಕೆಡಿಸಿದವಳಲ್ಲ ಭೋಗಕೆಳಸಿ
ಮೇಣಂತರಂಗಮಂ ಕೆಡಿಸಲಿಲ್ಲ ಚಿಂತಿಸಿ ೨೦
ಗುರುಕರುಣೆಯಿಂ ಬಂದ ಷಡಕ್ಷರ ಮಂತ್ರಮಂ
ಗುರುಭಾವದಿಂ ಜಪಿಸಿ ಮಂತ್ರಮಯ ಕಾಯಾಗಿ
ಷಡಂಗವ ಷಟ್‌ಸ್ಥಲಂಗಳ ಸ್ವರೂಪವಾಗಿಸಿ
ಮೃಡಲಿಂಗ ಸತಿಯಾತಿ ನಿಡುಗಾಲ ಬಾಳಿದಳ್
ಸರ್ವಾತ್ಮಭಾವದಿಂ ಬದುಕಿದಳು ಶರಣವ್ವೆ !
ಜ್ಞಾನಕ್ರಿಯಂಗಳಂ ಸಮನ್ವಯಿಸಿ ಬಾಳಿದಳ್
ಭಕ್ತಿ ವಿರಕ್ತಿಗಳಂ ಸಂಗಮಿಸಿ ಬಾಳಿದಳ್
ಮಾನವ್ಯ ಪ್ರೇಮಮಂ ಮಾಹಾನುಕಂಪಮಂ
ಮೇಣ್ ವಿನಯ ಭಾವಮಂ ಬೆಳಸಿಹಳ್ ಶರಣವ್ವೆ !

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ನೆ

ನೂರ್ಬರಿಸವನ್ನೆಗಂ ಬಾಳಿದಳ್ ಶರಣನ್ನೆ !

ಮತ್ತಮೀ ಸಮಷ್ಟಿ ಪ್ರಜ್ಞೆಯಂ ಲೋಕಾನು–
ಭೂತಿಯಂ ಸತ್‌ಸಂಪತ್ಕ್ರಿಯಂ ತಳೆದಿರ್ದಳು;
ಶಿವಯೋಗ ಸಾರಮಂ ಪರಶಿವಾನುಭೂತಿಯಂ
ಪರಮ ಪಾದೋದಕ ಪ್ರಸಾದ ಸಂತುಷ್ಟಿಯಂ
ನೂರ್ಬರಿಸವನ್ನೆಗಂ ಬಿಡದಂತೆ ತಾನಿಹಳ್ !
ಕೊರತೆಯಿಲ್ಲದೆ ಬಾಳಿ ಬೆಳಗಿದ ಶರಣನ್ನೆಯ
ನಲ್ಪಿಸರ್ ನಾಡಿನೊಳ್ ನೆಲಸಲಯರ್ ತಿರೆಯಿರು
ವನ್ನೆಗಂ ಸರ್ವರೂಳ್ ಸುಧಾಶ್ರಾವಿಯಾಗಿ
ನೆನೆವವರ ಮನದ ಮಂಗಳ ಮಂತ್ರಮದಾಗಿ
ಬೆಳ್ಕಂ ಬೆಳಗಲಿ ದಿವ್ಯಮಯ ಜ್ಯೋತಿಯಾಗಿ
ಬೆಳ್ಕಂ ಬೆಳಗಲಿ ಸರ್ವಜನ ಬಾಳ್ಕಳೆಯಾಗಿ !

ಅತಿಮಾನಸಶಕ್ತಿಯ ನಂಗಕ್ಕೆ ಅಳವಡಿಸಿ
ಕಾಯಮನ ಪ್ರಾಣಭಾವಂಗಳ ನೆತ್ತರಿಸಿ
ಲಿಂಗಾನುಭಾವಮಂ ಲಿಂಗಸಂಗಸುಖಮಂ
ತಾನನುಭವಿಸುತಿರ್ದಳ್ ಸತ್ಯಶಿವಶರಣನ್ನೆ !
ಅಂಗಭಾವಮಿಲ್ಲಾಗಿ ಕಾಲಭಯಮಿರಲಿಲ್ಲ
ಲಿಂಗಕ್ರಿಯೆಯಾಗಿ ಕರ್ಮ ಸೋಂಕಿರಲಿಲ್ಲ
ಮನದ ಸೊಗಡಿಲ್ಲಾಗಿ ಮಾಯೆಗಿಂಬಿರಲಿಲ್ಲ
ಕೀಳ್ಮನಸು–ಕೀಳ್ಮನಸುಗಳ ಸುಳುಹಿರಲಿಲ್ಲ
ಹೊರಗಣೀ ಮೆಯ್ಯಾಟ ವೆಂತಿರ್ದರೇನಂತೆ,
ಕಬ್ಬು ಡೊಂಕಾದರೇನೊಳರಸಂ ಡೊಂಕೇನು ?
ಹೊರಗಣರಿವಿರದಿರೇನೊಳಗಣರಿವಿರುತಿರಲ್ ?
ಕುರುಡ ನಮುಶವನೀಂಟಲ್ಕೆ ಪುಳಿಯಪ್ಪುದೇನ್ ?
ಹೆಳವಂಗೆ ಹೊಲಬಿರ್ದಡೀಂ ನಡೆಯಬಲ್ಲನೇಂ
ಸಕ್ಕಯಾಹೀನಂ ಗುರಿಯ ಮುಟ್ಟಬಲ್ಲನೇಂ ?
ಸಕ್ಕರೆಯ ಕೋಲಿಂಗೆ ಮೊದಲು ನಡು ತುದಿಯುಂಟಿ
ನಿಷ್ಠೆಯಿಂ ನಡೆವಂಗೆ ಮೇಲು ಕೀಳುಗಳುಂಟೆ ?
ಶರಣನ್ನೆ ಶ್ರದ್ಧೆಯೊಳ್ ತಾನೆ ತಾನಾಗಿಹಳ್

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ನೆ

ಸೂರ್ಬರಿಸವನ್ನೆಗಂ ಬಾಳಿದಳ್ ಶರಣನ್ನೆ !

ನಿಜಲಿಂಗ ನಿಷ್ಠೆಯೋಳ್ ಪೆರತೊಂದರಿಯದಿಹಳ್ !
ಕಾಯಕಳವಳದಲ್ಲಿ ಕಂಗೆಟ್ಟು ಮುಂಗೆಟ್ಟು
ಮಾಯೆಯೊಳ್ ನಿಂತವಳ್ ತಾನಲ್ಲ ಶರಣನ್ನೆ
ಭಾವದೀ ಭ್ರಮೆಯಲ್ಲಿ ಬಿರ್ದು ರುಳಿದವಳಲ್ಲ
ಜೀವನದುಪಾಧಿಯಂ ಹೊದ್ದವಳ್ ಮುನ್ನಲ್ಲ
ಕರಣಗಳ ಕತ್ತಲೊಳ್ ಸುತ್ತಿ ಬೀಳ್ದವಳಲ್ಲ
ಇಂದ್ರಿಯವಿಕಾರದೊಳ್ ವಿಹರಿಸಿರ್ದವಳಲ್ಲ
ಕರಕಂಜ ಕುರುಹಿನೊಳ್ ತೆರಹಿಲ್ಲದಂತೆವೊಲ್
ಕಣ್ಣಿಟ್ಟು ಮನಸಿಟ್ಟು ಕಾಲಸಂ ಗೆಲಿದಿಹಳ್ !
ಅಂಗಭೋಗೋಪಭೋಗಂಗಳಂ ಹಿಂದಿಟ್ಟು
ಲಿಂಗಭೋಗೋಪಭೋಗಂಗಳಂ ಮುಂಗೊಂಡು
ಸರ್ವಾಂಗ ವಿಕೃತಿಯಂ ಗೆಲಿದಿಹಳ್ ನಲಿದಿಹಳ್
ಶತಾಯುವ ಸಹಜದಿಂ ಪಡೆದಿಹಳ್ ನಡೆದಿಹಳ್
ಲಿಂಗೈಕ್ಯ ನಿಲಯಕ್ಕೆ ನೇರದಿಂ ನಿಚ್ಚಟದೆ
ಲಿಂಗಾಂಗ ಸಾಮರಸ್ಯಸುಖಮಂ ಸವಿಯುತ್ತ !

ಗೋಸುಂಬೆ ಪುಳದಂತೆ ಜೋಹ ತೊಟ್ಟವಳಲ್ಲ
ಆಸೆಯಿಂ ಮನವೆಳಸಿ ಮೋಹಗೊಂಡವಳಲ್ಲ
ಈಷಣತ್ರಯದಿಕ್ಕಿಗೆ ಸಿಲುಕಿದವಳಲ್ಲಿ,
ಗಾಸಿಗೊಂಡವಳಲ್ಲ ಹೇಸಿ ಹೋದವಳಲ್ಲ ;
ಲಿಂಗವಿತ್ತಾಯುವಂ ಕಳೆದುಕೊಂಡವಳಲ್ಲ
ಶಿವಲಿಂಗ ಸಂಗಮಂ ಸದಾ ತೊರೆದವಳಲ್ಲ
ಪ್ರಪಂಚದ ನಡೆಯಂತೆ ನಡೆದವಳ್ ತಾನಲ್ಲ
ಪ್ರಪಂಚದ ನುಡಿಯಂತೆ ನುಡಿದವಳ್ ತಾನಲ್ಲ ;
ಪರಮಾರ್ಥ ಮಾರ್ಗಮಂ ಬಿಟ್ಟು ನಡೆದವಳಲ್ಲ
ಪರಮಾನುಭಾವಮಂ ಬಿಟ್ಟು ನುಡಿದವಳಲ್ಲ.
ಅಪಮೃತ್ಯು ಬರದಂತೆ ತೊಡೆದಿಹಳ್ ಶರಣನ್ನೆ
ಸುಪ್ರಭಾತ ಸಮಯದ ಶಿವಲಿಂಗ ಪೂಜೆಯಂ
ತಪ್ಪದೊಲ್ ತಾನಡೆಸಿಯೊಲವಿಂದೆ ನಿಚ್ಚದೊಳ್

CC-0. Jangamwadi Math Collection. Digitized by eGangotri

ಸಜ್ಜಲ ಶರಣಮ್ಮೆ

ನೂರ್ಬರಿಸವನ್ನೆಗಂ ಬಾಳಿದಳ್ ಶರಣಮ್ಮೆ !

ಹೃತ್ಪುಷ್ಪವನೊಪ್ಪಿಸಿ ನಿರತಿಶಯ ನಿಷ್ಠೆಯಿಂ !
ಮೃತ್ಯುಹರಲಿಂಗದೊಳ್ ನಿಕ್ಷೇಪವನಿಸಗಿಹಳ್
ಸತ್ಯದೊಳ್ ತನ್ನೆಲ್ಲ ತನುಮನಧನಂಗಳಂ !
ಕಾಲಕರ್ಮಾದಿ ಕಳ್ಳರ್ಗೆ ದೊರಕುವುದೆಂತು,
ಕಾಲಕರ್ಮಮಾಯುಗಳ ಜೀವಿಯಹುದೆಂತು ?
ಚಿತ್ತಿನಾಕೊನೆಯಲ್ಲಿ ಕಳ್ತಲೆಯು ಕವಿದಿಲ್ಲ
ಸುತ್ತಿ ಬರ್ಪಷ್ಟಮದನೋಹಗಳ ಸುಳಿವಿಲ್ಲ
ಮೃತ್ಯುರಂ ಮುರಿದೊಕ್ಕಲಿಕ್ಕುವಾ ಮಿಳ್ತಿಲ್ಲಿ ?
ಮೃತ್ಯಲೋಕದೊಳಿರ್ದು ಮೃತ್ಯುವಂ ಗೆದ್ದಿಹಳ್ !

ಶರಣಮ್ಮೆ ಮಾತಿನೊಳ್ ನಸುದಪ್ಪಿದವಳಲ್ಲ
ಶರಣಮ್ಮೆ ಕೃತ್ಯದೊಳ್ ನಸುದಪ್ಪಿದವಳಲ್ಲ
ನೂರ್ಬರಿಸಮನ್ನೆಗಂ ನಡೆದಿಹಳ್ ಕೃತ್ಯದೊಳ್
ನೂರ್ಬರಿಸವನ್ನೆಗಂ ನುಡಿದಿಹಳ್ ಸತ್ಯಮಂ !
ಸತ್ಯದಾ ಸನಿಹದೊಳ್ ತಾಂಸಾವಿಗಿಂಬಿಲ್ಲ
ಸತ್ಯಮೇ ಶಾಶ್ವತಂ ಸತ್ಯಮೇ ಜೀವಿತಂ ;
'ಸತ್ಯಕ್ಕೆ ಸಾವಿಲ್ಲ ಸುಳ್ಳಿಂಗೆ ಸುಖವಿಲ್ಲ'
ಎಂಬುವೀ ನಾಣ್ನುಡಿಯು ನಿಜಮೈಸೆ ನೋಳ್ಪೊಡಂ !
ಸಾವಿಗೀಡಾದವಂ ಶಿವಶರಣ ತಾನಲ್ಲ
ಜೀವಿಯಾದವನ್ ಲಿಂಗೈಕ್ಯನೆಂದಿಗಲ್ಲ.
ಕೈದುಮಂ ಪಿಡಿವರೆಲ್ಲರ್ ಕಲಿಗಳಪ್ಪರೇನ್
ಲಿಂಗಮಂ ಧರಿಪರೆಲ್ಲರ್ ಲಿಂಗಿಗಳಪ್ಪರೇನ್ ?
ಸತಿಗೆ ಪತಿಸಂಯೋಗ ಮಿಲ್ಲದಿರೆ ಪ್ರಕೃತಿಯೊಳ್
ಸತಿ ಸತ್ಯಗರ್ಭಮಂ ಧರಿಸುವಳೆ ಬಾಳಿನೊಳ್ ?
ಶಿಷ್ಯಂಗೆ ಸ್ವಯಗುರುವರಂ ಕರುಣಿಸದಿರ್ದೊಡೆ
ಸಚ್ಚಿನ್ಮಯಂ ಲಿಂಗಮದು ಪ್ರಾಪ್ತಿಸುವುದೇನು ?
ಗುರುವರಂ ಕರುಣಿಸಿಹ ಷಡಕ್ಷರ ಮಂತ್ರಮದು
ಮಾಳ್ಪುದಯ್ ಮಂತ್ರಮಯ ಪಿಂಡಮಂ ಜಪಿಸಲ್ಕೆ !
ಮಂತ್ರಮಯ ಪಿಂಡಮಂ ಕಬಳಿಸಲ್ ಕಾಲಕ್ಕೆ

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ನೂರ್ಬರಿಸಮನ್ನಿಗಂ ಬಾರಿದಳ್ ಶರಣಪ್ಪೆ !

ಹಕ್ಕಿಲ್ಲ ಮಾಂಸಮಯ ಶರೀರಮನಲ್ಲದಲೆ !
ಗುರುದತ್ತಮಂತ್ರದಿಂ ಸಕಲಸಿದ್ಧಿಗಳಕ್ಕು
ಮತ್ತಮಿಹಪರದಲ್ಲಿ ಶ್ರೇಯೋಭ್ಯುದಯಮಕ್ಕು !
ತನ್ನ ತಾನರಿಸಿಕೊಂಡಲಿಂಗಂ ಮತ್ತುಮೀ
ತನ್ನ ತಾಂ ನೆನೆವ ಮಂತ್ರಂ ನಿಶ್ಚಲಂಗಳೆವು.
ಚಿತ್ಕಳೆಯ ಕರುಣಿಸುವ ಗುರುವರನ ದೀಕ್ಷೆಗಂ
ಸಾಟಿ ಪೆರತೊಂದಿಲ್ಲ ಪರಿಕಿಸಲ್ ಲೋಕದೊಳ್ !
ಸುಟ್ಟ ಮಡಕೆಯೊಳ್ ನೀರ್ ತುಂಬಿದಡಿಹುದಲ್ಲದೆ
ಸುಡದಿರ್ಪ ಮಡಕೆಯೊಳ್ ನೀರ್ ನಿಲ್ಲ ಬಲ್ಲುದೇಂ ?
ಅರಿವಿಲ್ಲದಾತಂಗೆ ಕಣ್ಣಿರ್ದು ಫಲನೇನು ;
ಗುರುದೀಕ್ಷೆಯಿಲ್ಲದಿರೆ ಕಣ್ಣಿರ್ದು ಕುರುಡನಯ್ !
ಜಡಮಪ್ಪ ಪ್ರಕೃತಿಯಿಂ ಪ್ರಾಕೃತನಹನಲ್ಲದೆ
ನೋಡಲಪ್ರಾಕೃತನೆನಿಸನೆಂದಿಗುಂ ದಿಟಂ ;
ತನುತ್ರಯದೊಳ್ ಮಲತ್ರಯಮಿರ್ಪ ಕಾರಣಂ
ಪ್ರಕೃತಿ ವಿಕೃತಿಗೆಳಸಿ ಅಪಮೃತ್ಯು ಘಟಿಪುದಯ್ !
ಗುರುದೇವ ದೀಕ್ಷೆಯಿಂ ಮೃಣ್ಮಯದ ಕಾಯಮಿದು
ಚಿನ್ಮಯಮಹುದು ಪರುಷವಿದಿದ ಕಬ್ಬಿಸ್ನದೊಲ್ !
ಮೃಣ್ಮಯಕೆ ಮೃತ್ಯುವುಂಟಿಲ್ಲದಲೆ ಮನಸಿಸಲ್
ಚಿನ್ಮಯದ ಕಾಯಕ್ಕೆ ಮೃತ್ಯುಭಯ ಮೆತ್ತಣದೊ ?
ಶರಣಪ್ಪೆ ಗುರುಸೇವೆ ಮೇಣ್ ಸತ್ಯ ಸಾಧನಂ
ಗಳಿಂ ವರ ಗುರುದೀಕ್ಷೆಯಂ ಪಡೆದು ಚಿನ್ಮಯಳ್
ತಾನಾಗಿ ತೊಳಗಿಹಳ್ ಲಿಂಗಾರ್ಚನ ಫಲದಿಂ
ಮಂತ್ರಸಿದ್ಧಿಯಿಂದ ಪಮೃತ್ಯುಮಂ ಗೆದ್ದಿಹಳ್ !

ಗುರುದೀಕ್ಷೆಯಿಲ್ಲದಿಹ ಲಿಂಗಮದು ಶಿಲೆಯೈಸೆ
ಮಂತ್ರಮದು ಮೇಣು ಸ್ತೋತ್ರಸರ ವರ್ಣಂಗಳೈಸೆ
ಭಕ್ತನಾತಂ ಭಕ್ತನಲ್ಲ ಭವಿಯಪ್ಪನಯ್
ಸದ್ಭಕ್ತನಲ್ಲದವನೋಗರಂ ಕಾಲಂಗೆ !
ಸುಪ್ರಭಾತ ಸಮಯದೆ ಲಿಂಗಮಂ ನಿಟ್ಟಿಸಲ್

CC-0. Jangamwadi Math Collection. Digitized by eGangotri

ಶಜ್ವಲ ಶರಣವ್ವೆ

ನೂರ್ಬರಿಸಮನ್ನೆಗಂ ಬಾಳಿದಳ್ ಶರಣವ್ವೆ !

ಕಣ್ಬೇನೆ ಬಾರದಯ್ ನೂರ್ಬರಿಸಮನ್ನೆಗಂ ;
ಸುಪ್ರಭಾತ ಸಮಯದೆ ಮಂತ್ರಮುಂಜಪಿಸಲ್ಕೆ
ವಾಕ್‌ಶಕ್ತಿ ಕುಂದದಯ್ ನೂರ್ಬರಿಸಮನ್ನೆಗಂ.
ಮುಂಜಾವದೊಳ್ ಲಿಂಗಸ್ಪರ್ಶಮಂ ಗೆಯ್ಯಲ್ಕೆ
ತ್ವಕ್‌ಶಕ್ತಿ ತೊಲಗದಯ್ ನೂರ್ಬರಿಸಮನ್ನೆವರಂ ;
ಮುಂಜಾವದೊಳ್ ಮಂತ್ರನಾದಮಂ ಕೇಳಲ್ಕೆ
ಕಿವುಡುತನ ಬಾರದಯ್ ನೂರ್ಬರಿಸಮನ್ನೆವರಂ ;
ಮುಂಜಾವದೊಳ್ ಲಿಂಗಗಂಧಮಂ ಘ್ರಾಣಿಸಲ್
ಮೂಗು ಕೆಡದಂತಿಹುದು ನೂರ್ಬರಿಸಮನ್ನೆವರಂ ;
ಮುಂಜಾವದಲ್ಲಿ ಮಂತ್ರಾರ್ಥಮಂ ಮನನಿಸಲ್ ೧೫೦
ಮತ್ತಮಾ ಲಿಂಗಮಂ ಜಾನಿಸಲ್ ಜಾಗ್ರತದೆ
ಹೃತ್ತಾಪಮದು ತೊಲಗಿ ಹೃತ್‌ಶಕ್ತಿ ಬಪ್ಪುದಯ್ !
ಇಂತಿರಲ್ಕಪಮೃತ್ಯವಿನ ಮಾತದೆತ್ತಣದೊ
ಕಂತುಹರ ಕರುಣೆಯೊದಗಲ್ ವಿಕೃತಿಯೆತ್ತಣದೋ ?
ಗುರುವರಂ ಕರುಣೆಯಿಂ ಶಿಷ್ಯೋತ್ತಮನ ಭಾವ–
ಮನ ಹರಣ ಮೇಣೆಂದ್ರಿಯುಂಗಳೊಳ್ ಲಿಂಗಮಂ
ಮಂತ್ರಮಂ ಮೇಣಾಯತಂಗೊಳಿಸೆ ಪ್ರಕೃತಿಯೊಳ್
ಸಂಸ್ಕೃತಿಯದಿಹುದಲ್ಲದಲೆ ವಿಕೃತಿಯೆತ್ತಣದೊ ?
ಇಷ್ಟಲಿಂಗಧಾರಣದಿಂದ ನಿಷ್ಪಂಗಗಳ್
ನಷ್ಟವಾದಪವ್ ತನಗಿಷ್ಟ ಸಿದ್ಧಿಯಪ್ಪುದು ; ೧೬೦
ಮೇಣು ಲಿಂಗಾಚಾರವಹುದು ತ್ಯಾಗಾಂಗದೊಳ್
ಮೇಣು ಭೋಗಾಂಗದೊಳ್ ಚಿಲ್ಲಿಂಗಭಾಸ್ಕರಂ
ಮೆಯ್ವೆತ್ತೆ ಮರಮೆಯೆಂಬಿರುಳ್ ಪರಿದು ಪೋಪುದು ;
ಸುಜ್ಞಾನಮದು ಬಿಡದೆ ಬೆಳ್ಳನೇ ಬೆಳಗುವುದು.
ಷಡಕ್ಷರ ಮಂತ್ರಮದು ಷಡಂಗಗಳೊಳ್ ಪರಿ
ವಿಡಿದು ವಿನ್ಯಾಸಗೊಳ್ಪುವ್ ಗುರುದೇವನಿಂ !
ಷಡ್ಲಿಂಗಗಳ್ಗೆ ಷಟ್‌ಪದಾರ್ಥಂಗಳ್ ಸಮ–
ರ್ಪಣಮಾಗಿ ಷಡ್ ಪ್ರಸಾದಂಗಳಾಗುತಿರಲ್ಕೆ
ಷಡಿಂದ್ರಿಯ ಷಡ್ಭಾವ ವಿಕೃತಿಗಳೆತ್ತಣವೊ ?

CC-0. Jangamwadi Math Collection. Digitized by eGangotri

ಸಜ್ಜಲ ಶರಣಸ್ಥಲ

ನೂರ್ಬರಿಸಮನ್ನೆಗಂ ಬಾಳಿದರ್ ಶರಣಸ್ಥಲ !

ಷಡ್ಭಕ್ತಿ ಷಟ್‌ಶಕ್ತಿ ಸ್ವರೂಪಾಂಗದೊಳೊಡಗೂಡಿ ೧೬೦
ಷಟ್‌ಸ್ಥಲಾಚರಣದಿಂ ಸಪಸ್ಕಾರಕೇರಲ್
ನಿರವಯದೆ ನಿರವಯಲ ಪರಲಿಂಗ ತಾನಾಗಿ
ನಿಷ್ಪತ್ತಿಗೊಳ್ಳುತಿರೆ ಕಾಲಗತಿಯೆತ್ತಣದೊ ?
ಮೇಣು ಕರ್ಮಗತಿ ನ್ಯಾಯಗತಿಗಳಿವೆತ್ತಣವೊ ?
ನೂರ್ಬರಿಸಮನ್ನೆವರಮಿರವೇಳ್ವುದೆಂಬುವಾ
ಸಚ್ಛಿಷ್ಯನಂಗಕ್ಕೆ ಶಿವಾಚಾರವೆ ಚಂದ
ಮೇಣಂತರಂಗಕ್ಕೆ ಶಿವವಿಚಾರವೆ ಚಂದ
ಮತ್ತಮಾ ಮನಕ್ಕೆ ಮಹಾನುಭಾವನೆ ಚಂದ
ಭಾವಿಸಲ್ ಭಾವಕ್ಕೆ ಪರಿಭಾವನೆಯೇ ಚಂದ
ಆತ್ಮಕ್ಕೆ ವಿರಳ ಪ್ರಸಾದ ತೃಪ್ತಿಯೆ ಚಂದ ! ೧೬೮

ಶಿವಾಚಾರದಿಂ ತನು ಪರಿಶುದ್ಧಮಪ್ಪುದಯ್
ಶಿವವಿಚಾರದಿಂ ಮನ ಪರಿಶುದ್ಧಮಪ್ಪುದಯ್
ಶಿವಾನುಭವದಿಂ ಭಾವ ಪರಿಶುದ್ಧಮಪ್ಪುದು
ಸಂತೃಪ್ತಿಯಿಂದಾತ್ಮ ಪರಿಶುದ್ಧಮಪ್ಪುದು.
ಶುದ್ಧ ಪ್ರಸಾದದಿಂ ಗುರುಭಾವ ಮುದಿಸುಗುಂ
ಸಿದ್ಧ ಪ್ರಸಾದದಿಂ ಲಿಂಗತನಮುದಿಸುಗುಂ
ಪ್ರಸಿದ್ಧ ಪ್ರಸಾದದೆ ನಿತ್ಯತ್ವಮಂಲಭಿಸುಗುಂ
ತ್ರಿವಿಧ ಪ್ರಸಾದ ಪ್ರಭಾವಸುಸುರಲಳವೆ ?
ಕಾಲಮಲವಿಡಿಲ್ಲಂ ಸದ್ಗುರು ತತ್ಪಕ್ಕೆ ೧೭೦
ಕರ್ಮಮಲಮಿದಿಲ್ಲಂ ಚಿಲ್ಲಿಂಗ ತತ್ತ್ವಕ್ಕೆ
ಮಾಯೀಯ ಮಲಮಿಲ್ಲಮಾನಂದ ತತ್ತ್ವಕ್ಕೆ
ನಿತ್ಯಪರಿಪೂರ್ಣನಪ್ಪಂ ಸತ್ಯಗುರೂಪಾಸಕಂ,
ಮೇಣು ಸಚ್ಚಿದಾನಂದ ಗುರುದೇವನನುಭಾವಮದು
ಮೃತ್ಯುಹರ ಪರಮಾಮೃತಸಾರಂ ಸಟಿಯಲ್ತು ;
ಶ್ರೀಗುರುವರವಚನಂ ದರ್ಶನಂ ಸ್ಪರ್ಶನಂ
ಪಾದೋದ ಪ್ರಸಾದಂಗಳಮೃತಂ ಶಿಷ್ಯಂಗೆ !
ಶ್ರೀಗುರುವಚನಾಮೃತಮದು ಶಿಷ್ಯಕರ್ಣದೊಳ್
ತಾನೆರಕಮಾಗಲ್ಕೆ ಮನದಲ್ಲಿ ನೆಲೆಗೊಂಡು

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ನೆ

ನೂರೈರಸವನ್ನೆಗಂ ಬಾಳಿದಳ್ ಶರಣನ್ನೆ !

ಪ್ರಾಣದೊಳ್ ಚಿಲ್ಲಿಂಗಮಾದತ್ತು, ಮಾಯೆಯಂ
ಕಳೆದತ್ತು ; ಬಾಹ್ಯದೊಳ್ ಕ್ರಿಯೆಯಾಗಿ ಮೆರೆದತ್ತು, ೨೦೦
ಕರ್ಮಮಂ ಕಳೆದತ್ತು, ಭಾವದೊಳ್ ಮಹಾಲಿಂ-
ಗಮದಾಗಿ ಆತ್ಮಾಣುಭಾವಮಂ ತೊಡೆದತ್ತು ;
ನಿತ್ಯ ಪೂರ್ಣಾಖಂಡ ಭಾವವಂ ಬರಿಸಿತ್ತು,
ಸತ್ಯ ಸ್ವರೂಪಮಂ ಕರುಣಿಸುವ ಮಹತ್ತು.
ಶರಣನ್ನೆ ಲಿಂಗಕ್ಕೆ ಸದ್ಭಕ್ತೆಯಲ್ಲದಲೆ
ಕಾಲಕ್ಕೆ ಭಕ್ತಳಾಗಿ ಬಾಳಿದವಳಲ್ಲ.
ತನ್ನ ನಡೆ ನುಡಿಗಳ್ಗೆ ಗಳಿಗೆಗಳ ನೋಡುತ್ತಿ-
ರಲಿಲ್ಲಮವಳೆಂದಿಗು ಲಿಂಗಮಂ ಬೇರಿಟ್ಟ !
ತಾಯಿಗಂ ಗುರುದತ್ತ ಲಿಂಗಮೇ ಎಸೆಲ್ಲ
ಲಿಂಗವಂ ತಾಂ ತೊರೆದು ಬೇರೊಂದನೆಗಳಳು ; ೨೧೦
ಲಿಂಗಕ್ಕೆ ಸಲ್ಲಿಸಿಹ ಸಕಲೋಪಚಾರಂಗ-
ಳನ್ನೆಗುಪಚಾರಂಗಳಲ್ಲದೆ ಪೆರತಿರಲಿಲ್ಲ.
ಲಿಂಗಾರ್ಪಣ ಗಂಧಮೆ ಸ್ವಯಗಂಧಮಾಗಿತ್ತು,
ಲಿಂಗರ್ಪಣ ಸುರಸಮೆ ತನಗೆರಸಮಾಗಿತ್ತು,
ಲಿಂಗಾರ್ಪಣ ರೂಪನೆ ಸ್ವಯರೂಪಮಾಗಿತ್ತು
ಲಿಂಗಾರ್ಪಣ ಸ್ಪರ್ಶಮೆ ಸ್ವಯಸ್ಪರ್ಶಮಾಗಿತ್ತು
ಲಿಂಗಾರ್ಪಣ ಶಬ್ದಮೆ ಸ್ವಯಶಬ್ದಮಾದತ್ತು
ಲಿಂಗಾರ್ಪಣ ತೃಪ್ತಿಯೆ ಸ್ವಯತೃಪ್ತಿಯಾದತ್ತು.
ಲಿಂಗಾಂಗಮಾಗಿ ಬಾಳಹ ತಾಯಿಗಂ ಕಾಲ
ಭಂಗಮಿರಲಿಲ್ಲ ಲಿಂಗಸನ್ನಿಹಿತತ್ವದಿಂ ! ೨೧೦
ಶರಣನ್ನೆ ಕ್ರಿಯೆಯೆಲ್ಲ ಲಿಂಗಕ್ರಿಯಂಗಳವು,
ಮೇಣು ಜ್ಞಾನಂಗಳವು ಲಿಂಗಜ್ಞಾನಂಗಳು ;
ಮತ್ತಮನುಭವಂಗಳ್ ಲಿಂಗಾನುಭವಂಗಳು.
ತಾಯಿ ಲಿಂಗಾನಂದ ಶರಧಿಯೊಳಿರ್ದ್ದಳಲ್ಲದೆ
ಮಾಯೀಯಕಾಲಕರ್ಮಂಗಳೊಳಗಿರಲಿಲ್ಲ.

CC-0. Jangamwadi Math Collection. Digitized by eGangotri

ಸಜ್ಜಲ ಶರಣಣ್ಣೆ
ನೂರ್ಬರಿಸಮನ್ನೆಗಂ ಬಾಳಿದರ್ ಕರಣವ್ಗೆ !

ಷಡೂರ್ಮಿಯ ಸುಟ್ಟುರುಹಿ ಷಡ್ವರ್ಗಮಂ ದೂಡಿ
ಮೃಡಾತ್ಮಲಿಂಗದೊಳ್ ಚಿತ್ತಮಂ ಸ್ಥಿರಗೊಳಿಸಿ.
ಪ್ರಾಣಮಯ ಮನೋಮಯ ಕಾಯಕರಣಂಗಳಂ
ಪ್ರಣವಾತ್ಮಕ ಮಾಗಿಸಿ, ಭಾವವಂ ನಿರ್ಭಾವ–
ವನಾಗಿಸಿ, ತಾನೆಂಬುದಿಲ್ಲದಂತಾಗಿರ್ಪ
ಶರಣಣ್ಣೆಗಪಮೃತ್ಯುವೆಂಬುದೆತ್ತಣದೊ ?
ಕುಟಿಲ ನಡೆಸುಡಿಗಳಂ ಸಟೆಯಗಳಿಸಿದವಳಲ್ಲ.
ಘಟವ ಹೊರೆವ ಕೆಟ್ಟ ಕಪಟವೃತ್ತಿಯವಳಲ್ಲ ;
ಕಾಕು ಮನಸಿನ ಕಳವಳಕ್ಕೆ ಸಿಲುಕಿದವಳಲ್ಲ ;
ಲೋಕರಂಜನೆಗೆಂದು ಮನ ಮಾಡಿದವಳಲ್ಲ.
ತೋರುತಿಹ ತೋರಿಕೆಗಳೆಲ್ಲವುಂ ತಾನಾಗಿ
ಕವಲು ನೋಟ ಮೇಣ್ಮಾಟ ಬೇಟಗಳೆತ್ತಣವೊ ?
ಸಾವಯವಿಯೆಂತೆಂಬ ಸೊಲ್ಲಿಲ್ಲ, ಸಾವೆಲ್ಲಿ–
ನಿರವಯವಿ ನಿರ್ಗಮನಿ ತಾನಾದ ತಾಯಿಗೆ ?
ಮತ್ತಮಾ ಸಾರಾಯ ಸಂಪಚ್ಚತುಷ್ಟಯವ
ಸಂಪಾದಿಸಿ ಶರೀರಸಾರಾಯ ಮೇಣ ಪ್ರಾಣ–
ಸಾರಾಯ ಮೇಣಭಾವ ಸಾರಾಯ ಮತ್ತಮಾ
ಜೀವ ಸಾರಾಯವಾಗಿರ್ದ ಶಿವಶರಣೆಗೆ ?
ನಿರಾಳಳ್ ನಿರುಪಮಳ್ ನಿರ್ಜಡಳ್ ನಿಸ್ಸೀಮಳ್
ನಿಃಕಳಂಕ ಚರಿತ್ರೆ ಸತ್ಯಶಿವಶರಣವ್ವೆ !
ಸರ್ವಾಚಾರ ಸಂಪದ್ಭರಿತ ಚರಿತಳಮ್ಮವ್ವೆ !!
ಲಿಂಗಾಂಗಿ ತಾನಾಗಿ ತಾನೆಂಬ ಕುರುಹಡಗಿ
ಲಿಂಗನಡೆಯೊಳಹುದೆ ಸರ್ವಾಚಾರ ಸಂಪತ್ತು ;
ಸತ್ಯಶಿವಶರಣಂಗೆ ತಾನಿದಂ ಮಹತ್ತು.
ಮೆಯ್ದುಂಬಿ ಮನದುಂಬಿ ಲಿಂಗೈಕ್ಯಸಮನಿಸುಗುಂ !
ಸರ್ವಕರಣಂಗಳವು ಲಿಂಗಕರಣಂಗಳಹವು ;
ಲಿಂಗಕರಣಂಗಳ್ಗೆ ಮೃತ್ಯು ಭಂಗವಿರದಯ್ !
ಪರಿಪೂರ್ಣ ಮಹಾಲಿಂಗಮದು ಭಾಜನವಾಗಿ,
ಮೇಣಾ–ಘನಲಿಂಗಕೆ ಶರಣಭಾಜನವಾಗಿ ;

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ನೆ
ನೂರ್ಬರಿಸವನ್ನೆಗಂ ಬಾಳಿದಳ್ ಶರಣನ್ನೆ !

ಆ ಮಹಾ ಘನವಸ್ತುವಲ್ಲದಲೆ ಪೆರತುಂಟೆ ?
ಮನೆಯೇಕೆ ಮಠವೇಕೆ ಜನವೇಕೆ ಜಗವೇಕೆ
ತನುಭಾವ ಹಿಂಗಿ ಘನಭಾವ ನೆಲೆಗೊಂಡಬಳಿಕ ?
ಶಮೆಯೇಕೆ ದಮೆಯೇಕೆ ಮೃತ್ಯುವಿನ ಭ್ರಮೆಯೇಕೆ
ಪ್ರಮೆಯೊದಗಿ ಮನಶಾಂತಿಗೊಳಗಾದ ಶರಣಂಗೆ ?
ತಪವೇಕೆ ಜಪವೇಕೆ ಧ್ಯಾನ ಮೌನಗಳೇಕೆ
ತನ್ನ ತಾನರಿದು ತಾನಾದ ನಿಜ ಶರಣಂಗೆ ?
ಹರಿವ ತೊರೆಗೆ ನಡೆಯಲ್ ವೈಯೆಲ್ಲ ಕಾಲ್ಗಳು
ಉರಿವ ಅಗ್ಗಿಗೆ ಅರಿಯಲ್ ವೈಯೆಲ್ಲ ನಾಲಗೆಯು
ಸುಳಿವ ಗಾಳಿಗೆ ಸೋಂಕಲ್ ಮೈಯೆಲ್ಲ ಕೆಯ್ಗಳು
ಮೊರೆವೂಕ್ಕ ಶರಣಂಗೆ ಮೈಯೆಲ್ಲ ಲಿಂಗಗಳು.
ಮೃತ್ಯುದೇವನೊಳಬರೆ ಸಂದು ತಾನೆಲ್ಲಿಯಡೊ ?
ವಿಶ್ವಾತ್ಮ ಗುರುಲಿಂಗವನಗಲಲ್ಕೆಡೆಯಿಲ್ಲ ;
ಮೃತ್ಯುವಿಗೆ ಗುರುಭಕ್ತರಂ ಮುಟ್ಟಲಳವಿಲ್ಲ ;
ಸತ್ಯಸ್ವರೂಪದಿಂ ನಿತ್ಯಾತ್ಮರಾಗಿಹರ್ !
ತಾನೆಳೆದು ತಾನುಳಿದು ತಾನಾದ ಶರಣನ್ನೆ
ಕಾಯಗೊಂಡವಳಲ್ಲ, ಕರಣಗೊಂಡವಳಲ್ಲ ;
ಹಮ್ಮುಗೊಂಡವಳಲ್ಲ, ಬಿಮ್ಮುಗೊಂಡವಳಲ್ಲ ;
ನುಡಿಯ ಸೂತಕೆಯಲ್ಲ, ನಡೆಯ ಸೂತಕಿಯಲ್ಲ ;
ಮೃಡ ಶರಣರ ದೃಢ ಮಾರ್ಗಮಂ ಬಿಟ್ಟವಳಲ್ಲ.
ಕಡೆಗಂಡಿಹಳ್ ತನ್ನ ನಿಜಾಚರಣೆಯಿಂ ನೆರೆ !

ತಾಯಿಯಂ ಕಂಡೆನೆಂಬುದು ಕಣ್ಣ ಮೆರೆವೆಯೇಂ
ಕಾಣೆನೆಂಬುದು ಮನದ ಮರೆವೆಯೇಂ ಮನನಿಸಲ್ ?
ಕಂಡೆವೈ ತಾಯಿಯಂ ಶಿವಲಿಂಗ ಕಾರ್ಯದೊಳ್
ಕಾಣೆವೈ ಶಿವಲಿಂಗಮಿದು ಮಹಾಲಿಂಗಾಗಿ,
ಮತ್ತಮೀ ಕಾರ್ಯಕಾರಣಭಾವಮಿಲ್ಲಾಗಿ ;
ಕಂಡೆ ಕಾಣೆನೆಂಬೀ ಭಾವ ಭ್ರಮೆಯಿಲ್ಲಾಗಿ !
ಶಿವಲಿಂಗ ಕಾರ್ಯವಿದು ಸುಳ್ಳಲ್ಲ ಸತ್ಯಮೈ
ಶಿವಲಿಂಗ ಕಾರ್ಯಮಂ ಕಾಂಬಕಣ್ತಾಂ ಬೇಕು ;

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ನೆ

ನೂರ್ಬರಿಸಮನ್ನೆಗಂ ಬಾಳಿದಳ್ ಶರಣನ್ನೆ !

ಸತ್ಯಶಿವಸೌಂದರ್ಯ ಭಾವಮುಳಿವಡಜೇಕು.
ಅಳಿವುದೇನುಳಿವುದೇನೀ ಕಾರ್ಯಪ್ರಪಂಚಂ
ತಿಳಿವೊಡಮಳಿವುದಿಲ್ಲ ಮುಳಿವುದಲ್ಲಮವಿರಳ–
ಭಾವದೊಳ್ ಮಹಾಲಿಂಗ ಸ್ವರೂಪದೊಳ್ ಗಡಾ !
ಗುರುವದಾರ್ ಶಿಷ್ಯನಾರ್ ಮೇಣ್ ದೃಶ್ಯಮಾವುದಂ
ಮೇಣು ದೃಕ್ಕಾವುದಂ ಸರ್ವಾತ್ಮಭಾವಮಿರೆ ?
ಸಾಧನದ ಜೀವನಕೆ ಭೇದಮುಂಟಲ್ಲದೆ,
ಸಿದ್ಧಜೀವನಕೆ ಭೇದಮುಂಟೇಂ ಭಾವಿಸಲ್ ?
ದುರ್ಮಾರ್ಗ ಜೀವನಕೆ ಮೃತ್ಯುವುಂಟಲ್ಲದೆ, ೬೫೦
ಸನ್ಮಾರ್ಗ ಜೀವನಕೆ ಮೃತಿಯಿಲ್ಲ ಖತಿಯಿಲ್ಲ.
ತನ್ನತಾನರಿತಡಂ ನಡೆಯೆಲ್ಲ ಪಾವನಂ,
ತಿಳಿವೊಡಂ ಮತ್ತಮೀ ನುಡಿಯೆಲ್ಲ ಪಾವನಂ ;
ತನುಮನಗಳೊಳ್ ಕಂದು ಕಲೆಯಿರದು ಕಾಂಬೊಡೆ ;
ನಡೆನಡೆದು ನಿರ್ಮನಿ, ನುಡಿನುಡಿದು ನಿಶ್ಶಬ್ದಿ ;
ಅರಿವಿನುರಿಯೊಳ್ ಹುರಿದ ನಡೆನುಡಿಗಳ್ ಸೊಳೆಯವು.
ನಡೆದು ನಡೆಯದೆ ನುಡಿದು ನುಡಿಯದೊಲ್ ತಾನಿಹನ್
ಬಾಳಿನೀ ನಡೆನುಡಿಗಳಂ ಕಡೆಗೊಂಡವನ್ !
ಸರ್ವಸೂತಕವಳಿದು ಸತ್ಯಳಾಗಿರ್ದಳವ್ವೆ ! ೬೬೦
ನಿತ್ಯನಿರತಿಶಯರೂಪಳಾಗಿರ್ದಳವ್ವೆ !!

೧೮. ಚರಮ ಪರಮ ಜೀವನಂ

ಜಗದೊಳಗೆ ಪುಟ್ಟಿ ಜಗದ ಪ್ರಪಂಚಮುಂಬಿಟ್ಟು
ಲಿಂಗದೊಳು ನೋಡುತ್ತ ಜಂಗಮದೊಳಾಡುತ್ತ
ತುಂಗತಮ ಗುರುವಿನೊಳ್ ಬೆರೆದೇಕವಾಗಿಹಳ್
ಶರಣವ್ವೆ ನಿತ್ಯಪೂರ್ಣಖಂಡಳಾಗಿಹಳ್
ಪರಂಜ್ಯೋತಿಯ ಬೆಳಗಿನೊಳ್ ಬೆಳಗಾಗಿಹಳ್
ತಾನೇತರೊಳಗಂ ಸಿಲುಕದೆ ನೇಣು ಸೋಲದೆ !

CC-0. Jangamwadi Math Collection. Digitized by eGangotri

ಸಜ್ಜಲ ಶರಣಮ್ಮೆ ಚರಮ ಪರಮ ಜೀವನಂ

ಗುರುವಿಂಗೆ ತಾನೊಲಿದ ಶರಣವ್ವೆ ಭಕ್ತರ್ಗೆ
ನೆರೆಯೊಲಿದು ಕರುಣರಸಮಂ ಬೀರುತಿರ್ದಳು ;
ಗುರುಪ್ರಾಣಿಯಾದಂತೆ ಭಕ್ತಜನ ಪ್ರಾಣಿಯಾ–
ಗಿರ್ದಳಾ ಶರಣವ್ವೆ ಸಹಜ ಸ್ವಭಾವದೊಳ್ ! ೧೦
ಶಿವಶರಣೆಯಿರುವಳನುಭಾವದಾನಂದದೊಳ್ ;
ಶಿವಾನುಭವಾನಂದಮದಂ ಶಿವಶರಣೆಯೊಳ್ !
ಕುರುಹಳಿದ ರೂಹಮಂ ತಳೆದಿರ್ದಳಮ್ಮವ್ವೆ
ಸುಳುಹಿರದ ಗತಿಯೊಳಿರ್ದಳಾ ಶಿವಶರಣವ್ವೆ
ಶಬ್ದವಡಗಿರುತಿರ್ದ ನಿಶ್ಶಬ್ದಳಾಗಿರ್ದಳಮ್ಮವ್ವೆ
ಲಿಂಗ ಸಂಗದೊಳಿರ್ದು ನಿಸ್ಸಂಗಳಾಗಿರ್ದಳು.
ಗಮನಭಾವಮಡಗಿಹ ನಿರ್ಗಮನಿಯಾಗಿಹಳ್
ಮನನವಡಗಿರ್ಪ ನಿರ್ಮನದವಳೆನಿಸಿರ್ದಳು.
ಮೂಡಣದ ಮುಂಬಾಗಿಲವ ಪೊಕ್ಕು ಮೇಲೇರಿ
ಪಡುವಣದ ಕದ ತೆಗೆದು ನಿಡುಬೆಳಗ ಕೂಡಿಹಳ್ ! ೨೦
ಮೇಲಕ್ಕೆ ಪೋಗುತ್ತ ಪೋಗುತ್ತ ಗುರುಲಿಂಗ
ಜೇತನದ ಚಿದ್ರಸಾಮೃತವ ತಾನುಂಡಿಹಳ್
ಶಿವಲಿಂಗ ಜೇತನದ ಸತ್ಯಶಿವ ಸೌಂದರ್ಯ–
ಮಂ ಪ್ರಜ್ಞಾ ಚಕ್ಷುಸ್ಸಿನಿಂದಿರದೆ ಕಂಡಿಹಳ್
ಚರಲಿಂಗ ಜೇತನದ ಸ್ಪರ್ಶಮಂ ಸೋಂಕಿಹಳ್
ಪ್ರಸಾದಸು ಜೇತನದ ಶಬ್ದಮಂ ಕೇಳಿಹಳ್
ಮಾಲಿಂಗ ಜೇತನದ ತೃಪ್ತಿಯಂ ತಳೆದಿಹಳ್
ಶೂನ್ಯವಹ ಜೇತನದೆ ಸಮರಸವ ತಾಳಿಹಳ್
ನಿಶ್ಶೂನ್ಯ ಲಿಂಗದ ಬೆಳಗಿನೊಳ್ ಬೆಳಗಾಗಿಹಳ್
ಕಂಡೆನೆಂದಡೆ ಕಾಣಬಾರದದು ಮತ್ತಮಾ ೩೦
ಪೇಳ್ದೆನೆಂದಡೆ ಪೇಳಬಾರದದು ಚಿದ್ರೂಪು !

ಕ್ರಿಯಾಂಗದ ಕೈಯಲ್ಲಿ ತಾನಿರ್ದ ಲಿಂಗಮಂ
ಮನೋಮಂಟಪದಲ್ಲಿ ಕುಳ್ಳಿರಿಸಿ ತನ್ನರಿಮೆಯ
ಪ್ರಸಾದ ಪರಿಣಾಮವನರ್ಪಿಸುವಳಮ್ಮವ್ವೆ

CC-0. Jangamwadi Math Collection. Digitized by eGangotri

ಸಜ್ವಲ ಶರಣವ್ವೆ

ಚರಮ ಪರಮ ಜೀವನಂ

ತಾಸರ್ಪಿಸಿಯರಿಮೆಯ ಲಿಂಗಮನಾಗಿಸುವಳ್
ಭಾವಮುಂಟಪದಲ್ಲಿ ಕುಳ್ಳಿರಿಸಿ ಮತ್ತಮನು
ಭಾವರಸ ಪ್ರಸಾದ ಪರಿಣಾಮವನರ್ಪಿಸುತ–
ಮಾತ್ಮಾನುಭಾವಲಿಂಗಮನಾಗಿ ಸುವಳವ್ವೆ ;
ಮತ್ತಮಾ ತನ್ನಾತ್ಮ ಮುಂಟಪದೆ ಕುಳ್ಳಿರಿಸಿ
ಸ್ವಾಸಂದ ಪ್ರಸಾದ ಪರಿಣಾಮವನರ್ಪಿಸುತ ೪೦
ಮಹಾಲಿಂಗಮನಾಗಿಸಿ ಸಮರಸವನೈದಿದಳ್ !
ತುರ್ಯ ತುರ್ಯಾತೀತ ಸ್ಥಲವನೇರಿ ನೇರಿ
ನಿರಾಮಯ ನಿರವಯಲು ತಾನಾಗಿ ತೊಳಗಿಹಳ್
ಚಿತ್ಕಳಾಮಯ ಪರಾಕಾಶದೊಳ್ ಪ್ರಭೆಯಾಗಿ ;
ಮತ್ತಮಾ ಸಜ್ಜಲಾಮೃತ ಮಹಾಸಾಗರವೆ
ತಾನಾಗಿ ರಸರೂಪದಿಂ ಚಿರಂತನವಾಗಿ !
ಕುಂಭ ಜಲಮುಂಬುಧಿಯೊಳು ಬೆರೆದೇಕವಾದೊಲ್
ನಿತ್ಯ ಪರಿಪೂರ್ಣ ಖಂಡ ಸ್ವರೂಪಳಾಗಿ !
ಮೇಣು ನಿಜ ಲಿಂಗೈಕ್ಯ ಮಹಾಘನ ನಿಲುವಿನೊಳ್ ೫೦
ನಿಂದ ನಿಜ ಶರಣೆಯ ಚರಿತವನುಸುರಲಳವೆ ?

ಕುರುಹಿಲ್ಲದಿಹ ಪರಬ್ರಹ್ಮದೊಳ್ ತೆರಹಿಲ್ಲ–
ದಂತಿರ್ಪ ಶರಣೆಗಂ ಕಾಲಕಲ್ಪಿತಮಿಲ್ಲ
ಸಗುಣ ನಿರ್ಗುಣಮೆಂತೆಂಬ ಕವಲಿಲ್ಲ
ಸಕಲ, ಸಕಲ-ನಿಷ್ಕಲ, ನಿಷ್ಕಲಂಗಳೆಲ್ಲ ;
ಕರ್ತೃತ್ವ ಭೃತ್ಯತ್ವ ಭಾವಂಗಳೆಲ್ಲ ಮೇಣ್
ದ್ವೈತ ಮೇಣದ್ವೈತಮೆಂಬ ವಾಸನೆಯಿಲ್ಲ,
ಶೂನ್ಯ ನಿಶ್ಶೂನ್ಯ ಮೇಣ್ ಸರ್ವಶೂನ್ಯಗಳೆಂಬ
ಭಿನ್ನಭಾವಗಳೆಲ್ಲಮೆಲ್ಲವುಂ ತಾನಾಗಿ !
ಅಂಗಕಳಿ ಲಿಂಗಕಳೆಯೊಪ್ಪಯಲ್ ಬಯಲ್ಪೆರೆದೊಲ್ ೬೦
ಸಂಗಸಮರಸಮಾಗಿ ಅವಿರಳಮದಾಗಿತ್ತು
ನಿರಾಳದ ನಿಲವಿನೊಳ್ ಕೂಡಿ ಕರಗೊಂಡಿತ್ತು
ನಿಜದ ನಿಬ್ಬೆರಗಿನ ನಿಲವಂ ಮೀರಿದತ್ತು.
ಗುರುದೇವ ಸಂಗಂಕೀಟ ಭೃಮರವಾದಂತೆ

CC-0. Jangamwadi Math Collection. Digitized by eGangotri

ಗುರುದೇವ ಸಂಗಂಲೋಹಂ ಪರುಷವಾದಂತೆ
ಗುರುದೇವ ಸಂಗಂಕಂಪು ಗಾಳಿಯ ಸೇರ್ದಂತೆ
ಗುರುದೇವ ಸಂಗಂಕಪ್ಪುರವನುರಿಕೊಂಡಂತೆ !
ಜ್ಯೋತಿಯಾ ಸಂಗದಿಂ ಕಳ್ತಲಂ ಕಳೆವಂತೆ
ಕಾಡಾಗ್ನಿ ಸಂಗದಿಂ ಕಾನನಂ ಕಿಡುವಂತೆ
ಗುರುಸಂಗದಿಂ ಹುಟ್ಟುಸಾವ್ ನಷ್ಟಂಗಳಾಗಿ
ಭವಿತನಂ ಬಯಲಾಗಿ ಭಕ್ತತ್ವವಳವಡುಗುಂ ! ೭೦
ಇಷ್ಟಲಿಂಗಾರ್ಚನದೆ ತನುವ ತವೆ ಸವೆಸಿ
ಪ್ರಾಣಲಿಂಗಾರ್ಪಣದೆ ಮನವನಿರದಡಗಿಸಿ
ಭಾವಲಿಂಗಾನುಭಾವದೊಳ್ ಧನವ ನಿಲ್ಲಿಸಿ
ಪರಮಸುಖಸೊಳ್ಮಳುಂಗಿ ನಾನು ನೀನೆಂಬುದಡಂಗಿ
ತ್ರಿಪುಟಿ ಭೇದಂಗಳಳಿದು ಪರಶಿವನೊಳ್ ಬೆರೆದು
ಪರಿಪೂರ್ಣನಪ್ಪುದೇ ಲಿಂಗೈಕ್ಯನೆನಿಸುಗುಂ !
ತನು ಶ್ರೀ ಗುರುದೇವನಹುದೆ ಗುರುವಿನೊಳ್ಪೈಕ್ಯ
ಮನ ಶ್ರೀಲಿಂಗದೊಳಗಾದುದೇ ಲಿಂಗೈಕ್ಯ
ಧನಶ್ರೀ ಜಂಗಮದೊಳಗಾದುದೆ ಜಂಗೈಕ್ಯ
ಜೀವ ಭಾವಮಿದು ಬಿಟ್ಟು ಪೋಪುದೆ ಶಿವೈಕ್ಯ- ೮೦
ಭವ ಭವಾಂತರದಲ್ಲಿ ಬೀಳ್ದು ನರಳುವಾತಂ
ಶಿವರೂಪ ಗುರುಸ್ಥಲಕೆ ಸಲ್ಲನು ಮತ್ತಮಾ
ಪರಸ್ಥಲಕೆ ಸಲ್ಲನು ಮುಮ್ಮಲಾವೃತನಾಗಿ !
ಹರವಸವ ತಾಂ ಧರಿಸಿ ನರರನೋಲೈಸುತ್ತ
ಬರಿದೆ ಭಂಗಗೊಳುತಿಹರೆಂತು ಸಲ್ಲುವರೈಸೆ ?
ಅಹುದಾದುದನಲ್ಲೆಂನೆನಿಸಿ ಅಲ್ಲವಾದುದಂ
ಬರಿದೆ ಅಹುದೆಂದೆನಿಸಿ ಹೊಲಬುದಪ್ಪಿಸುತ್ತಿಹ
ಭ್ರಷ್ಟ ಜೀವಿಗಳಿವರ್ ಶಿಷ್ಟಾತ್ಮರಪ್ಪರೇನ್ ?
ಧರ್ಮದಯೆಯಿಲ್ಲದರ್ ಧರ್ಮಿಗಳೆಂತಪ್ಪರೊ ?
ನ್ಯಾಯರಹಿತರ್ ನ್ಯಾಯವಂತರೆಂತಪ್ಪರೊ ?
ಭಕ್ಷಕರೆನಿಸುವವರ್ ರಕ್ಷಕರ ದೆಂತಪ್ಪರೊ ? ೯೦
ತಮ್ಮನೆಂತು ರಕ್ಷಸಿಕೊಳ್ಳುವರೊ ನರಕದಿಂ ?

CC-0. Jangamwadi Math Collection. Digitized by eGangotri

ಸಜ್ಜಲಶರಣನ್ನೆ

ಚರಮ ಪರಮ ಜೀವನಂ

ನ್ಯಾಯ ನೀತಿಯಿರದಿರೆ ಲಿಂಗೈಕ್ಯರೆಂತಹರೊ ?
ದಮೆ ಕ್ಷಮೆ ಶಾಂತಿ ಸ್ಥೈರ್ಯೆ ಪರಹಿತಂ–
ಗಳೆಂ ಸ್ಪ್ರಯ ಮೇಣ್ ಲೋಕ ಪಾವನಂ ಗೆಯ್ಯದಲೆ
ಮಹಾಘನ ಮಹಾನಂದೈಕ್ಯ ಲಭಿಸುವುದೆಂತೊ ?
ನಾದ ಬಿಂದು ಕಲೆಗಳ ಸೆಳತಕ್ಕೆ ಸಿಲುಕದಲೆ
ನಾದ ಬಿಂದು ಕಲೆಗಳ್ಗತೀತವಹ ಮಹಂತ
ಪರವಸ್ತುವಿನೊಳ್ ಪರವಶತೆಯೆಂತಪ್ಪುದೋ ?
ಆದಿ ಮಧ್ಯಾಂತಮಿಲ್ಲದಿಹ ಪರವಸ್ತುವದು ೧೦೦

ಆದಿ ಮಧ್ಯಾಂತಾವಸ್ಥೆಯೊಳಿಪ್ಪವಂಗೆಂತೊ ?
ವಿಷಯಂಗಳ ವಿಕಾರಮುಂ ವಿಸರ್ಜಿಸಜೊಡೆ
ವಿರತಿಯೆಂತಪ್ಪುದೋ ವಿಮುಕ್ತಿಯಪೆತ್ತಣದೊ ?
ಸಿರಿಯೊಳಶುಚಿ ಉಸಿರಿನೊಳಂಜಿಕೆಗಳಳವವೇಂ ?
ತ್ರಿಗುಣಂಗಳ ತ್ಯಜಿಸದೆ ತ್ರಿತಾಪಂಗಳಳಿವವೇಂ ?
ಮೂರಯ್ದು ಮುರಿದಿಕ್ಕಿದಾತಂ ಮಹಾಂತನಯ್ ;
ಆರಯ್ದು ಸರ್ವಮುಂ ಬಾಳ್ವನೆ ಮಹಾಂತನಯ್,
ಶರಣಂಗೆ ಕಾಮಕೋಪಂಗಳಿರ್ಪವೇನ್ ಮೇಣ್
ಶರಣಂಗೆ ಲೋಭಮೋಹಂಗಳಿರ್ಪವೇನ್ ಮೇಣ್
ಶರಣಂಗೆ ಮದ ಮತ್ಸರಂಗಳಿರ್ಪವೇನ್ ಮೇಣ್ ೧೧೦

ಶರಣಂಗೆ ಶರೀರಾಭಿಮಾನಮಿರ್ಪುದೇನ್ ?
ಶರಣಂಗೆ ಪ್ರಾಣಮಮಕಾರ ಮಿರ್ಪುದೇನ್ ಮೇಣ್
ಶರಣಂಗೆ ನಾನು ನನ್ನದು ನನ್ನವರುಂಟೇನ್
ಶರಣಂಗೆ ಇಹಪರದ ಹಂಗು ತಾನಿರ್ಪುದೇನ್ ?
ಸತ್ಯ ಶಿವ ಶರಣನಂತರ್ಭಾವಿಯಾಗಿಹನ್ !
ಶರಣಂ ಪಲಂ ವೇಷಂಗಳನೆಂದು ಧರಿಸನಯ್
ಶರಣಂ ಪಲಂ ವಿಷಯಂಗಳ್ಗೆಯೆಳಸನಯ್
ಶರಣಂ ಪಲಂಬು ನುಡಿನಡೆಗಳಂ ಬಳಸನಯ್
ಶರಣಂ ಪಲಂಬು ದುಶ್ಚೇಷ್ಟೆಗಳನೆಸಗನಯ್ ! ೧೨೦

ಊರಾಶ್ರಯವ ತೊರೆದು ಗಿರಿಯಾಶ್ರಯದೊಳಿರಲೇಂ
ಪಗಲ್ ಕಾಣದ ಗೂಗೆ ತಾನೆಲ್ಲಿರ್ದಡೇಂಪೇಳ್ ?

CC-0. Jangamwadi Math Collection. Digitized by eGangotri

ದೃಶ್ಯದೊಳ್ ಶಿವಂ ಕಾಣದಾತನೆಲ್ಲಿರ್ದಡೇಂ ?
ಕಾಯಕರ್ಮವಡಂಗಿ, ಮನದ ಮಾಯವಡಂಗಿ
ಭಾವ ಭ್ರಾಂತಿಯಡಂಗಿ ಎಲ್ಲಿರ್ದಡೇನಹುದೊ ?
ಮಾತನಾಡದೆ ಮೌನವಾಗಿರ್ದಡೇನಹುದೊ ?
ಮನದಲ್ಲಿ ವಿಷಯ ಚಿಂತನಂ ನಡೆಯುತಿರಲ್ಕೆ !
ನಿದ್ದೆಯಂ ತೊರೆದದ್ದು ಕುಳ್ಳಿದ್ದಡೇಂ ಮಾಯ
ಮುದ್ರೆಯಂ ಮನದಲ್ಲಿ ತಾನೊತ್ತಿಕೊಂಡಿರಲ್ ?
ಮನದೊಳ್ ಘನ ಗಂಭೀರ ಮುದ್ರೆಯಿರೆ ಸಾಲದೇಂ ?
ಒಳಗೊಂದು ಹೊರಗೊಂದು ತಾನಿರಲ್ ಮಚ್ಚನಯ್ಯ– ೧೩೨
ಅಂತರಂಗದೊಳ್ಪ ಸರ್ವಜ್ಞ ಪರಮಾತ್ಮ !
ಹುಸಿ ಕಳವು ಪರದ್ರವ್ಯ ಪರಹಿಂಸೆಗೆಳಸದೆ
ಯಶಾಪಯಶ ಮೇಣ್ ನೋವ್ನಲಿವುಳಗ ಚಿಂತಿಸದೆ
ಹೊಗಳಕೆ ತಗಳಿಕೆಗಳ್ಗಂ ಹಿಗ್ಗಿ ಕುಗ್ಗದೆ
ಹಿಂದೇನು ಮೇಣು ಮುಂದೇನು ಎಂದು ಕುಂದದೆ
ವ್ಯವಹಾರ ವ್ಯಾಪಾರ ಸಂಸಾರದೊಳ್ ಸಿಲುಕದೆ
ಸತ್ಯದಿಂ ಶಿವಭಕ್ತಿ ಶಿಪಾರ್ಚನ ಯೋಗದೊಳ್
ನಿತ್ಯದೆ ನಿರತನಾಗಿ ಶಿವಾನಂದಮಂ ನೆರೆ
ಪೊಂದಿದಡೆ ಸಾಲದೇನ್ ನಿಚ್ಪೆರಗ ನಿಲವಿನೊಳ್ ?
ಅಂಗಮಿದು ಲಿಂಗದೊಳ್ ಲಿಂಗಮದು ಅಂಗದೊಳ್ ೧೪೦
ಸಂಗಸಮರಸ ಭಾವದೊಳ್ ಮುಳುಂಗಿ ನಿರ್ಭಾವ
ನಿಲವಿನೊಳ್ ತಾನೆ ತಾನಾಗಿರಲ್ ಸಾಲದೇನ್ ?
ಲಿಂಗಚರಣದೊಳಗೆ ಚರಣವನಿಟ್ಟು ನಡೆದಡೆ
ಲಿಂಗ ಜಿಹ್ವೆಯೊಳು ಜಿಹ್ವೆಯನಿಟ್ಟು ನುಡಿದಡೆ
ಲಿಂಗಹಸ್ತದೊಳ್ ಹಸ್ತವನಿಟ್ಟು ಮುಟ್ಟಿದಡೆ
ಲಿಂಗ ಘ್ರಾಣದೊಳು ಘ್ರಾಣವನಿಟ್ಟು ಮೂಸಿದಡೆ
ಲಿಂಗರಸನೆಯೊಳು ರಸನೆನಿಟ್ಟು ರುಚಿಸಿದಡೆ
ಲಿಂಗ ಕಂಗಳೊಳು ಕಂಗಳನಿಟ್ಟು ನೋಡಿದಡೆ
ಲಿಂಗ ಶ್ರೋತ್ರದೊಳು ಶ್ರೋತ್ರವನಿಟ್ಟು ಕೇಳಿದಡೆ
ಲಿಂಗ ಚಿತ್ತದೊಳು ಚಿತ್ತವನಿಟ್ಟು ಭಾವಿಪೊಡೆ ೧೫೦

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಚರಮ ಪರಮ ಜೀವನಂ

ಸಂಗ ಸಮರಸಭಾವ ಸಮನಿಪುದು ಸ್ವಯದಲ್ಲಿ !
ಗುರುಲಿಂಗ ನಾಮವದು ಕಾಮಧೇನುವಯ್ಯಾ
ಗುರುಲಿಂಗ ನಾಮವದು ಕಲ್ಪವೃಕ್ಷವಯ್ಯಾ
ಗುರುಲಿಂಗ ನಾಮವದು ಚಿಂತಾಮಣಿಯಯ್ಯಾ
ಗುರುಲಿಂಗ ನಾಮವದು ಪರುಷದ ಖಣಿಯಯ್ಯಾ ;
ಗುರುಲಿಂಗ ನಾಮವದು ಸಂಜೀವಿನಿಯಯ್ಯಾ ;
ಸತ್ಯಶಿವ ಶರಣಾಯಿ ತಾಯಿಗೆ ನಿರ್ಮಾಯಿಗೆ !
ಗುರುಲಿಂಗದೇವನಾ ನಾಮಾಮೃತಮದಂ
ಶರಣಮ್ಮ ನಾಲಗೆಯು ನೆರೆ ತುಂಬಿ ಮತ್ತಮಾ
ಮನತುಂಬಿ ಮೇಲೇರಿ ಬಗೆದುಂಬಿ ಹೊರಸೂಸಿ

ಸಲೆ ಸರ್ವ ಕರಣೇಂದ್ರಿಯಂಗಳಂ ತುಂಬಿತ್ತು,
ಶರಣವ್ವೆ ಗುರುಲಿಂಗ ನಾಮಾಮೃತದೊಳರ್ದಳು ;
ತನ್ನ ತಾ ಮರೆತು ತವೆ ಗುರುಮಂತ್ರ ತಾನಾಗಿ !
ಗುರುವರಂ ಸದ್ರೂಪಕ್ರಿಯಾಲಿಂಗಾಗಿ ತಾನ್
ತಾಯಿಯಾ ತ್ಯಾಗಾಂಗದೊಳಗೆ ತಂಗಿರ್ಪನಯ್
ಗುರುವರಂ ಚಿದ್ರೂಪ ಜ್ಞಾನಲಿಂಗಾಗಿ ತಾನ್
ತಾಯಿಯಾ ಭೋಗಾಂಗದೊಳಗೆ ಬೆರೆದಿರ್ಪನಯ್
ಗುರುವರಂ ಸುಖರೂಪ ಭಾವಲಿಂಗಾಗಿ ತಾನ್
ಮಾತೆಯಾ ಯೋಗಾಂಗದೊಳಗೆ ತಾನಿರ್ಪನಯ್
ತಾಯು ತ್ರಿವಿಧಾಂಗದೊಳ್ ಗುರುಯೋಗವಾಗಿಹಳ್ !
ತಾಯಿ ಜಗದೊಳಗೆ ಜನಿಸಿರ್ದೊಡಂ ಜಗದ ಜಂ
ಜಡಕೆ ಸಿಲುಕಿದವಳಲ್ತು ಬಳುಕಿದವಳಲ್ತು ;
ಕೋಗಿಲೆಯು ತನ್ನ ಗೂಡಿನೊಳಿಟ್ಟ ತತ್ತಿಯಂ
ಕಾಗೆ ಮರಿಯ ಮಾಳ್ಪೆಡೆಂ ಸಾಕಿಸಲಹಿದಡೇಂ–
ಅದು ತನ್ನ ಕೋಗಿಲೆಯ ಹಿಂಡಿನೊಳಹುದಲ್ಲದೆ
ತನ್ನದಲ್ಲದೆ ಕಾಗೆಯ ಹಿಂಡಿನೊಳಪ್ಪುದೇಂ ?
ಲೋಕೋಪಕಾರಕ್ಕೆ ಜನಿಸಿರ್ದ ಶಿವಶರಣಂ
ಲೋಕದವರಂತೆವೊಲ್ ತಾನಿರನು ತನ್ನೊಳಗೆ
ಲೋಕೇಶನಲ್ಲಿ ಬೆರೆದೇಕ ಮಾಗಿರ್ಪನು

CC-0. Jangamwadi Math Collection. Digitized by eGangotri

ಶಿವಶರಣನ ಲೋಕೋತ್ತರ ಜೀವನವನಾರ್ಗೆ ೧೯೦
ಬಗೆ ಬಿಚ್ಚಿ ಮನಹೆಚ್ಚಿ ಮಿಗೆ ಬಣ್ಣಿಸಲುಕ್ಕುಮಾ ?
ಶಿವಶರಣನೇರಿದೆತ್ತರಕೆ ಕವಿಯೇರ್ವನೇನ್
ಕವಿಯಾತ್ಮದ್ರುಪನಲ್ಲದೆ ಪರಾನುಭವಿಯಲ್ತು.
ಶಿವಶರಣನ ಕಾಯವೆ ಕೈಲಾಸ ಕಾಣಿರೋ
ಶರಣನಾ ಘನಮನವೆ ಘನಲಿಂಗ ಕಾಣಿರೋ ;
ಶರಣನಾ ಚೈತನ್ಯ ಸತ್ಯ ಶಿವ ಲಾವಣ್ಯ
ಶರಣನಾ ಜೀವನಂ ಪರಶಿವನ ಕಾರುಣ್ಯ
ಶರಣ ಸಂಚರಣದಿಂ ಧರೆಯೆಲ್ಲ ಪಾವನಂ
ಶಿವಶರಣ ಕರುಣದಿಂ ಸಕಲಜೀವರುದ್ಧರಣಂ !
ಸತ್ಯಶಿವ ಶರಣಂಗೆ ಪುನರ್ಜನ್ಮವಿಲ್ಲಂ ೧೯೦
ಹುರಿದಿರ್ಪ ಬಿತ್ತದು ಮರಳಿ ಪುಟ್ಟ ಬಲ್ಲುದೇಂ
ಬೆಂದ ನುಲಿ ತಾಂ ಮರಳಿ ಕಟ್ಟಲ್ಕೆ ಬಪ್ಪುದೇಂ ?
ಗುರುದೇವನಿಂ ಹುಟ್ಟುಗೆಟ್ಟ ಶಿವಶರಣರು
ಮರಳೆ ತಿರೆಗೆ ಬಾರರು ; ಬಂಧನಕೆ ಬೀಳರು.
ನರಜನ್ಮದೊಳಿರ್ದಡಂ ಹರಜನ್ಮನಾಂತಿಹರ್
ಧರೆಯಲ್ಲಿ ಸುಳಿದು ಸೂತಕಮಿಲ್ಲದಂತಿಹರ್ !
ಶರಣಲಿಂಗವನಪ್ಪಿ ಲಿಂಗತನುವಾಗಿಹನ್
ಸಂಚರಿಸುತಿಹ ಮಹಾಲಿಂಗಮಾಗಿ ನೆರೆವನ್
ಪಂಚಮುಖ ಪರಮೇಶನಂತೆವೊಲ್ ಲೋಕದೊಳ್ ;
ಸಂಚು ಹೊಂಚುಗಳಿಲ್ಲದಂತೆವೊಲ್ ಸಹಜದಿಂ ; ೧೯೦
ಸಂದೇಹ ಸಂಬಂಧ ತಾನೆನಿತು ವಿಲ್ಲದಲೆ
ಬಂಧು ಬಳಗಮೆಂಬುವ ವ್ಯಾಮೋಹಮಿಲ್ಲದಲೆ
ಕುಂದು ಕೊರತೆಗಳಂ ಮನಕೆನಿತು ತಾರದಲೆ
ನಿಂದೆ ಸ್ತುತಿಗಳ್ಗೆ ಮನದೊಳ್ ಕುಗ್ಗಿ ಹಿಗ್ಗದಲೆ !

ಶರಣವ್ವೆ ಜೀವಂತ ಚಲುಬೊಂಬೆ ಜೀವನದೆ
ಗುರುದೇವ ಹೂಡಿಹನ್ ಷಡಕ್ಷರಮೆಂತೆಂಬ
ಪವಿತ್ರದ ಸೂತ್ರವನು ; ನೆಯ್ತೆರೆಯ ಮರೆಯಲ್ಲಿ

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಚರಮ ಪರಮ ಜೀವನಂ

ಆಡಿಸಿಹನಂತರಂಗದೊಳ್ ಗುರು ಸೂತ್ರಕಂ
ಲಿಂಗಪತಿಯೊಡಂ ಸಮರಸಭಾವ ಬೆಡಗಿನೊಳು !
ಒಲಿದೊಲಿದೊಡನಾಡಿದ ನುಡಿಯೆಲ್ಲ ಲಿಂಗಾಗಿ,
ನಲಿನಲಿದು ನಡೆದ ನಡೆಯೆಲ್ಲ ನಿಜಲಿಂಗಾಗಿ ;
ನೇಹದೊಳು ನೋಡಿದಾ ನೋಟಮದು ಲಿಂಗಾಗಿ
ಕರುಳಿನಿಂ ಕೇಳಿದಾ ಕೇಳಿಕೆಯು ಲಿಂಗಾಗಿ
ನಚ್ಚಿನಿಂ ನೆನೆದಿರ್ಪ ನೆನಿಕೆಯದು ಲಿಂಗಾಗಿ
ಬಗೆದುಂಬಿ ಭಾವಿಸಿಹ ಭಾವಮದು ಲಿಂಗಾಗಿ
ಚಚ್ಚರದೆ ಜೇತನಿಪ ಜೇತನಂ ಲಿಂಗಾಗಿ
ಶರಣಪ್ಪೆ ತಾನಿಲ್ಲದಿರ್ದಳಧೊ ಸಮರಸದೆ !

೧೯. ಶರಣಪ್ಪೆಯ ಷಡಂಗಲಿಂಗೈಕ್ಯಂ

ತಾಯಿಯಾ ದೃಶ್ಯವಹ ಲೀಲೆ ಯಡಗಿತದು ತ–
ನ್ನಿಷ್ಪನ್ನಮಾಗಿರ್ದ ಸದ್ರೂಪ ಶ್ರೀಲಿಂಗದೊಳ್
ಮತ್ತಮಾ ಸೂಕ್ಷ್ಮತ್ವಪ್ಪದೃಶ್ಯಾದೃಶ್ಯಲೀ
ಲೆಯಡಗಿತು ಪ್ರಾಣಮಯ ಚಿದ್ರೂಪ ಲಿಂಗದೊಳ್
ಮೇಣು ಕಾರಣಾಂಗದ ಅದೃಶ್ಯವಹ ಲೀಲೆಯ–
ಡಗಿತು ಸದ್ಭಾವಮಯ ಸ್ವಾನಂದಲಿಂಗದೊಳ್ !
ಸದ್ಭಕ್ತ್ಯೆಯಡಗಿಹಳ್ ಸ್ವಾಚಾರಲಿಂಗದೊಳ್
ಮಾಹೇಶ ಯಡಗಿಹಳ್ ತನ್ನ ಗುರುಲಿಂಗದೊಳ್
ಪ್ರಸಾದ್ಯಂಗೆ ಯಡಗಿಹಳಲ್ಲೋ ಶಿವಲಿಂಗದೊಳ್
ಪ್ರಾಣಲಿಂಗ್ಯಂಗೆಯಡಗಿಹಳ್ ಜಂಗಮಲಿಂಗದೊಳ್
ಶರಣಾಂಗೆ ಬೆರೆದಿಹಳ್ ಪ್ರಸಾದಲಿಂಗದೊಳ್
ಐಕ್ಯಂಗೆ ಅವಿರಳಾವಧ್ ಮಹಾಲಿಂಗದೊಳ್
ನಾನೆಂಬುದನರಿಯಳ್ ನೀನೆಂಬುದನರಿಯಳ್
ಏನೇನುಮನರಿಯಳ್ ಸತ್ಯಶಿವಶರಣಪ್ಪೆ !
ಷಡ್ಭೂತದೊಳ್ ಷಡ್ವಿಧಮಂತ್ರವ ನೆಲೆಗೊಳಿಸೆ
ಷಡ್ಭೂತಗಳ್ ಷಡಂಗಗಳಾಗಿ ಮಾರ್ಪಡುಗುಂ,
ಷಡಂಗಗಳಲ್ಲಿ ಷಡ್‌ಲಿಂಗಗಳ ಪ್ರತಿಷ್ಠಿಸೆ

CC-0. Jangamwadi Math Collection. Digitized by eGangotri

ಸಜ್ಜಲ ಶರಣನೈ

ಶರಣನೈಯ ಷಡಂಗಲಿಂಗೈಕ್ಯಂ

ಷಡ್ಲಿಂಗ ತೇಜಮದು ತುಂಬಿ ತೊಳಗುವುದೈಸೆ !
ಷಡ್ಲಿಂಗ ಬೆಳಗಿನೊಳ್ ಷಡಂಗ ಕಳೆಗಳನಡ–
ಗಿಸುತ ಷಡ್ರೂಪರಹಿತಳಾಗಿಹಳಮ್ಮವ್ವೆ !
ಮರ್ತ್ಯದೀ ಮನುಜರೊಲ್ ಸತ್ತವಳ್ ತಾನಲ್ಲ
ಮರ್ತ್ಯಮಂ ಮೀರಿರ್ದ ಸತ್ಯಮಾಗದುಳಿದಿಲ್ಲ
ಸಾಯದಿಹ ಮುನ್ನಮೇ ಸತ್ತತೆರದೊಲಿರ್ದಳು ;
ಸತ್ತಮೇಲದೊ ಸತ್ಯಮಾಗಿ ಉಳಿದಿರ್ಪಳು.
ಪಾವನ ಪ್ರೇಮರಸವೆ ಐಕ್ಯಂ ನೋಳ್ಪೊಡಂ
ಜೀವನ್ಮುಕ್ತಿ ಕಾರಣಮಪ್ಪುದಯ್ ಜೀವನದೆ !
ಮರೆವೆಯು–ರಸಮರಸಂ, ತನ್ನರಿವೆ ಸಮರಸಂ ;
ತನ್ನಂತೆ ಅನ್ಯಮಂ ಕಾಂಬುವೇ ಸಮರಸಂ
ಮೇಣದುವೆ ಭಾವೈಕ್ಯಮೆನಿಸುಗುಂ ಶರಣನೊಳ್ !
ವಿಶ್ವೈಕ್ಯಭಾವಮದು ಸಮರಸಕೆ ಕಾರಣಂ
ವಿಶ್ವವಿಸ್ತಾರ ಜೀವನ ಸಾಧನಮಪ್ಪುದಂ ;
ಸರ್ವಸಮದರ್ಶಿಯೆಂದೆನಿಸುಗುಂ ಮತ್ತಪಾ
ಸರ್ವಾತ್ಮ ಭಾವಂ ಪರಮಾತ್ಮತತ್ವಕಾರಣಂ !
ಸಕಲ ಜೀವಾತ್ಮರಂ ಪರಮಾತ್ಮನೆಂದೆಣಿಸಿ
ಶರಣು ಭಾವಮಂ ತಳೆವುದೆ ಶರಣ ಜೀವನಂ ;
ಶರಣವ್ವೆ ತಳೆದಿರ್ದಳೀ ವಿಶಾಲ ಮನಸಮಂ
ಮತ್ತಮೀ ಸರ್ವದೊಳ್ ಭಾವೈಕ್ಯ ಹೃದಯಮಂ !

ತನುವಿನೊಳು ತನುವಿಟ್ಟು ಮಹಾತನು ತಾನಾಯ್ತು
ಮನದೊಳಗೆ ಮನವಿಟ್ಟು ಮಹಾಮನ ತಾನಾಯ್ತು
ಪ್ರಾಣದೊಳು ಪ್ರಾಣವಿಟ್ಟು ಚಿತ್ಪ್ರಾಣ ತಾನಾಯ್ತು
ಭಾವದೊಳು ಭಾವವಿಟ್ಟು ನಿರ್ಭಾವ ತಾನಾಯ್ತು
ಶರಣವ್ವೆ ಜೀವನಂ ಲಿಂಗೈಕ್ಯ ಭಾವದೊಳ್
ತಾನಾಯ್ತು ಸಹಜದಿಂ ವೃಷ್ಟಿಯೊಳ್ ದೃಷ್ಟಿಸಲ್ !
ಉಪ್ಪಿದಂ ನೀರಿನೊಳ್ ಬೆರೆದಂತೆ ಮತ್ತಪಾ
ಕರ್ಪೂರಂ ಜ್ಯೋತಿಯೊಳ್ ಬೆರೆದಂತೆ ಬೆರೆವಿಹಳ್

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಶರಣಪ್ಪೆಯ ಷಡಂಗಲಿಂಗೈಕ್ಯಂ

ಪರಿಮಳಂ ಗಾಳಿಯೊಳ್, ಶಬ್ದಮಿದು ಬಾನಿನೊಳ್
ಬೆರೆದಂತೆ ಬೆರೆದೇಕವಾಗಿಹಳ್ ಶರಣಪ್ಪೆ
ಸರ್ವಭರಿತನೊಳ್ ಸಮರಸಂ ದಳೆದಿಹಳಪ್ಪೆ
ವಿಶ್ವಾದಿ ಶಕ್ತಿಯೊಳ್ ಬೆರಸಿ ಬೆಳಗಿದಳಪ್ಪೆ ;
ಸ್ಥಲವುಳಿದು ನಿಃಸ್ಥಲಂ ತಾನಾಗಿ ಮತ್ತಮಾ
ಶೂನ್ಯಮುಳಿದು ನಿಶ್ಶೂನ್ಯಮಾಗಿ ನಿಜಮೈದಿದಳ್ ;
ಷಟ್‌ಸ್ಥಲಬ್ರಹ್ಮ ಮೇಣ್ ಘನಲಿಂಗ ಚಕ್ರವರ್ತಿ
ಗುಡದೂರ ಬಸವಾರ್ಯ ಗುರುವಿನೊಳ್ ಬೆರೆದಿಹಳ್ ! ೨೮೦
ದೇಹ ನಿರ್ದೇಹ, ಸಕಲ–ನಿಷ್ಕಲ. ಜಡಾಜಡ
ಭೇದಂಗಳನೆಲ್ಲವ ಭೇದಿಸಿ ಬೆರೆದಿಹಳಪ್ಪೆ !
ಪಂಚಕರ್ಮೇಂದ್ರಿಯಂ ಪಂಚಜ್ಞಾನೇಂದ್ರಿಯಂ
ಪಂಚಭೋಗೇಂದ್ರಿಯಂ ಪಂಚತನ್ಮಾತ್ರಂಗ
ಳಂ ಮೇಣು ಪಂಚ ಭೂತಂಗಳಂ ತಾವಿವಂ
ತಾಯಿಯೊಳ್ ಸಮರಸಂಗೊಂಡಿಹವ್ ಕಂಡರಿಯೆ
ಬೀಜಾಂಕುರನ್ಯಾಯದಂತೆವೊಲ್ ದಿಟಮಿದಂ !
ಕಾರ್ಯಕಾರಣಭಾವೊಂದಾಗಿ ನಿಂತಿಹಳ್ !!

ಅಷ್ಟಮದಂಗಳಳಿದವು, ಸಪ್ತವ್ಯಸನಂಗಳ– ೨೯೦
ಳಿದವು. ಮೇಣರಿಷಡ್ವರ್ಗಂಗಳಳಿದವು, ಷಡೂ
ರ್ಮಿಗಳಳಿದವು, ಷಡ್‌ಭ್ರಮೆಗಳು ಷಡ್ಭಾವ ವಿಕಾರಂ–
ಗಳು ಷಟ್ಕರ್ಮಂಗಳು ಸುಳಯವೈ ಸನಿಹಕೊಳ್ !
ತನುತ್ರಯ ಮಲತ್ರಯ ಗುಣತ್ರಯ ಜೀವತ್ರಯ
ಮನತ್ರಯ ಮೇಣ್ ಭಾವ ತಾಪತ್ರಯಮಿರಲಿಲ್ಲ ;
ತೋರುವೀ ತೋರಿಕೆಯು ತಾನಿಲ್ಲದಂತಿತ್ತು ;
ಇಂತಿದಂ ಕಂತುಹರ ರೂಪವಾಗಿರ್ದತಯ್
ಸತ್ತು ಚಿತ್ತಾನಂದ ನಿತ್ಯಪರಿಪೂರ್ಣಳಾಗಿ
ತುರ್ಯ ತುರ್ಯಾತೀತ ತಾನಾಗಿ ತಾನಿಹಳು.
ನಿಜಮಪ್ಪ ನಿರಾಳವನ್ಪೈದಿದಳ್ ಶರಣಪ್ಪೆ ೩೦೦
ಅನಿತ್ಯದ ಬೆಸುಗೆಯಂ ಬಿಟ್ಟಿತಾಂ ನಿತ್ಯದಾ

CC-0. Jangamwadi Math Collection. Digitized by eGangotri

ಸಜ್ಜಲ ಶರಣಮ್ಮೆ

ಶರಣಮ್ಮೆಯ ಷಡಂಗಲಿಂಗೈಕ್ಯಂ

ನಿಲವಿನೊಳ್ ನಿಂತಿಹಳ್ ಸತ್ಯಸ್ವರೂಪಳಾಗಿ !
ಅಂಗದೊಳ್ ನೆಲಸಿರ್ದ್ದ ತಾಸಂಗಿಯಲ್ಲವಯ್
ಲಿಂಗವೇ ತಾನಾಗಿ ಲಿಂಗಸುಖಿಯಾಗಿಹಳ್ ;
ತೂಗಿದಳ್ ನಿಜ ಜೀವನದುಯ್ಯಾಲೆಯನವ್ವೆ
ಬೀಗಿದಳ್ ನಿಜಲಿಂಗದಾಗಸವ ಸೇರಿತಾಂ !
ಲಿಂಗಯ್ಯ ಸಂಗಮೇ ಸಂಗಮವದಾಗಿತ್ತು,
ಲಿಂಗಾನುಭಾವಮೇ ತುಂಗಸೊಗವಾಗಿತ್ತು ;
ಎಲೆಗಳೆದ ಹೆಬ್ಬಳ್ಳಿ ಸತ್ಯ ಶಿವ ಶರಣವ್ವೆ,
ಕಂಪಳಿದ ತುಂಬಿಹೂವಾಗಿಹಳ್ ಶರಣವ್ವೆ,
ರಸವಿರದ ಪಣ್ಣಾಗಿಹಳ್ ಸತ್ಯ ಶರಣವ್ವೆ ೩೧೦
ಮೊಳಕೆಯಿರದ ಬಿತ್ತಾಗಿಹಳ್ ಬಗೆಯೆ ಶರಣವ್ವೆ !
ಆಪರರಸಮಿರದಡೇನ್ ಪರಮರಸದುಂಬಿರ್ದ
ಪರಮಫಲಮಾಗಿರ್ದ ಮ್ಮವ್ವೆ ನೈಜದಿಂ !
ತನುವೆಂಬ ಏರಿಂಗೆ ಮನವೆಂಬ ಕಟ್ಟೆಯಂ
ಕಟ್ಟಿ ಷಟ್‌ಸ್ಥಲವೆಂಬ ಸೋಪಾನಗಳನೆಸಗಿ
ಶರಣವ್ವೆ ಪರಮಸುಖಜಲವ ತಾಂ ತುಂಬಿಹಳ್
'ರಸೋವ್ವೈಸಃ' ಎಂಬಂತೆ ರಸಮಯವಾಗಿಹಳ್ !
ಸರ್ವರ್ಗೆ ದಿವ್ಯರಸರೂಪರಪ್ಪಲಹುದೇನ್ ?
ತನುವಿಲ್ಲ ತಾಯಿಗಂ ಕ್ರಿಯಾತ್ಮಕ್ಕಳ್ ತಾನಾಗಿ
ಮನವಿಲ್ಲ ತಾಯಿಗಂ ಪ್ರಮಾತ್ಮಕ್ಕಳ್ ತಾನಾಗಿ ೩೧೧
ಬಗೆಯಿಲ್ಲ ತಾಯಿಗಂ ಸ್ವಾನುಭಾವಿಯಾಗಿ
ಅತ್ಮಭಾವಮಿಲ್ಲಮುಪಾಧಿ ತನಗಿಲ್ಲಾಗಿ ;
ಕಾಯದೊಳ್ ಸ್ವಾಚಾರ ಸಾಯತವನೆಸಗಿಹಳ್
ಚಿತ್ತದೊಳ್ ಸುವಿಚಾರ ಸ್ವಾಯತವನೆಸಗಿಹಳ್
ಪ್ರಾಣದೊಳ್ ಪ್ರಣವಮಂ ಸಾಯತವನೆಸಗಿಹಳ್
ಭಾವದೊಳ್ ಲಿಂಗಮಂ ಸ್ವಾಯತವನೆಸಗಿಹಳ್
ಶರಣವ್ವೆ ಲಿಂಗಾಂಗ ಜೀವನವ ನಡೆಸಿಹಳ್
ಸರ್ವಾಂಗ ಜೀವನವ ಸಾರ್ಥಕಂ ಪಡಿಸಿಹಳ್ !
ತನುವಿಡಿದು ಸುಳಿದಾಡುವನ್ನಕ್ಕ ಬಾಳಿನೊಳ್

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ನೆ

ಶರಣವ್ವೆಯ ಷಡಂಗಲಿಂಗೈಕ್ಯಂ

ತನುಭಾವ ತೊಲಗದ್ಯೆ, ಕರಣ ಗುಣ ಕಳೆಯದ್ಯೆ
ಕರ್ಮಮಲ ಹಿಂಗದ್ಯೆ, ಮಾಯಮಲ ಮಾಣದ್ಯೆ
ಜೀವಮಲ ಜಾರದ್ಯೆ ಜಂಜಿಡಂ ಜಗುಳದ್ಯೆ !
ಇದನರಿದು ಶರಣವ್ವೆ ತನುಕರಣ ಮನಹರಣ–
ಮಲಂಗಳನಳಿದು ಸದಮಲಾಂಗಳಾಗಿರ್ದಳು.
ಸತ್ಕ್ರಿಯಾಂಗಮದಾಗಿ ತನುಮುಕ್ತಳು ನೋಡಾ.
ಸುಜ್ಞಾನ ಮನವಾಗಿ ಮನಮುಕ್ತಳು ನೋಡಾ ;
ಸ್ವಾನುಭವ ತನಗಾಗಿ ಭಾವ ಮುಕ್ತಳು ನೋಡಾ,
ತೃಪ್ತಾತ್ಮಳವಳಾಗಿ ಜೀವಮುಕ್ತಳು ನೋಡಾ ;
ಕಾಯಮನ ಭಾವಜೀವಂಗಳಂ ನಿರಸನಂ
ಗೊಳಿಸಿ ತಾಂ ಲಿಂಗಮನ ಲಿಂಗಧನವಾಗಿಹಳ್ !
ನಾಮವಿಲ್ಲದ ಸೀಮೆಯಿಲ್ಲದಾ ನಿಜಶಕ್ತಿ
ಆದಿಯಿಲ್ಲದ ಅನಾದಿಯಿಲ್ಲದ ಚಿಚ್ಛಕ್ತಿ
ಅಂತರಂಗ ಬಹಿರಂಗ ತುಂಬಿದ ಚಿದ್ದೀಪ್ತಿ
ಸಂದು ಸಂಶಯಂಗಳವಿಲ್ಲದಿಹ ಶರಣವ್ವೆ !

ಆಂಗೈಯ ಲಿಂಗದೊಳ್ ನೋಟ ಸ್ವಯಮಾದಿರವು
ಆಂಗೈಯ ಲಿಂಗದೊಳ್ ಮಾಟ ಸ್ವಯಮಾದಿರವು
ಆಂಗೈಯ ಲಿಂಗದೊಳ್ ಕೂಟ ಸ್ವಯಮಾದಿರವು
ಆಂಗೈಯ ಲಿಂಗದೊಳ್ ತಾನಾದ ನಿಜನಿಲವು !
ನಾಸಿಕಂ ಜಿಹ್ವೆಯೊಳ್. ಜಿಹ್ವೆಯದು ನೇತ್ರದೊಳ್,
ನೇತ್ರಮದು ತ್ವಕಿನೊಳ್, ತ್ವಕ್ಕದಂ ವ್ಯೋಮದೊಳ್
ವ್ಯೋಮಮದು ಆತ್ಮನೊಳ್, ಆತ್ಮಮದು ಶೂನ್ಯದೊಳ್
ಬೆರೆದೇಕಮಾಗಿಹವು ಶರಣವ್ವೆ ಷಡಂಗಗಳ್ !
ಗಂಧಂ ರಸದೊಳ್, ರಸಮದು ರೂಪದೊಳ್ ಮೇಣು
ರೂಪಮದು ಸ್ಪರ್ಶದೊಳ್, ಸ್ಪರ್ಶಮದು ಶಬ್ದದೊಳ್,
ಶಬ್ದಮದು ತೃಪ್ತಿಯೊಳ್, ತೃಪ್ತಿಯದು ಸ್ವಾತ್ಮನೊಳ್,
ಸ್ವಾತ್ಮಮದು ಪೂರ್ಣದೊಳ್ ಬೆರೆದೇಕಮಾಗಿಹವು–
ಶರಣೆಯೊ ಷಟ್‌ಸ್ಥಲದ ಸಾಧನೆಯ ಮಾರ್ಗದೊಳ್ !

CC-0. Jangamwadi Math Collection. Digitized by eGangotri

ಮಾತೆಯೀ ಪಂಚಭೌತಿಕ ಸ್ಥೂಲ ತ್ಯಾಗಾಂಗ–
ಮಿಷ್ಟಲಿಂಗದೊಳ್ ಕರಿಗೊಂಡಿತ್ತು ; ಸೂಕ್ಷ್ಮ ಭೋ
ಗಾಂಗಮದು ಪ್ರಾಣಲಿಂಗದೊಳ್ ಕರಿಗೊಂಡಿತ್ತು ;
ಕಾರಣಂ ತಾನಾದ ಯೋಗಾಂಗ ಮದಿರದೆ
ಭಾವಲಿಂಗದೊಳ್ ಕರಿಗೊಂಡಿತ್ತು ತರಿಸಂದು
ರೂಪ ರುಚಿ ತೃಪ್ತಿಯಿಂ ಸಚ್ಚಿದಾನಂದದಿಂ
ಮತ್ತಮಾ ನಿತ್ಯಪೂರ್ಣಾಖಂಡ ರೂಪದಿಂ !
ಪಿಂಡಾಂಡ ಬ್ರಹ್ಮಾಂಡಗಳೆರಡಖಂಡಮಾಗಿ
ಖಂಡಭಾವಮದಿಲ್ಲದಂತೆ ತಾವಿರ್ಪವೈ ;
ತನಗನ್ಯಮಿಲ್ಲಾಗಿ ವಿರಾಡ್ರೂಪವಾದತ್ತು.
ಗುರು ಶಬ್ದ ಮುಗ್ಧನಾದೆಡೆಯು ತಾಂತರಿಸಂದು
ನಿರಂತರ ನಿಜಸೌಖ್ಯ ಸ್ವರೂಪಳಾಗಿಹಳಪ್ಪೆ ; ೩೭೦
ತನ್ನ ಸುಳುಹಿಂಗೆ ಮೇಣ್ ತನ್ನ ನಿಲವಿಂಗೆ ತಾಂ
ಬೆರಗಾಗಿ ನಿಂತ ನಿಲವಂ ಕಾಂಬ ಪರಿಯೆಂತೋ ?
ಗುರುತನ್ನ ತನು ಪ್ರಾಣ ಭಾವದೊಳ್ ಕರಿಗೊಂಡು
ತಾನು ಗುರುಕ್ರಿಯಾಜ್ಞಾನಾನುಭವದೊಳ್ ಬಿಡದೆ
ತರಿಸಂದು ಕರಿಗೊಂಡು ನಿಂತಿಹಳ್ ಶರಣಪ್ಪೆ
ಶ್ರೀಗುರುವೆ ಘನವಾಗಿ, ಘನವೆ ಪರಬೊಮ್ಮವಾಗಿ
ಗುರು ಶಿಷ್ಯರೆಂಬ ಭೇದಮಿಲ್ಲದಾಗಿಪ್ಪುದು.
'ಅಂಗದ ವಿಕಾರಮಿದು ಆಚಾರದೊಳಗಡಗಿ
ಆಚಾರ ವಿಚಾರಂಗಳು ಗುರುವಿನೊಳಗಡಗಿ
ಗುರುನೆನ್ನ ತ್ರಿವಿಧಾಂಗದೊಳಗಡಗಿ ಮತ್ತಮೀ ೩೮೦
ತ್ರಿವಿಧಾಂಗಗಳ್ ಲಿಂಗ ನಿಷ್ಠೆಯೊಳ್ ತಾವಡಗಿ
ಲಿಂಗ ನಿಷ್ಠೆಯದಂಗದಾಚಾರವಾವರಿಸಿ
ಆಚಾರದ ನಿಲವಂ ಗುರುಮೂರ್ತಿಯಾಪತಿಸಿ
ಆ ಮಹಾ ಗುರುಮೂರ್ತಿ ಸರ್ವಾಂಗವಾವರಿಸಿ
ಸರ್ವಾಂಗದೊಳ್ ಮಹಾಜ್ಞಾನಮದಾವರಿಸಿ
ಮಹಾಜ್ಞಾನದೊಳ್ ಪರಮಾನಂದವಾವರಿಸಿ
ಆ ಪರಮಾನಂದದೊಳ್ ನಾನರಿಯದಾದೆ ಕಣಾ'

CC-0. Jangamwadi Math Collection. Digitized by eGangotri

ಎಂದು ಗುರುಮಹಿಮೆಯಂ ಹಾಡಿಹನ್ ಪ್ರಭುವರಂ !
ಕರಕಂಜ ಸಂಜಾತನಾಂಗದೊಳ್ ಲಿಂಗಾಗಿ
ಜಂಗಮಂ ಮತ್ತಂ ವಿಭೂತಿಯಂ ರುದ್ರಾಕ್ಷಿ–
ಮಂತ್ರಂಗಳಂ ಮೇಣು ಪಾದೋದ ಪ್ರಸಾದಂ–
ಗಳಂ ಮಾಡಿ ಅಷ್ಟಾವರಣವಹ ಗುರುವರನ
ನಿಷುನಿಲವನಾರ್ ಬಣ್ಣಿಸಲಳವಲ್ಲೋದುಗಾ !
ಗುರುಕಳೆಯೆ ಲಿಂಗಾಗಿ, ಗುರುಹರಣ ಚರವಾಗಿ,
ಗುರುದತ್ತ ಪ್ರಜ್ಞೆಯೆ ಭಸಿತಮಾಗಿ ಮತ್ತಮಾ
ಗುರುವಿತ್ತ ಕಂಗಳೇ ಕಾಯ್ವೊಡಿಗೆಗಳಾಗಿ
ಗುರೂಪದಿಷ್ಟ ಷಡಕ್ಷರಂಗಳೆ ಮಂತ್ರಮಾಗಿ
ಗುರುಕರುಣರಸಮೆ ಪಾದೋದಮಾಗಿರ್ಪವು ;
ಗುರುಪದಾರ್ಥಮದು ಪ್ರಸಾದ ಮಾದಪುದು.
ಗುರುತ್ವಮದು ಮಾತಿನ ಮಾಲೆಗಂ ಸಿಲುಕುವುದೆ ?

ಗುರುವಿಲ್ಲದಂಗತ್ವ–ಲಿಂಗತ್ವವಳವಡವು.
ಬೆಳಗಿನೊಳಗೊಂದೆ ಬೆಳಗು ಗುರುದೇವನಯ್ಯಾ
ತಿಳಿವಿನೊಳಗೊಂದೆ ತಿಳಿವು ಗುರುದೇವನಯ್ಯಾ
ಘನದೊಳಗೊಂದೆ ಘನವು ಗುರುದೇವನಯ್ಯಾ
ಗುರುವನುಳಿದು ಬೆಳಗಿಲ್ಲ ತಿಳಿವಿಲ್ಲ ಘನಮಿಲ್ಲ.
ಇದನರಿದು ಶರಣನ್ವೆ ಗುರುಪ್ರಾಣಿ ತಾನಾಗಿ
ನಿರುಪಮ ಗುರುಜೀತನದೊಳವಿರಳ ವಾಗಿಹಳ್ !
ಕಣ್ಣು ಲಿಂಗದ ಮೇಲೆ, ಮನಸು ಮಂತ್ರದ ಮೇಲೆ
ಜೀವ ಗುರುವಿನ ಮೇಲೆ ಶರಣನ್ವೆ ತಾಯಿಗೆ !
ಕಾಯಗುಣ ಕೆಟ್ಟತ್ತು ಕರದಿಷ್ಟ ಪೂಜೆಯಿಂ,

ಪ್ರಾಣಗುಣ ಕೆಟ್ಟತ್ತು ಚಿಲ್ಲಿಂಗ ಅರ್ಪಣದಿಂ ;
ಭಾವಗುಣ ಕೆಟ್ಟತ್ತು ಸುಖಲಿಂಗ ತೃಪ್ತಿಯಿಂ,
ಜೀವಗುಣ ಕೆಟ್ಟತ್ತು ಪರಿಣಾಮ ಪ್ರಸಾದದಿಂ !
ಗುರುವರನ ಕರುಣಾಕಟಾಕ್ಷವೇಧಿಸಿ ಶಿಷ್ಯ
ಸ್ಥೂಲಾಂಗಮುದಿರದೆ ಕ್ರಿಯಾಲಿಂಗಮಾಯಿತ್ತು,

CC-0. Jangamwadi Math Collection. Digitized by eGangotri

ಗುರುವರನ ಷಡಕ್ಷರ ಮಂತ್ರಜ್ಞಾನ ವೇಧಿಸಿ
ಸೂಕ್ಷ್ಮಾಂಗಮದಿರದೆ ಪ್ರಜ್ಞಾಲಿಂಗವಾಯಿತ್ತು ;
ಗುರುವರನ ಹಸ್ತಮದು ಮಸ್ತಕಕ್ಕೆ ವೇಧಿಸಿ
ಕಾರಣಾಂಗಮದಿರದೆ ಭಾವಲಿಂಗಾಯಿತ್ತು.
ಕ್ರಿಯೆಯರತು ಹೊರಕುರುಹು ನಿಷ್ಪತ್ತಿಗೊಂಡಿತ್ತು. ೪೨೦
ಆರಿವರತು ಒಳಹೊಳಹು ನಿಷ್ಪತ್ತಿಗೊಂಡಿತ್ತು.
ಬಗೆಯರತು ಸೂಕ್ಷ್ಮಸುಳುಹು ನಿಷ್ಪತ್ತಿಗೊಂಡಿತ್ತು.
'ಅಗ್ಗವಣಿಯಂ ತಂದು ಮಜ್ಜನವ ಮರೆದಲ್ಲಿ
ಪತ್ರ ವುಷ್ಪವ ತಂದು ಪೂಜೆಯಂ ಮರೆದಲ್ಲಿ
ಓಗರವ ಕಂಡು ಆಪ್ಯಾಯನವ ಮರೆದಲ್ಲಿ
ಲಿಂಗವಂ ಮುಂಗಂಡು ತನ್ನ ತಾ ಮರೆದೆಲ್ಲಿ
ಮರಣವಿರದ ಮಹಾಘನ ತನ್ನನೊಳಕೊಂಡಿತ್ತು ,
ಅಲ್ಲಯ್ಯ ದಿಟ್ಟಯೊಳು ಲಿಂಗೈಕ್ಯ ಪರಿಯಿದಂ !
ಅಂಗಲಿಂಗ ಸಮರಸಂ ತಾನಾದ ಬಳಿಕಂ
ಪೂಜಿಸುವರಾರ್ ಪೂಜಿಸಿಕೊಂಬುವರಾರ್ ಮೇಣು ೪೩೦
ಸಮರ್ಪಿಸುವರಾರ್ ಸಮರ್ಪಿಸಿಕೊಳ್ಳುವವರಾರ್ ?
ಆಚರಿಸುವರಾರ್ ಆಚಾರಮಂ ಕೊಂಬುವರಾರ್ ?
ವಾಗಾದಿ ಕರ್ಮೇಂದ್ರಿಯಗಳಯ್ದು ನಿವೃತ್ತಿ
ಕಲೆಯಿಂದೆ ಕರ್ತೃಸಾದಾಖ್ಯಮಂ ಕೂಡಿದಡೆ
ಪಾರ್ಥಿವದ ತತ್ತ್ವಮಿದು ಬಟ್ಟ ಬಯಲಪ್ಪುದು.
ಶ್ರೋತ್ರಾದಿ ಜ್ಞಾನೇಂದ್ರಿಯಗಳಯ್ದು ಪ್ರತಿಷ್ಠಾ
ಕಲೆಯಿಂದೆ ಕರ್ತೃಸಾದಾಖ್ಯಮಂ ಕೂಡಿದಡೆ
ಸಾಲೀಲ ತತ್ತ್ವಮಿದು ಬಟ್ಟ ಬಯಲಪ್ಪುದು.
ಶಬ್ದಾದಿ ವಿಷಯಂಗಳಯ್ದು ತಾವ್ ವಿದ್ಯಾಕಲೆ
ಯಿಂದೆ ಮೂರ್ತಿ ಸಾದಾಖ್ಯವನೊಡಗೂಡಿಸಡೆ ೪೪೦
ಆಗ್ನೇಯ ತತ್ತ್ವಮಿದು ಬಟ್ಟ ಬಯಲಪ್ಪುದು.
ಪ್ರಾಣಾದಿ ವಾಯುಗಳಯ್ದು ತಾವ್ ಶಾಂತಿಕಲೆ
ಯಿಂದಕ್ಕಮೂರ್ತಿ ಸಾದಾಖ್ಯವನೊಡಗೂಡಿದಡೆ
ವಾಯವ್ಯ ತತ್ತ್ವಮಿದು ಬಟ್ಟ ಬಯಲಪ್ಪುದು.

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ನೆ

ಶರಣನ್ನೆಯ ಷಡಂಗಲಿಂಗೈಕ್ಯಂ

ಮನಬುದ್ಧಿ ಚಿತ್ತಾಹಂಕಾರ ಜೀವಂಗಳಯ್ದು
ಶಾಂತ್ಯತೀತ ಕಲೆಯಿಂದೆ ಶಿವಸಾದಾಖ್ಯವಕೂಡೆ,
ಆಕಾಶ ತತ್ತ್ವಮಿದು ಬಟ್ಟೆ ಬಯಲಪ್ಪುದು
ಇದರಂತೆ ಶರಣಪ್ಪೆ ಬಟ್ಟೆ ಬಯಲಾಗಿಹಳ್
ನೀರ್ಗಲ್ಲು ನೆರೆ ಕರಗಿ ನೀರಾದ ತೆರಸಂತೆ !
ಭವದ ಕುಳವಂ ಗೆಲಿದ ನಿಷ್ಕಳಳ್ ಶರಣನ್ನೆ
ಶಿವದ ಸ್ಥಳವಂ ಗೆಲಿದ ನಿಃಸ್ಥಲಳ್ ಶರಣನ್ನೆ
ಕರ್ಮ ಕಾಯವ ಕಳೆದ ನಿಷ್ಕರ್ಮಳಮ್ಮವ್ವೆ
ಧರ್ಮ ಕಾಯವ ತಳೆದ ಪರಕಾಯಳಮ್ಮವ್ವೆ
ತಾಯ್ತಂದೆಗಳೊಡಲೊಳು ದಿಸಿದವಳಲ್ಲ ಕೇಳ್
ಗುರು ತಂದೆ ಕರಕಂಜಸಂಜಾತಳಮ್ಮವ್ವೆ !
ಸತ್ಕಲೆಯೆ ಮೆಯ್ವೆತ್ತು ಬಂದಂತಿರ್ದಳವ್ವೆ
ಚಿತ್ಕಳೆಯ ಬೆಳಗು ತಾನಾಗಿರ್ದಳಮ್ಮವ್ವೆ !
ಶರಣ ಜೀವನದಲ್ಲಿ ಧರೆಯ ಹಂಗಿಗಳಲ್ಲ.
ತೆರೆಯ ಸಡಗರದೊಳಗಿಹ ಮೂರುತಿ ತಾನಲ್ಲ ;
ಪಂಕಜ ಪರಿಮಳಕೆರಗುವ ಭ್ರಮರ ತಾನಲ್ಲ,
ಗುರುವಿನಡಿದಾವರೆಗೆಳಸುವ ತುಂಬಿಯವಳು.
ಭೌತಿಕ ಜಲವ ಕುಡಿದು ತಿಸೆಯ ಕಳೆದವಳಲ್ಲ ;
ಗುರು ಚರಣ ಚಂದ್ರಮನ ಪಾದೋದ ಚಂದ್ರಿಕೆಯ–
ನಾಜೀವ ಪಾನಗೈಯ್ದ ಚಕೋರವಾಗಿರ್ದಳು.
ಇಂದ್ರಜಾಪದ ಪರಿಯ ಹೊರಬೆಡಗಿನವಳಲ್ಲ ;
ಚಂದ್ರಧರನರ್ಚ್ಚನದ ಬೆಡಗಿಲ್ಲದಿರಲಿಲ್ಲ.
ಇಹ ಸುಖಕ್ಕೆಳಸಿರ್ದ ಜೀವವವಳದಲ್ಲ ;
ಪರ ಸುಖಕ್ಕೆಳಸದಲೆ ನಸುಮೊಳ್ತಿರುತಿರಲಿಲ್ಲ.
ನುಡಿಗಡಣದಿಂದ ಕಡು ಸಡಗರಿಸಿದವಳಲ್ಲ
ನಡೆಗಡಣದಿಂದ ಕಡು ಸಡಗರಿಸದಿರಲಿಲ್ಲ.
ಗಿಡು ಬಳ್ಳಿಗಳ ಪುಷ್ಪ ಪರಿಮಳಕೆಳಸಿದಳಲ್ಲ
ಮೃಡ ಭಾವ ಪುಷ್ಪ ಪರಿಮಳಕೆಳಸದಿರಲಿಲ್ಲ.
ಎಳೆಯ ಮಾಣಕದಂತೆ ಹೊಳೆವ ಚಿತ್ಕನು ಕಾಂತಿ

CC-0. Jangamwadi Math Collection. Digitized by eGangotri

ಸಜ್ವಲ ಶರಣವ್ವೆ

ಶರಣವ್ವೆಯ ಷಡಂಗಲಿಂಗೈಕ್ಯಂ

ಕಳೆಯುಳ್ಳ ಮೊಗದ ಮೇಲಿತ್ತು ಹೃನ್ಮನ ಶಾಂತಿ !
ಬ್ರಹ್ಮಾಂಡವನುವ ಮೀರಿ ಹೊಮ್ಮುವ ಶಿವವಚನ
ಪಿಂಡಾಂಡವನುವ ತೂರಿ ತೋರುವ ಘನಗಮನ.
ಭೂತಾಗಸವ ಮಿಂಚಿ ಹೊಂಚುತಿಹಾನುಭೂತಿ,
ಪಾತಾಳದಾಳವಂ ಮೀರಿ ತೂರುವ ಶಕುತಿ.
ಮರ್ತ್ಯವೆಲ್ಲ ಮುಹಿಳೆಯರಂತಿರಲಿಲ್ಲ ಪರಭವ
ಮರ್ತ್ಯಮರ್ತ್ಯರೊಳಗೊಂದಾಗಿರ್ಪ ಪರಿಭಾವ. ೪೯೦
ಹರಿವ ಮನವಂ ನುಂಗಿ, ಪರದ ಘನವಂ ನುಂಗಿ ;
ಭ್ರಾಂತಿ ಮಾತನು ನುಂಗಿ, ಶಾಂತಿ ಬೀರುವ ಭಂಗಿ !
ನಿಜವ ತಳೆದಿಹ ರೀತಿ, ನಿಜವ ಬೆಳಗುವ ಜ್ಯೋತಿ ;
ನಿಜದಿ ನಡೆಯುವ ಪ್ರೀತಿ, ಕ್ಷಿತಿಜ ಮೀರಿದ ಖ್ಯಾತಿ.
ತಿರೆಗೆ ನಿದ್ದೆಯದಿಲ್ಲ, ನೀರಿಂಗೆ ಕಸಸಿಲ್ಲ ;
ಬೆಂಕಿಯೊಳಗುರಿಯಿಲ್ಲ, ಗಾಳಿ ಸುಳಿದುದಿಲ್ಲ ;
ಬಯಲೊಳಗುಲಿಯಿಲ್ಲದೊ ಹುಲುಬಣ್ಣ ಮುನ್ನಿಲ್ಲ ;
ನಿತ್ಯ ಸತ್ಯತನದೊಳ್ ನಡೆವ ಶರಣಾಂಗದೊಳ್ !

ನೂರ್ಬರಿಸವಾಗಿರ್ದ ಕತದಿಂದೆ ಕಾಯ-ಬಲ
ತಗ್ಗಿತ್ತು, ಕರಣಬಲ ಕುಗ್ಗಿತ್ತು ತಾಯಿಗೆ ; ೪೯೦
ಜ್ವರದಿಂದ ಬೆಂದಿತ್ತು ತಾನಂಗ ತಾಯಿಯದು
ಕಿಂಚಿತ್ತು ತಾಪಮಿರಲಿಲ್ಲಾತ್ಮದೊಳ್ ಗಡಾ !
ದಿನದಿನಕೆ ಪ್ರಕೃತಿಯು ವಿಷಮಿಸಿದೊಡಂ ತಾಯಿ
ವೈದ್ಯೋಪಚಾರಕ್ಕೆ ಚಿತ್ತಮೆಳಸಲಿಲ್ಲಂ ;
ಕೊನೆಯನ್ನೆಗಂ ಜ್ವರಂ ಕಿಂಚಿತ್ತು ಬಿಡಲಿಲ್ಲ ;
ಮನದಲ್ಲಿ ಮೇಣು ಶಿವಧ್ಯಾನಮಂ ಬಿಡಲಿಲ್ಲ.
ತಾಯಿಗಾಹಾರ ಮಾದತ್ತು ಮಂತ್ರಧ್ಯಾನಂ.
ಕೆಲದಿನಂ ಪಲವಣ್ಣಗಳ ರಸಂ ಪ್ರಸಾದಂ,
ಕೆಲದಿನಂ ಹಸುವಿನಾ ಹಾಲಾಗಿತ್ತೋಗರಂ,
ಕೆಲದಿನಂ ತೆಂಗಿನೆಳೆ ನೀರೋಗರಮಾಯ್ತು ; ೫೦೦
ಕೊನೆಯಲ್ಲಿ ಕೆಲದಿನಂ ನಿರಾಹಾರ ಮದಾಯ್ತು.

CC-0. Jangamwadi Math Collection. Digitized by eGangotri

ಸಜ್ಜಲ ಶರಣಪ್ಪೆ

ಶರಣಪ್ಪೆಯ ಷಡಂಗಲಿಂಗೈಕ್ಯಂ

ಸ್ನಾನಪೂಜಾದಿಗಳ್ ತಪ್ಪದಂತಾಗಿಹವು
ಮಂತ್ರಜಪಮದು ಸಾಗಿದತ್ತು ಬೆರಳುಗಳಲ್ಲಿ ;
ಅರೋಗ್ಯಮಿಲ್ಲಾಯ್ತು ನೂರರೊಳ್ ತಾಯಿಗೆ !
ದಿನದಿಂ ದಿನಕ್ಕೆ ಚಿಂತಾಜನಕಮಾಪತ್ತು.
ಸಾಕಾರದೊಳಿನ್ನುಳಿಯಲಾರರೆನಿಸಿದತ್ತು.
ನೂರರೊಸಗೆಯಂ ಮಾಡಲೆಳಸಿದತ್ತು ಜನತೆ ;
ಆದಡೇಂ ಫಲಿಸದಂತಾಯ್ತು ಮನದಭಿಲಾಷೆ,
ಶರಣಪ್ಪೆ ತಂಗಿಹಳ್ ಕಂಬಳೀಹಾಳದೊಳ್
ಸಜ್ಜಲದ ಗುಡ್ಡಕ್ಕೈ ತಂದಿಹರನಾರೋಗ್ಯದೆ ೫೯೦
ಕಳುಹಲ್ಕೈತಂದ ಕಂಬಳಿಹಾಳ ಜನರೆಲ್ಲ
ಓ ಅಮ್ಮ, ಓ ಅಮ್ಮ ಎಂತೆಂದು ಕೂಗುತ್ತ,
ಕಣ್ಣೀರು ಕರೆಯುತ್ತ, ನೀವಿನ್ನ ನೂಮ್ಮರ್ಗಿ
'ಬರಲಾರಿರಿ ತಾಯೀ ಬರಲಾರಿರಿ ತಾಯೀ'
ನಾವಿನ್ನು ಬೇರಾವ ತಾಯ ಬಳಿ ಹೋಗೋಣ,
ನಾವೇನು ಮಾಡೋಣ; ನಾವೆಂತು ಬಾಳೋಣ?
ನಮ್ಮಗಳ ನಡು ಹೊಲಬಿನಲ್ಲಿ ಬಿಡದಿರು ತಾಯಿ,
ತಬ್ಬಲಿಗಳನಾಗಿಸದಿರು. ತೊರೆದು ತೆರಳದಿರು;
ಎಂತೆಂದು ಹಿರಿಕಿರಿಯರೆಲ್ಲ ಮಿಗೆ ಶೋಕಿಪರ್;
ತನ್ನ ಮಕ್ಕಳಳುವುದನವಲೋಕಿಸಿ ತಾಯಿಯ ೫೯೫
ಕಂಗಳುಂ ಹನಿಗೂಡಿದಪವನು ಕಂಪದಿಂ !
ಕಂಡಿದಂ ಮತ್ತನಿತು ರೋದಿಪರ್ ಜನಂಗಳ್
ಶೋಕಸಂತಪ್ತರವರಾಗಿ ಹರಿಯಿಸಿಹರು
ಕಂಬನಿಯನಿರದೆ ಧಾರಾಕಾರದಿಂ ಧರೆಗೆ !
ಚಕ್ಕಡಿಯ ಬೆಂಬತ್ತಿ ತಲೆಯೊತ್ತಿ ಕೈಯೆತ್ತಿ
'ಓ ತಾಯಿ! ಓ ತಾಯಿ!! ಎಂತೆಂದು ಕೂಗುವರ್
ಕೊರಚುವರ್ ಕಂದುವರ್ ಕುಂದುವರ್ ಕಿರುಚುವರ್
ಆರ್ತಸ್ವರದಿಂ ತಾಯ್ ಹೃದಯಾರ್ದ್ರಗೊಳವಂತೆ !
ಅನಿತರೊಳ್ ಸಜ್ಜಲದ ಗುಡ್ಡಮದು ಸನ್ನಿಹಿತ
ಮಾದತ್ತು, ತಾಯಿಯಂ ಗಾಡಿಯಿಂದಿಳಿತಂದು ೫೬೦

CC-0. Jangamwadi Math Collection. Digitized by eGangotri

ಸಜ್ಜಲಶರಣವ್ವೆ

ಶರಣವ್ವೆಯ ಷಡಂಗಲಿಂಗೈಕ್ಯಂ

ಆಶ್ರಮದೆ ಕೂರಿಸುತ್ತಾಶಿಷಂ ಪಡೆಯುತ್ತ
ಹಿಂದುರಿಗಿ ಹೋಗಿಹರ್ ಕಂಬಳೀಹಾಳಂಗೆ !
ಶಿವಯೋಗ ಮಂದಿರದ ಸದಾಶಿವ ಸ್ವಾಮಿಗಳ್
ಸಜ್ಜಲಾಶ್ರಮಕೆ ದಯಮಾಡಿದರ್, ಜೊತೆಜೊತೆಗೆ
ನಾಗನೂರ್, ಹಾಲಕೆರೆ, ಹುಬ್ಬಳ್ಳಿ ಮೊದಲಾದ
ಸ್ವಾಮಿಜನರಾಗಮಿಸಿ ದರ್ಶನವನಿತ್ತಿಹರ್ !
ಇಳಕಲ್ಲ ಶ್ರೀಮಹಾಂತ ಶ್ರೀಗಳವರ್ಗಳ್
ತಾಯ ಬಳಿಯೆರಡು ದಿನಂಗಳಿರ್ದು ತೆರಳಿಹರ್;
ನಂದವಾಡಗಿಯೂರಿನ ಮಹಾಂತಸ್ವಾಮಿಗಳ್
ಮೂವತ್ತು ದಿನವಿರ್ದು ಶರಣಾಯಿ ಸೇವೆಯಂ ೫೪೦
ಸಲ್ಲಿಸುತ ಮುಗಿಸಿಹರ್ ತಮ್ಮ ಕರ್ತವ್ಯಮಂ !
ಶರಣವ್ವೆ ಹಾನಗಲ್ ಸದಾಶಿವ ಸ್ವಾಮಿಗಳ
ಪಾದ ಪೂಜೆಯಂ ಮಾಡಿ ಕೃತಾರ್ಥರಾಗಿಹರ್ ;
ಶೀಲವಂ ಬಿಡಲಿಲ್ಲ, ಪೂಜೆಯಂ ಬಿಡಲಿಲ್ಲ ;
ಮನದಲ್ಲಿ ಶಿವಮಂತ್ರಧ್ಯಾನಮಂ ಬಿಡಲಿಲ್ಲ.

ಗುಡದೂರಿನಜ್ಜಗಳ ಹಿರಿಯ ಮಗ ಶ್ರೀನೀಲ
ಕಂಠಯ್ಯನಾಶ್ರಮಕ್ಕೆ ಕರೆಯಿಸಿ ಏನೆಲ್ಲ
ವಿಷಯಂಗಳ ವಿವರಿಸಿ ಪೇಳಿಹರ್ ಕರುಣೆಯಿಂ !
ಬುಧವಾರದಿರುಳೆಂಟು ಗಂಟೆಯೊಳ್ ತಾಯಿಯ
ಹದುಳತೆಯು ಹದಗೆಟ್ಟು ಹೋಯಿತ್ತು ಮತ್ತಮಾ– ೫೫೦
ಬಲಗೆಯ್ಯ ಹೆಬ್ಬೆರಳ್ ಜಪಮಾಲೆಯಂ ಪಿಡಿದು
ಷಡಕ್ಷರ ಮಂತ್ರದೆಣಿಕೆಯಲ್ಲಿ ಚಲಿಸುತ್ತಿತ್ತು.
ಸ್ಮೃತಿಮಾತ್ರಮಿರಲಿಲ್ಲ ಕೂಗಿದಡೆ ಕೇಳುತಿರ–
ಲಿಲ್ಲ, ಓ ತಾಯಿ ಎಂದೊಡಮಿಲ್ಲ ಏನೆಂದೊ–
ಡಮಿಲ್ಲ, 'ಬಸವಾ' ಎಂದೊಡವ್ವೆ ಮರಳಿ ಬಸವಯ
ಎನುತಿಹಳ್ ; ಬಸವ ಭಕ್ತಿಯೊಳ್ ನೆಲಸಿರ್ದಳು ;
ಮತ್ತಮಾ ಬಸವನೊಳ್ ಪ್ರಾಣಮನಿರಿಸಿರ್ದಳು.
ಶರಣವ್ವೆ ಶಿವಯೋಗಸಿದ್ಧಿಯಂ ನೆರೆಪೊಂದಿ

CC-0. Jangamwadi Math Collection. Digitized by eGangotri

ಶಿವಭಾವಮದದೆಯೊಳ್ ರಸಗಟ್ಟಿಯಾಗಿತ್ತು ;
ಎಂಬುದಕ್ಕಾದೃಶ್ಯ ನಿದರ್ಶನಮಾಗಿತ್ತು.
ಅಮ್ಮನಿಗೆ ಪ್ರಜ್ಞೆಯಿಲ್ಲದ ಸಮಾಚಾರಮುಂ
ಕೇಳಿದ ಬಲದಿನ್ನಿಯ ಶ್ರೀಮಂತ ನಾಡಗೌ-
ಡರ್, ಜಾಲಹಳ್ಳಿಯ ವೀರಭದ್ರಸೆಟ್ಟರ್
ಬಂದಿಹರ್ ಭಯದಿಂದ ಬಗೆಗೊಂಡು ಧಾವಿಸುತ
ಮತ್ತಮಾ ಇಳಕಲ್ಲ ಸ್ವಾಮಿಗಳ್ ಬಂದಿಹರ್ ;
ಆದರೇಂ ಶರಣಮ್ಮೆ ತನ್ನಾನಂದದಲ್ಲಿ
ತಾನಿರ್ದ ಕೆಂಬುದೇನಚ್ಚರಿಯೊ ಪೇಳಲೇನ್ ?
ಎಲ್ಲರಿದೆಗೆಟ್ಟಿಹರ್, ತೊಟ್ಟಿಹರ್ ತಾಯನುಳಿ
ಸುವ ಫಲವನುಪಚಾರದಿಂ ಮೇಣು ವೈದ್ಯದಿಂ ;
ಗುಡದೂರ ಗುರುಜೇವನಪ್ಪಣೆಯ ಮೇರೆಗಂ
ವೈದ್ಯರಂ ಕರೆತಂದು ವೈದ್ಯೋಪಚಾರದೊಳ್
ತೊಡಗಿಹರ್ ; ತೊಡಗಲೇಂ ಫಲಿತಮೊದಗದಾಯ್ತು.
ವೈಶಾಖ ಮಾಸದೊಳ್ ಶುಕ್ರವಾರದಿರುಳಿನೊಳ್
ಶಿವಯೋಗ ಮುದ್ರೆಯೊಳ್ ಚಿರನಿದ್ರೆಗೆಯ್ದಿಹಳ್
ಶರಣಮ್ಮೆ ಸರ್ವಜನ ಸಂರಕ್ಷಣ ಗೆಯ್ದಮ್ಮೆ ,
ಆಜೀವ ನಾಡನುದ್ಧಾರ ಗೆಯ್ದಮ್ಮವ್ವೆ ;
ಪ್ರಚಾರ ಪ್ರಖ್ಯಾತಿಗಳನಾಶಿಸದ ತಾಯಿ,
ಸಾಹಿತ್ಯರಚನೆಗಂ ಭಾವಚಿತ್ರವ ತೆಗೆಯೆ-
ಲೊಪ್ಪಿಗೆಯನೆಂದಿಗುಂ ತಾನೀಯದಮ್ಮವ್ವೆ ;
ಎನಗಿಂತ ಕಿರಿಯರಿಲ್ಲೆಂಬ ಭಾವ ಭರಿತವ್ವೆ
ನಮಸ್ಕಾರಕೆ ಪ್ರತಿ ನಮಸ್ಕಾರವ ಗೆಯ್ವವ್ವೆ
ನಮಗಿನ್ನಿಲ್ಲವಾಯ್ತೆಂದು ಶೋಕಿಸಿದರೆಲ್ಲರ್ !
ಶರಣಮ್ಮೆ ತನ್ನೊಳಗೆ ತಾನಾಗಿ ಗೆದ್ದಳು ;
ತಾಯಿಯಂ ಕಳಕೊಂಡಿಹ ಕಂದರು ಸೋತರು.
ನೆರೆದೆಲ್ಲ ಜನರ್ ಅಮ್ಮ ಓ ಅಮ್ಮ ಎಂದತ್ತರು.
ಅಗಲಿಕೆಯ ತಾಳಲಾರದೆ ತೊಳಲಿ ಗೋಗರೆದರು.
ತೇಜೋಮಯ ನಿಲವಂ ಕಂಡು ಮಿಗೆ ಮನಗಂಡು
ಉಗ್ಗಡಿಸಿದಪರ್ ಜಯಘೋಷಮುಂ ಹರ್ಷಮುಂ !

CC-0. Jangamwadi Math Collection. Digitized by eGangotri

ಚಿದ್ಗರ್ಭದೊಳ್ ಪಿಂಡ ತಾನಾಗಿ ತೊಳಗಿಹಳ್
ಚಿದ್ಗಗನದೊಳ್ ಪ್ರಭಾಪುಂಜಮಾಗಿ ಬೆಳಗಿಹಳ್
ಆ ಶೂನ್ಯ ಗರ್ಭದೊಳ್ ಪರಮಕಳೆಯಾಗಿಹಳ್
ನಿಶ್ಶೂನ್ಯಲಿಂಗಸಂಗ ಸಮರಸವಾಗಿಹಳ್
ಅದೆ ತನ್ನ ನೆಲೆಯಾಯ್ತು ದಿಟಪುಟಂಗಳೆಂದೆ
ಅದೆ ತನ್ನ ಕಳೆಯಾಯ್ತು ಸ್ವಯಸಂಪುಟಮಾಗಿ !
ಮೂಡಣದ ಮುಂದಿರದೆ ಮೂಡಿತಂದು ಚಿದ್ದೀಪ್ತಿ,
ಪಡುವಣದ ಬೀಡಿನೊಳು ಪವಡಿಸಿತಿಂದು ಚಿಚ್ಛಕ್ತಿ.
ಹೊಂಜೊಡರ್ ಹೊಂಬಣ್ಣದೆ ಬೆಳಗಿತಂ ನಾಡೊಳಗೆ
ಹೊಂದಾವರೆಯನರಳಿಸಿ ನೂರ್ಬರಿಸಮನ್ನೆಗಂ !
ಹೊಂಬೆಳಗಿನ ಹೊಳೆ ಹರಿಯಿತಮರ್ದು ತಾನಾಗಿ
ತುಂಬಿದವು ಮಾನಿಸರ ಹೃತ್ಕೃಪತಟಾಕಗಳು. ೬೮೦

ಜೀವ ಕಣಗಳು ದೇವಗಣಗಳಾದವು ನಾಡೆ
ಭಾವ ಸೌಂದರ್ಯ ಮಿಗೆ ಪೆರ್ಚಿತದೊ ನೆರೆನೋಡೆ !
ಕವಿವಾಣಿ ತಾನಾಗಿ ಹಾಡಿತದು ಹೊರಹೊಮ್ಮಿ
ಭುವಿಜನಂ ಹಾಡಿ ನಲಿನಲಿಯಲೈ ರಸಮ್ಮಿಚಿ !

ಏರಿವಳ್ ಶರಣಗಿರಿಗ್ರೀಶಿಖರಮುಂ ಮು
ತ್ತಮೇರಿದಳ್ಳೈಕ್ಯಾಂಗ ಶ್ರೀಶೈಲ ಶಿಖರಮುಂ
ಸೇರಿದಳ್ ಮಾಲಿಂಗಮಲ್ಲಿಕಾರ್ಜುನಯ್ಯನಂ
ಪರಿಣಮಿಸಿಹಳಾ ಪರಮ ಪರಿಣಾಮ ಪ್ರಸಾದವಂ
ಭವಿತನವ ಬದಿಗಿರಿಸಿ ಬಡತನವ ಹೊಡೆದೋಡಿಸಿ
ಭಾವದಿಂ ಭಕ್ತೆಯೆಂದೆನಿಸಿ ಹೃದಯಸಿರಿವಂ ೬೯೦
ತೆಯಾಗುತೆ ಮಾಹೇಶ ಪ್ರಸಾದಿ ಪ್ರಾಣಲಿಂ–
ಗಿ ಶರಣೆಯೆನಿಸಿ ಬೆಳಗಿದ ತಾಯಿಯ ಬಾಳ್ಗಬ್ಬ ;
ಹಾಡು ಭಕ್ತನೆ ಹಾಡು, ಶರಣೆ ಕಾವ್ಯವ ಹಾಡು,
ಹೃದಯ ವೀಣೆಯ ಭಾವ ಭಾವದಿ ನುಡಿಸಿ ತೀಡು ;
ಚಿನ್ಮಯಾತ್ಮ ಮಾತೆಯ ಚಾರಿತ್ರ್ಯಗಾನವಂ–
ಮಾಡು ಮನಸಿಗೆ ನೀಡು ನಲಿವಂ ನಿಮ್ಮಲಗೊಳಿಸು ;
ಹಾಡು ಯೋಗಿಯೆ ಹಾಡು ವಿಶ್ವಶಕ್ತಿಯ ಕಾವ್ಯವ

CC-0. Jangamwadi Math Collection. Digitized by eGangotri

ಹಾಡಿ ವಿಶ್ವಕೆ ಮಂಗಳ ಬಾಳನು ನೀಂ ಬರಿಸು.
ಜನರ ಭಾವವು ಮಾಗಿ ಬಾಳ ದಿಟವಂಕಾಣಲಿ,
ಕರ್ಮ ಕಳೆಯಲಿ ಧರ್ಮ ಮಾರ್ಗವುಳಿಯಲಿ ಜನರಲಿ. ೬೨೦

ಜಗವನೆಲ್ಲವನೂರು ಮಾಡಿ, ಮೇಣೂರೆಲ್ಲವಂ
ತನ್ನ ಮನೆಯಂ ಮಾಡಿ ಹೃದಯದಿಂ ಹರಸಿರ್ದ
ಸನ್ನುತದ ಸತ್ಯಶಿವ ಶರಣೆಗೇ ಮಂಗಳಂ
ಉನ್ನತದ ಶಿವಭಾವಯೋಗಿಣಿಗೆ ಮಂಗಳಂ
ಮಂಗಳಂ ಮಂಗಳಂ ಚಿತ್ಕಳೆಗೆ ಮಂಗಳಂ
ಮಂಗಳಂ ಶಿವಶರಣ ಜೀವನಕೆ ಮಂಗಳಂ
ತಿಂಗಳಂ ಸೂಡಿರ್ದ ಮಹಂತಂಗೆ ಮಂಗಳಂ
ಮರ್ತ್ಯದೊಳ್ ಬಾಳುತಿಹ ಮನುಜರ್ಗೆ ಮಂಗಳಂ
ಸರ್ವ ಪಶು ಪ್ರಾಣಿ ಸಂಕುಳಕ್ಕಂ ಮಂಗಳಂ
ಸಾಕಾರ ರೂಪದೀ ವಿಶ್ವಕ್ಕೆ ಮಂಗಳಂ ೬೩೦
ಏಕಾತ್ಮ ಭಾವದಿಂ ಬಾಳಲ್ಕೆ ಮಂಗಳಂ !
ಜ. ಚ. ನಿ. ಯೊರೆದಿಹ ತಾಯ ಕಾವ್ಯಕ್ಕೆ ಮಂಗಳಂ
ಜಗದ ಬೆಳಕಿಗೆ ತಂದ ಬಳಗಕ್ಕೆ ಮಂಗಳಂ !!
ಸಕಲ ಸಿರಿ ಸಂಪದಂಗಳಿಂ ಸತ್ಕಲೆಗಳಿಂ
ಚಲುವಾಂತ ಕನ್ನಡದ ನಾಡಿಗೇ ಮಂಗಳಂ !
ಕವಿಕರ್ಮ, ಕವಿ ಕಣವಿ, ಕವಿಯಿಂಚಲರ ಪಡೆದು
ಮೆರೆಯುತ್ತಿಹ ಕನ್ನಡ ಸಿರಿನುಡಿಗೆ ಮಂಗಳಂ !
ಇಪ್ಪತ್ತನೇಯ ಶಕಮಾನದೀ ವಚನಕಾ–
ರರ್ಗೆ ಮೇಣ್ ವಚನಕಾರ್ತಿಯರ್ಗೇ ಮಂಗಳಂ ! ೬೪೦
ಬೆಡಗಿನಿಂ ಸೂಳ್ನುಡಿಗಳಂ ಸೃಜಿಸಿ ಪೆಸರಾಂತ
ಶಿವಾಚಾರಿಣಿಯರ್ಗೆ ಶಿವಾಚಾರದವರ್ಗೆ ಮೇಣ್
ಶಿವಾಚಾರ್ಯ ಸಂಕುಳಕ್ಕಂ ಮಂಗಳಂ
ಶಿವಾಚಾರ್ಯ ಸಂಸ್ಕೃತಿಗೆ ಮಿಗೆ ಮಂಗಳಂ

CC-0. Jangamwadi Math Collection. Digitized by eGangotri

ಈ ಯುಗದ ಶರಣ ಶಕ್ತಿ !

ಭಾರತದ ಪುರಾತನ ಚರಿತ್ರೆಯೊಳು ಸ್ತ್ರೀಯರ
ಸ್ಥಾನಮದು ವಿಶಿಷ್ಟ ತಮಮಾಗಿಹುದರಿಯಲ್ಕೆ
ರುದ್ರಮಾತೆಯರಂಬೆ ಪರೆ ಮತ್ತಮಾದವ್ವೆ,
ರುದ್ರಸತಿ ಕಾಳವ್ವೆ ಮೇಣ್ ವೀರ ಭದ್ರಸತಿ
ಭದ್ರಕಾಳಿ ಭವಾನಿ, ಶಂಭುಸತಿ ಪಾರ್ವತಿ
ಷಟ್‌ಶಕ್ತಿಯರವರುಂ ಮೆರೆದಿಹರ್ ಪೆಸರಾಂತು ;
ಅವರಿಂದೆ ಬದುಕಿಹರ್ ಭಾರತದ ಜನಂಗಳ್,
ಪ್ಪಿಹುದು ಭಾರತೀಯ ಸಂಸ್ಕೃತಿ ಪಲ್ಲವಿಸಿ,
'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ–
ದೇವತಾ: ' ಎಂಬುವೀ ಸದ್ವಾಣಿ ಸಾಕ್ಷಿಯು.
ಗಾರ್ಗಿ ಮೇಣ್ ಮೈತ್ರೇಯಿ ಮೇಣು ಲೋಪಾಮುದ್ರೆ–
ಯರ್ ತತ್ತ್ವಜ್ಞಾನಿಗಳ್ ತಾವಾಗಿ ಬೆಳಗಿಹರ್ !
ಹನ್ನೊಂದು ಹನ್ನೆರಡನೇಯ ಶತಮಾನಗಳೊಳ್
ಕನ್ನಡದ ನಾಡಿನೊಳ್ ದುರ್ಗೆಯು ಸುಗ್ಗೆಯು
ಶಾಂಭವಿಯು ಮಾದೇವಿ ನೀಲಾಂಬೆ ಗಂಗಾಂಬೆ
ಅಕ್ಕನಾಗಾಯಿ ಮೇಣ್ ಲಕ್ಕಮ್ಮ ಮುಕ್ತಾಯಿ
ಲಿಂಗಮ್ಮ ಸಂಗಮ್ಮ ಸತ್ಯಕ್ಕ ಕಾಳಕ್ಕ
ರೆಮ್ಮವ್ವೆ ರೇಚವ್ವೆ ಕಾಳವ್ವೆ ಮಾದವ್ವೆ
ಮೊದಲಾದ ಶರಣೆಯರ್ ತಾವಾಗಿ ಪೋಗಿಹರ್ ;
ಉತ್ಕೃಷ್ಟ ವಚನಗಳ ರಚಿಸಿಹರ್ ನಿಡಿದಾಗಿ
ಬಾಳಿಹರ್ ನಿಡುಗಾಲ ಬೆಳಗಿಹರ್ ಬೆಳಗುವರ್ !

ಇಪ್ಪತ್ತನೇಯ ಶತಮಾನದೊಳ್ ಕನ್ನಡದೊಳ್
ಒಪ್ಪುತಿಹ ನಾಲ್ವತ್ತುವಾಡದಾ ರುದ್ರಾಂಬೆ
ಸಜ್ಜಲದ ಶರಣನ್ವೆ ಪೆಸರಾಂತ ಸತ್ಯಶಿವ
ಶರಣೆಯರ್ ದಯಾಂತಃಕರಣೆಯರ್ ಕರುಣೆಯರ್
ಸಚ್ಚಿನ್ಮಯವಾಗಿಹ ಚಾರುತರ ಚರಣೆಯರ್
ನಿಚ್ಚದೊಳ್ ಗುರುಲಿಂಗ ಜಂಗಮ ಪ್ರಾಣೆಯರ್

CC-0. Jangamwadi Math Collection. Digitized by eGangotri

ಅಚ್ಚಳಿಯದ ಮಹಿಳೆಯರೊಳ್ ನೆರೆ ಧುರೀಣೆಯರ್
ಅಚ್ಚಿಗದ ಭವಪಲ್ಲಿ ಬೀಳದಿಹ ಜಾಣೆಯರ್ !

ಲಿಂಗಮ್ಮ ಹೆತ್ತೊಡಲ ಸಯ್ಪಿನಾ ಸಿಂಪಿನೊಳ್
ಅಣೆ ಮುತ್ತು ತಾನಾಗಿ ಪುಟ್ಟಿದಳ್ ಶರಣವ್ವೆ ,
ನಿಡಿದಾದ ನೆಲೆಯಲ್ಲಿ ಬೆಲೆಯಲ್ಲಿ ಕಲೆಯಲ್ಲಿ–
ಕಳೆಯಲ್ಲಿ ಬಾಳಿದಳ್ ಬದುಕಿದಳ್ ಶರಣವ್ವೆ ;
ಹೆತ್ತಾಯಿ ಲಿಂಗಮ್ಮ ಮತ್ತಮಾ ಹೆತ್ತ ತಂ
ದೆ ಗುರುವಿನ ನೋಂಪಿಯಂ ನಡೆಸಿದಳ್ ನಲ್ಮೆಯೊಳು ;
ಶರಣವ್ವೆ ತನ್ನೊಡಲ ಸವೆಸಿದಳ್ ಗುರುಲಿಂಗ–
ಜಂಗಮರ ಸೇವೆಯೊಳ್ ನಾಡಜನೋದ್ಧಾರದೊಳ್ !
ಆಧಿ ಭೌತಿಕ ಭೋಗ ಭಾಗ್ಯಮಂ ತೊರೆದಿಹಳ್
ಆಧ್ಯಾತ್ಮಿಕ ಸಾಧನ ಶೋಧನಂಗೆಯ್ದಿಹಳ್
ಸರ್ವಭೂತದಯಾಪರಳಾಗಿಯೆ ಬಾಳಿಹಳ್
ನೂರ್ಬರಿಸಮನ್ನೆಗಂ ಬಿಡದಂತೆ ಕೆಡದಂತೆ !
ಶ್ರದ್ಧೆಯಿಂ ಮಾತೆಯ ಕ್ರಿಯಾಂಗಮದು ಬೆಳೆದಿತ್ತು,
ಶ್ರದ್ಧೆಯಿಂ ಮಾತೆಯಾ ಜ್ಞಾನಾಂಗ ಬೆಳೆದಿತ್ತು ;
ನಿಷ್ಠೆಯಿಂ ಮಾತೆಯಾ ಭಾವಾಂಗ ಬೆಳೆದಿತ್ತು,
ನಿಷ್ಠೆಯಿಂ. ಮಾತೆಯಾ ಆತ್ಮಾಂಗ ಬೆಳೆದಿತ್ತು ;
ಭಕ್ತಿಯೊಲ್ ಬೆಳದತ್ತು ಶಕ್ತಿಯುಂ ತಾನಾಗಿ
ಬಿತ್ತರದೆ ಮತ್ತಮಾ ಬಾನೆತ್ತರಕೆ ಬೀಗಿ !
ಬೆಳೆದಿಹಳ್ ಬಗೆದುಂಬಿ ಶಿವಶರಣೆ ತಾನಾಗಿ
ಬೆಳಸಿಹಳ್ ಶಿವಶರಣ ಧರ್ಮಮಂ ಧಾಮಮಂ ;
ಮೇಣು ತಾಂ ಬೆಳಗಿಹಳ್ ಬೆಳ್ಕಂ ಬೆಳಗಿಸಿಹಳ್
ವೀರಮತ ಗಗನಾಂಗಣದೊಳ್ ಜಾಜ್ವಲ್ಯದಿಂ !
ಭಾರತದ ಬೆಳಕಾಗಿ ಬೆಳಗುತಂ ಕನ್ನಡದ
ನಾಡಿಂಗೆ ಕೀರ್ತಿಯು ತಂದಿಹಳ್ ಶರಣವ್ವೆ ;
ಶರಣಾಯಿ ಮಾತೃವಾತ್ಸಲ್ಯಮಜೊ ಅಮೇಯಂ,
ಆರ್ತ ಜನ ಬಂಧುವಾದವಳೆದೊ ನಿರಾಮಯಂ !
ಶರಣವ್ವೆ ಶತಾಯಷ ಜೀವನಂ ಸಾರ್ಥಕಂ

CC-0. Jangamwadi Math Collection. Digitized by eGangotri

ಗುಡದೂರ ಗುರುವರನ ಕರುಣೆಯಂದು ಸಾರ್ಥಕಂ !
ಗುರುದತ್ತ ಸಂಸ್ಕಾರ ಧರ್ಮವಂ ಶ್ರದ್ಧೆಯಿಂ
ಸಾಧಿಸುತ ಸ್ವಾಂಗವಂ ಶೋಧಿಸುತ ನಿಷ್ಠೆಯಿಂ
ದಂಗದೊಳ್ ಕಳಾ ಲಿಂಗವಂ ಪ್ರತಿಷ್ಠಾಪಿಸಿ–

ಕಾಯ ಕರಣೇಂದ್ರಿಯಂಗಳ ಭಾವವಂ ತವಿಸಿ
ಸತ್ಯದಿಂ ಶರಣಸ್ಥಲವನಳವಡಿಸಿಕೊಂಡ
ತಾಯ ಬಾಳ್ವೊಬಗವಂ ಪೇಳ್ವುದೇಂ ಕೇಳ್ವುದೇಂ ?

ಶರಣಸ್ಥಲಮೆಂಬುವ ಮೇರುವಂ ಸಾರಿರ್ದ
ಪೆಣ್ಕೊೀಗಿಲೆಯಂತಿಹ ಶರಣವ್ವೆ ಜೀವನಂ
ಸಂತತಂ ವಸಂತೋದಯದಂತೆ ಮೆರೆದಿತ್ತು ;

ಷಟಸ್ಥಲ ಷಡ್ರುತುಗಳೊಂದಾಗಿ ಅಂದಾಗಿ !
ಮಾಮನದ ಮಾಮರಂ ಚಿಗುರಿಟ್ಟು ನಿಂತಿತ್ತು
ಶರಣವ್ವೆ ಜೀತನಂ ಕೋಗಿಲೆಯದಾಗಿತ್ತು
ಓಂಕಾರನಾದಮದು ನಿರಂತರ ನಡೆದಿತ್ತು

ಅನಾಹತನಾದ ಪ್ರವಾಹಮದು ಹರಿದಿತ್ತು.
ಷಡಕ್ಷರ ದುಂಬಿಗಳ್ ಜೇಂಕಾರಗೊಂಡಿಹವ್
ಶಾಂತಿಗುಣ ಪೂರ್ಣಶಶಿ ಜೊನ್ನವದು ಬೆಳಗಿತ್ತು.
ಜೀವಂತ ಶರಣಸ್ಥಲವನಂ ಸಡಗರಿಸಿತ್ತು.

ಕಾಮಾರಿ ಶಿವಗಣಂ ಶರಣವನಕೈತಂದು
ಪ್ರೇಮದಿಂ ಲಿಂಗಲೀಲೆಯನಾಡುತಿರ್ದರು
ಪರಶಿವಾನುಭವಮಂ ನೆರೆ ನೆಗಳುತಿರ್ದರು
ಶರಣಸ್ಥಲ ಪ್ರಸಾದವ ಸ್ವೀಕರಿಸುತ್ತಿರ್ದರು ;
ಕಾಯಗುಣವಳಿದು ಮಾಯಾಮೋಹಮಂ ಕಳೆದು
ಪರಭಕ್ತಿರಸದ ಪರಿಣಾಮದೊಳಿರುತಿರ್ದರು.

'ಕಳ್ಳಗಂಜಿ ಕಾಡನ್ನು ಹೊಕ್ಕಡಂ ಪುಲಿ ತಿನ್ನ-
ದೆ ಮಾಣ್ಬುದೆ ? ಹುಲಿಗಂಜಿ ಹುತ್ತವಂ ಹೊಕ್ಕೊಡಂ
ಹೆಬ್ಬಾವು ತಿನ್ನದಲೆ ಮಾಣ್ಬುದೇಂ ? ಯಮಗಂಜಿ
ಭಕ್ತನಾದಡೆ ಕರ್ಮ ತಿನ್ನದಲೆ ಮಾಣ್ಬುದೇಂ ?
ಇಂತಿರಲ್ ಮೃತ್ಯುವಿನ ಬಾಯ ತುತ್ತಾಗಿರ್ಪ

CC-0. Jangamwadi Math Collection. Digitized by eGangotri

ವೇಷಡಂಬಕರ ನಾನೇನೆಂಬೆ ಗುಹೇಶ್ವರಾ ?'
ಎಂಬುವೀ ಮಾಯಾವಿಡಂಬನಂಗೆಯ್ದಿರ್ದ
ಅಲ್ಲಮಾಪ್ರಭು ವಚನಮಂ ಗಮನಿಸುತಿರ್ದರು.
'ಹೃದಯಕಮಲದೊಳೊಂದು ಮರುದುಂಬಿ ಹುಟ್ಟಿತ್ತು ;
ಆದು ಹಾರಿ ಹೋಗಿ ಆಕಾಶವಂ ನುಂಗಿತ್ತು. ೯೦

ಆ ತುಂಬಿಯ ಗರಿಗಳ ಗಾಳಿಯಲಿ ಮೂಲೋಕ
ವೆಂಬವಂ ತಲೆಕೆಳಕ್ಕಾದಪವು ; ಪಂಚವ–
ರ್ಣದ ಹಂಸೆಯ ಪಂಜರವಂ ಖಂಡಿಸಿದಡೆ, ಗರಿ
ಮುರಿದು ತುಂಬಿ ನೆಲಕ್ಕುರುಳಿತ್ತು ಕಂಡಯ್ಯ
ನಿಜದುದಯದ ಬೆಡಗಿನ ಕೀಲವದು ಗುಹೇಶ್ವರ,
ನಿಮ್ಮ ಶರಣರ ಅನುಭವ ಸಂಗದೊಳಿರ್ದಿಸಯ್ಯ. '
ಪ್ರಭುದೇವ ಪೇಳ್ದಂತೆ ಸ್ವಯಾನುಭವದ ನಿಲವು
ಸತ್ಯ ಶರಣರ ಸಂಗದಿಂದಲ್ಲದಾಗದು.
ಶರಣವ್ವೆ ಸನಿಹದೊಳಿರುತಿರ್ದ ರನುಭಾವಿಗಳ್
ತತ್ತ್ವಮಯ ಜಿಜ್ಞಾಸುಗಳಾಗಿ ನಿಜವರಿಯಲ್ ! ೧೦೦

ಶರಣವ್ವೆಯಾಶ್ರಮಕ್ಕೆ ಸ್ವಯಾನುಭಾವಿಗಳ್
ಬಂದು ನೆಲಸುತಿರ್ದರ್ ಪ್ರತಿಭೆಯೊಳ್ ಪರಿಣಮಿಸೆ !
ಶ್ರೀಸಜ್ಜಲಾಶ್ರಮದ ಸಡಗರಂ ಕಂಗಳ್ಗೆ ;
ಶ್ರೀಸಜ್ಜನಿಕೆಯ ತಾಯ್ ಸಡಗರಂ ಕರುಳಿಂಗೆ.
ಅಮೃತಮಯ ಸಾಗರದೆ ತೇಲಾಡಿದಂತೆವೊಲ್
ಶ್ರೀಸಜ್ಜಲಾಶ್ರಮದ ವಾಸಮದು ಸುಖಕರಂ ;
ಪರಮ ಚಿಚ್ಛಕ್ತಿ ಸಾಕ್ಷಾತ್ಕಾರ ಮಾದಂತೆ
ಶರಣವ್ವೆ ಸನ್ನಿಧಿಯೊಳಿರುತಿರಲ್ ಮನಸಿಂಗೆ
ತಾತ್ತ್ವಿಕದ ಚಿಂತೆಯದು ತಾನಿರದು ಚಿತ್ತಕ್ಕೆ ೧೧೦
ಪ್ರಾಸಾದಿಕ ಪರಮ ಪರಿಣಾಮಮದೊದಗುಗುಂ !

ಹೆಸರಿಲ್ಲ, ಹುಲುಸೋಂಪು ಮುನ್ನಿಲ್ಲ ತಾಯಿಗೆ
ದೆಸೆ ದೆಸೆಗೆ ಜಸವ ಹಬ್ಬಿಸುವ ಹಂಬಲಿರಲಿಲ್ಲ.
ತನುವಿಂಗೆ ತನುವಾಗಿ ಮನಸಿಂಗೆ ಮನವಾಗಿ
ತಾನಿರ್ದ ಲಿಂಗಮಂ ತಳೆದಿರ್ದಳಮ್ಮವ್ವೆ !

CC-0. Jangamwadi Math Collection. Digitized by eGangotri

ಸಜ್ಜಲ ಶರಣಣ್ಣೆ ಈ ಯುಗದ ಶರಣ ಶಕ್ತಿ

ಬೇಡಿದವಳಲ್ಲ ಮೇಣ್ ಕಾಡಿದವಳಲ್ಲ ತಾಯ್
ಕಾಳೊಡಲ ಹಂಗಿಗಳ್ ಮುನ್ನಲ್ಲ ನೋಡಯ್ಯ
ತ್ರಿವಿಧ ಪ್ರಸಾದಕಲ್ಲದೆ ಬಾಯ್ದೆರೆಯಳವ್ವೆ
ಪಸಿವು ತಿಸೆಗಳಂ ಜಯಿಸಿರ್ದಳಾ ಶರಣವ್ವೆ ;
ಮಾಡಿರ್ದನೋಗರಂ ಮಾಡಿದಂತಿರುತಿತ್ತು ೧೨೦

ನೀಡುತಿಹ ಕೈಯ್ಗೆಡೆಯಾಡುತಿರುತಿರ್ದವ್ವೆ
ತ್ರಿವಿಧದಾಸೋಹಂ ತ್ರಿವಿಧಕಾಲದೊಳ್ ತಪ್ಪ
ದಂತೆವೊಲ್ ನಡೆಯುತಿದ್ದಿತ್ತು ತಾಯ್ ಪ್ರಭಾವದಿಂ !
ಗುರುದೇವ ಹರುಷದಿಂ ಹೊರೆಯೇರಿ ಮೆಯ್ದೊಳೆದನ್
ಶರಣವ್ವೆ ಪರಿಶುಭ್ರ ಭಾವತುಂಗೋದಕದೆ
ಪ್ರತಿಭಾವಿಭೂತಿಯಂ ಧಾರಣಂ ತಾಂಗೆಯ್ದು
ಚಿವಕ್ಷ್ಮಿ ರುದ್ರಾಕ್ಷಿಗಳನಲಂಕರಿಸಿಕೊಂಡು
ಮಂಗಳಮಯ ಲಿಂಗಾರ್ಚನೆಯ ನಿರದೊಡರ್ಚಿ
ಶರಣವ್ವೆಯಾತ್ಮ ಪ್ರಸಾದವಂ ನಿವೇದಿಸಿಹನ್
ಸರ್ವಭೂತಾಂತ ರಂಗ ಜೇತನ ಲಿಂಗಕ್ಕೆ
ವಿರಾಡ್ವಿಶ್ವ ತೃಪ್ತಿಯಗೊಳಿಸಿಹನ್ ಗುರುವರನ್ ೧೩೦

ವಿರಾಡ್ವಿಶ್ವ ವಿಶಾಲ ಶಕ್ತಿ ಶರಣವ್ವೆಯಿಂ !
ಗುರುಶಿಷ್ಯ ಸಂಬಂಧ ಸಮನ್ವಯಮಾಗಿತ್ತು
ಶರಣಧರ್ಮದೆ ನಡೆದ ಸಜ್ಜಲದ ತಾಯಿಯೊಳ್
ತಾಯಿ ಬೆಳಸಿದ ಪುಣ್ಯ ಚರಿತನುದು ಗುರುದೇವ
ನಿಲವಿಂಗೆ ಸಲುವಳಿಗೆ ಯಾದಪುದು ನೈಜದೊಳ್ !
ನಾಡು ಪಾವನವಾಯ್ತು, ನಾಡ ಜನ ಜೀವನಂ
ಪಾವನಂ ತಾನಾಯ್ತು ತಾಯ ಬೆಳು ಬಾಳಿನಿಂ !

ಕಾಯದೊಳಗಿರ್ದು ಕಾಯಮುಂ ಗೆಲಿದಳ್ ತಾಯಿ
ಚಿತ್ತದೊಳಗಿರ್ದು ಚಿತ್ತಮುಂ ಗೆಲಿದಳ್ ತಾಯಿ
ಭಾವದೊಳಗಿರ್ದು ಭಾವಮುಂ ಗೆಲಿದಳ್ ತಾಯಿ ೧೪೦
ಜೀವನದೊಳಿರ್ದು ಜೀವಮುಂ ಗೆಲಿದಳ್ ತಾಯಿ
ಮನೆಯಲ್ಲಿ ತಾನಿರ್ದು ಮಾದೇವಿಯಕ್ಕನೊಲ್
ಶರಣ ಧರ್ಮದೆ ಬೆಳೆದ ಶರಣವ್ವೆಗೇ ಶರಣು

CC-0. Jangamwadi Math Collection. Digitized by eGangotri

ಗುರುವೆ ಮಲ್ಲಿಕಾರ್ಜುನದೇವನೆಂದು ಭಾವಿಸಿ
ಶ್ರೀಸಜ್ಜಲ ಗುಡ್ಡವೆ ಶ್ರೀಶೈಲವೆಂದರಿದು
ಅಜೀವ ಮಾದರದೆ ಶರಣ ಜೀವನದಲ್ಲಿ
ನೆರೆನಡೆದು ಗೆಲವಾಂತ ತಾಯಿಗೆ ನಮೋ ನಮೋ !
ಕಂನಾಡ ಬೆಳವಲದೆ ಬೆಳೆದಿರ್ದ ಕಳೆ ನೀನು,
ಕಲ್ಯಾಣ ಶರಣೆಯರ ಹೋಲುತಿಹ ನಿಲವಿಗಳು;
ಕವಿಮನವ ಸೂರೆಗೊಂಡಿಹ ಕಳಾ ಚರಿತ್ರಳು ೧೫೦

ಕನ್ನಡಿಗರ ಜೀವನವ ರೂಹಿಸಿದ ಶಿಲ್ಪಿಗಳು
ಶುಕ್ಲಪಕ್ಷದ ಚಂದ್ರನಂತೆ ದಿನದಿನಂ ಬೆಳೆದು
ಮೂಢಜನರ ಮನವಂ ಬೆಳಗಿರ್ದ ಚನ್ನಿಗಳು
ಬಡತನದ ಮೈಯಾಂತು ಬಾನಿನಗಲಕು ನಿಂತು
ಬೆಳು ಬಾಳಿನೊಳು ಬಾಳಿ ಬೆಳಗಿರ್ದ ಭಾಸ್ವರಳು;
ಮುಂಜಾವ ರವಿಯಂತೆ ಸಂಜೆಯಾ ಛವಿಯಂತೆ
ಎಳೆ ಬೆಳಗನಿಂ ಬೆಳ್ಳನೇ ಬೆಳಗಿದಾತಳು !
ಜ್ಯೋತಿರ್ಮಯ ಮಂಡಲದೆ ಮಂಡಿಸುತ ಭಾವ್ಯಮಂ
ಕಾವ್ಯಮಂ ಜೇತನಿಪ ಜೈತನ್ಯ ದೀಪ್ತಿನೀಂ !
ಬ್ರಹ್ಮಾಂಡದೆದೆಯಲ್ಲಿ ಭವಹರನ ಧರ್ಮಮಂ ೧೬೦
ಬಿತ್ತಿ ಹುಲುಸಾಗಿ ಬೆಳೆದೆಗೆವ ಮಾಶಕ್ತಿನೀಂ !!
ಪರಿಶುದ್ಧ ನಡೆಸುಡಿಗಳಿಂದೆ ಜನ ಜೀವನವ
ತಿದ್ದುತಂ ತೀಡುತಂ ಮುದ್ದಾಗಿ ಬಾಳಿಹೆ
ನಾಡಿನೊಳ್ ಸಾಂಸ್ಕೃತಿಕ ಕ್ರಾಂತಿಯಂ ಗೆಯ್ದಿಹೆ
ಶಾಂತಿಯಂ ಸಂತುಷ್ಟಿಯಂ ತುಂಬಿ ತಂದಿಹೆ
ನೀಂ ನಾಡ ಶಾಂತಿದೇವತೆಯಾಗಿ ಬಾಳಿಹೆ
ನೀಂ ನಾಡೆ ಕಾಂತಿದೇವತೆಯಾಗಿ ಬದುಕಿಹೆ !
ಜಟಿಲ ಬಾಳನು ಸುಲಭಗೊಳಿಪುದು ನಿನ್ನ
ಸ್ವಭಾವಂ ನಿನಗಪ್ಪುದು ಸತ್ಯಾನುಭಾವಂ !
ತತ್ತ್ವಾನುಭಾವವೇ ನಿನ್ನ ಸಂಪಾದನೆಯು ೧೭೦
ಸತ್ವಶೀಲ ನಡತೆಯೆ ನಿನ್ನ ಪ್ರತಿಪಾದನೆಯು
ಗುರು ಜಂಗಮರ ಸೇವೆ ನಿನ್ನ ಸಂವಿಧಾನವು
ನಿನ್ನಿಂದ ಜನಗಳಲಿ ಸದ್ಭಾವ ಸಂವಹನವು.

CC-0. Jangamwadi Math Collection. Digitized by eGangotri

ಶರಣಾಂಗ ಮೇಣ್ ಪ್ರಸಾದ ಲಿಂಗಂಗಳ್ ಪದ–
ಮೇಣರ್ಥ ರೂಪಂಗಳೆಂಬುದನರಿತಿರ್ದ್ದೆ ;
ಅರಿತಂತೆ ಬಾಳಿನೊಳಳವಡಿಸಿಕೊಂಡಿರ್ದ್ದೆ
ಅವಿರಳಂ ನೀನಾಗಿ ಆನಂದಿತಳಾಗಿರ್ದ್ದೆ !

ಪದಾರ್ಥ ಪ್ರಸಾದೋಪಾಸಕಳ್ ನೀನವ್ವೆ
ಉಪಾಸನೆಯೊಳುದ್ದೀಪನಗೊಂಡೆ ನಮ್ಮವ್ವೆ !
ಶಿವಶರಣ ಧರ್ಮಮಿದು ಜೀವಂತ ಮಾಯ್ತ್ತಿಂದು ೧೯೦
ನಿನ್ನಯ ಪದಾರ್ಥ ಪ್ರಸಾದ ಪರಿಣತೆಯಿಂದೆ !
ಪ್ರಪಂಚ ಕ್ಷೇತ್ರದಿಂ ಪರಮಾರ್ಥ ಕ್ಷೇತ್ರಕ್ಕೆ
ಅಡಿಯಿಟ್ಟು ಮುನ್ನಡದೆ ಕುಗ್ಗದುತ್ಸಾಹದಿಂ !
ಸ್ವಯಾನುಭವಿ ಶರಣಂ ಸಲ್ವೆಸರನಾನುವನ್
ದೃಶ್ಯಾನುಭಾವಿ ಕವಿಯೆಂದೆನಿಸುವಂತೆವೋಲ್ ;
ಕವಿಯಿಂದೆ ಹೊರಹೊಮ್ಮಿ ಬಪ್ಪುದಯ್ ಕಾವ್ಯವು ;
ಶರಣನಿಂ ಹೊರಹೊಮ್ಮಿ ಬಪ್ಪುದದು ದಿವ್ಯವು
ಇಪ್ಪತ್ತನೇಯ ಶತಮಾನದೊಳ್ ನೋಳ್ಪೊಡಂ
ಆತ್ಮಾನುಭಾವಿ ಕವಿಯಿಲ್ಲ–ಶರಣನಿಲ್ಲ ;
ಸಜ್ವಲಗುಡ್ಡ ಶರಣವ್ವೆ ಸ್ವಾತ್ಮಾನುಭಾವಿ ೧೯೦
ನೈಜದೊಳ್ ನಾಡಿನೊಳ್ ವಿಜ್ಞಾನಯುಗದೊಳ್ !
ನುಡಿಗಡಣದಿಂ ಸೊಲ್ವಶಕ್ತಿಯಿಲ್ಲದಿರ್ದೊಡಂ
ಕುಂದು ಕೊರತೆಗಳೇ ನಿರಲಿಲ್ಲ ಪರಿಭಾವದೊಳ್ !
ಅನುಭಾವ ಜನ್ಯಮಾದಾನಂದರಸಸಾಗ–
ರದೊಳ್ ತೇಲಾಡುತಿರ್ದ್ದಳ್ ಸಜ್ಜಲ ಶರಣವ್ವೆ !
ರಸಗಳೊಳ್ ಸ್ವಾನುಭಾವರಸಮೇ ಪರರಸಂ !
ಪರರಸಂ ಬಾಹ್ಯಪ್ರಪಂಚದೊಳ್ ಪ್ರಾಪ್ತಿಸದು ;
ಪ್ರಾಪ್ತಿಸದೆ ಮಾತು ಜ್ಯೋತಿರ್ಲ್ಲಿಂಗ ಮಾಗದು,
ಮಾತು ಜ್ಯೋತಿರ್ಲ್ಲಿಂಗಮಾಗಿತ್ತು ತಾಯಿಯೊಳ್
ಮೇಣು ಮಾಳ್ಪಕೃತಿಯುಂ ತಾನಾಗಿ ತೊಳಗಿತ್ತು. ೨೦೦
ತನುಕಾವ್ಯ ಮನಕಾವ್ಯ ಮೇಣು ಭಾವಂಕಾವ್ಯ
ಮತ್ತಮಾ ಸಜ್ಜ ಶರಣನ್ವೆಯಾತ್ಮಮದು ದಿವ್ಯ !

CC-0. Jangamwadi Math Collection. Digitized by eGangotri

ಸಜ್ಜಲಶರಣನ್ನೆ

ಸತ್ಯ ಶಿವ ಶರಣನ್ನೆ ಜೀವನನುಸಾಮಾನ್ಯ–
ಮದರಿಂದುದಸಿರ್ಪೀ ಕಾವ್ಯಮಿದಸಾಮಾನ್ಯ !
ಅಧಿಕಾಯಮಧಿಕರಣಮಧಿಹರಣಮಧಿಜೇತ–
ನಂಗಳಂ ನಿರೂಪಿಸಿಹ ಕಾವ್ಯಮಸಾಮಾನ್ಯ–
ಮಪ್ಪದೇಂ ತತ್ತ್ವಮಯ ವ್ಯಾಪಾರ ನಿರೂಪಣ–
ದಿಂದಾಗಿ ಮೇಣು ತತ್ತಾ್ವತೀತಮುಂಟಾಗಿ !
ಆತ್ಮಕ್ರಿಯಾನುಭಾವಾಭಿ ವ್ಯಕ್ತಿಯದು ತಾಂ
ಜ್ಯೋತಿರ್ಲಿಂಗನೆನಿಸಿರ್ಪುಕ್ತಿಯಿಂದಪ್ಪುದರ್ ! ೨೧೦
ಶರಣನ್ನೆ ಸುತ್ತಲಿನ ಸಮಾಜದೊಡಂ ಸುತ್ತಿ
ಕೊಂಡಿರ್ದಡಂ ಕ್ರಿಯೆ ಪ್ರತಿಕ್ರಿಯೆಗಳ ಸೋಂಕು
ತನಗೆನಿತಿರಲಿಲ್ಲಂ ನಿರ್ಲಿಪ್ತಳಾಗಿರ್ದಳು !
'ಸಜ್ಜಲದ ಶರಣನ್ನೆ' ಮಹಾಕಾವ್ಯಕ್ಕಿದೆ
ಆತ್ಮರಸಮಾತ್ಮ ಹರ್ಷಮಾತ್ಮಭಾವಾತ್ಮಧ್ವನಿ !
ಪಡೆಯುವರ್ ಶ್ರೀ ಜ. ಚ. ನಿ. ಕಾವ್ಯಮಿದನೋದಿದರ್
ಶರಣೆಯಾತ್ಮರಸಮುಂ ಮೇಣಾತ್ಮ ಹರ್ಷಮುಂ !
ಭಾವಾನುಭಾವ ಕಾವ್ಯಮಿದನಂ ಗಮಕದಿಂ
ವಾಚಿಸಲ್ ಶ್ರವಣಿಸಲ್ ಸಜ್ಜೀವನಮದಕ್ಕು ;
ನಿಸರ್ಗ ಪ್ರವೃತ್ತಿಗೆ ಹೊಸ ತಿರುವು ದೊರಕುಗುಂ ೨೧೦
ಮೇಣ್ ನಿವೃತ್ತಿ ನಿರ್ವೃತಿಗಳ್ ನಿಜದೊಳಳವಡುಗುಂ !

ಶರಣನ್ನೆ ಶತಮಾನೋತ್ಸವಂ !

ಶರಣನ್ನೆ ಲಿಂಗದೊಳಗಾಗಿರ್ದ ತರುಣದೊಳ್
ನೂರ್ಬರಿಸ ಹಬ್ಬಮಂ ಗೆಯ್ದುರುತ್ಸಾಹದಿಂ
ನಾಡಿನ ಹಿರಿಯರೆಲ್ಲ ಹೃದಯದಿಂ ನೆರೆದಿಹರ್
ಗುಣಗಾನ ಮಾಡಿಹರ್ ಗೌರವಂ ತೋರಿಹರ್
ವೀರಶೈವ ಪಂಚಾಚಾರ್ಯರೊಳ್ ಪಿರಿಯರಹ
ಮುತ್ತಮಾ ವೀರಸಿಂಹಾಸನಾಧೀಶ್ವರಂ–
ತಾವಾದ ಜಗದ್ಗುರು ಸುಪ್ರಸನ್ನ ರೇಣುಕ
ಶ್ರೀವೀರ ಗಂಗಾಧರ ನಾಮಾಂಕಿತ ಖ್ಯಾತ

CC-0. Jangamwadi Math Collection. Digitized by eGangotri

ಶಿವಾಚಾರ್ಯ ಮಾಹಾಸ್ವಾಮಿಗಳ ಅಮೃತಮಯ
ಸಂಸಿದ್ಧ ಹಸ್ತದಿಂ ಷಟ್‌ಸ್ಥಲ ಧ್ವಜಾರೋ
ಹಣಂ ಶುಭಸಮಯದೊಳ್ ತಾನಾಯ್ತು ನೆರೆದಿರ್ದ
ಸದ್ಭಕ್ತ ಸಂದೋಹ ಜಯ ವಿಜಯ ಧ್ವನಿಯೊಡನೆ ;
ಬಾನೆತ್ತರಕೆ ಹಾರಿ ರಾಜಿಸಿತು ಬಿತ್ತರದೆ
ಆನ್ನೆಲೆಯ ಗುಡಿಯದಂ ಶರಣವ್ವೆ ನಿಲವಿನೊಲ್ !
ಜರುಗಿತಯ್ ಜಗದ್ಗುರು ಶ್ರೀಮಹಾಸನ್ನಿಧಿಯ
ಶುಭಾಶೀರ್ವಾಣಿಯದವ್ಯಮೃತಶ್ರಾವಿ ತಾನಾಗಿ !
ಶರಣವ್ವೆ ಗದ್ದುಗೆಗೆ ದಯಮಾಡಿ ಹಸ್ತದಿಂ–
ದಕ್ಷತೆಯನುಗ್ರಹಿಸಿ ನಾಗಲೀಲೆಯ ನಡೆಸಿ
ದಯಮಾಡಿಹರ್ ಸರ್ವಜನರನಾಶೀರ್ವದಿಸಿ !
ವ್ಯಕ್ತಿಗಾಗಲಿ, ರಾಷ್ಟ್ರಕಾಗಲಿ, ಜಗಕಾಗಲಿ
ಷಟ್‌ಶಕ್ತಿ ಷಡ್ಭೂತ ಷಡ್ವಿತ್ತ ಬೇಕೆಂಬು
ದರ ನೈಜ ಸಂಕೇತವೆ ಷಟ್‌ಸ್ಥಲಧ್ವಜಾರೋ
ಹಣಂ ಪೂರ್ವಾಚಾರ್ಯರನುಭವ ನಿದರ್ಶನಂ !
ಈ ನಿಯತಿಯನುಸರಿಸಿ ಜನರೊಳ್ಭಾವಮಂ
ಬರಿಸಲ್ಕೆ ಷಟ್‌ಸ್ಥಲ ಧ್ವಜಾರೋಹಣಮಿದರಿಂ
ವ್ಯಕ್ತಿ ರಾಷ್ಟ್ರ ಲೋಕಂಗಳ ಸರ್ವತೋಮುಖ
ಪ್ರಗತಿಪರ ಪ್ರಕರ್ಷಂಗಳಿವಕ್ಕು ತಪ್ಪದಲೆ !

ಆ ದಿನದೊಳಯ್ದು ಗಂಟೆ ಮುಸ್ಸಂಜೆ ಪೊಳ್ತಿನೊಳ್
ಶರಣಾಯಿ ನೂರ್ಬರಿಸಮೋಲಗಂ ನೆರೆದತ್ತು
ಬಗೆಬಗೆಯ ವಾದ್ಯವಾದನಗೀತ ಗಾನಾದಿ
ಮೇಳದಿಂ ಮತ್ತಮಾ ಗೋಷ್ಠಿಯಿಂದೋಲೈಸು
ತ್ತೋಲಾಡುತಿರಯ್ತತ್ತು ಸಾಸಿರ ಜನಂಗಳಂ !
ಆ ಬೃಹತ್ತೋಲಗದ ಹಿರಿತನಂ ಹಾಸಗಲ್ಲ
ಸದಾಶಿವ ಮಹಾಸ್ವಾಮಿಗಳವರದಾಗಿತ್ತು
ಶಿವಯೋಗಮಂದಿರದ ಸಂಚಾಲಕರಾದಿವ
ರ್ಗಂ ಸಲ್ಲುವಂತಿತ್ತು ಸಭೆಯಧ್ಯಕ್ಷತೆಯದು !
ನೂರ್ಬರಿಸ ಹಿರಿಹಬ್ಬದೋಲಗವನುದ್‌ಘಾಟಿಸಲ್

CC-0. Jangamwadi Math Collection. Digitized by eGangotri

ಸಜ್ಜಲ ಶರಣಣ್ಪೆ ಶರಣವ್ಪೆ ಶತಮಾನೋತ್ಸವಂ !

ಈ ಮಹಾ ಕಾವ್ಯಕೃತಿ ಕರ್ತ್ರರಾಗಿರ್ಪ ಮೇ–
ಣು ಶ್ರೀಗಿರಿ ರಾಜಮಣಿ ಖಚಿತ ಕನಕಸೂರ್ಯ
ಸಿಂಹಾಸನಾಧೀಶ ಶ್ರೀಶೈಲ ಜಗದ್ಗುರು ೪೦
ಚನ್ನಬಸವರಾಜ ಶಿವಾಚಾರ್ಯರಾಗಮಿಸಿ
ನೆರವೇರಿಸಿಹರ್, ಶಕ್ತಿಪೀಠವನುಳಿಸಲ್ಕೆ
ಸೂಕ್ತವಹ ಸಲಹೆಯನ್ನಿತ್ತು ಸಭಿಕರಂ
ನಲಿಸುತ್ತ ಶರಣಣ್ಪೆ ಹಿರಿಹಿರಿಯಂ ಪೇಳುತ್ತ
ಸಜ್ಜಲದಗುಡ್ಡ ಸುಕ್ಷೇತ್ರವಾಗಿಹುದೆಂದು
ಸಾರಿದರ್ ಸರ್ವಸಭಿಕ ಸಮೂಹವೊಪ್ಪವೊಲ್ !
ಸಜ್ಜಲದ ಪೆಸರಿನಿಂದ ಕೂಡಲಸಂಗಮಂ
ಮೇಣ್ ಗುಡ್ಡ ಪೆಸರಿನಿಂ ಶ್ರೀಶೈಲವಾಗಿಹುದು
ಇಂತೆಂದು ಪೇಳಿಹರ್ ಭಾವಪೂರ್ಣ ಧ್ವನಿಯಿಂ !

ಅನಂತರಮಿಳಕಲ್ಲ ಮಹಾಂತಸ್ವಾಮಿಗಳ್ ೪೧
ಪೂಜ್ಯ ಮಾತೆಯು ಭಾವಚಿತ್ರಮಂ ತೆರೆಯುತ್ತ
ಶರಣವ್ಪೆಯಂ ಕುರಿತು ಭಾಷಣಂ ಗೆಯ್ದಿಹರ್
ಎಲ್ಲರಂ ತಾಯ್ಬಿಟ್ಟು ಪೋದುದಂ ಬೆಡಗಿನಿಂ
ಹಿತಮಿತದೆ ಶರಣವ್ಪೆ ಚರಮ ಸಂದೇಶಮಂ !
ಆಳಂದ ನಂವವಾಡಗಿಯೂರ ಹಿರಿಯಮಠ
ಶ್ರೀಮಹಾಂತ ಲಿಂಗ ಶಿವಾಚಾರ್ಯರು ಪ್ರಸಾದ
ನಿಲಯ ಕಟ್ಟಿಡಗೆಯ್ಯಲಡಿಗಲ್ಲನಿಟ್ಟಿಹರ್ !
ಕರ್ನಾಟಕ ಪ್ರಾಧ್ಯಾಪಕರಾದ ಸಿಂದಗಿ
ಶ್ರೀಮಲ್ಲಿಕಾರ್ಜುನರ್ ಭಾಷಣಂಗೆಯ್ದಿಹರ್ ! ೫೦
ಶ್ರೀಪುಟ್ಟರಾಜಕವಿ ಗಾಯಕರ್ ಸರಸದಿಂ
ಕೀರ್ತನಂ ಗೆಯ್ದಿಹರ್ ವಾದ್ಯಮೇಳದೊಡನೆ !

ಶನಿವಾರ ಬೆಳಗಿನನೊಂಬತ್ತುವರೆ ಗಂಟೆಯೊಳ್
ಮೊದಲಾದ ಕೃಷಿಗೋಷ್ಠಿಗಧ್ಯಕ್ಷರಾಗಿ ಕೊ–
ಪ್ಪಳದ ಗವಿಮಠದ ಶಿವಶಾಂತವೀರ ಶ್ರೀಗ
ಳಾಗಮಿಸಿಹರ್ ಮೇಣು ಭಾಷಣಕೆ ರಾಯ್ಚೂರ

CC-0. Jangamwadi Math Collection. Digitized by eGangotri

ಸಜ್ವಲ ಶರಣಪ್ಪ ಶರಣನ್ಪೈ ಶತವಾನೋತ್ಸವಂ !

ಹಾದಿಮನಿ, ಜಹಗೀರದಾರ, ಬೆಂಗಳೂರಿನ
ಹಾವಣಗಿ, ವಿಜಾಪುರ ಇಟ್ನಾಳ, ಹುನಗುಂದ
ನಾಗರಾಳ ಶ್ರೀಶಂಕರಣ್ಣ ಮುಂತಾದವರ್
ಬಂದಿಹರ್ ; ಕಾಚಾಪುರ ಸಂಚಾಲಕರಾಗಿ
ಕಾರ್ಯಮುಂ ಗೆಯ್ದಿಹರ್ ಕಡು ಕುಶಲತನದಿಂದೆ ! ೭೨

ಆ ದಿನಂ ಮಧ್ಯಾಹ್ನ ಪನ್ನೆರಡು ಗಂಟೆಯೊಳ್
ಶ್ರೀಪೂಜ್ಯ ಗುಡದೂರ ಅಜ್ಜಗಳ ದಿವ್ಯವಯ
ಸನ್ನಿಧಾನದೊಳುಚಿತ ವಿವಾಹಗಳಾಗಿಹವು,–
ಬಡತನದ ಬಾಳುಗಳನುದ್ಧಾರಗೆಯ್ಯಲ್ಕೆ !

ಆದೆ ಶನಿವಾರ ಮುಸ್ಸಂಜೆಯೊಳ್ನಡೆದಿರ್ದ
ಮಹಿಳೆಯರ ಗೋಷ್ಠಿಗಂ ಗದಗಿನಾ ನಿರಂಜನ
ಜಗದ್ಗುರು ತೋಂಟದಾ ಸಿದ್ಧಲಿಂಗ ಮಹಾ
ಸ್ವಾಮಿಗಳ್ ದಯಮಾಡಿಸಿರ್ದರಧ್ಯಕ್ಷರಾಗಿ !
ಉಪನ್ಯಾಸಕರಾಗಿ ಧಾರವಾಡ ನಗರದಿಂ
ಶ್ರೀ ಸರೋಜಿನಿ ಶಿಂತ್ರಿ, ಲಲಿತಾಂಬ ವೃಷಭೇಂದ್ರ ೮೦
ಸ್ವಾವಿ, ಮೇಣು ಶಾಂತಾ ಇವ್ರಾಪುರ ಮುಂತಾ
ದವರಂದು ಬಂದಿರ್ದರ್ನಪೂರ್ಣ ಭಾವಿ–
ಕಟ್ಟೆ ಎಂಬವರ್ ಸಂಚಾಲಕರ್ ಆಗಿಹರ್ !

ರವಿವಾರ ಬೆಳಗಿನೊಂಬತ್ತುವರೆ ಗಂಟೆಯೊಳ್
ಏರ್ಪಟ್ಟ ಶಿವಾನುಭವಗೋಷ್ಠಿಗೆ ಹಿರಿಯರಾಗಿ
ಹಾಲಕೆರೆ ಪ್ರಭುರಾಜ ಸ್ವಾಮಿಗಳ್ ಬಂದಿಹರ್
ಮೇಣ್ ಭಾಷಣಕ್ಕಾಗಿ ಇಲಕಲ್ಲ ಮಹಾಂತ
ಸ್ವಾಮಿಗಳ್, ಹುಬ್ಬಳ್ಳಿ ಹೊಸಮಠದ ಚಂದ್ರಶೇ
ಖರದೇವರಾನಂದ ನಂದವಾಡಗಿಯೂರ
ಮಾಹಾಂತ ಲಿಂಗಶಿವಾಚಾರ್ಯರಾಗಮಿಸಿಹರ್ ೯೦
ಮೇಣು ಮಾಮನಿಯವರ್ ಸಂಚಾಲಕರಾಗಿಹರ್
ನೆರೆದಿರ್ದ ಶರಣರಂ ತಣಿಸಿಹರನುಭವದಿಂ !

CC-0. Jangamwadi Math Collection. Digitized by eGangotri

ಸಜ್ಜಲ ಶರಣನ್ನೆ ಶರಣನ್ನೆ ಶತಮಾನೋತ್ಸವಂ !

ಆದೆದಿನಂ ರವಿವಾರ ಮುಚ್ಚಂಜೆ ಪೊಳ್ತಿನೊಳ್
ನೂರ್ಬರಿಸ ಹಬ್ಬದ ಸಮಾರೋಪ ಸಮಾಬೇ
ಶಾಧ್ಯಕ್ಷರಾಗಿ ಶ್ರೀ ಹುಬ್ಬಳ್ಳಿ ಮೂರಸಾ–
ವಿರಮಠದ ನಿರಂಜನ ಜಗದ್ಗುರು ಗಂಗಾಧರ
ರಾಜಯೋಗೀಂದ್ರ ಸಾಮಿಗಳ್ ದಯಮಾಡಿಹರ್ ;
ಧಾರವಾಡ ವೃಷಭೇಂದ್ರ ಸ್ವಾಮಿಯವರ್ 'ಸ–
ಜ್ಜಲಶ್ರೀ' ಸಂಚಿಕೆಯ ಬಿಡುಗಡೆಯ
ಮಾಡಿಹರ್ ಮೇಣು ಸತ್ಯಂಪೇಟೆ ಲಿಂಗಣ್ಣ ೧೦೦
ಸಂಸ್ಮರಣ ಸಂಪುಟವ ಬಗೆಗೆ ಮಾತನಾಡಿಹರ್
ಮೇಣ್ ಭಾಷಣಕ್ಕಾಗಿ ಕಲಬುರ್ಗಿ ವಿಶ್ವವಿ–
ದ್ಯಾಲಯದ ಶ್ರೀ ಹೆಂಡಿ, ಧಾರವಾಡದ ಸೋಮ–
ಶೇಖರ ರಿಮ್ಮಾಪುರರ್ ಬಂದು ಭಾಗವಹಿಸಿಹರ್ ;

ಸಮಾಜದ ಸೇವೆಯೊಳ್ ತಮ್ಮಾಜಿ ಮಿರಜಕರ್,
ಚಿತ್ರಕಲೆಯೊಳ್ ಶಂಕರಗೌಡರ್ ಪೆಟಿಮೂರ
ಇವರಿರ್ವರುಗಳ್ ಸನ್ಮಾನಮುಂ ಪೊಂದಿಹರ್ ;
ಶ್ರೀ ಬಿ. ಎಂ. ಹಿರಿಯಮಠ ಸಂಚಾಲಕರಾಗಿಹರ್ !

ಶತಮಾನ ಪರ್ವದೊಳ್ ಪದಿನಯ್ದು ದಿನಂಗಳ್
ಕೀರ್ತನಕಲಾಕುಶಲ ಚಂದ್ರಶೇಖರ ಶಾಸ್ತ್ರಿ ೧೧೦
ಮೇಣಜಾರಿಲಕಮಾಪೂರ ಸಂಗಡಿಗರಿಂ
ಕೀರ್ತನಂ ನಡೆಯಿತ್ತೈ ಸಂತತಂ ಸಂಭ್ರಮದೆ !
ಸಂಪೂಜ್ಯ ಶರಣಾಯಿ ಶತಮಾನ ಪರ್ವಕ್ಕೆ
ಗುಡದೂರಿನಜ್ಜನವರಧ್ಯಕ್ಷರಾಗಿಹರ್,
ಬಲದಿನ್ನಿ ನಾಡಗೌಡರ್, ಜಾಲಹಳ್ಳಿಯ
ಸೆಟ್ಟಿ ವೀರಭದ್ರಪ್ಪ ಕಾರ್ಯಾಧ್ಯಕ್ಷರಾಗಿ
ಸದ್ಭಕ್ತರೊಡಗೂಡಿ ಕಾರ್ಯಮಂ ಮಾಡಿಹರ್
ಸಾತಿಶಯ ಸಂಭ್ರಮದೆ ಮೇಣು ಶ್ರದ್ಧೋತ್ಸಾಹದೆ !
ಇಪ್ಪತ್ತನೇಯ ಶತಮಾನದೊಳ್ ನೋಡಲ್ಕೆ ೧೧೦
ನೂರ್ಬರಿಸ ಹಬ್ಬಮುಂ ನಿರತಿಶಯರೀತಿಯೊಳ್-
ನೆರವೇರಿಸಿಕೊಂಡಿಹ ಹೆಚ್ಚಳಿಕೆ ಸ್ತ್ರೀಯರೊಳ್

CC-0. Jangamwadi Math Collection. Digitized by eGangotri

ಸಜ್ಜಲ ಶರಣವ್ವೆ ಶರಣವ್ವೆ ಶತಮಾನೋತ್ಸವಂ !

ಸಜ್ಜಲದ ಗುಡ್ಡದಾ ಸತ್ಯ ಶರಣವ್ವೆಯದು !
ಈ ಯುಗದ ಶಿವಶರಣಜನ ಸಂಪ್ರದಾಯದೊಳ್
ಅಪ್ರತಿಮವಾಗಿಹ ಶರಣಶಕ್ತಿ ಶರಣವ್ವೆ !

ಓ ಶರಣೆ, ಓ ಶರಣೆ, ನೀನೆಮ್ಮ ಬಾಳ್‌ಶಕ್ತಿ ;
ಓ ಶರಣೆ, ಓ ಶರಣೆ, ನೀನೆಮ್ಮ ಬಾಳ್ ದೀಪ್ತಿ !
ಮರಳಿ ಬಾರೌ ತಿರಿಗೆ ಶಕ್ತಿಯಂ ಕರುಣಿಸೌ
ಬರಡು ಬಾಳನು ಚಿಗುರಿಸೌ ಹರಸಿ ಪೋಷಿಸೌ
ಕುರುಡ ಬಾಳನು ಬೆಳಗಿಸೌ ಹೊಲಬು ದೋರಿಸೌ !
ಏಕೆ ಯೋಚಿಸೆ ತಾಯೆ, ಏಕೆ ಒಲಿಯದಿಹೆ ತಾಯೆ ?
ಯೋಚಿಸದಿರೌ ನೀನೊಲಿಯೆ ಕೊರಡು ಕೊನರದೇಂ ?
ಲೋಕ ಜೀವರಿಗಾತ್ಮ ಶಕ್ತಿಯ ನೀಂ ಬರಿಸೌ
ನಾಕಲೋಕದ ಚಿಂತೆ ಬಾರದೌ ಹರಸೆ ನೀಂ !
ನಾಡು ಬಾಳ್ವುದು ನುಡಿಯು ಬಾಳ್ವುದು ಬಗೆದುಂಬುತ,
ನಾಡ ಜನಗಳು ಬಾಳ್ವರಂತಃಕರುಣ ವಿರಲ್ !

ನಾಡ ನುಡಿಯೊಳು ಹಾಡು ಓ ಮನವೆ ದಿನದಿನಂ
ನಾಡಕಲೆಗಳ ಬೆಳಸುವಂತೆ ದುಡಿಯಲ್ಲಿ ಜನಂ
ನಾಡಧರ್ಮವು ಬೆಳೆಯುವಂತೆಸಗಲೀ ಕಾವ್ಯವು
ನಾಡ ದೀಪ್ತಿಯು ಬೆಳೆದು ಬಂಡಡದುವೆ ದಿವ್ಯವು
ನಾಡಜನಗಳ್ ನಲಿಯುತಿರಲಿ ನಿಲವಂ ಗಳಿಸಿ,
ನಾಡ ನುಡಿಯಿದು ಮೆರೆಯುತಿರಲಿ ಜಲುವಂ ಬೆಳೆಸಿ !
ನಾಡ ಸಂಸ್ಕೃತಿ ಬೆಳಗುತಿರಲಿ ಭಾರತ ಭೂಮಿ–
ಯೊಳ್ ಮೇಣು ವಿಶ್ವದಾಗಸಾಂಗಳದಲ್ಲಿ ಮಿಗೆ !
ನಾಡು ಬೆಳೆದು ಬೆಳಗಲ್ ರಾಷ್ಟ್ರ ಬೆಳೆದು ಬೆಳಗುಗುಂ !
ನಾಡ ಜನಗಳೊಡಲಿಗೆ ಹಾಲ್ಜೇನುಗಳನಿತ್ತು
ಪೊರೆದ ತಾಯಿಗೆ ಶರಣು, ಪೊರೆದ ಶರಣೆಗೆ ಶರಣು ;
ತಾಯಿಯಂ ನೆರಿಪೊರೆದ ಗುರುಚರಣಕಂ ಶರಣು !

CC-0. Jangamwadi Math Collection. Digitized by eGangotri

ಮಾತೆಯ ನುಡಿಮುತ್ತುಗಳ್

'ಸ್ಥಲಭೊಗ ಶಿಲಾಭೋಗ ಮತ್ತಂ ನರಭೋಗಂ–
ಗಳೇ ಮೂರರ ಸಂಗಮವೆ ಪುಣ್ಯಕ್ಷೇತ್ರಮದು'

'ಮಳೆಯನಪ್ಪದ ಬಿಸಿಲು, ದೂಳಿಯಪ್ಪದ ಗಾಳಿ,
ಇಪ್ಪಂತಿಹಂ ಸಚ್ಚಿದಾನಂದ ಸ್ವರೂಪಂ !'

ಗುರುಲಿಂಗ ಜಂಗಮಕೆ ದಾನಧ್ಯಾನ ಧರ್ಮ ಪ–
ರೋಪಕಾರಂಗಳಂ ಮಾಳ್ಪುದಂ ನಿಜಭಕ್ತಿ !

ಸೀತೆಯಂ ಹುಡಕುತ್ತ ಹನುಮಂತನಾಮರಂ–
ಈ ಮರಂ ಎನ್ನುತ್ತ ಗಳಹುತ್ತ ಮರದಿಂದೆ
ಮರಕ್ಕಂ ಹರಿದಾಡೆ ಆ ಮರದ–ಈ ಮರದ
ಸ್ವರಮದುವೆ 'ರಾಮ-ರಾಮ' ಎಂದಾಯಿತಂಗಡಾ !

'ಗುರುವೆ ಶೃತಿ ಶೃತಿಯೆ ಗುರು' ಎಂಬುದಿದು ತಿಳಿಯಲ್ಕೆ
ಸತ್ಯವ ಶರಣವ್ವೆಯವರ ಸ್ವಯಾನುಭೂತಿ !

ಕಾಮ್ಯತಪಂಗೆಯ್ಯುವರ್ ರಾಜರಾಗಿ ಪುಟ್ಟುವರ್
ನಿಷ್ಕಾಮ್ಯ ತಪಸಿಗಳ್ ಯೋಗಿಗಳಾಗಿ ಪುಟ್ಟುವರ್ !

ಬಲಗಣ್ಣು ಭಾಸ್ಕರಂ, ಎಡಗಣ್ಣು ಚಂದಿರಂ ;
ಮನುಜಂಗೆ ಶಿವನಿತ್ತ ದೀಪ್ತಿಗಳ್ ತಾವಿವಂ ;

ಕಂಡಲ್ಲಿ ಮಲಮಿರದು ನಿರ್ಮಲಂಗಳಾಗಿರೆ
ಮತ್ತಮೀ ಮನಂ ನಿರ್ಮಲಂ ತಾನಾಗಿರೆ !

ತಂತಿಗಳ್ ಬೇರ್ಬೇರೆ, ನಾದವೊಂದೆ ಕೇಳಲ್ ;
ಕಾಯಗಳ್ ಬೇರೆಬೇರ್ಬೇರೆ, ಒಳಗಣಾತ್ಮಮದೊಂದೆ !

ಆತ್ಮಪ್ರಕಾಶಮೇ ನಿಜಮಾದ ಪ್ರಕಾಶಂ ;
ಎಲ್ಲರಾತ್ಮಕೆ ಪ್ರಕಾಶವಿಲ್ಲ ತಮಸ್ಸಿನಿಂ !

CC-0. Jangamwadi Math Collection. Digitized by eGangotri

ಎಂದಿಗುಂ ನಿರ್ಲಿಪ್ತಂ ನಿರವಯವಿ ಪರೇಶಂ,
ಸ್ವಾನುಭವದೊಳಿರ್ಪುದು ಪರಮೇಶ ಪ್ರಕಾಶಂ !

ಸಂಶಯಮಿದುವೆ ಬಂಧು, ನಿಸ್ಸಂಶಯವೆ ಮುಕ್ತಿ !

ಒಂದರಂತೊಂದಿಲ್ಲ ಸೃಷ್ಟಿ ಸೌಂದರ್ಯದೊಳ್
ಮರದಂತೆ ಮರವಿಲ್ಲ, ನರನಂತೆ ನರನಿಲ್ಲ.

ಮಾನವನ ಜೀವನಂ ನೋಡಲೆಮಗೆ ದೊಡ್ಡದು ;
ಸೃಷ್ಟಿಸಿಹನೇನೆಲ್ಲವಂ, ಸೃಷ್ಟಿಸಿದುದೆಲ್ಲಂ–
ಕೇವಲಂ ಹೊಟ್ಟೆಯಾ ಉಪಜೀವನಕೆ ಮಾತ್ರಂ !

ಮಹಾದೇವಿಯಕ್ಕಂ ನಿರುಪಾಧಿಯಾಗಿಹಳ್
ನಿರುಪಾಧಿಯೊಳ್ಕ ಹಸಿವು ತಿಸೆಗಳಡಗುವವು ; ಹುಟ್ಟು–
ಸಾವುಗಳಡಂಗಿ ಬಯಲೊಳ್ ಪ್ರಾಣವಡಗುಗುಂ ;
ಆ ಬಯಲೆ ಭಾವಿಪೊಡೆ 'ನಿರುಪಾಧಿ' ಯೆನಿಪುಗುಂ !

ದೇಹಮಿದು ಪಿಂಡಾಂಡ ದೊಳಹೊರಗು ತಾನಿಹುದು ;
ಪಿಂಡಾಂಡ ಬ್ರಹ್ಮಾಂಡಗಳೆರಡುಂ ನಡೆಸುವವು
ಸಮರಸದ ಜೀವನವ ಮನ್ಯೋನ್ಯ ಭಾವದಿಂ !

ಲಿಂಗದೊಳಗೆ ತಾನೇ ತಾನಾಗಿ ಬೆರೆದಿರ್ಪ
ಭಕ್ತಂಗೆ ಶರಣಂಗೆ ಭೇದಮಿದಮೆತ್ತಣದೊ ?
ನೇಸರಂ ತಾನೊಬ್ಬ ; ನೇಸರನ ಬೆಳಕೊಂದು !

ದುರ್ಲಭಂ ಜನ್ಮಮಿದು ಮಾನುಷಂ ಲೋಕದೊಳ್
ಪಡೆದಿಹೆವ್ ಶತಕೋಟ ವರ್ಷಗಳ ಪುಣ್ಯದಿಂ !

ಈರ್ ಹತ್ತು ಮೇಲೊಂದು ಲಕ್ಷ ವರ್ಷಂಗಳ
ಈದೆರಳವಧಿಗಳೊಳು ಜೀವಮಿದನೇಕರೂ-
ಪಂಗಳಂ ತಾಳುಗುಂ ; ಮೇಣಂಡಜಪಿಂಡಜಂ–
ಗಳಲ್ಲದೆ ಉಳಿದೆರಡವಧಿಗಳೊಳ್ ಜೀವಕ್ರಿಮಿ
ಕೀಟಕಂ ಪಶು ಪಕ್ಷಿಯಿತ್ಯಾದಿ ರೂಪಗಳ–

CC-0. Jangamwadi Math Collection. Digitized by eGangotri

ತಾಳಗುಂ ; ಅನಿತು ರೂಪಂಗಳೊಳ್ ಜೀವನೆಸ-
ಗಿಹ ಪುಣ್ಯ ಫಲದಿಂ ನರರೂಪಂ ಲಭಿಸುಗುಂ ;
ಕಾರಣಂ ಸಾರ್ಥಕಂ ಪಡಿಸುಗುಂ ನರಜನ್ಮಮಂ !

ಕಾರ್ಯಮಂ ನಿಸ್ವಾರ್ಥಭಾವದಿಂ ಗೆಯ್ವುದಂ ;
ಗೆಯ್ದ ಕಜ್ಜಮಿದು ನಮ್ಮದು, ಪ್ರತಿಫಲಂ ಪರ-
ಮಾತ್ಮನದು ; ಎಂದರಿತು ಗೆಯ್ದಡಂ ಮನುಷ್ಯ
ಮಟ್ಟಿದಿಂ ಮೇಲೇರಿ ಮಾಹಾತ್ಮನಾಗುವನ್ !

ಮನುಷ್ಯರೊಳಿರ್ಪರೈ ಮೂಡೆದಂ ; ನಿಸ್ವಾರ್ಥ
ಭಾವದಿಂ ಕಾರ್ಯಮಂ ಗೆಯ್ಯುವರ್ ಮೊದಲಿಗರ್,
ಪರರಿಂಗೆ ನೋವಂಗುಡದೆ ಸೊಗದೊಳಿರಿಸಿ ತಮ್ಮ
ಸೌಖ್ಯಮಂ ಬಯಸುವರ್ ದ್ವಿತೀಯರ್ ; ಪರರಕ-

ಷ್ಟಂಗಳಂ ಲೆಕ್ಕಿಸದೆ ತಮ್ಮ ಸೌಖ್ಯಮಂ ಬಯಸು
ವರ್ ತೃತೀಯರ್-ಇವರಧ ಮರೆನಿಸುವರ್ ಗಡಾ !

ನಾವ್ ಮಾಳ್ಪ ಕೆಲಸಂಗಳೆಲ್ಲವುಂ ಮೇಣುಂಬ
ಕವಳಂಗಳೆಲ್ಲವುಂ ಪರಮಾತ್ಮನ ಕೃಪೆಯಿಂ
ಲಭಿಸಿರ್ಪವೆಂದರಿಗುಂ, ನರಜನ್ಮ ಸಾರ್ಥಕತೆ
ದಾನ-ಧರ್ಮಂಗಳೊಳಿಹುದಂ ; ಪ್ರತಿದಿನಂ ಲಿಂಗ
ಪೂಜೆಯಂ ಗೆಯ್ವುದಂ, ಬಾಹ್ಯಪೂಜೆಯಂ ಗೆಯ್
ದಿರ್ದೊಡಂ ಮಾನಸಿಕ ಪೂಜೆಯಂ ಗೆಯ್ವುದಂ !
ಪರನಿಂದೆಯಂ ಗೆಯ್ಯದಿರ್ಕುಂ ಪರರ್ ಹಾಸ್ಯ-
ಮುಂ ಮಾಳ್ಪರೆಂದಂಜಿ ಲಿಂಗಪೂಜೆಯಂ ಮೇಣು
ಭಸ್ಮಧಾರಣಗೆಯ್ವುದಂ ಬಿಡದಂತಿರ್ಕುಮಾ !

ಪರಮಾತ್ಮನಿಂ ಸೂರ್ಯ ಚಂದ್ರಮರ್ ಜನಿಸಿಹರ್
ಮೇಣು ಬೀಸುವ ಗಾಳಿಯುಮಾತನ ಕರುಣೆಯಿಂ
ಜನಿಸಿಹುದದಿಲ್ಲದಲೆ ಬದುಕೆವರೆ ಗಳಿಗೆಯುಂ
ಪರಮಾತ್ಮದಯೆ ಸದಾ ನಮ್ಮ ಮೇಲಿರಬೇಕು.

CC-0. Jangamwadi Math Collection. Digitized by eGangotri

ಆಕಾಶ ಸೂರ್ಯ ಚಂದಿರ ನಕ್ಷತ್ರಂಗಳಂ
ಭೂಮಿಗೇ ಬೀಳದಂತಿರಿಸಿಹನ್ ಪರಶಿವನ್
ಮತ್ತಮುವುಗಳ್ಗಾತನೇ ಬೆಳಗನಿತ್ತಿಹನ್ ;
ರವಿಗಿತ್ತ ಕಿರಣಂಗಳೆ ಲೋಕದ ವ್ಯವಹಾರ
ಗಳಿಗೆಲ್ಲ ಮೂಲ ಚೈತನ್ಯಮಾದಪುದು ; ರವಿಯ
ತೇಜಮುಂ ಚಂದ್ರಂ ಪ್ರತಿಬಿಂಬಿಸುವೊಲ್ ಶಿವಂ
ವ್ಯವಸ್ಥೆಯನೆಸಗಿಹನ್ ; ಸೂರ್ಯಚಂದ್ರುದಿಲ್ಲದ
ಪೊಳ್ತಿನೊಳ್ ನಕ್ಷತ್ರಗಳ ನಸುಬೆಳಕು ಭೂಮಿಗೆ
ಬರುವಂತೆ ಮಾಡಿಹನ್ ; ಕತದಿಂದೆ ಪರಮನಂ
ಭಕ್ತಿಯಿಂದಾರಾಧಿಸವೇಳ್ಕುಂ ಮಾನವರ್ !

ಪರಮಾತ್ಮನನಂತವಹ ಲೋಕಂಗಳೊಳಿರ್ಪ
ಜೀವರಾಶಿಗಳ ಜೀವನಾಧಾರಕ್ಕಾಗಿ
ಆಯಾಯ ಲೋಕಂಗಳಲ್ಲಿ ಭೂಶಕ್ತಿಯಂ
ಮತ್ತಮಾಕಾಶ ಪ್ರಕಾಶಮಂ ಕರುಣಿಸು–
ತ್ತವುಗಳೊಳ್ ವಿಭುವಾಗಿ ವಾಸಮಂ ಗೆಯ್ದಿಹನ್
ಮುತ್ತಮಾವುಗಳಾ ಕ್ರಿಯೆಗೆ ಕಾರಣನಾಗಿಹನ್ !

ನಮ್ಮ ದೇಹದೊಳಿರುವನು ದೇವಂ ; ದೇಹದ
ಬಗೆಬಗೆಯ ಚಟುವಟಿಕೆಗಳ್ಗವನೆ ಕಾರಣಂ ;
ನಮ್ಮೊಳಿಹ ಪರಮನಂ ಗುರುದೇವನಿಷ್ಟಲಿಂ–
ಗದರೂಪದೊಳಂಗೈಯೊಳ್ ಕರುಣಿಸಿಹನ್ ಗಡಾ !

ಲಿಂಗಮಿದು ಶಕ್ತಿಪ್ರಕಾಶಂಗಳಾಗರಂ
ಲಿಂಗಯ್ಯ ಸೇವೆಯಿಂದಾತನ ಕೃಪೆಗೆ ಪಾತ್ರ
ರಾಗುವೆವ್ ಮೇಣಾತನೊಂದಂಶರೆನಿಸುವೆವ್ !

ಕಲ್ಯಾಣ ಬಸವಣ್ಣ ಸದಾಚಾರಿ ಸದ್ಧೈ
ರ್ಯಶಾಲೀ ನ್ಯಾಯನಿಸ್ಠುರಂ ನೀತಿಪರಂ
ಜೀವನದೆ ಬರ್ಪ ಕಷ್ಟ ನಷ್ಟಂಗಳ್ಗಂಜ–
ಲಿಲ್ಲ, ಕೂಡಲಸಂಗನ ಶರಣರ ಕರುಣೆಯಿಂ–
ದವುಗಳಂ ಪರಿಹರಿಸುತಿರ್ದಂಸಹಜದಿಂ !

CC-0. Jangamwadi Math Collection. Digitized by eGangotri

ನಾವೆಲ್ಲ ಶಿವನೆಂಬ ಬಳ್ಳಿಗೇ ಹೂ–ಹೀಚು–
ಕಾಯ್–ಹಣ್ಣುಗಳಿದ್ದವೋಲ್ ನಮ್ಮೆಲ್ಲ ಸುಖದುಃಖ
ಮಾತನವೆ ; ಎಮ್ಮ ಕಾಯ್ದು ದಾತಂಗೆ ಪೆರ್ಚಲ್ಲ.

ಪರಶಿವಂ ಮೆಚ್ಚಿದಡೆ ಸೊಗಮೆಲ್ಲ ಲಭಿಸುಗುಂ
ಒಣಗಿರ್ಪ ಪೂಮರಂ ಚಿಗುರುಗುಂ–ಫಲಿಸುಗುಂ ;
ಬರಡಾವು ಹಾಲನುಂ ಹಿಂಡುವುದು ; ಪರಶಿವನ
ಕರುಣೆಯೇ ಆಂತಹದು, ಆ ಕೃಪೆಯೆಮಗಾಗಲಿ !
ಇಂತುಸುರುತಿರ್ಪಿಹಳ್ ಸಜ್ಜಲದ ಶರಣನ್ವೆ
ಕಂತುಹರ ಕರುಣೆಯಿಂದೊರೆದಿಹೆನ್ ಕಾವ್ಯದೊಳ್ !

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಒಪ್ಪೀಲೆ

ಪುಟ	ಪಂಕ್ತಿ	ತಪ್ಪು	ಒಪ್ಪು
೨	೨೯	ಗುಲ್ಡದ	ಗುಡ್ಡದ
೩	೨೬	ದುಂಬುವೊಲ	ದುಂಬುವೊಲ್
೩	೨೯	ಬಾಜಿಸುತಿ	ಬಾಜಿಸುತ
೪	೮	ನೆಗರ್ದ	ನೆಗಳ್ದ
೪	೧೬	ನಿಡುನಿಲುವೆ	ನಿಡುನಿಲುಮೆ
೪	೨೧	ಶ್ರಾವ್ಯಾ	ಶ್ರಾವ್ಯ
೫	೨೬	ವೃದಧಾತ್	ವೃದಧಾತ್
೫	೩೨	ಣುವಿನೊಕ್	ಣುವಿನೊಳ್
೧೧	೧೨	ಶಾಪ್ವತಂ	ಶಾಶ್ವತಂ
೧೧	೨೬	ಹಳೆಯಕ್ಕೆ	ಹಳೆಯಕ್ಕೆ
೧೧	೧೩	ಮನ್ಸ್ಸವ	ಮನ್ಮವಹ
೧೩	೧೨	ಕೊಟಲೆಯ	ಕೋಟಲೆಯ
೧೪	೨೦	ಸೂಕ್ಷಮಾಗಿ	ಸೂಕ್ಷ್ಮಮಾಗಿ
೧೪	೩೨	ಹೊಲಹುದಂತ್	ಹೋಹುದಯ್
೧೫	೧	ಪನಮ	ಪರಮ
೧೫	೫	ಭಕ್ತಿಯಿಂ	ಭಕ್ತಿಯಿಂ
೧೫	೬	ಲಭಿಸುಗಂ	ಲಭಿಸುಗುಂ
೧೫	೧೨	ಆಶಾಂಶಿ	ಆ ಕಾಂತಿ
೧೫	೧೬	ನುಂಶ್ರದಾ	ಮುಂಶ್ರದಾ
೧೫	೨೯	ದಶ್ಯನ	ದರ್ಶನ
೧೬	೧೪	ಪಲಂಬಡೊ	ಪಲಂಬರೊ
೧೬	೩೩	ವರಿದದರು	ವರಿದವರಂ
೧೮	೧	ಮೇಣ	ಮೇಣು
೧೮	೨೫	ಮಿಡಿಹದ	ಮಿದಿಹದ
೧೮	೩೧	ಮೆನಿಸುಗಂ	ಮೆನಿಸುಗುಂ

CC-0. Jangamwadi Math Collection. Digitized by eGangotri

ಪುಟ	ಪಂಕ್ತಿ	ತಪ್ಪು	ಒಪ್ಪು
೧೯	೨೦	ದಶ್ಯನಂ	ದರ್ಶನಂ
೨೩	೯	ಭಾವಕ್ಕೆ	ಭಾವಕ್ಕೆ
೨೩	೧೯	ಮನಭವ	ಮನುಭವ
೨೪	೧೨	ಬಿಂದವರ	ಬಂಧವರ
೨೫	೧೧	ಗುರುರುಣೆ	ಗುರುಕರುಣೆ
೨೫	೧೫	ರಿಲ್ಲದಿರೆ	ದಿಲ್ಲದಿರೆ
೨೫	೨೨	ದುಃಖಿಕರಮಿಂದಂ	ದುಃಖಕರಮಿದಂ
೨೫	೨೪	ಡಿಂದಹುದು	ದಿಂದಹುದು
೨೬	೫	ನೆನಿಸತ್	ನೆನಿಸಲ್
೨೬	೧೨	ಭೋಧ	ಬೋಧ
೨೬	೧೮	ನಿಷ್ಪಸ್ತಿ	ನಿಷ್ಪತ್ತಿ
೨೬	೨೩	ಮೆನ್	ಮೇನ್
೨೮	೨೩	ವುಲಿ	ಪುಲಿ
೨೯	೧೫	ಗೆಳಸುವುದೇ	ಗೆಳಸುವುದೇಂ
೨೯	೨೨	ಬೀಳ್ಗುಮೆಂ	ಬೀಳ್ಗುಮೇಂ
೩೧	೩	ಸಂಸಾರೆ	ಸಂಸಾರ
೩೧	೪	ನಿರಾಳ	ನಿರಾಳಂ
೩೧	೨೯	ಸಚ್ಛೀಲ	ಸಚ್ಛೀಲ
೩೧	೩೦	ನುಡಿದು;	ನುಡಿದು
೩೩	೧೨	ಬೋಜನರ	ಭೋಜನದ
೩೩	೧೬	ಕತಬಿಂದೆ	ಕತದಿಂದೆ
೩೩	೧೮	ಸಂಸ್ಕಾರಿಗ	ಸಂಸ್ಕಾರಿಗರ
೩೫	೨೨	ಮೃತ್ಯಬಾಯ್ಗೆ	ಮೃತ್ಯುಬಾಯ್ಗೆ
೩೫	೨೫	ತೀತಿ	ತೀರಿ
೩೫	೨೬	ವೀಗೆ	ಮಿಗೆ
೩೬	೧೩	ವಂಡೆ	ಮುದೆ
೩೭	೧	ಹೊಟ್ಟ	ಹೊಟ್ಟೆ
೩೮	೬	ಲಂಗಮ್ಮ	ಲಿಂಗಮ್ಮ
೩೮	೨೫	ಗುರುಕರುಣ	ಗುರುಕರುಣಂ

CC-0. Jangamwadi Math Collection. Digitized by eGangotri

ಪುಟ	ಪಂಕ್ತಿ	ತಪ್ಪು	ಒಪ್ಪು
೩೯	೮	ಶ್ರವಣ	ಶ್ರವಣ
೪೦	೮	ಗುರ	ಗುರು
೪೨	೨೩	ನವೋ	ನವೋ
೪೪	೨೨	ರಾಳಾವಾದ	ರಾಳವಾದ
೪೫	೧೪	ವರಿಸುವರ್	ಪಲಿಸುವರ್
೪೫	೧೮	ಹೊತ್ತಿದೊಳ್	ಹೊತ್ತಿನೊಳ್
೪೫	೨೫	ಪ್ರಸಾರ	ಪ್ರಸಾದ
೪೬	೧೬	ಪೆಂದು	ಮೆಂದು
೪೬	೨೨	ದಿಕ್ಷೆಯಂ	ದೀಕ್ಷೆಯಂ
೪೭	೨೪	ನಿಷ್ಪೆಯಂ	ನಿಷ್ಠೆಯಂ
೪೭	೨೬	ನಾಪೊರದ	ನಾವೊರೆದ
೪೮	೧೨	ಮಿರ್ಪದೊಳ್	ಮಿರ್ಪರೊಳ
೪೮	೨೩	ಅಂದೊಂಡಂ	ಅಂದೊಡಂ
೪೮	೨೭	ಸೂಕ್ಷ್ಮಂದಿ	ಸೂಕ್ಷ್ಮದಿಂ
೫೧	೧೦	ಯಂದಿದೆ	ಯದಿಂದೆ
೫೨	೨	ದಿಂತೊಂದರ್	ರಿಂತೆಂದರ್
೫೨	೫	ಎಂಬುದೇ	ಎಂಬುದೇಂ
೫೩	೨೭	ಬಸವಾರ್ಯರ್ಯಂ	ಬಸವಾರ್ಯರಂ
೫೩	೪	ತೀರ್ದಂಗಳಂ	ತೀರ್ಥಂಗಳಂ
೫೪	೩	ಪೆಂವುಳ್ಳ	ಪೆಂಪುಳ್ಳ
೫೪	೨೬	ಹೇಮಕೂಟ	ಹೇಮಕೂಟ
೫೫	೧೯	ಮೆಣಲ್ವಾಯು	ಮೇಣಲ್ವಾಯು
೫೬	೧೪	ದೊಂದಿಲ್ಲಿ	ದೊಂದಿಲ್ಲ
೫೬	೧೬	ಪಕಾಶಕರ್	ಪ್ರಕಾಶಕರ್
೫೭	೨೪	ಲಿಂಗದಶ್ಯನ	ಲಿಂಗದರ್ಶನ
೬೨	೪	ಕುರುಹತ್ತಿ	ಕುರುಹಲ್ತೆ
೬೨	೧೧	ಪಾರ್ವತಿಯ	ಪಾರ್ವತಿಯು
೬೨	೨೩	ತರಿಸುನ್	ತರಿಸುವನ್
೬೫	೧೧	ತೊಳಗುವುದು	ತೊಳಗುವುವು

CC-0. Jangamwadi Math Collection. Digitized by eGangotri

ಪುಟ	ಪಂಕ್ತಿ	ತಪ್ಪು	ಒಪ್ಪು
೬೫	೧೬	ಎನಯ	ವಿನಯ
೬೭	೧೭	ದಂತೆಪೊಲ್	ದಂತೆವೊಲ್
೬೭	೧೩	ನೀರಾರು	ಸೀನಾರು
೬೯	೧೭	ಬ್ರಹಸ್ಪತಿ	ಬೃಹಸ್ಪತಿ
೭೦	೧೬	ಸರಲದಸನ	ಸರಲರಸನ
೭೦	೨೭	ಅಸಾರಂ	ಅಸಾರಂ
೭೧	೧೮	ಪೇಣ್	ಮೇಣ್
೭೨	೧	ತ್ಾಕಿಕ	ಲ್ಾಕಿಕ
೭೨	೧೦	ಅಲಕ್ಕನೆ	ಅಲರ್ಕನೆ
೭೩	೫	ದಶ್ಯನಂ	ದರ್ಶನಂ
೭೩	೭	ಋಷಭಿ	ಋಷಭ
೭೩	೧೬	ಸತ್ಯಮೆಂ.....	ಸತ್ಯಮೇಂ ಪೇಳೆನಗೆ
೭೪	೧೪	ಖಂಡಿಸುತ್	ಖಂಡಿಸುತ
೭೫	೧೮	ಪವಿತ್ರವೊ	ಪವಿತ್ರಮೋ
೭೫	೨೧	ಬಿಡವಿಲ್ಲ	ಬಿಡಲಿಲ್ಲ
೭೬	೯	ಮುತ್ತವೊ	ಮುತ್ತಮೊ
೭೬	೨೬	ಪಕ್ಷೆ	ಪಕ್ಷಿ
೭೮	೧೪	ದಟ್ಟ	ದಟ್ಟ
೭೯	೧೮	ಮೆಣ್	ಮೇಣ್
೮೦	೨೦	ಶುಭತ್ವ	ಶುಭ್ರತ್ವ
೮೧	೧೩	ಮೌಲವಂತ	ಮಾಲ್ಯವಂತ
೮೧	೧೯	ಮೌಲ್ಯವಂತ	ಮಾಲ್ಯವಂತ
೮೧	೨೪	ಮೇಲಿಸಿರಿ	ಮೇಲಿರಿಸಿ
೮೧	೨೭	ಮೌಲಾಕಾರನಂ	ಮಾಲಾಕಾರನಂ
೮೨	೨	ಮೌಲ್ಯವಂತಂ	ಮಾಲ್ಯವಂತಂ
೮೩	೭	ನೀಂ;	ನೀಂ
೮೩	೧೨	ರಾಷಣಂ	ರಾವಣಂ
೮೪	೧೫	ಹರುಷ	ಹರುಷಂ
೮೫	೧೦	ನೈರಾದತಿಯನೇದಿರ್ದ	ನೈರಾವತವನೇರ್ದ

CC-0. Jangamwadi Math Collection. Digitized by eGangotri

ಪುಟ	ಪಂಕ್ತಿ	ತಪ್ಪು	ಒಪ್ಪು
೮೫	೧೦	ಶಚೀಪತಿ	ಶಚೀಪತಿ
೮೫	೧೩	ದುರ್ವ್ವಿಸನಾ ಜೋಸಿಹನ್	ದುರ್ವ್ವಿಸನಾ ಲೋಚಿಸಿಹನ್
೮೫	೨೦	ಗರ್ವ್ವವೊ	ಗರ್ವ್ವಮೋ
೮೫	೨೩–೨೪	ದುರ್ವ್ವಿಸ	ದೂರ್ವ್ವಿಸ
೮೫	೬	ಕಾಡಿನೊಳ್	ಕಾಡಿನೊಳ
೮೬	೨	ರಾವಿರ್ಭ್ಯವಂ	ರಾವಿರ್ಭ್ಭವಂ
೮೬	೨೩	ಧಾಯಾದ	ದಾಯಾದಿ
೯೨	೨೫	ಮೇಣೂಬ್ಬ	ಮೇಣೊಬ್ಬ
೯೨	೨೬	ಕೇಡು	ಕೇಡು
೯೨	೨೯	ಬೆಸರಿಕೆ	ಬೇಸರಿಕೆ
೯೫	೪	ಮೆನ್ನತಂ	ಮೆನ್ನುತಂ
೯೫	೧೨	ಕಾಣಪೆಣಿಸಿ	ಕಾಣದೆಣ(ಳ)ಸಿ
೯೯	೧೩	ಏನ್ನ	ಎನ್ನ
೧೦೨	೯	ಖರ್ಗ್ಗಮಂ	ಖಡ್ಗಮಂ
೧೦೬	೨	ಮಲ್ಲಣ್ಣನದರಿ	ಮಲ್ಲಣ್ಣನವರಿ
೧೦೬	೧	ತ್ರಿಗಣ	ತ್ರಿಗುಣಾ
೧೦೭	೩೨	ಚದ್ವ ಲೃತ್ತಿ	ಚದ್ವೃತ್ತಿ
೧೦೭	೩೧	ಸೊರ್ಯಹಂ	ಸೋಽಹಂ
೧೦೯	೨೪	ತೃಶ	ಕೃತ
೧೧೦	೨	ಳೆತ್ಯಥಿಕ	ಳತ್ಯಧಿಕ
೧೧೦	೧೩	ತಪ್ಪು	ತಪ್ಪು
೧೧೧	೧	ಹಟ್ಟ	ಹುಟ್ಟ
೧೧೧	೧೧	ಸರ್ವ್ವಸಂ	ಸರ್ವ್ವಸ್ವಂ
೧೧೨	೭	ನಾಲಿಗೆ	ನಾಲಗೆ
೧೧೨	೧೧	ವಿಕಾಂಸ	ವಿಕಾಸಂ
೧೧೨	೨೬	ಮಾನವನ	ಮಾನವನ
೧೧೨	೩೦	ನಪ್ಪಕ್ಕೆಡು	ನಪ್ಪಕ್ಕೆಡು
೧೧೩	೯	ಚಾರದೊಳ್	ಚಾರದೊಳ

CC-0. Jangamwadi Math Collection. Digitized by eGangotri

ಪುಟ	ಪಂಕ್ತಿ	ತಪ್ಪು	ಒಪ್ಪು
೧೧೩	೧೦	ಪ್ರತಿತ್ತೆ	ಪ್ರಸಕ್ತಿ
೧೧೭	೪	ಭೋಧೆ	ಬೋಧೆ
೧೧೭	೧೨	ಪೆಣ್	ಮೇಣ್
೧೧೮	೫	ಮುಂಖಾಂತರ	ಮುಖಾಂತರ
೧೧೮	೧೧	ವೊದಗಿದಾ	ವೊದಗದಾ
೧೧೯	೨	ಸ್ಥಾರಕಂ	ಸಾರ್ಥಕಂ
೧೧೯	೧೯	ಮೇಣೆಂದಿಂಗೆ	ಮೇಣೆಂದಿಂಗೆ
೧೨೪	೨೨	ಸಂತದೊಳ್	ಸಂತರೊಳ್
೧೨೩	೧೬	ವಿಷ್ನೇಷ	ವಿಘ್ನೇಶ
೧೨೫	೯	ಪೇಕವಾತ್ತ	ಮೇಕಪಾತ್ತ
೧೨೫	೧೪	ದಿಕ್ಕೆನೊಳ್	ದಿಕ್ಕಿನೊಳ್
೧೨೬	೫	ಮಾಮಂತ್ರಿಕರ್	ಮಾಮಂತ್ರಿತರ್
೧೨೭	೧೫	ರ್ತದಾನ್ವಯ	ರುದಾನ್ವಯ
೧೪೮	೪	ಪ್ರಪ್ರಥ	ಪ್ರಪ್ರಥಮ
೧೪೦	೧	ಅರ್ಥಪ್ರಣಾ	ಅರ್ಥಪ್ರಾಣಾ
೧೪೦	೬	ಉಲಿಂಗ	ಉರಿಲಿಂಗ
೧೪೧	೧	ರುದ್ರನಕ್ಷೆಯ	ರುದ್ರನಕ್ಷಯ
೧೪೧	೧೪	ಕರೆಮ	ಕರೆದು
೧೪೨	೧೨	ತ್ರಿವಿದಾಂಗ	ತ್ರಿವಿಧಾಂಗ
೧೪೫	೧೯	ಳಂತನೆಯ	ಳಂತೆಸೆಯ
೧೪೬	೧೪	ಕರುಹಿಂಗೆ	ಕುರುಹಿಂಗೆ
೧೪೭	೨೧	ಸರ್ವಂಗ	ಸರ್ವಾಂಗ
೧೪೧	೧	ನಾನ	ನಾನು
೧೪೪	೮	ಭಸಿತ್ತ	ಭಸಿತ
೧೪೬	೨೧	ಸಾಧಕೆಯು	ಸಾಧಕಿಯು
೧೪೬	೨೩	ಕ್ರಮಶಕ್ತಿ	ಕ್ರತುಶಕ್ತಿ
೧೪೭	೨೫	ಕರಿಯದೇಂ	ಕಿರಿಯದೇಂ
೧೪೭	೨೭	ಕೇಸದಿರ್	ಕೀಸದಿರ್
೧೪೮	೩	ಕಲಸಿಹ	ಕಲಿಸಿಹ

CC-0. Jangamwadi Math Collection. Digitized by eGangotri

ಪುಟ	ಪಂಕ್ತಿ	ತಪ್ಪು	ಒಪ್ಪು
೧೪೯	೨೧	ಕೊಟ್ಟೊಡಿಗೆ	ಕಾಯ್ದೊಡಗೆ
೫	೨೮	ಪರಿಮಿಡಿದು	ಪರಿವಿಡಿದು
೧೫೦	೮	ಭಾವದುಂ	ಭಾವಮುಂ
೧೫೨	೧೬	ಸರಸ	ಸರಸ
೧೫೧	೨೩	ಬಳಿಕೆಲ್ಲ	ಬಳಿಕಿಲ್ಲ
೧೫೨	೨೬	ರ್ದಂತೆಪೊಲ್	ರ್ದಂತೆವೊಲ್
೧೫೨	೨೭	ಸಂನ್ಯಾಸಿಸಿ	ಸಂನ್ಯಾಸಿನಿ
೧೫೪	೧೬	ಸುರದೇನು	ಸುರಭೇನು
೧೫೪	೨೬	ಬಿಂಧು	ಬಿಂದು
೧೫೮	೨೮	ಪಟೆಲಂ	ಪಟಲಂ
೧೬೩	೧೬	ದಿಲ್ಲ....	ದಿಲ್ಲ ವಿಚಾರಿಸೆ
೧೬೫	೧೩	ರಾದೊಡೆಂ	ರಾದೊಡಂ
೧೬೭	೧೧	ಪುಟ್ಟ	ವುಟ್ಟ
೧೬೭	೨೦	ತಾನಯ್ತು	ತಾನಾಯ್ತು
೧೭೦	೨೩	ಶ್ರೀ	ಶೀ
೧೭೧	೧೪	ಆದೇ	ಆದೇಂ
೧೭೧	೨೨	ಭೇಧ	ಭೇದ
೧೭೪	೪	ಯೆಂತ	ಯೆಂತು
೧೭೫	೨	ಎತ್ತಣ್ಣೆ	ಎತ್ತಣ್ಗೆ
೧೭೬	೪	ದುರ್ಗಭಂ	ದುರ್ಲಭಂ
೧೭೪	೧೩	ದಿಟ್ಟ	ದಿಟ್ಟ
೧೭೪	೨೫	ಅಂಗಲಾಚೆ	ಅಂಗಲಾಚಿ
೧೭೯	೨೨	ಎಂದುಸರಿ	ಎಂದುಸುರಿ
೧೮೦	೯	ಧಾರಿಯೋಡಂ	ಧಾರಿಯೊಡಂ
೧೮೪	೪	ಹಂಬಲಗ	ಹಂಬಲಿಗ
೧೮೬	೩	ಮಾನಿಸದ	ಮಾನಿಸರ
೧೮೭	೧	ಭೋಧೆ	ಬೋಧೆ
೧೯೦	೧೩	ಕುಸುಮಾಮಾಲೆ	ಕುಸುಮಮಾಲೆ
೧೯೬	೧೪	ಬೆಳೆಯಲ	ಬೆಳೆಯಲಿ

CC-0. Jangamwadi Math Collection. Digitized by eGangotri

ಪುಟ	ಪಂಕ್ತಿ	ತಪ್ಪು	ಒಪ್ಪು
೧೯೬	೨೬	ಗೆಯ್ಯೊಂದು	ಗಯ್ಯೆಂದು
೧೯೭	೭	ಪ್ರಾಡಿಸ್ಥಿ	ಪ್ರಾರ್ಥಿಸಿ
೧೯೮	೫	ನೆಟ್ಟಗಿತ್ತು	ನೆಟ್ಟಗಿತ್ತು
೧೯೮	೧೪	ಸ್ವಾಮಿಳೆ	ಸ್ವಾಮಿಗಳೆ
೧೯೮	೨೦	ಪ್ರತಿಕ್ರೆಯೆ	ಪ್ರತಿಕ್ರಿಯೆ
೧೯೮	೨೧	ಗೇಳ್ದಪಶ	ಗೇಳ್ದಪರ
೧೯೯	೧೫	ವಭಿಲಾಹೆಯಂ	ವಭಿಲಾಷೆಯಂ
೨೦೦	೨೨	ವೂಜೆ	ಪೂಜೆ
೨೦೧	೬	ಸಮತಿಸು	ಸಮ್ಮತಿಸು
೨೦೧	೨೩	ಕಿರಿಟ	ಕಿರೀಟ
೨೦೧	೨೩	ವೃತ್ಯಂ	ವೃತ್ಯುಂ
೨೦೩	೧೨	ಮೂಚಿತ್ತಿಂತೆ	ಮಾತಿತ್ತಂತೆ
೨೦೫	೨೩	ವಾಪ್ತಿ	ವ್ಯಾಪ್ತಿ
೨೦೫	೬	ಮೂರೈಲು	ಮೂರ್ಮೈಲು
೨೦೫	೧೨	ಪುಟವಿಟ್ಟು	ಪುಟವಿಟ್ಟ
೨೦೫	೨೪	ಸತಿಯಾತಿ	ಸತಿಯಾಗಿ
೨೦೬	೨೩	ನಮುತ	ನಮ್ರತ
೨೦೬	೨೫	ಸಕ್ಕ್ರಿಯಾ	ಸತ್ಕ್ರಿಯಾ
೨೦೬	೨೬	ತುದಿಯುಂಟಿ	ತುದಿಯುಂಟೆ
೨೦೭	೧೯	ದವಳಲ್ಲಿ	ದವಳಲ್ಲ
೨೧೦	೮	ಘಾಣಿಸಲ್	ಘ್ರಾಣಿಸಲ್
೨೧೦	೧೬	ಮೇಣೇಂದ್ರಿ	ಮೇಣೆಂದ್ರಿ
೨೧೦	೨೩	ಮರಮೆ	ಮರವೆ
೨೧೧	೧	ಸ್ವರಾಂಗ	ಸರ್ವಾಂಗ
೨೧೧	೨೫	ಸಟಿಯಲ್ಲು	ಸಟಿಯಲ್ಲು
೨೧೨	೧೫	ಲಿಂಗಾರ್ಪಣ	ಲಿಂಗಾರ್ಪಣ
೨೧೨	೧೬	ಲಿಂಗರ್ಪಣ	ಲಿಂಗಾರ್ಪಣ
೨೧೩	೧೭	ಮೇಣಭಾವ	ಮೇಣ್ ಭಾವ
೨೧೩	೨೬–೨೭	ಕಠಣಂಗಳ	ಕಿರಣಂಗಳ

CC-0. Jangamwadi Math Collection. Digitized by eGangotri

ಪುಟ	ಪಂಕ್ತಿ	ತಪ್ಪು	ಒಪ್ಪು
೨೧೪	೯	ಮಪ್ಪಮ	ಮಪ್ಪದು
೨೧೪	೨೯	ದಗ್ಗ	ದಗ್ಧ
೨೧೬	೧೯	ಸೂತಕೆ	ಸೂತಕಿ
೨೨೨	೬	ತೊರೆದದ್ದು	ತೊರೆದೆದ್ದು
೨೨೨	೧೨	ಲಿವುಳಗ	ಲಿವುಗಳ
೨೨೨	೧೬	ಶಿಷಾರ್ಚದ	ಶಿಷ್ಟಾರ್ಚನ
೨೨೨	೨೬	ರಸನೆನಿಟ್ಟು	ರಸನೆಯನಿಟ್ಟು
೨೨೩	೨೪	ಮಾಳ್ಪೆಡೇಂ	ಮಾಳ್ಪಡೇಂ
೨೨೪	೪	ದ್ರುಷನಲ್ಲಗೆ	ದ್ರುಷ್ಟನಲ್ಲದೆ
೨೩೧	೨೪	ಅರ್ಪಣಸಿಂ	ಅರ್ಪಣದಿಂ
೨೩೨	೨೭	ಆಗ್ನೇಯ	ಆಗ್ನೇಯ
೨೩೩	೩	ಬಟ್ಟ	ಬಟ್ಟ
೨೩೫	೨೭	ಗೊಳವಂತೆ	ಗೊಳುವಂತೆ
೨೩೮	೧೬	ರಸವಿಮ್ಮಿ	ರಸಚಿಮ್ಮಿ
೨೩೯	೧೬	ಜಗದ	ಬರಸಿ
೨೪೨	೨೨	ಸ್ವೀಕರಿಸುತ್ತಿರ್ದರು	ಸ್ವೀಕರಿಸುತಿರ್ದರು
೨೪೨	೨೫	ಕಾಡನ್ನು	ಕಾಡನು
೨೫೭	೩	ಎಮ್ಮಕಾಯೆದ್ದಾತಂಗೆ	ಎಮ್ಮಕಾಯ್ವುದಾತಂಗೆ

SRI JAGADGURU VEERARADHYA
SIMHASAN JNANAMANDIR
LIBRARY
Jangamwadi Math, Varanasi
Acc. No. 7953

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಕನಿಗುರು–ಗುರುಕವಿ

ಡಾ॥ ಶ್ರೀ ಜ. ಚ. ನಿ. ಮಹಾಸನ್ನಿಧಿಯವರ

ಮಹಾಕಾವ್ಯಗಳು

೧) ಮಣಿನುಡಿಕುರಂ (ಅನುವಾದ ಕಾವ್ಯ)
೨) ಸದಾಶಿವರುದ್ರಂ (ಸೃಜನಾತ್ಮಕ ಸಮಕಾಲೀನ ಮಹಾಕಾವ್ಯ)
೩) ಚಂದ್ರಪ್ರಭಾ (ಪುರಾತನ ಕಥಾವಸ್ತು)
೪) ಸಜ್ಜಲ ಶರಣವ್ವೆ (ಸಮಕಾಲೀನ ಸೃಜನಾತ್ಮಕ ಮಹಾಕಾವ್ಯ)
೫) ಚಂದ್ರಾವತಿ (ಲಘುಕಾವ್ಯ)

CC-0. Jangamwadi Math Collection. Digitized by eGangotri